ನಿಯಮ 1590 ಮೇರೆಗೆ

ಶಾಸಕರಿಗೆ ಆಡಳಿತಕ್ಕೆ ಸಂಬಂಧಪಟ್ಟ ಮಾಹಿತಿ ನೀಡುವ ಬಗ್ಗೆ

ಅಧ್ಯಕ್ಷರು : ಸಾರ್ವಜನಿಕ ಹಿತದೃಷ್ಟಿಯ ವಿಷಯದ ನಿಯಮ 159ರ ಮೇರೆಗೆ ಚರ್ಚೆ. ಮಾನ್ಯ ವಿರೋಧ ಪಕ್ಷದ ನಾಯಕರು.

+ ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಸನ್ಮಾನ್ಯ ಅಧ್ಯಕ್ಷರೇ, ನಾವು ನಿಲುವಳಿ ಸೂಚನೆ ಮೂಲಕ ಈ ಸದನದ ಶಾಸಕರುಗಳಿಗೆ ಇತ್ತೀಚಿನ ದಿವಸಗಳಲ್ಲಿ ಏನು ನಮಗೆ ಒಂದು ಗೌರವ ಸಿಗಬೇಕಾಗಿತ್ತೋ ನಾವು ಚುನಾಯಿತ ಪ್ರತಿನಿಧಿಗಳಾಗಿ ಕೆಲಸ ಮಾಡುವುದಕ್ಕೆ ಏನು ಅಡ್ಡಿ ಆತಂಕಗಳಾಗುತ್ತಿದೆ, ಒಂದು ಚುನಾಯಿತ ಪ್ರತಿನಿಧಿಯಾಗಿ ಆಡಳಿತ ಪಕ್ಷದ ಶಾಸಕರಿಗೆ ಎಷ್ಟು ಗೌರವ ಇದೆಯೋ, ಅಷ್ಟೇ ಗೌರವ ವಿರೋಧ ಪಕ್ಷದ ಶಾಸಕರಿಗೂ ಇದೆ. ನಮ್ಮ ಕರ್ತವ್ಯವನ್ನು ನಿರ್ವಹಿಸುವುದಕ್ಕೆ ಆಗದೇ ಇರುವಂಥ ಉಸಿರು ಕಟ್ಟುವಂಥ ಒಂದು ವಾತಾವರಣ ಇದೆ. ಇದನ್ನು ಚರ್ಚೆ ಮಾಡಬೇಕು, ಅದಕ್ಕೆ ಮುಂಚೆ ಯಾವುದೇ ಕಾರ್ಯಕಲಾಪದಲ್ಲಿ ಭಾಗವಹಿಸುವುದಕ್ಕೆ ಅರ್ಥ ಇರಲಿಕ್ಕಿಲ್ಲ ಎನ್ನುವ ಭಾವನೆಯನ್ನು ಹೊಂದಿದ್ದೆ. ತಾವು ತುಂಬಾ ಚಿಂತನೆಯನ್ನು ಮಾಡಿ ನಿಲುವಳಿ ಸೂಚನೆಗಿಂತ ನಿಯಮ 159ರ ಮೂಲಕ ಚರ್ಚೆಯಾಗುವುದಾದರೆ ಅದಕ್ಕೆ ಇನ್ನೂ ಹೆಚ್ಚು ಮಹತ್ವ ಬರುತ್ತದೆ, ಸಮಂಜಸವಾದಂಥ ಉತ್ತರಗಳು ಸಿಗಬಹುದು ಎನ್ನುವ ದೃಷ್ಟಿಯಿಂದ ಅದನ್ನು ನಿಯಮ 159ರಂತೆ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮಗೆ ನಾನು ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ.

ಕಳೆದ ಎರಡು ತಿಂಗಳಿಂದ ಶಾಸಕರುಗಳಿಗೆ ವಿರೋಧಪಕ್ಷದ ನಾಯಕರಿಗೆ ಸರ್ಕಾರದ ದಿನನಿತ್ಯ ಆಡಳಿತಕ್ಕೆ ಸಂಬಂಧಪಟ್ಟಂತೆ ಮಾಹಿತಿಗಳನ್ನು ಕೊಡಬೇಕೆ ಬೇಡವೇ ಎಂಬ ವ್ಯಾಪಕ ಚರ್ಚೆ ಮೊದಲಬಾರಿಗೆ ಶಾಸಕರ ನಡುವೆ, ಮಂತ್ರಿಗಳ ನಡುವೆ, ಅಧಿಕಾರಿಗಳ ನಡುವೆ, ಮಾಧ್ಯಮಗಳಲ್ಲಿ ಸಾರ್ವಜನಿಕರ ಮಧ್ಯೆಯೂ ಸಹ ವ್ಯಾಪಕವಾಗಿ ಚರ್ಚೆ ನಡೆಯುತ್ತಿದೆ. ನಾನು 1983ರಿಂದ ಈ ಮನೆಯಲ್ಲಿ ಶಾಸಕನಾಗಿ ಕೆಲಸ ಮಾಡುತ್ತಿದ್ದೇನೆ. ಸನ್ಮಾನ್ಯ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದಾಗ ಇಲ್ಲಿ ನಾನು ಇದ್ದೆ. ಸನ್ಮಾನ್ಯ ಬೊಮ್ಮಾಯಿಯವರು ಇದ್ದಾಗ ನಾನು ಇದ್ದೆ. ಮಾನ್ಯ ವೀರೇಂದ್ರ ಪಾಟೀಲ್, ಮಾನ್ಯ ಬಂಗಾರಪ್ಪನವರು ಮಾನ್ಯ ವೀರಪ್ಪ ಮೊಯಿಲಿಯವರು ಇದ್ದಾಗಲೂ ಸಹಾ ಅವರ ಅಧಿಕಾರದ ಅವಧಿಯಲ್ಲಿ ನಾವು ವಿರೋಧ ಪಕ್ಷದಲ್ಲಿ ಕುಳಿತು ಕೆಲಸ ಮಾಡುವಂಥ ಒಂದು ಅವಕಾಶ ಸಿಕ್ಕಿತ್ತು. ಆದರೆ ಈ ಸಾರಿ ಮೊದಲ ಬಾರಿಗೆ ಸನ್ಮಾನ್ಯ ದೇವೇಗೌಡರು ಮುಖ್ಯಮಂತ್ರಿಗಳಾದ ಮೇಲೆ, ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದಮೇಲೆ ಸ್ವಲ್ಪ ಅವರ ನಡವಳಿಕೆಯಲ್ಲಿ ಮಾರ್ಪಾಡಾಗಿದೆ, ಶಾಸಕರ ಬಗ್ಗೆ ಅವರು ನೋಡುವಂಥ ಒಂದು ದೃಷ್ಟಿ ಬದಲಾವಣೆಯಾಗಿದೆ, ನಾವು ಪ್ರಜಾತಂತ್ರದ ವ್ಯವಸ್ಥೆಯಲ್ಲಿ ಒಂದು ಚುನಾಯಿತ ಸರ್ಕಾರದಲ್ಲಿದ್ದೇವೋ ಅಥವಾ ಯಾವುದಾದರೂ ಒಂದು ಸರ್ವಾಧಿಕಾರಿಯ ಒಂದು ಆಡಳಿತ ವ್ಯವಸ್ಥೆಯಲ್ಲಿದ್ದೇವೋ ಎನ್ನುವಂಥ ಉಸಿರು ಕಟ್ಟುವಂಥ ಒಂದು ವಾತಾವರಣದ ಮಧ್ಯೆ ಕೆಲಸ ಮಾಡುವಂಥ ಒಂದು ಪರಿಸ್ಥಿತಿ ಇವತ್ತು ನಮಗೆ ಬಂದಿದೆ. ಪ್ರಜಾತಂತ್ರದ ವ್ಯವಸ್ಥೆಯಲ್ಲಿ ಆಡಳಿತ ಪಕ್ಷಕ್ಕೆ ಎಷ್ಟು ಜವಾಬ್ದಾರಿಯಿಯೋ ವಿರೋಧ ಪಕ್ಷಕ್ಕೂ ಸಹ ಅಷ್ಟೇ ದೊಡ್ಡ ಜವಾಬ್ದಾರಿ ಇದೆ. ವಿರೋಧ ಪಕ್ಷದ ಶಾಸಕರೂ ಮತ್ತು ಆಡಳಿತ ಪಕ್ಷದ ಶಾಸಕರೂ ಸೇರಿ ಜನಹಿತವನ್ನು ಮಾಡಬೇಕಾಗಿದೆ.

ನಾವು ಇಬ್ಬರೂ ಸೇರಿ ಆಡಳಿತ ಯಂತ್ರದ ಒಂದು ಕಾರ್ಯಾಚರಣೆ ಬಗ್ಗೆ ನಿಗಾ ಇಡಬೇಕಾಗುತ್ತದೆ. ಈ ಕಡೆ ವಿರೋಧ ಪಕ್ಷದಲ್ಲೂ ಸಹಾ ಮಾಜಿ

ಮುಖ್ಯಮಂತ್ರಿಗಳು, ಅನೇಕ ಹಿರಿಯರೂ ಕುಳಿತಿದ್ದಾರೆ. ಈ ರಾಜ್ಯಸರ್ಕಾರ ನಡೆಸಿ ಮಾಜಿ ಮುಖ್ಯಮಂತ್ರಿಗಳು, ಅನೇಕ ಹಿರಿಯರೂ ಕುಳಿತಿದ್ದಾರೆ. ಈ ರಾಜ್ಯ ಸರ್ಕಾರ ನಡೆಸಿ ಅನುಭವವಿರುವವರೂ ಕೂಡ ಈ ಕಡೆ ಕುಳಿತಿದ್ದಾರೆ. ಅವರ ಸಲಹೆ, ಟೀಕೆಗಳಿಗೆ ವಿಚಲಿತರಾಗದೇನೆ ನಾವು ಕೊಡುವಂಥ ಸಲಹೆಗಳನ್ನು ಟೀಕೆಗಳನ್ನು ಸರಿಯಾದ ರೀತಿಯಲ್ಲಿ ತೆಗೆದುಕೊಂಡು ಜನಹಿತಕ್ಕೋಸ್ಕರ ಒಂದು ಒಳ್ಳೆಯ ಕೆಲಸ ಮಾಡುವಂಥ ಪ್ರಾಮಾಣಿಕ ಪ್ರಯತ್ನವನ್ನು ಈ ಸರ್ಕಾರ ಮಾಡಬೇಕಾಗಿದೆ. ಆದರೆ ಇವತ್ತು ಅದು ನಮಗೆ ಕಾಣುತ್ತಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ವಿರೋಧ ಪಕ್ಷದಲ್ಲಿ ಕುಳಿತಿರತಕ್ಕಂಥ ಶಾಸಕರು, ಮುಖಂಡರುಗಳೂ ಸಹ ಜನತೆ ಕೊಟ್ಟಿರುವಂಥ ಒಂದು ಜವಾಬ್ದಾರಿಯನ್ನು ಈ ಪ್ರಜಾತಂತ್ರ ವ್ಯವಸ್ಥೆಯ ಸತ್ಸಂಪ್ರದಾಯಗಳಂತೆ ಕೆಲವು ಪ್ರಮುಖ ನಿರ್ಧಾರಗಳ ಬಗ್ಗೆ ಮಾಹಿತಿಯನ್ನು ಕೇಳಿ ಪತ್ರವನ್ನು ಬರೆಯುತ್ತೇವೆ, ನಮ್ಮದೇ ಆದ ರೀತಿಯಲ್ಲಿ ಆ ಮಾಹಿತಿಯನ್ನು ತೆಗೆದುಕೊಂಡು ಸರ್ಕಾರವನ್ನು ಟೀಕೆ ಮಾಡಿ, ತಪ್ಪುಗಳನ್ನು ಅವರ ಗಮನಕ್ಕೆ ತಂದು ಸರಿಯಾದ ದಾರಿಯಲ್ಲಿ ಆ ಸರ್ಕಾರ ಹೋಗುವಂಥ ಪ್ರಯತ್ನವನ್ನು ಮಾಡುತ್ತೇವೆ. ಯಾವ ರೀತಿ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಆಡಳಿತ ಪಕ್ಷ ಒಂದು ಕಡೆ, ವಿರೋಧ ಪಕ್ಷ ಒಂದು ದಿಕ್ಕಿನಲ್ಲಿ ಹೋದರೆ ಜನಹಿತ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಬಹುಶಃ ನನಗೆ ಭಯವಾಗುತ್ತಿರುವಂಥದ್ದು ಏನೆಂದರೆ, ಸನ್ಮಾನ್ಯ ಮುಖ್ಯಮಂತ್ರಿಗಳ ಭಾವನೆಯಲ್ಲೇನಾದರೂ ಇವತ್ತು ಅವರು ನಡೆದುಕೊಳ್ಳುತ್ತಿರುವಂಥ ರೀತಿ, ಈ ಸರ್ಕಾರ ನಡೆದುಕೊಳ್ಳುತ್ತಿರುವಂಥ ನೀತಿಯನ್ನು ನೋಡಿದಾಗ ಇವತ್ತು ವಿರೋಧಪಕ್ಷದವರು ಮೊದಲಬಾರಿಗೆ 108-109 ಜನರು ಇದ್ದಾರೆ. ಕೆಲವರು ಈಗ ಸ್ವತಂತ್ರರಾಗಿ ಬಂದವರು ಆ ಕಡೆ ಆಡಳಿತ ಪಕ್ಷಕ್ಕೆ ಹೋಗಿದ್ದಾರೆ. ನೂರಕ್ಕೂ ಹೆಚ್ಚು ಜನ ವಿರೋಧಪಕ್ಷದ ಶಾಸಕರು ಇರುವಂಥ ಈ ಸಂದರ್ಭದಲ್ಲಿ ಬಹುಶಃ ಹಿಂದೆ ಬಂದಂಥ ಸತ್ಸಂಪ್ರದಾಯಗಳಂತೆ

ಸರಿಯಾದಂಥ ಸ್ಥಾನಮಾನಗಳನ್ನು, ಅವಕಾಶಗಳನ್ನು ಕೊಟ್ಟರೆ ಎಲ್ಲಿ ವಿರೋಧ ಪಕ್ಷಗಳು ಬೆಳೆಯುವುದಕ್ಕೆ ಸಾಧ್ಯವಾಗುತ್ತದೆಯೋ, ನಾವೇ ಎಲ್ಲಾ ರೀತಿ ಒಂದು ಅಧಿಕಾರವನ್ನು ಕಪಿಮುಷ್ಟಿಯಲ್ಲಿಟ್ಟುಕೊಂಡು ಅಧಿಕಾರವನ್ನು ನಡೆಸಿದರೆ ವಿರೋಧ ಪಕ್ಷಗಳನ್ನು ಬಗ್ಗುಬಡಿಯಬಹುದು ಎನ್ನುವ ಭಾವನೆಯೇನೋ ಗೊತ್ತಿಲ್ಲ.

ಈ ರೀತಿ ಒಂದು ಕಾರ್ಯವೈಖರಿಯನ್ನು ಇವತ್ತು ನಾವು ಕಾಣುತ್ತಿದ್ದೇವೆ. ನಾನು ಕೆಲವು ಮಾಹಿತಿಗಳನ್ನು ಕೇಳಿ ಮಾನ್ಯ ಮುಖ್ಯ ಮಂತ್ರಿಗಳಿಗೆ, ರಾಜ್ಯದ ಮುಖ್ಯ ಕಾರ್ಯದರ್ಶಿಗಳಿಗೆ, ಮಂತ್ರಿಗಳಿಗೆ ಪತ್ರ ಬರೆದಿದ್ದೆ. ಆ ಮಾಹಿತಿಗಳನ್ನು ಯಾವ ಕಾರಣಕ್ಕೋಸ್ಕರ ಕೊಡುವುದಕ್ಕೆ ಆಗುವುದಿಲ್ಲ ಅಥವಾ ಯಾವುದನ್ನು ಕೊಡಬಹುದು ಎಂದು ಉತ್ತರವನ್ನು ಬರೆಯುವಂತಹ ಒಂದು ಸೌಜನ್ಯವನ್ನು ಮಾನ್ಯ ಮುಖ್ಯ ಮಂತ್ರಿಗಳು ಮಾಡಲಿಲ್ಲ. ಈ ರಾಜ್ಯದ ಮುಖ್ಯ ಕಾರ್ಯದರ್ಶಿಗಳೂ ಸಹ ಮಾಡಲಿಲ್ಲ. ನಾನು ಅಂದುಕೊಂಡಿದ್ದೇನೆ ಕೊನೆಯಪಕ್ಷ ಮುಖ್ಯ ಕಾರ್ಯದರ್ಶಿಗಳು ಮಾನ್ಯ ಮುಖ್ಯ ಮಂತ್ರಿಗಳಿಗೆ ಈ ಸದನದಲ್ಲಿ ನಡೆದುಕೊಂಡು ಬಂದಂತಹ ಸತ್ಸಂಪ್ರದಾಯಗಳನ್ನು ತಿಳಿಸಿ ಯಾವ ಮಾಹಿತಿಯನ್ನು ಕೊಡಬಹುದೋ ಆ ಮಾಹಿತಿಯನ್ನು ಕೊಡಿಸುವಂತಹ ವ್ಯವಸ್ಥೆ, ಯಾವುದನ್ನು ಕೊಡುವುದಕ್ಕೆ ಸಾಧ್ಯವಿಲ್ಲ, ಆ ಮಾಹಿತಿಗಳನ್ನು ಈ ಕಾರಣಗಳಿಗೋಸ್ಕರ ಕೊಡುವುದಕ್ಕೆ ಸಾಧ್ಯ ಇಲ್ಲ ಎನ್ನುವಂತಹ ಒಂದು ವಿಚಾರವನ್ನು ತಿಳಿಸುವಂತಹ ಒಂದು ಪತ್ರವನ್ನು ಬರೆಯುವಂತಹ ಸೌಜನ್ಯವನ್ನು ಇವತ್ತು ಮುಖ್ಯ ಕಾರ್ಯದರ್ಶಿಗಳು ಆಗಲಿ ಅಥವಾ ಮಾನ್ಯ ಮುಖ್ಯ ಮಂತ್ರಿಗಳಾಗಲಿ ಮಾಡದೇ ಇರುವಂತಹದ್ದು ನಿಜಕ್ಕೂ ಸಹ ನಮಗೆ ತುಂಬಾ ನೋವನ್ನು ಉಂಟು ಮಾಡಿದೆ. ಒಂದು ರೀತಿ ತುರ್ತು ಪರಿಸ್ಥಿತಿ ಸಂದರ್ಭದಲ್ಲಿಯೂ ಸಹ ಈ ರೀತಿಯ ವಾತಾವರಣ ಇತ್ತೋ ಇಲ್ಲವೋ ಗೊತ್ತಿಲ್ಲ, ಸನ್ಮಾನ್ಯ ಸಭಾ ನಾಯಕರು ದೇವೇಗೌಡರು

ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಹೋರಾಟ ಮಾಡಿ ಜೈಲಿನೊಳಗೆ ಇದ್ದರು. ಒಳಗಡೆ ಇದ್ದರೂ ಸಹ ಈ ರೀತಿ ಯಾವುದಾದರೂ ಒಂದು ನಿತ್ಯ ಕೆಲಸಗಳಿಗೆ ಚುನಾಯಿತಿ ಪ್ರತಿನಿಧಿಗಳಿಗೆ ಬೇಕಾದಂತಹ ಮಾಹಿತಿಗಳನ್ನು ಕೊಡುವುದಕ್ಕೆ ಆಗದೇ ಇರುವಂತಹ ಒಂದು ಉಸಿರು ಕಟ್ಟುವಂತಹ ವಾತಾವರಣ ಆ ಸಂದರ್ಭದಲ್ಲಿ ಇರಲಿಲ್ಲ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ನನಗೆ ತಮ್ಮಿಂದ ಮಾರ್ಗದರ್ಶನ ಬೇಕಾಗಿದೆ. ನಾವು ಯಾವುದೇ ದಾಖಲೆಗಳನ್ನು ಅಫಿಷಿಯಲ್ ಸೀಕ್ರೆಟ್ ಆಕ್ಟ್ 1929ರ ಪ್ರಕಾರ ದೇಶದ, ರಾಜ್ಯದ ಭದ್ರತೆ ಮತ್ತು ರಕ್ಷಣೆಗೆ ಸಂಬಂಧಿಸಿ ವಿಚಾರ ಕುರಿತು ಸರ್ಕಾರದ ನಿರ್ಧಾರ ನಡವಳಿಕೆಗಳ ಬಗ್ಗೆ, ಕಾರ್ಯಾಚರಣೆ ವಿವರಗಳ ಬಗ್ಗೆ ಅದರ ಗೌಪ್ಯತೆಯನ್ನು ಮುಖ್ಯಮಂತ್ರಿಗಳಿಂದಾಗಲೀ, ಅಥವಾ ಮಂತ್ರಿಗಳಿಂದಾಗಲೀ ನಮಗೆ ಕೊಡಬೇಕು. ಸಾರ್ವಜನಿಕರ ಮುಂದೆ ಇಡಬೇಕು ಎಂದು ನಾವು ಎಂದೂ ಕೇಳಲಿಲ್ಲ. ಶಾಸಕರಾಗಿ, ಲೋಕಸಭಾ ಸದಸ್ಯರಾಗಿ ವಿರೋಧ ಪಕ್ಷದ ನಾಯಕರಾಗಿ ಇವತ್ತು ಮುಖ್ಯ ಮಂತ್ರಿಗಳಾಗಿ 30 ವರ್ಷಗಳ ಅನುಭವ ಇರುವಂತಹ ಸನ್ಮಾನ್ಯ ಮುಖ್ಯ ಮಂತ್ರಿಗಳು ಆ ಎಲ್ಲಾ ಹಿಂದಿನ ಅವರ ಅನುಭವವನ್ನು ಮರೆತು, ಅವರು ಇಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದಾಗ ಹೇಗೆ ಕೆಲಸ ಮಾಡಿದರು? ಶಾಸಕರಾಗಿದ್ದಾಗ ಅವರ ಹಕ್ಕು ಭಾದ್ಯತೆಗಳ ಬಗ್ಗೆ ಏನು ಹೋರಾಟ ಮಾಡುತ್ತಿದ್ದರು. ಇವೆಲ್ಲವನ್ನೂ ಅವರು ಮುಖ್ಯ ಮಂತ್ರಿಗಳಾದ ಮೇಲೆ ಮರೆತಂತೆ ಕಾಣುತ್ತದೆ. ಶಾಸಕರ ಹಕ್ಕು ಭಾದ್ಯತೆಗಳನ್ನು ವಿರೋಧ ಪಕ್ಷದ ನಾಯಕರು ತಮ್ಮ ಕರ್ತವ್ಯವನ್ನು ನಿರ್ವಹಿಸುವುದನ್ನು ಈ ಪ್ರಜಾತಂತ್ರ ವ್ಯವಸ್ಥೆಯ ಎಲ್ಲಾ ಸತ್ಸಂಪ್ರದಾಯಗಳನ್ನು ಮರೆತು ಅವರದೇ ಆದ ರೀತಿಯಲ್ಲಿ ಒಂದು ಠೇಂಕಾರದ ರೀತಿಯಲ್ಲಿ ಉತ್ತರವನ್ನು ಕೆಲವು ಸಂದರ್ಭದಲ್ಲಿ ಪತ್ರಿಕೆ ಮೂಲಕ ಕೊಡುವಂತಹ ಪ್ರಯತ್ನವನ್ನು ಮಾಡಿದ್ದಾರೆ.

ಮಾನ್ಯ ಅಧ್ಯಕ್ಷರೆ, ನಾನು ಕೆಲವು ದಾಖಲೆಗಳನ್ನು ಕೇಳಿ ಪತ್ರವನ್ನು ಬರೆದಿದ್ದೆ. ರಾಜ್ಯ ಸರ್ಕಾರದ ಸಾಮಾನ್ಯ ಚಟುವಟಿಕೆಗಳ ಬಗ್ಗೆ ವಿವಿಧ ಇಲಾಖೆಗಳ ಒಂದು ಮಾಹಿತಿಯನ್ನು ನಾನು ಕೇಳಿ ವಿರೋಧ ಪಕ್ಷದ ನಾಯಕನಾಗಿ ಪತ್ರವನ್ನು ಬರೆದಿದ್ದೆ. ನಾನು ಅಂದುಕೊಂಡಿದ್ದೇನೆ, ಕೇವಲ ಈ ಮನೆಯ ವಿರೋಧ ಪಕ್ಷದ ನಾಯಕನಾಗಿ ಅಲ್ಲ, ಈ ಸದನದ ಯಾವುದೇ ಶಾಸಕ ಈ ರಾಜ್ಯದ ಹಣಕಾಸಿನ ವಿಚಾರಕ್ಕೆ ಸಂಬಂಧಪಟ್ಟಂತಹ ವಿಷಯದ ಬಗ್ಗೆ ಈ ಸರ್ಕಾರ ಯಾವುದೇ ಒಂದು ಪಾಲಿಸಿ ಡಿಸಿಷನ್ ತೆಗೆದುಕೊಂಡಾಗ ಅದರ ವಿವರವನ್ನು ಕೇಳಿ ದಾಖಲೆಗಳನ್ನು ಕೇಳುವಂತಹದು ಪದ್ಧತಿ. ಅದನ್ನು ತೆಗೆದುಕೊಂಡು ಅದರ ಆಧಾರದ ಮೇಲೆ ಕೆಲಸವನ್ನು ನಾವು ಮಾಡಬೇಕಾಗುತ್ತದೆ. ಕೇವಲ ಶಾಸಕರು ವಿರೋಧ ಪಕ್ಷದ ನಾಯಕರಿಗೆ ಅಲ್ಲ, ಈ ಪ್ರಜಾ ತಂತ್ರ ವ್ಯವಸ್ಥೆಯಲ್ಲಿ ಪ್ರತಿಯೊಬ್ಬ ನಾಗರೀಕನಿಗೂ ಒಬ್ಬ ಟ್ಯಾಕ್ಸ್ ಪೇಯರ್ ಗೂ ಸಹ ಈ ರೀತಿ ಅವನಿಗೆ ಬೇಕಾದಂತಹ ದಾಖಲೆಗಳನ್ನು ಪಡೆದುಕೊಳ್ಳುವಂತಹ ಅಧಿಕಾರ ಇವತ್ತು ನಮ್ಮ ವ್ಯವಸ್ಥೆಯಲ್ಲಿ ಇದೆ. ಈ ಸರ್ಕಾರ ಸರಿಯಾದ ರೀತಿಯಲ್ಲಿ ಆಡಳಿತ ನಡೆಸುತ್ತಿದೆಯೋ ಅಥವಾ ಇಲ್ಲವೋ ಎನ್ನುವಂಥದನ್ನು ಕೆಲವು ದಾಖಲೆಗಳನ್ನು ನೋಡಿ ಅಂಕಿ ಅಂಶಗಳನ್ನು ನೋಡಿ ಅದರ ಆಧಾರದ ಮೇಲೆ ಸರ್ಕಾರಕ್ಕೆ ನಾವು ಟೀಕೆ ಟಿಪ್ಪಣಿಗಳನ್ನು ಮಾಡಬೇಕಾಗುತ್ತದೆ. ಸರ್ಕಾರದ ಆಡಳಿತ ಸರಿಯಾಗಿ ಇದೆಯೋ ಇಲ್ಲವೋ ಎಂಬುದನ್ನು ಬಹುಶಃ ಅವರೇ ಆಡಳಿತ ಪಕ್ಷದವರೇ ಒಂದು ಸರ್ಟಿಫಿಕೇಟ್ ಕೊಟ್ಟುಕೊಂಡು ಕುಳಿತುಕೊಳ್ಳುವುದಕ್ಕೆ ಬರುವುದಿಲ್ಲ. ಈ ವ್ಯವಸ್ಥೆಯಲ್ಲಿ ಒಂದು ಪಬ್ಲಿಕ್ ಸ್ಕ್ರೂಟಿನಿ ಆಗಬೇಕಾಗುತ್ತದೆ. ಸರಿತಪ್ಪುಗಳನ್ನು ನೋಡುವಂತಹ ಅವಕಾಶಗಳು ಸಿಗಬೇಕಾಗುತ್ತದೆ. ಯಾವುದೋ ಒಂದು ವದಂತಿಯ ಆಧಾರದ ಮೇಲೆ ಯಾವುದೋ ಒಂದು ಟಿವಿಯಲ್ಲಿ ಕೇಳಿದ ವಿಷಯದ ಆಧಾರದ ಮೇಲೆ ಯಾವುದೇ ಒಂದು ಚರ್ಚೆಯನ್ನು ನಾವು ಮಾಡುವುದಕ್ಕೆ ಸಾಧ್ಯ ಆಗುವುದಿಲ್ಲ. ನಮ್ಮ ಮುಖ್ಯಮಂತ್ರಿಗಳು ಅನೇಕ ಬಾರಿ

ಹೇಳುತ್ತಿದ್ದರು, ನಮ್ಮದು ಪಾರದರ್ಶಕ ಸರ್ಕಾರ, ನೀವು ಕೇಳುವಂತಹ ಯಾವುದೇ ದಾಖಲೆಗಳನ್ನು ಕೊಡುವುದಕ್ಕೆ ನಾನು ಸಿದ್ಧ ಇದ್ದೇನೆ, ಎಲ್ಲರ ಜೊತೆ ಚರ್ಚೆ ಮಾಡಿ ಪ್ರಮುಖವಾಗಿರತಕ್ಕ ವಿಷಯಗಳನ್ನು ನಾನು ತೀರ್ಮಾನಕ್ಕೆ ಬರುತ್ತೇನೆ ಎನ್ನುವಂತಹ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಅನೇಕ ಬಾರಿ ಹೇಳಿದ್ದರು.

ನಾನು ಈ ಅಫಿಷಿಯಲ್ ಸೀಕ್ರೆಟ್ ಆಕ್ಟ್ 1929ರ ಪ್ರಕಾರ ತಮ್ಮನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ, ನಮಗೆ ಮಾರ್ಗದರ್ಶಕ ಮಾಡಬೇಕಾಗುತ್ತದೆ. ಯಾವುದು ಸೀಕ್ರೆಟ್, ಯಾವುದು ಸೀಕ್ರೆಟ್ ಅಲ್ಲ. ಯಾವ ದಾಖಲೆಗಳನ್ನು ಪಡೆಯುವುದಕ್ಕೆ ನಮಗೆ ಅಧಿಕಾರ ಇದೆ, ಯಾವ ದಾಖಲೆಗಳನ್ನು ಪಡೆಯುವುದಕ್ಕೆ ನಮಗೆ ಅಧಿಕಾರ ಇಲ್ಲ. ಇದು ಸ್ಪಷ್ಟ ಆಗದೇ ಇದ್ದರೆ ಬಹುಶಃ ನಾವು ಈ ಸದನದಲ್ಲಿ ಕುಳಿತುಕೊಂಡು ವಿರೋಧ ಪಕ್ಷದ ನಾಯಕರನಾಗಿ ಅಥವಾ ಇತರೆ ಶಾಸಕರು ಕೆಲಸ ಮಾಡುವುದಕ್ಕೆ ಸಾಧ್ಯ ಆಗದೇ ಹೋಗಬಹುದೇನೋ ಎನ್ನುವಂತಹ ಮಾತನ್ನು ಸಹ ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ಸನ್ಮಾನ್ಯ ಮುಖ್ಯಮಂತ್ರಿಗಳು ನಾನು ಕೆಲವು ದಾಖಲೆಗಳನ್ನು ಬೇಕು ಎಂದು ಕೇಳಿದಾಗ ನನಗೆ ಉತ್ತರವನ್ನು ಬರೆಯುವಂತಹ ಸೌಜನ್ಯವನ್ನು ತೋರಿಸದೆ ಪ್ರಜಾವಾಣಿ ಪತ್ರಿಕೆಯಲ್ಲಿ, ಸಂಯುಕ್ತ ಕರ್ನಾಟಕದಲ್ಲಿ ಬೇರೆ ಎಲ್ಲಾ ಪತ್ರಿಕೆಗಳಲ್ಲಿ ಮಾರ್ಚ್ 7ನೇ ತಾರೀಖು ಒಂದು ವಿಷಯ ಪ್ರಕಟವಾಗಿರುವುದನ್ನು ಹೇಳುತ್ತೇನೆ. "ಯಡಿಯೂರಪ್ಪನವರ ಮನೆಗೆ ಕಡತ ಕಳಿಸಲೇನು ಎಂಬ ಶೀರ್ಷಕೆ ಅಡಿಯಲ್ಲಿ" ಸರ್ಕಾರದ ದಿನ ನಿತ್ಯದ ವ್ಯವಹಾರಗಳಲ್ಲಿ ವಿರೋಧ ಪಕ್ಷದವರ ಹಸ್ತಕ್ಷೇಪ ಬೇಡ, ಸರ್ಕಾರ ಯಾವುದನ್ನೂ ಬಿಚ್ಚಿಟ್ಟುಕೊಳ್ಳುವುದಿಲ್ಲ. ಸದನವೇ ಸಾರ್ವಭೌಮ, ನಾನು ಸದನಕ್ಕೆ ಮಾತ್ರವೇ ಮಾಹಿತಿ ಕೊಡುವಂತಹವನು. ಬೇರೆ ಎಲ್ಲೂ ನಾನು ಮಾಹಿತಿಯನ್ನು ಕೊಡುವಂತಹ ಅಗತ್ಯ ಇಲ್ಲ" ಈ ಮಾತನ್ನು ಅವರು ಹೇಳಿದ್ದಾರೆ. ಮತ್ತೆ ದೈನಂದಿನ ಆಡಳಿತದಲ್ಲಿ ಬಿಜೆಪಿಯ ಶಾಸಕರು ಹಸ್ತಕ್ಷೇಪವನ್ನು ಮಾಡುತ್ತಿದ್ದಾರೆ ಎನ್ನುವ ಒಂದು ಆರೋಪವನ್ನು ಸಹ ಮುಖ್ಯಮಂತ್ರಿಗಳು ಮಾಡಿದ್ದಾರೆ. ನಾನು 30 ವರ್ಷಗಳ ರಾಜಕೀಯ ಜೀವನದಲ್ಲಿ ವಿರೋಧ ಪಕ್ಷದ ನಾಯಕನಾಗಿ ಕೆಲಸ ಮಾಡಿದ್ದೇನೆ, ನನಗೆ ಯಾರೂ ಕೂಡ ದಾಖಲೆಗಳನ್ನು ಒದಗಿಸಿಕೊಡಲಿಲ್ಲ, ದಾಖಲೆ ತರಿಸಿಕೊಳ್ಳುವುದು ಅವರಿಗೆ ಗೊತ್ತಿರಬೇಕು ಎನ್ನುವಂತಹದನ್ನು ಸಹ ಮುಖ್ಯಮಂತ್ರಿಗಳು ಪತ್ರಿಕೆ ಹೇಳಿಕೆಯಲ್ಲಿ ಕೊಟ್ಟಿದ್ದಾರೆ. ಮತ್ತು ಇನ್ನೊಂದು ಬಹಳ ಪ್ರಮುಖವಾದಂತಹ ಮಾತು ಅವರು ಹೇಳಿರತಕ್ಕದ್ದು, ಯಾವುದೇ ದಾಖಲೆ ಪತ್ರಗಳನ್ನು ವಿರೋಧ ಪಕ್ಷದವರಿಗೆ ನೀಡಬಾರದು ಎಂದು ನಾನು ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇನೆ, ಈ ಮಾತನ್ನು ಸಹ ಹೇಳಿದ್ದಾರೆ. ಮತ್ತೆ ಮುಂದುವರಿದು ಇನ್ನೊಂದು ಮಾತನ್ನು ಹೇಳಿದ್ದಾರೆ.

ಸನ್ಮಾನ್ಯ ಯಡಿಯೂರಪ್ಪನವರು ಸಾರ್ವಜನಿಕ ಲೆಕ್ಕ ಪರಿಶೋಧನಾ ಸಮಿತಿಯ ಅಧ್ಯಕ್ಷರು, ಅಲ್ಲಿ ಬೇಕಾದರೆ ಯಾವುದೇ ದಾಖಲೆಯನ್ನು ಪಡೆದುಕೊಳ್ಳಬಹುದು. ಈ ಮಾತನ್ನು ಸಹ ಪತ್ರಿಕಾ ಹೇಳಿಕೆ ಕೊಡುವ ಮೂಲಕ ಸನ್ಮಾನ್ಯ ಮುಖ್ಯಮಂತ್ರಿಗಳು ಆ ಮಾತನ್ನು ಹೇಳುವಂತಹ ಪ್ರಯತ್ನ ಮಾಡಿದ್ದಾರೆ. ಸನ್ಮಾನ್ಯ ಅಧ್ಯಕ್ಷರೆ, ತಮಗೂ ಸಹ ಪತ್ರವನ್ನು ಬರೆದಿದ್ದೇನೆ. ನನಗೆ ಯಾವ ದಾಖಲೆಗಳು ಸರ್ಕಾರಕ್ಕೆ ಪತ್ರ ಬರೆದಾಗ ಸಿಗಲಿಲ್ಲ ಎಂದು ಕಂಡಾಗ ನಾನು ತಮಗೆ ಪತ್ರವನ್ನು ಬರೆದಿದ್ದೆ. ತಮ್ಮ ಗಮನಕ್ಕೆ ತರುವಂತಹ ಪ್ರಯತ್ನ ಮಾಡಿದ್ದೆ. ಮುಖ್ಯಮಂತ್ರಿಗಳಿಗೆ ಪತ್ರ ಬರೆದೆ, ಮುಖ್ಯಕಾರ್ಯದರ್ಶಿಯವರಿಗೆ ಸಹ ಈ ಬಗ್ಗೆ ವಿವರ ಬೇಕು ಎಂದು ಪತ್ರವನ್ನು ಬರೆದೆ. ನಾನು ಕೇಳಿರುವಂತಹ ಮಾಹಿತಿಗಳು, ಯಾವುದು ಇದೆ ಇದು ಅಫಿಷಿಯಲ್ ಸೀಕ್ರೆಟ್ ಆಕ್ಟ್ 1929ರ ಚೌಕಟ್ಟಿನೊಳಗೆ ಬರುತ್ತದೆ, ಅದಕ್ಕಾಗಿ ಇದನ್ನು ಕೊಡುವುದಕ್ಕೆ

ಬರುವುದಿಲ್ಲ ಎನ್ನುವುದು ಏನಾದರೂ ಇದ್ದರೆ ಅದನ್ನು ನಾನು ಒತ್ತಾಯ ಮಾಡುವುದಿಲ್ಲ ಕೇಳುವುದಕ್ಕೆ ಸಹ ಇಚ್ಛಿಪಡುವುದಿಲ್ಲ. ನಾನು ಕೇಳಿದಂತಹ ದಾಖಲೆಗಳು ಯಾವುದು ಎಂದರೆ 8.2.95 ಈ ಕ್ಲಾಸಿಕ್ ಕಂಪ್ಯೂಟರ್ ಹಗರಣದ ಬಗ್ಗೆ ಮಾಹಿತಿ ಪತ್ರದ ಸಂಖ್ಯೆಯ ವಿವರವನ್ನು ಕಳಿಸಿಕೊಡಬೇಕೆಂದು ಡೀಟೇಲ್ಸ್ ಬರೆದು ಮಾನ್ಯ ಮುಖ್ಯಕಾರ್ಯದರ್ಶಿಗಳವರಿಗೂ ಸಹ 8.2.95ರಂದು ಬೇರೆಯವರಿಗೆಲ್ಲಾ ಪತ್ರ ಬರೆದಾಗ ಮೇಲೆ ಅವರಿಗೂ ಸಹ ಅಡ್ರೆಸ್ ಮಾಡಿ ಪತ್ರ ಬರೆದೆ. ಜಾಫರ್ ಶರೀಫ್, ಮಾನ್ಯ ರೈಲ್ವೆ ಸಚಿವರ ವಿರುದ್ಧ ಭೂ ಕಬಳಿಕೆಯ ಆರೋಪದ ಪ್ರಕರಣದಲ್ಲಿ ಹಿಂದಿನ ವಿಭಾಗಾಧಿಕಾರಿಗಳು ನೀಡಿದ ವರದಿಯ ಪ್ರತಿ ಬೇಕು ಎಂದು ಕೇಳಿದ್ದೆ.

ಸನ್ಮಾನ್ಯ ಅಧ್ಯಕ್ಷರೆ, ಇವೊತ್ತು ನೇನು ಚರ್ಚೆಯಾಗಿದೆಯೆಂಬುದನ್ನು ತಾವು ಗಮನಿಸಿದ್ದೀರಿ. ನಾನು ಹೀಗೆ ಇಲ್ಲಿ ಕೆಲಸ ಮಾಡುವುದು. ನಾನು ದಿನಾಂಕ 29.12.94ರಂದು ಯಜನಾ ಇಲಾಖೆಯ ಕಾರ್ಯದರ್ಶಿಯವರಿಗೆ ಪತ್ರ ಬರೆದು ಮಲೆನಾಡು ಅಭಿವೃದ್ಧಿ ಮಂಡಳಿಗೆ 1994-95ರ ಆಯವ್ಯಯದಲ್ಲಿ ವಿವೇಚನಾ ನಿಧಿಯಲ್ಲಿ ಮೀಸಲಾಗಿಟ್ಟಂಥ ಮೊತ್ತವೆಷ್ಟು? ಅದರಲ್ಲಿ ಮಂಡಳಿ ಅಧ್ಯಕ್ಷರು ಎಷ್ಟು ಹಣ ಉಪಯೋಗಿಸಿದ್ದಾರೆ? ಎಷ್ಟು ಖರ್ಚಾಗಿದೆ? ಇದರ ವಿವರಗಳು ಬೇಕೆಂದು ಕೇಳಿದ್ದೇನೆ. ಅಲ್ಲದೆ, ಇವೊತ್ತು ಈ ವಿಷಯ ಕುರಿತು ಪ್ರಶ್ನೆ ಸದನದಲ್ಲಿ ಬಂದಾಗ ಸಂಬಂಧಪಟ್ಟ ಸಚಿವರಿದ್ದರೂ ಉತ್ತರ ಕೊಡುವುದಕ್ಕಾಗಲಿಲ್ಲ, ಆ ಸಂದರ್ಭದಲ್ಲೂ ನಾನು ಕೇಳಿದ್ದೇನೆ. ಇದನ್ನು ಕೇಳಿದಂಥ ಕಾರಣ ಏನೆಂಬುದರ ಬಗ್ಗೆ ವಿವರಗಳಿಗೆ ಹೋಗುತ್ತೇನೆ. ನಾನು ದಿನಾಂಕ 29.12.94ರಂದು ಪತ್ರ ಬರೆದರೆ ನಿಮ್ಮ ಕಾರ್ಯದರ್ಶಿಗಳು ಇದುವರೆವಿಗೂ ಸಹ ಪತ್ರ ತಲುಪಿದ ಬಗ್ಗೆ ವಿರೋಧ ಪಕ್ಷದ ನಾಯಕನಿಗೆ ಉತ್ತರ ಬರೆಯಲಿಲ್ಲ. ಅಥವಾ ನಾನು ಕೇಳಿದ ವಿವರವನ್ನು ಯಾವ ಕಾರಣದಿಂದ ಒದಗಿಸುವುದಕ್ಕಾಗಲಿಲ್ಲ ಎಂಬ ಉತ್ತರವನ್ನೂ ಸಹ ಬರೆಯಲಿಲ್ಲ. ನಂತರ ದಿನಾಂಕ 22.12.94ರಂದು ನೀರಾವರಿ ಇಲಾಖೆಯ ಕಾರ್ಯದರ್ಶಿಯವರಿಗೆ ಪತ್ರ ಬರೆದು 1994ರ ವಿಧಾನಸಭಾ ಚುನಾವಣೆ ಘೋಷಣೆಯಾದ ಮೇಲೆ ಯಾವ್ಯಾವ ತಿಂಗಳಿನಲ್ಲಿ ಎಷ್ಟೆಷ್ಟು ಹಣ ಬಿಡುಗಡೆ ಮಾಡಲಾಗಿದೆ ಎಂಬುದರ ಬಗ್ಗೆ ವಿವರಗಳನ್ನು ಒದಗಿಸಬೇಕೆಂದು ಕೇಳಿದ್ದೇನೆ. ಹಾಗೆಯೇ ದಿನಾಂಕ 29.12.94ರಂದು ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿಯವರಿಗೆ ಪತ್ರ ಬರೆದು ಹಿಂದಿನ ಸರ್ಕಾರ ಜಾರಿಗೆ ತಂದಿದ್ದು ಆಶ್ರಯ ಯೋಜನೆಯಡಿ ಕರ್ನಾಟಕ ಗೃಹ ಮಂಡಳಿಯಲ್ಲಿ ನಡೆದಿರುವ ಅವ್ಯವಹಾರದ ಬಗ್ಗೆ ನಡೆಸಿದ ತನಿಖೆ ಯಾವ ಹಂತದಲ್ಲಿದೆ? ಯಾವ್ಯಾವ ಗುತ್ತಿಗೆದಾರರಿಗೆ, ಯಾವ್ಯಾವ ದಿನಾಂಕಗಳಲ್ಲಿ ಎಷ್ಟು ಮೊತ್ತದ ಹಣವನ್ನು ನೀಡಲಾಗಿದೆ? ಮುಂತಾದ ಅಗತ್ಯ ಮಾಹಿತಿಗಳನ್ನು ಒಂದು ವಾರದೊಳಗೆ ಒದಗಿಸಬೇಕೆಂದು ಕೇಳಿದೆ.

ಹಾಗೆಯೇ ದಿನಾಂಕ 8.2.95ರಂದು ಕಾರ್ಮಿಕ ಆಯುಕ್ತರ ಕೇಂದ್ರ ಕಛೇರಿಯಲ್ಲಿ ಲೋಕಾಯುಕ್ತ ಅಧಿಕಾರಿಗಳು ಧಾಳಿ ನಡೆಸಿ 22 ಕಾರ್ಮಿಕ ನಿರೀಕ್ಷಕರು ಸಂಗ್ರಹಿಸಿದ್ದು ಎನ್ನಲಾದ ಅನಧಿಕೃತ ಹಣವನ್ನು ಸಹ ಜಪ್ತಿ ಮಾಡಿದ್ದಾರೆ. ಆದ್ದರಿಂದ, ಯಾವ್ಯಾವ ಅಧಿಕಾರಿಗಳಿಂದ ಎಷ್ಟೆಷ್ಟು ಹಣ ವಶಪಡಿಸಿಕೊಳ್ಳಲಾಗಿದೆ? ಮತ್ತು ಅಂತಹವರ ಮೇಲೆ ಏನು ಕ್ರಮ ಕೈಗೊಳ್ಳಲಾಗಿದೆ? ಎಂಬ ವಿವರ ಕೇಳಿ ಮಾನ್ಯ ಕಾರ್ಮಿಕ ಮಂತ್ರಿಗಳಿಗೆ ಮತ್ತು ಇಲಾಖಾ ಮುಖ್ಯಸ್ಥರಿಗೆ ಪತ್ರ ಬರೆದಿದ್ದೇನೆ. ಹಾಗೆಯೇ ಆಶ್ರಯ ಯೋಜನೆಯಡಿಯಲ್ಲಿ ಸಿ.ಓ.ಡಿ. ತನಿಖೆಯಾಗಿ ವರದಿ ಬಂದಿದೆ, ಆ ತನಿಖಾ ವರದಿಯನ್ನು ಕಳುಹಿಸಿಕೊಡಿ ಎಂದು ಪತ್ರ ಬರೆದರೆ, ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೋಲೀಸ್, ಸಿಓಡಿ, ಬೆಂಗಳೂರು, ಇವರು ಉತ್ತರ ಬರೆದು ಸಂಬಂಧಪಟ್ಟವರಿಗೆ ಕಳುಹಿಸಿಕೊಟ್ಟಿದ್ದೇವೆ, ತಾವು ತರಿಸಿಕೊಳ್ಳಬಹುದೆಂದು ಹೇಳಿದರು. ಆಗ ನಾನು ಅವರ

ಪತ್ರದ ಆಧಾರದ ಮೇಲೆ ಸಂಬಂಧಪಟ್ಟ ಇಲಾಖೆಗೆ ಪತ್ರ ಬರೆದರೂ ಆ ಕುರಿತು ಮಾಹಿತಿಯನ್ನು ಈ ನಿಮಿಷದವರೆಗೆ ಕಳುಹಿಸಿಕೊಡಲಿಲ್ಲ. ಅಲ್ಲದೆ, ಬೆಂಗಳೂರಿನ ಬಳಿ ನಿರ್ಮಾಣವಾಗುತ್ತಿರುವ ಕ್ರೀಡಾ ಗ್ರಾಮಕ್ಕೆ ಸಂಬಂಧಿಸಿದಂತೆ ಗುತ್ತಿಗೆ ವಿವರಗಳಿಗೆ ಕುಳಿತಂತೆ ಏನೇನು ವಿವರಗಳು, ದಾಖಲೆಗಳು ಬೇಕಾಗಿದೆ ಎಂಬುದರ ಬಗ್ಗೆ ದಿನಾಂಕ 2.1.95ರಂದು ಪತ್ರ ಬರೆದೆ. ವಿಧಾನಸಭಾ ಚುನಾವಣೆ ಮುನ್ನ ಹಿಂದಿನ ಕಾಂಗ್ರೆಸ್ ಸರ್ಕಾರ ತನ್ನ ಸರ್ಕಾರದ ಸಾಧನೆಗಳಿಗೆ ಸಂಬಂಧಿಸಿದಂತೆ ಕೋಟ್ಯಾಂತರ ರೂಪಾಯಿಗಳ ಸಾಮಗ್ರಿಗಳನ್ನು ಮುದ್ರಿಸಿದ್ದು, ಚುನಾವಣಾ ಆಯೋಗದ ನಿರ್ದೇಶನದಂತೆ ಆ ಸಾಮಗ್ರಿಗಳನ್ನು ವಿತರಿಸಲಾಗಿದೆ ಸರ್ಕಾರದ ಗೋದಾಮಿನಲ್ಲಿ ಬಿದ್ದಿರುವುದು ತಿಳಿದುಬಂದಿದೆ. ಇದಕ್ಕೆ ಖರ್ಚಾಗಿರುವ ಒಟ್ಟು ಹಣವೆಷ್ಟು? ಮುದ್ರಿಸಲಾದ ಮುದ್ರಣ ಪ್ರತಿಗಳೆಷ್ಟು? ಈ ಕುರಿತು ವಿವರಗಳು ಬೇಕೆಂದು ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಯ ಕಾರ್ಯದರ್ಶಿಯವರಿಗೆ ನಾನು ದಿನಾಂಕ 2.1.95ರಂದು ಪತ್ರ ಬರೆದೆ. ಇದೆಲ್ಲದರ ಬಗ್ಗೆ ಈ ಸಂದರ್ಭದಲ್ಲಿ ನಾನು ಏಕೆ ಹೇಳುತ್ತಿದ್ದೇನೆಂದರೆ, ನಾನು ಸುಮಾರು 150ರಿಂದ 200 ಪತ್ರಗಳನ್ನು ಬರೆದಿರಬಹುದು, ಅವುಗಳಲ್ಲಿ ಬಹಳ ಪ್ರಾಮುಖ್ಯವಾದ 15-20 ಪತ್ರಗಳಿಗೆ ಜ್ಞಾಪನಾ ಪತ್ರ ಕಳುಹಿಸಿದರೂ ಉತ್ತರ ಬಂದಿಲ್ಲ. ಈ ಎಲ್ಲಾ ಸಂಗತಿಗಳನ್ನು ತಮ್ಮ ಗಮನಕ್ಕೆ ನಾನು ತಂದಿದ್ದೇನೆ.

ಈ ನಿಮಿಷದವರೆಗೂ ನನ್ನ ಪತ್ರಗಳಿಗೆ ಉತ್ತರ ಬಂದಿಲ್ಲವೆನ್ನುವ ವಿಚಾರವನ್ನು ಸನ್ಮಾನ್ಯ ಅಧ್ಯಕ್ಷರಿಗೆ ತಿಳಿಸುವಂಥ ಪ್ರಯತ್ನ ಮಾಡುತ್ತಿದ್ದೇನೆ. ಇನ್ನೊಂದು ಬಹಳ ನೋವು ತಂದಿರುವಂಥ ಸಂಗತಿ ಏನೆಂದರೆ, ಸನ್ಮಾನ್ಯ ಮುಖ್ಯಮಂತ್ರಿಗಳು ಜವಾಬ್ದಾರಿಯುತ ಸ್ಥಾನದಲ್ಲಿದ್ದುಕೊಂಡು ವಿರೋಧ ಪಕ್ಷದವರಿಗೆ ಯಾವುದೇ ದಾಖಲೆ ಪತ್ರಗಳನ್ನು ನೀಡಬಾರದೆಂದು ಅಧಿಕಾರಿಗಳಿಗೆ ನಾನು ಸೂಚನೆ ಕೊಟ್ಟಿದ್ದೇನೆಂದು ಪತ್ರಿಕಾ ಹೇಳಿಕೆ ಕೊಟ್ಟಿದ್ದು, ಮತ್ತು ಏನಾದರೂ ದಾಖಲೆಗಳು ಬೇಕಾದರೆ ವಿಧಾನ ಸಭಾಧ್ಯಕ್ಷರ ಮೂಲಕ ತರಿಸಿಕೊಳ್ಳಬಹುದೇ ವಿನಃ ಬೇರೆ ಯಾವುದೇ ಮಾರ್ಗದಲ್ಲಿ ನಾವು ಕೊಡುವುದಕ್ಕೆ ಸಾಧ್ಯವಿಲ್ಲವೆನ್ನುವ ಮಾತನ್ನು ಇವೊತ್ತು ಮುಖ್ಯಮಂತ್ರಿಗಳು ಹೇಳಿರುವಂಥಾದ್ದು ಪತ್ರಿಕೆಗಳಲ್ಲಿ ವರದಿಯಾಗಿದೆ. ಅಲ್ಲದೆ, ಶಾಸಕರ ಬಗ್ಗೆಯೂ ತುಂಬಾ ಅವಹೇಳನಕಾರಿಯಾದ ಹಗುರವಾದ ಮಾತುಗಳನ್ನು ಹೇಳಿರುವಂಥಾದ್ದು ಸಹ ಪತ್ರಿಕೆಯಲ್ಲಿ ವರದಿಯಾಗಿದೆ. ಸಭಾಧ್ಯಕ್ಷರಾಗಿ ನೀವು ನಮಗೆ ರಕ್ಷಣೆ ಕೊಡದೇ ಇದ್ದರೆ ಬಹುಶಃ ನಾವು ಇಲ್ಲಿ ಗೌರವದಿಂದ ಕೆಲಸ ಮಾಡಲು ಕಷ್ಟವಾಗುತ್ತದೆನ್ನುವುದಕ್ಕೋಸ್ಕರ ಹೇಳುತ್ತಿದ್ದೇನೆ. ದಿನಾಂಕ 7.3.95ರಂದು 'ಸಂಯುಕ್ತ ಕರ್ನಾಟಕ', 'ಪ್ರಜಾವಾಣಿ', ಇನ್ನಿತರ ಪತ್ರಿಕೆಗಳಲ್ಲಿ ಬಂದಿರುವಂತಾದ್ದು ಏನೆಂದರೆ, 'ದೈನಂದಿನ ಆಡಳಿತದಲ್ಲಿ ಬಿ.ಜೆ.ಪಿ. ಹಸ್ತಕ್ಷೇಪಕ್ಕೆ ಆಕ್ಷೇಪ' ಈ ಶೀರ್ಷಿಕೆಯಡಿ ಅವರು ಹೇಳುತ್ತಾರೆ.

ಶಿವಮೊಗ್ಗ ಜಿಲ್ಲೆಯ ಪಂಚಾಯತಿ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಯವರು ಇತ್ತೀಚೆಗೆ ಶಿಕಾರಿಪುರ ತಾಲ್ಲೂಕಿನಲ್ಲಿ ಪ್ರವಾಸ ಕೈಗೊಂಡಿದ್ದಕ್ಕೆ ಯಡಿಯೂರಪ್ಪನವರು ಅವರ ಬಗ್ಗೆ ಕಿಡಿಕಿಡಿಯಾದರು ಮತ್ತು ಪೂರ್ವಾನುಮತಿ ಪಡೆಯದೆ ನನ್ನ ಕ್ಷೇತ್ರಕ್ಕೆ ಪ್ರವಾಸ ಕೈಗೊಂಡಿದ್ದು ಏಕೆ? ಎಂದು ಯಡಿಯೂರಪ್ಪನವರು ಅಧಿಕಾರಿಗಳನ್ನು ಕೇಳಿ ಪತ್ರ ಬರೆದಿದ್ದಾರೆ ಹಾಗೂ ಚಿಕ್ಕಮಗಳೂರಿನ ಜಿಲ್ಲಾ ಆಸ್ಪತ್ರೆಗೆ ಭೇಟಿ ನೀಡಿದಾಗ ಅಲ್ಲಿನ ಅಧಿಕಾರಿಗಳನ್ನು ಮನಸ್ಸಿಗೆ ಬಂದಂತೆ ನಿಂದಿಸಿದ್ದಾರೆ, ಪ್ರತಿ ಪಕ್ಷದ ನಾಯಕರಿಗೂ ಸಹ ಸಂಪುಟ ದರ್ಜೆ ಮಂತ್ರಿಯ ಸ್ಥಾನ-ಮಾನವಿದೆಯಾದರೂ ಮಂತ್ರಿಗಳ ಕೆಲಸ ಬೇರೆ, ಪ್ರತಿ ಪಕ್ಷದ ನಾಯಕರ ಕೆಲಸ ಬೇರೆ. ಸರ್ಕಾರದ ದೈನಂದಿನ ಆಡಳಿತದಲ್ಲಿ ಶಾಸಕರು ಮೂಗು ತೂರಿಸಲು ಆರಂಭಿಸಿದ್ದಾರೆ, ಆಡಳಿತ ಯಂತ್ರವನ್ನು ಸರಿದೂಗಿಸಲು ಎಂತಹ ಭೂಪತಿಗೂ ಆಗುವುದಿಲ್ಲ, ಈ ಹಿನ್ನಲೆಯಲ್ಲಿ ಯಡಿಯೂರಪ್ಪನವರೇ ಆಗಲಿ,

ಬೇರೆ ಯಾರೇ ಆಗಲಿ ಸರ್ಕಾರದ ದೈನಂದಿನ ಆಡಳಿತದಲ್ಲಿ ಹಸ್ತಕ್ಷೇಪ ಮಾಡಲು ಅವಕಾಶ ಕೊಡಬೇಡಿ ಎಂದು ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇನೆಂದು ಹೇಳಿದರು ಎಂದು ವರದಿಯಾಗಿದೆ. ಅಲ್ಲದೆ, ಚಿಕ್ಕಮಗಳೂರಿನ ಜಿಲ್ಲಾ ಆಸ್ಪತ್ರೆಗೆ ಭೇಟಿ ಕೊಡುವುದಕ್ಕೆ ನಾನು ಹೋದಾಗ ಇವರಿಗೆ ಅನುಮತಿ ಕೊಟ್ಟವರು ಯಾರು? ಎಂದೂ ಸಹ ಹೇಳಿದ್ದಾರೆ. ಈ ವಿಷಯವಾಗಿ ನಾನು ತಮ್ಮ ಮೂಲಕ ಸರ್ಕಾರವನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ನಾನು ಇವೊತ್ತು ವಿರೋಧ ಪಕ್ಷದ ನಾಯಕರನಾಗಿದ್ದೇನೆ. ಆದರೆ, ಹಿಂದೆ ಈ ಸದನದಲ್ಲಿ ನಾವು ನಾಲ್ಕು ಜನ ಮಾತ್ರ ಸದಸ್ಯರಿದ್ದಾಗ, ಆಗ ಶ್ರೀ ಬಂಗಾರಪ್ಪ, ನಂತರ ವೀರಪ್ಪ ಮೊಯಿಲಿಯವರು ಮುಖ್ಯಮಂತ್ರಿಗಳಾಗಿದ್ದಂಥ ಕಾಲದಲ್ಲಿ ನಾನು ಮತ್ತು ವಿಧಾನ ಪರಿಷತ್ತಿನಲ್ಲಿರುವ ನಮ್ಮ ಪಕ್ಷದ ಶಾಸಕರಾದ ಡಾ||ತಂಗಾರವರನ್ನು ಒಳಗೊಂಡಂತೆ ನಾಲ್ಕು ಜನರು ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಯಾವ ರೀತಿ ಕೆಲಸ ಕಾರ್ಯಗಳು ಜರುಗುತ್ತಿವೆ ಎಂಬುದನ್ನು ವೀಕ್ಷಿಸಲು ಹೋದಾಗ ನಾವು ಮುಖ್ಯಮಂತ್ರಿಗಳಿಗಾಗಲಿ, ಸರ್ಕಾರಕ್ಕಾಗಲಿ ಪತ್ರ ಬರೆದು ಹೋಗಲಿಲ್ಲ. ನಾವು ಅಲ್ಲಿಗೆ ಹೋದಾಗ ಆಗ ನಾನು ವಿರೋಧ ಪಕ್ಷದ ನಾಯಕರನಾಗಿರಲಿಲ್ಲ. ಅಲ್ಲಿಗೆ ನಾವು ಹೋಗಿದ್ದಂಥ ಸಂದರ್ಭದಲ್ಲಿ ಅಲ್ಲಿನ ಅಧಿಕಾರಿಗಳು ಇಡೀ ದಿವಸ ನಮ್ಮ ಜೊತೆಗಿದ್ದು ಆ ಪ್ರದೇಶದಲ್ಲಿ ಆಗುತ್ತಿರುವ ಎಲ್ಲಾ ಕೆಲಸ ಕಾರ್ಯಗಳನ್ನು ತೋರಿಸಿದರಲ್ಲದೆ ಮಾರನೇ ದಿವಸವೂ ಬಂದು ಸಂಬಂಧಿಸಿದ ಎಲ್ಲಾ ಮಾಹಿತಿಗಳನ್ನು ಒದಗಿಸಿ ನೇನು ಕೆಲಸಗಳಾಗಿವೆ, ಏನೇನು ಆಗಿಲ್ಲ ಮತ್ತು ಸಮಸ್ಯೆಗಳೇನಿವೆ ಮುಂತಾದ ಎಲ್ಲಾ ವಿವರಗಳನ್ನು ಒದಗಿಸುವುದಕ್ಕೆ ಸರ್ಕಾರ ಕ್ರಮ ಕೈಗೊಂಡಿತು.

ಆದರೆ, ಇವೊತ್ತು ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಒಬ್ಬ ಚುನಾಯಿತ ಶಾಸಕರಾಗಿ ನಾವು ನಮ್ಮ ಕ್ಷೇತ್ರದಲ್ಲಿರಬಹುದು ಅಥವಾ ರಾಜ್ಯದ ಬೇರೆ ಯಾವುದೇ ಭಾಗದಲ್ಲಿರಬಹುದು, ಅಲ್ಲಿ ಏನು ಕೊರತೆಗಳಾಗಿವೆ? ಏನು ಅನ್ಯಾಯಗಳಾಗುತ್ತಿವೆ? ಅಥವಾ ಸತ್ಯ ಸಂಗತಿಗಳು ಏನು ನಡೆಯುತ್ತಿದೆ? ಎನ್ನುವುದನ್ನು ಪರಿಶೀಲಿಸುವಂಥ ಒಂದು ಅಧಿಕಾರ, ಹಕ್ಕು ನನಗೆ ಇದೆಯೋ? ಇಲ್ಲವೋ? ಎಂಬುದನ್ನು ತಿಳಿದುಕೊಳ್ಳುವುದಕ್ಕೆ ಇಚ್ಛೆಪಡುತ್ತೇನೆ. ಮತ್ತು ಯಾವುದಾದರೂ ದಾಖಲೆಗಳು ಬೇಕಾದಂಥ ಸಂದರ್ಭದಲ್ಲಿ ಶಾಸಕರುಗಳು ಸನ್ಮಾನ್ಯ ಅಧ್ಯಕ್ಷರಿಗೆ ಪತ್ರ ಬರೆದು ಅವರ ಮೂಲಕ ತೆಗೆದುಕೊಳ್ಳಬೇಕೆಂಬ ಒಂದು ಮಾತನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಿರುವಂಥ ಈ ಸಂದರ್ಭದಲ್ಲಿ ತಾವು ಅಪ್ಪಣೆ ಕೊಡಿಸಬೇಕು. ಇದು ಈ ಸದನದಲ್ಲಿ ನಡೆದುಕೊಂಡು ಬಂದಿರುವ ಸಂಪ್ರದಾಯವೇ? ವರ್ಷದಲ್ಲಿ 50-60 ದಿವಸಗಳು ಸದನ ಸೇರುವುದಿಲ್ಲ. ಆಗ ನಮಗೆ ಯಾವುದಾದರೂ ದಾಖಲೆಗಳು ಬೇಕಾದಂಥ ಸಂದರ್ಭದಲ್ಲಿ ಅಧ್ಯಕ್ಷರ ಮುಖಾಂತರ ತೆಗೆದುಕೊಳ್ಳಬೇಕೆನ್ನುವುದಾದರೆ ಇದರ ಬಗ್ಗೆ ತಾವು ತೀರ್ಪು ಕೊಡಬೇಕಾಗಿದೆ. ಹಾಗೂ ಯಾವುದೇ ದಾಖಲೆಗಳು ಇನ್ನು ಮುಂದೆ ಬೇಕಾದಾಗ ಅಧ್ಯಕ್ಷರಿಗೆ ಶಾಸಕರು ಪತ್ರ ಬರೆಯಬೇಕು ಮತ್ತು ನಿಮ್ಮ ಮೂಲಕವೇ ಅಧಿಕಾರಿಗಳು ಉತ್ತರ ಕೊಡಬೇಕೆಂಬ ತೀರ್ಮಾನ ಆಗುವುದಾದರೆ......

ಅಧ್ಯಕ್ಷರು : ತಾವು ಈಗ ತಮ್ಮ ಅಭಿಪ್ರಾಯವನ್ನು ಏನು ವ್ಯಕ್ತಪಡಿಸುತ್ತಿದ್ದೀರಿ, ಇದಕ್ಕೆ ಆಧಾರ ಪತ್ರಿಕೆಗಳೇ? ಸದನನಲ್ಲಿ ಹಿರಿಯ ಸದಸ್ಯರಾದ ನಂಜೇಗೌಡ, ರಾಮಕೃಷ್ಣ ಮತ್ತು ತಾವಿದ್ದೀರಿ. ಪತ್ರಿಕಾ ವರದಿಗಳ ಆಧಾರದ ಮೇಲೆ ಒಂದು ಅಭಿಪ್ರಾಯಕ್ಕೆ ಬರತಕ್ಕಂಥಾದ್ದು ಅಷ್ಟು ಸಾಧುವೇ? ಎಂಬುದನ್ನು ಯೋಚಿಸಬೇಕು. Can we reply upon the press?

ಶ್ರೀ ಹೆಚ್.ಎನ್. ನಂಜೇಗೌಡ : ತಾವು ಹೇಳುವುದನ್ನು ಒಪ್ಪಿಕೊಳ್ಳುತ್ತೇವೆ. ಆದರೆ, ಇಲ್ಲಿ ಪರಿಸ್ಥಿತಿ ಏನಾಗಿದೆಯೆಂದರೆ, ಪತ್ರಿಕೆಗಳಲ್ಲಿ ಆ ವಿಚಾರ ಬಂತು. ಅದು

ವರದಿಯಾಗಿ ಇಷ್ಟು ದಿವಸವಾದರೂ ಸಹ 'ನಾನು ಹಾಗೆ ಏನೂ ಹೇಳಿಲ್ಲ'ವೆಂದು ಮುಖ್ಯಮಂತ್ರಿಯವರೂ ಹೇಳಿಲ್ಲ. ಅದರ ಅರ್ಥ, ಅವರು ನಿಜ ಹೇಳಿದ್ದಾರೆಂಬುದು.

ಅಧ್ಯಕ್ಷರು : ಅವರು ಏಕೆ ಹೇಳಲಿಲ್ಲ, ಹೇಳಬಾರದಾಗಿತ್ತು, ಹೇಳಬೇಕಾಗಿತ್ತು ಅದು ಅವರ ಕರ್ತವ್ಯ. Can we reply on the reports of the news papers and presume certain inferences or can the correspondence between the Hon'ble leader of the Opposition and the hon'ble leader of the House be through the Press? If that is the case will that have any relevance to the rules of this House?

SRI H.N. NANJEGOWDA : The point is, our adjournment motions, calling attention notices and other notices are based on the press reports. Invariably most of the subject matters of this House as well as of the Lok Sabha we did depend on the Press Reports.

It is an admitted practice. Unless it is questioned by the person in whose name that is originating, otherwise it is taken. That is a practice.

MR. SPEAKER : What is admitted as a matter of practical convenience should not constitute the sole basis for making a speech.

SRI H.N. NANJEGOWDA : We know that. Press reports cannot be taken as evidences. But as long as we are not contested by others.

MR. SPEAKER : I do not want to obstruct the Hon'ble Leader of Opposition from going ahead with his speech.

SRI H.N. NANJEGOWDA : As long as it is contested by the person in whose name it has originated. That is the convention we have got.

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಅಧ್ಯಕ್ಷರೆ, ತಾವು ಹೇಳಿದಂತೆ ನಾನು ಪತ್ರಿಕಾ ಹೇಳಿಕೆಯನ್ನೇ ಆಧಾರವಾಗಿಟ್ಟುಕೊಂಡು ಹೇಳುವುದಕ್ಕೆ ಇಷ್ಟಪಡುವುದಿಲ್ಲ ಆದರೆ ಮುಖ್ಯ ಮಂತ್ರಿಗಳಿಗೆ ಪತ್ರವನ್ನು ಬರೆದಮೇಲೂ ಸಹ ಈ ರೀತಿ ನೀವು ಹೇಳಿಕೆಯನ್ನು ಕೊಟ್ಟಿದ್ದೀರಿ ಪತ್ರಿಕೆಯಲ್ಲಿ ಬಂದಿದೆ, ನಾನೇನು ಮಾಹಿತಿಯನ್ನು ಕೇಳಿದ್ದೇನೆ ಅದರಲ್ಲಿ ಗೌಪ್ಯವಾದುದು ಯಾವುದು ಇದೆ? ವಿರೋಧಪಕ್ಷದ ನಾಯಕರಿಗೆ, ಒಬ್ಬರು ಶಾಸಕರಿಗೆ ಕೊಡಲು ಸಾಧ್ಯವಿರದ ಮಾಹಿತಿ ಯಾವುದಿದೆ ಎಂದು ನಾನು ಪತ್ರಿಕೆಯಲ್ಲಿ ಬರೆದಿದ್ದೇನೆ. ಅದಕ್ಕೂ ಸಹ ಉತ್ತರ ಬರಲಿಲ್ಲ. ಆದರೆ ಬಹಳ ಮುಖ್ಯವಾದ ಸಂಗತಿಯೇನೆಂದರೆ, ಇಲ್ಲಿ ಮುಖ್ಯಮಂತ್ರಿಗಳಾಗಲಿ, ಶಾಸಕರಾಗಲಿ, ಈ ಕಡೆ ಕುಳಿತಿರುವಂಥರಾಗಲಿ ಯಾರೂ ಸಹ ಇಲ್ಲಿ ಶಾಶ್ವತವಲ್ಲ, ಅಧಿಕಾರ ಬರುತ್ತದೆ ಅಧಿಕಾರ ಹೋಗುತ್ತದೆ. ಆದರೆ ಯಾರ ಸಂಪ್ರದಾಯಗಳನ್ನು ನಾವು ಬಿಟ್ಟು ಹೋಗುತ್ತೇವೆ ಎನ್ನತಕ್ಕದ್ದು ಇಲ್ಲಿ ಬಹಳ ಮುಖ್ಯವಾದ ಸಂಗತಿಯಾಗಿದೆ. ನಾನು ವಿರೋಧಪಕ್ಷದ ನಾಯಕನಾದ ಮೇಲೆ ಏನು ಅಂತಕೊಂಡಿದ್ದೆ ಎಂದರೆ, ನನಗೆ ಬೇಕಾಗಿರುವ ಮಾಹಿತಿಯನ್ನು ಅಧಿಕಾರಿಗಳನ್ನು ಕೇಳಿ ಪಡೆದುಕೊಂಡು ಅದರ ಆಧಾರದಮೇಲೆ ಸರ್ಕಾರಕ್ಕೆ ಪತ್ರವನ್ನು ಬರೆಯಬಹುದು ತಪ್ಪೇನಾದರೂ ಆಗಿದ್ದರೆ ಅದನ್ನು ಗುರುತಿಸಿ ಸರಿಯಾದ ದಾರಿಯಲ್ಲಿ ಸರ್ಕಾರ ಹೋಗಲಿ ಸರಿಯಾದ ದಾರಿಯಲ್ಲಿ ಕೆಲಸ ಮಾಡುವುದಕ್ಕೆ ಸರ್ಕಾರಕ್ಕೆ ತಿಳಿಸುವುದು ನನ್ನ ಕರ್ತವ್ಯವೆಂದು ತಿಳಿದುಕೊಂಡು ನನ್ನ ಕೆಲಸವನ್ನು ಮಾಡುತ್ತಿದ್ದೆ. ನಾವು ಕೇಳಿದಂತೆ ಅಧಿಕಾರಿಗಳು ಮಾಹಿತಿಗಳನ್ನು

ಕೊಡಲು ಪ್ರಾರಂಭ ಮಾಡಿದರು. ತಾವು ವಿರೋಧಪಕ್ಷದ ನಾಯಕನಾಗಿ ನನಗೆ ಗುರುತರವಾದ ಜವಾಬ್ದಾರಿಯನ್ನು ಕೊಟ್ಟಮೇಲೆ ನಾನು ಇಡೀ ರಾಜ್ಯದಲ್ಲಿ ಒಂದು ತಿಂಗಳ ಕಾಲ ಸುತ್ತಾಡಿ ಬಂದಿದ್ದೇನೆ.

ರಾಜ್ಯದ ಆಗುಹೋಗುಗಳ ಬಗ್ಗೆ ತಿಳಿದುಕೊಂಡು ಬಂದಿದ್ದೇನೆ. ಅಧಿಕಾರಿಗಳನ್ನು ಭೇಟಿ ಮಾಡಿ ಮಾಡಿರುವ ಕೆಲಸಗಳ ಬಗ್ಗೆ, ಕಾರ್ಯಕ್ರಮಗಳ ಬಗ್ಗೆ ತನಿಖೆ ಮಾಡಿ ಯಾವ ಹಣವನ್ನು ಕೊಟ್ಟಿದ್ದಾರೆ, ಹಣವನ್ನು ಯಾವ ರೀತಿಯಲ್ಲಿ ಖರ್ಚು ಮಾಡಿದ್ದಾರೆ, ಕೆಲಸರೇನಾಗಿದೆ ಇರತಕ್ಕ ಸಮಸ್ಯೆಗಳೇನು ಎನ್ನುವ ಬಗ್ಗೆ ಜನಗಳ ಜೊತೆ ಮತ್ತು ಅಧಿಕಾರಿಗಳ ಜೊತೆ ಚರ್ಚೆ ಮಾಡಿ ಬಂದಿದ್ದೇನೆ. ನನಗೆ ದುಃಖವಾಗತಕ್ಕ ಸಂಗತಿಯೇನೆಂದರೆ, ನಾನು ಚಿಕ್ಕಮಗಳೂರು ಜಿಲ್ಲೆಗೆ ಹೋಗಿದ್ದೆ, ಪತ್ರಿಕಾಗೋಷ್ಠಿ ನಡೆಯುತ್ತಿತ್ತು ಆಗ ಪತ್ರಕರ್ತರು ವಿರೋಧಪಕ್ಷದ ನಾಯಕರಾಗಿ ಮೊದಲಬಾರಿಗೆ ಇಲ್ಲಿಗೆ ಬಂದಿದ್ದೀರಿ ನೀವು ಇಲ್ಲಿ ಪತ್ರಿಕಾಗೋಷ್ಠಿಯನ್ನು ಮಾಡಿ ಹೇಳಿಕೆಗಳನ್ನು ಕೊಟ್ಟು ವಾಪಸ್ ಹೋಗುವುದರ ಬದಲಾಗಿ ಇಲ್ಲಿಂದ ಒಂದು ಫರ್ಲಾಂಗ್ ದೂರದಲ್ಲಿ ಜನರಲ್ ಆಸ್ಪತ್ರೆ ಇದೆ, ಅದರ ಸ್ಥಿತಿಗತಿಯ ಬಗ್ಗೆ ಮತ್ತು ಅಲ್ಲಿನ ಜನರು ಯಾವ ರೀತಿಯಲ್ಲಿ ಬದುಕಬೇಕು ಎನ್ನುವುದನ್ನು ತಿಳಿಸಬೇಕು ಬನ್ನಿ ಎಂದು ಕರೆದುಕೊಂಡು ಹೋದರು. ಪತ್ರಿಕಾಗೋಷ್ಠಿಯನ್ನು ಪೂರ್ಣ ಮಾಡದೆಯೆ ಆ ಆಸ್ಪತ್ರೆಗೆ ಕರೆದುಕೊಂಡು ಹೋದರು. ನನ್ನ ಜೊತೆಗೆ ಸುಮಾರು 14-15 ಪತ್ರಕರ್ತರು ಬಂದರು. ಉನ್ನತ ಅಧಿಕಾರಿಗಳ ಜೊತೆ ನಾನು ಮಾತನಾಡಿದೆ. ಆ ಆಸ್ಪತ್ರೆಯಲ್ಲಿ ಕೊಳೆತು ನಾರುವ, ಮೂಗುಮುಚ್ಚಿಕೊಂಡು ಹೋಗತಕ್ಕ ಪರಿಸ್ಥಿತಿ ಇತ್ತು. ಆಸ್ಪತ್ರೆಯ ಹೊರಗಡೆ ಸುತ್ತಲು ನೀರುನಿಂತಿರುವ ಗುಂಡಿಗಳು, ಹಾಸಿಗೆಯ ಕವರನ್ನು ಹೊಗೆಯದೆ ಎಷ್ಟೋ ತಿಂಗಳುಗಳಾಗಿದೆ, ಹಾಸಿಗೆಗಳು ಕೊಳೆತು ನಾರುತ್ತಿದ್ದ, ಅಲ್ಲಿದ್ದ ನೂರಾರು ರೋಗಿಗಳು ನನ್ನನ್ನು ಸುತ್ತಿಕೊಂಡು ಇಂಥ ಉಸಿರುಕಟ್ಟುವ ವಾತಾವರಣದಲ್ಲಿ ಒಂದು ಕಾಯಿಲೆಯ ಬದಲಾಗಿ ಇನ್ನೊಂದು ಕಾಯಿಲೆ ಬರುತ್ತದೆ ಅಂಥ ಪರಿಸ್ಥಿತಿಯಲ್ಲಿ ನಾವಿಲ್ಲಿ ಇದ್ದೇವೆ ನಮಗೆ ಹೇಳುವವರು ಕೇಳುವವರ್ಯಾರು ಇಲ್ಲ ಎಂದು ಹೇಳಿದರು. ಅಲ್ಲಿನುವ ಎಕ್ಸರೆ ಪ್ಲಾಂಟ್‌ನ್ನು ಕೆಟ್ಟು 3-4 ತಿಂಗಳುಗಳಾಗಿದೆ. ನಾನು ಅಧಿಕಾರಿಗಳಿಗೆ ಪತ್ರಕರ್ತರ ಜೊತೆಯಲ್ಲಿ ಕುಳಿತುಕೊಂಡು ನಿಮಗೆ ಏನು ತೊಂದರೆ ಎಂದು ಕೇಳಿದೆ, ಔಷಧಿಗಳಿಲ್ಲವೆಂದರೆ ಬಂದಿಲ್ಲವೆಂದು ಅರ್ಥ ಮಾಡಿಕೊಳ್ಳಬಹುದು, ಆದರೆ ಹಾಸಿಗೆ, ಬೆಡ್‌ಶೀಟ್ ಇಲ್ಲ, ಅದನ್ನು ಸಹ ಬದಲಾಯಿಸಿ ಬಂದಿರತಕ್ಕ ಸೌಲಭ್ಯಗಳಲ್ಲಿ ಸರಿಯಾದ ರೀತಿಯಲ್ಲಿ ಶುಶ್ರೂಷೆಯನ್ನು ಮಾಡಿ ಔಷಧಿಗಳನ್ನು ಕೊಟ್ಟು ರೋಗಿಗಳಿಗೆ ಉಪಚಾರ ಮಾಡಿ ವಾಪಸ್ ಕಳಿಹಿಕೊಡಬೇಕು ಎನ್ನತಕ್ಕ ಮಾನವೀಯತೆ ಇಲ್ಲದಿರತಕ್ಕ ವಿಚಿತ್ರವಾದ ಸಂದರ್ಭವನ್ನು ನಾನು ಕಣ್ಣಾರೆ ನೋಡಿದ್ದೇನೆ. ನಾನು ಅಧಿಕಾರಿಗಳಿಗೆ ಪತ್ರಕರ್ತರ ಸಮ್ಮುಖದಲ್ಲಿಯೇ ನೀವು ಇದನ್ನು ಸರಿಪಡಿಸಬೇಕು ಇಲ್ಲದಿದ್ದರೆ ನಿಮ್ಮಿಂದ ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತದೆ ನೀವು ಇದನ್ನು ಸರಿಪಡಿಸದಿದ್ದರೆ ನಾವು ಜನರ ಹತ್ತಿರ ಹೋಗಿ ಭಿಕ್ಷೆಯನ್ನು ಬೇಡಿ ಸರ್ಕಾರದ ಹತ್ತಿರ ಹಣವಿಲ್ಲವೆಂದು ಕಾರ್ಯಕ್ರಮವನ್ನು ಹಮ್ಮಿಕ್ಕೊಳ್ಳಬೇಕಾಗುತ್ತದೆಂದು ಹೇಳಿದೆ. ಇದರ ಬಗ್ಗೆ ಆರೋಗ್ಯ ಮಂತ್ರಿಗಳಿಗೆ ಪತ್ರವನ್ನು ಸಹ ಬರೆದೆ. ಇಂಥ ಪರಿಸ್ಥಿತಿ ಅಲ್ಲಿದೆ. ಅನಂತರ ಮೂರು ದಿನಗಳಲ್ಲಿ ಆ ಆಸ್ಪತ್ರೆಯ ವ್ಯವಸ್ಥೆ ಸರಿಯಾಯಿತು, ಹೊಸ ಬೆಡ್‌ಶೀಟ್‌ಗಳು ಬಂದವು, ವಾತಾವರಣ ಶುಭ್ರವಾಯಿತು, ಆಸ್ಪತ್ರೆಯ ಹೊರಗಡೆ ಇದ್ದ ನೀರಿನ ಗುಂಡಿಗಳನ್ನು ಮುಚ್ಚಿಯಾಯಿತು, ಸುಣ್ಣವನ್ನು ಹೊಡೆಸತಕ್ಕ ಕೆಲಸವಾಯಿತು ಎಂದು 4-5 ಜನ ಪತ್ರಕರ್ತರು ಮತ್ತು ನೂರಾರು ಜನರಿಂದ ನನಗೆ ಪತ್ರಗಳು ಬಂದಿದೆ.

ಸನ್ಮಾನ್ಯ ಮುಖ್ಯಮಂತ್ರಿಗಳು ಇದನ್ನು ನೋಡಿ ನಾನು ಮಾಡಿದಂಥ ಕಾರ್ಯವನ್ನು ಶ್ಲಾಘನೆ ಮಾಡಬೇಕಾಗಿತ್ತು ಅದಕ್ಕೆ ಬದಲಾಗಿ ಅವರು ವಿರೋಧಪಕ್ಷದ ನಾಯಕರಾಗಿ

ಆಸ್ಪತ್ರೆಗೆ ಹೋಗಿ ತನಿಖೆ ಮಾಡಲು ಇವರಿಗೆ ಯಾರು ಅಧಿಕಾರವನ್ನು ಕೊಟ್ಟರು, ಅಲ್ಲಿರುವವರನ್ನು ಬೆದರಿಸಲು ಇವರಿಗೆ ಅಧಿಕಾರವನ್ನು ಕೊಟ್ಟವರಾರು ಎಂದು ಪತ್ರಿಕೆಗಳಲ್ಲಿ ಹೇಳಿಕೆಯನ್ನು ಕೊಟ್ಟರೆ ಇನ್ನು ಮುಂದೆ ರಾಜ್ಯದಲ್ಲಿ ಎಲ್ಲಿಯಾದರೂ ಯಾವುದೇ ಶಾಸಕರು ಅಧಿಕಾರಿಗಳ ಜೊತೆ ಈ ರೀತಿ ಆಗಿರುವ ತಪ್ಪನ್ನು ಸರಿಪಡಿಸಲು ಹೇಳುವಂತಾಗಲು ಅಥವಾ ಅವರುಗಳು ನಮ್ಮ ಮಾತನ್ನು ಕೇಳಿ ನಮಗೆ ಗೌರವವನ್ನು ಕೊಡತಕ್ಕ ಸಂದರ್ಭ ಬರಬಹುದೆ? ನಾನು ಮಾಡಿದ ಅಪರಾಧವೇನು ಇಲ್ಲಿ? ನಾನು ಆರೋಗ್ಯ ಮಂತ್ರಿಗಳಿಗೆ ಪತ್ರವನ್ನು ಬರೆದಿರತಕ್ಕದ್ದು ನಿಜವಲ್ಲವೇ? ಅಲ್ಲಿ ಯಾವ ರೀತಿಯಾದ ವಾತಾವರಣವಿತ್ತು ಎಂಬುದನ್ನು ನಿಮ್ಮ ಕೊಠಡಿಗೆ ಪತ್ರಕರ್ತರನ್ನು ಕರೆಯಿಸಿ ಮಾತನಾಡಿ. ಆದರೆ ಒಂದು ರಾಜ್ಯದ ಮುಖ್ಯ ಮಂತ್ರಿಗಳು ಯಡಿಯೂರಪ್ಪನವರ ಮನೆಗೆ ಕಡತವನ್ನು ಕಳಿಸಿಕೊಡು ಎಂದು ಕೇಳಿದ್ದಾರೆ. ಖಂಡಿತವಾಗಿ ಕಳಿಸಿಕೊಡಬೇಡಿ. ಬಿಜೆಪಿಯವರು ತಮಗೆ ಬೇಡವಾಗಿಬಹುದು ಆದರೆ ಕೊನೆಯ ಪಕ್ಷ ಜನರು ಆಯ್ಕೆ ಮಾಡಿ ಕಳಿಸಿ ವಿರೋಧಪಕ್ಷದ ನಾಯಕನ ಸ್ಥಾನದಲ್ಲಿದ್ದೇನೆ. ನಿಮಗೆ ವಾಹನಗಳನ್ನು ಕೊಟ್ಟಿದ್ದೇವೆ, ಸಿಬ್ಬಂದಿಯನ್ನು ಕೊಟ್ಟಿದ್ದೇವೆ ನಿಮಗೆ ಯಾವ ರೀತಿ ದಾಖಲೆಯನ್ನು ತರಿಸಿಕೊಳ್ಳಬೇಕೆಂದು ಗೊತ್ತಿದೆ. ವಿರೋಧ ಪಕ್ಷದ ನಾಯಕನಾದ ನಾನು ನನ್ನದೇ ಆದ ರೀತಿಯಲ್ಲಿ ಮಾಹಿತಿಯನ್ನು ತರಿಸಿಕೊಳ್ಳುತ್ತಿದ್ದರೆ ಹೇಳಿ? ಅಂದರೆ ನೀವು ಕೊಟ್ಟಿರತಕ್ಕ ವಾಹನ, ಸಿಬ್ಬಂದಿಗಳನ್ನು ಈ ವ್ಯವಸ್ಥೆಯಲ್ಲಿ ನನ್ನ ಹೆಂಡತಿ ಮಕ್ಕಳ ಓಡಾಟಕೋಸ್ಕರವಲ್ಲ. ಈ ವ್ಯವಸ್ಥೆಯಲ್ಲಿರತಕ್ಕ ವಾಹನಗಳನ್ನು ಉಪಯೋಗ ಮಾಡಿಕೊಂಡು, ಸಿಬ್ಬಂದಿಯನ್ನು ಉಪಯೋಗ ಮಾಡಿಕೊಂಡು ವಿರೋಧ ಪಕ್ಷದ ನಾಯಕನಾಗಿ ರಾಜ್ಯದ ಆಡಳಿತ ವ್ಯವಸ್ಥೆಯು ಸರಿಯಾದ ರೀತಿಯಲ್ಲಿ ಆಗುವಂತೆ ನೋಡಿಕೊಂಡು ತಪ್ಪನ್ನು ಸರಿಪಡಿಸಿ ನನ್ನ ಕರ್ತವ್ಯವನ್ನು ಜವಾಬ್ದಾರಿಯನ್ನು ನಿರ್ವಹಣೆ ಮಾಡಲು ಈ ಪ್ರಜಾತಂತ್ರ ವ್ಯವಸ್ಥೆಯಲ್ಲಿ ವಿರೋಧ ಪಕ್ಷದ ನಾಯಕನ ಸ್ಥಾನವಿದೆ. ಅದಕ್ಕೆ ಅಪಮಾನ, ಅವಹೇಳನ ಮಾಡತಕ್ಕ ಮಾತನ್ನು ಮುಖ್ಯಮಂತ್ರಿಗಳು ಹೇಳುತ್ತಾರೆಂದರೆ ಬಹುಶಃ ನಾನು ಗೌರವದಿಂದ ಕೆಲಸವನ್ನು ಮಾಡುವುದಾದರೆ ಹೇಗೆ? ಇದರ ಬಗ್ಗೆ ತಾವು ಹೇಳಬೇಕು.

ಗುಲ್ಬರ್ಗಾ ಜಿಲ್ಲೆಯಲ್ಲಿ 1993ರಲ್ಲಿ ಆದಂಥ ಭೂಕಂಪದ ಪರಿಸ್ಥಿತಿ ಇದೆ. ಆಳಂದ ತಾಲ್ಲೂಕಿನ ಖಜೂರಿ ಎನ್ನತಕ್ಕ ಗ್ರಾಮಕ್ಕೆ ನಾನು ಹೋಗಿದ್ದೆ. ಅಲ್ಲಿಗೆ ಕಂದಾಯ ಅಧಿಕಾರಿಗಳು ಬಂದಿದ್ದರು. ನಾನು ಅಲ್ಲಿಗೆ ಬರುತ್ತೇನೆಂದು ನನ್ನ ಪ್ರವಾಸದ ಕಾರ್ಯಕ್ರಮದಲ್ಲಿ ತಿಳಿಸಿದ್ದೆ. ಆಳಂದ, ಅಫ್ಜಲ್ ಪುರ, ಜೇವರ್ಗಿ ಈ ಭಾಗಗಳ ಸುಮಾರು 5836 ಕುಟುಂಬಗಳ ಪೈಕಿ 3264 ಕುಟುಂಬಗಳು ತೊಂದರೆಗೆ ಈಡಾಗಿದೆ. ಇಂಥ ಕುಟುಂಬಗಳನ್ನು ಶಿಫ್ಟ್ ಮಾಡಲು ಅವರಿಗೆ ಬೇಕಾದಂಥ ಕನಿಷ್ಠ ಪಕ್ಷದ ಸೌಲಭ್ಯಗಳನ್ನು ಕೊಡಲಿಲ್ಲ. ಇದರ ಬಗ್ಗೆ ಸಂಬಂಧಪಟ್ಟ ಕಂದಾಯಾಧಿಕಾರಿಗಳೊಂದಿಗೆ ಚರ್ಚೆ ಮಾಡಿದೆ, ಸರ್ಕಾರಕ್ಕೆ ಪತ್ರವನ್ನು ಬರೆದೆ. ಆದರೆ ಅದಕ್ಕೆ ಉತ್ತರ ಬರಲಿಲ್ಲ. ಅಧ್ಯಕ್ಷರೇ, ನನಗೆ ದುಃಖವಾಗತಕ್ಕ ಸಂಗತಿ ಏನೆಂದರೆ, ಇವತ್ತು ನಾನು ವಿರೋಧ ಪಕ್ಷದ ನಾಯಕನಾಗಿ ಕೆಲಸ ಮಾಡುತ್ತಿರತಕ್ಕ ಕಾಲದಲ್ಲಿ ಒಬ್ಬರು ಮುಖ್ಯ ಕಾರ್ಯದರ್ಶಿಯನ್ನು ತನ್ನ ಅನುಮತಿ ಇಲ್ಲದೆಯೇ ನನ್ನ ಊರಿಗೆ ಬರಬಾರದು ಎಂದು ಕಟ್ಟಾಜ್ಞೆ ಮಾಡಿದ್ದಾರೆ, ಅದರ ಬಗ್ಗೆ ಜಿಲ್ಲಾಧಿಕಾರಿಗಳು ನನಗೆ ವರದಿಯನ್ನು ಕೊಟ್ಟಿದ್ದಾರೆ ಎನ್ನತಕ್ಕ ಮಾತನ್ನು ಸನ್ಮಾನ್ಯ ಮುಖ್ಯಮಂತ್ರಿಗಳು, ಗೃಹಮಂತ್ರಿಗಳು ಪತ್ರಿಕಾಗೋಷ್ಠಿಯಲ್ಲಿ ಹೇಳಿದ್ದಾರೆ. 3-4 ಜನ ನಮ್ಮ ಶಾಸಕರ ಮೇಲೆ ಆರೋಪ ಮಾಡಿದ್ದಾರೆ. ನಾನು ತಮಗೆ ಪತ್ರವನ್ನು ಬರೆಯುವುದಕ್ಕಿಂತ ಮೊದಲು ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಪತ್ರವನ್ನು ಬರೆದಿದ್ದೇನೆ.

ದಿನಾಂಕ 6:3:95ರಂದು ಮತ್ತೆ ತಾವು ಹಾಗೂ ಮಾನ್ಯ ಗೃಹ ಸಚಿವರು ನಡೆಸಿದ ಪತ್ರಿಕಾಗೋಷ್ಠಿಯಲ್ಲಿ ನಾನು ಹಾಗೂ ಪುತ್ತೂರು ಕ್ಷೇತ್ರದ ಶಾಸಕರು ಮತ್ತು ಸೋಮವಾರ ಪೇಟೆ ಕ್ಷೇತ್ರದ ಶಾಸಕರು ದಿನ ನಿತ್ಯದ ಆಡಳಿತ ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಾಡುತ್ತಿರುವುದಾಗಿ ದೂರಿದ್ದಾರೆ, ಅದು ಪತ್ರಿಕೆಯಲ್ಲಿ ವರದಿಯಾಗಿದೆ. ನಾನು ಮತ್ತು ಪುತ್ತೂರು ಹಾಗೂ ಸೋಮವಾರ ಪೇಟೆ ಕ್ಷೇತ್ರದ ಶಾಸಕರು ಬರೆದ ಪತ್ರದ ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿದ್ದೇನೆ. ತಾವು ಇದನ್ನು ಪರಾಮರ್ಶಿಸಬಹುದು. ಯಾವುದೇ ಪತ್ರದಲ್ಲಿ ನಾವುಗಳು ಅಧಿಕಾರಿಗಳ ದೈನಂದಿನ ಆಡಳಿತ ವ್ಯವಹಾರದಲ್ಲಿ ಹಸ್ತಕ್ಷೇಪ ಮಾಡಿರುವುದಿಲ್ಲ. ಪುತ್ತೂರಿನ ಶಾಸಕರು ಯಾವುದೇ ಅಧಿಕಾರಿಗಳು ವರ್ಗಾವಣೆ ರಾಜಕೀಯ ಪ್ರೇರಿತ ಆಗಬಾರದು ಎಂದು ತಮಗೆ ಪತ್ರ ಬರೆದಿರುತ್ತಾರೆ. ಹಾಗೂ ಅದೇ ರೀತಿ ಸೋಮವಾರ ಶಾಸಕರು ಪತ್ರ ಬರೆದಿದ್ದಾರೆ. ನೀವು ಅದಕ್ಕೆ ತದ್ವಿರುದ್ಧವಾಗಿ ಒಂದು ಮಾತನ್ನು ಹೇಳಿದ್ದೀರಿ. ನಾನು ಚಿಕ್ಕಮಗಳೂರು ಜಿಲ್ಲೆಯಲ್ಲಿ ಪ್ರವಾಸದಲ್ಲಿದ್ದಾಗ ಅಲ್ಲಿನ ಸಾರ್ವಜನಿಕರ ಕೋರಿಕೆಯಂತೆ ಅಲ್ಲಿನ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ಅಲ್ಲಿನ ಅವ್ಯವಸ್ಥೆ ಬಗ್ಗೆ ಅಧಿಕಾರಿಗಳ ಜೊತೆ ಮಾತನಾಡಿ ಆರೋಗ್ಯ ಸಚಿವರಿಗೂ ಪತ್ರ ಬರೆದಿರುತ್ತೇನೆ. ಆದರೆ ತಾವುಗಳು ಅಧಿಕಾರಿಗಳನ್ನು ಬಹಳ ನಿಂದಿಸುತ್ತೀರಿ ಎಂದು ಹೇಳಿರುವುದು ಸರಿಯೇ? ಮತ್ತು ತಾಲ್ಲೂಕು ಪಂಚಾಯಿತಿಗೆ ಸಂಬಂಧಿಸಿದ ಕ್ರಿಯಾ ಯೋಜನೆಯನ್ನು ತಯಾರಿಸುವ ಸಂದರ್ಭದಲ್ಲಿ ಈ ವಿಚಾರವನ್ನು ಶಾಸಕರ ಗಮನಕ್ಕೆ ತಾವು ತರದೆ ಇರುವುದು ಸಂಪ್ರದಾಯವಲ್ಲ. ಜಿಲ್ಲಾ ಪಂಚಾಯಿತಿ ಕಾರ್ಯದರ್ಶಿಗಳು ಮತ್ತು ಉಪ ಕಾರ್ಯದರ್ಶಿಗಳು ಕಾಮಗಾರಿಗಳ ಸ್ಥಳ ಪರಿಶೀಲನೆ ಮಾಡಬೇಕೆಂದು ಹೇಳಿ ನಾನು ಪತ್ರ ಬರೆದಿದ್ದೇನೆ. ಈ ಎಲ್ಲಾ ವಿಷಯಗಳಿಗೆ ತದ್ವಿರುದ್ಧವಾಗಿ ತಮ್ಮ ಪತ್ರಿಕಾ ಹೇಳಿಕೆಯನ್ನು ಕೊಟ್ಟಿದ್ದೀರಿ. ಇದಲ್ಲದೆ ನಿಮಗೆ ಏನಾದರೂ ಪ್ರತಿಗಳಿದ್ದರೆ, ಮಾಹಿತಿಗಳಿದ್ದರೆ ನಮಗೆ ಪತ್ರದ ಮುಖೇನ ತಿಳಿಸಬೇಕೆಂದು ಸನ್ಮಾನ್ಯ ಮುಖ್ಯ ಮಂತ್ರಿಗಳಿಗೆ ಪತ್ರ ಬರೆದಿದ್ದೇನೆ. ನಾನು 30:1:95ರಂದು ಮುಖ್ಯ ಕಾರ್ಯದರ್ಶಿಗಳು, ಶಿವಮೊಗ್ಗ ಜಿಲ್ಲಾ ಪಂಚಾಯಿತಿ, ಶಿವಮೊಗ್ಗ ಇವರಿಗೆ ಬರೆದಿರುವ ಪತ್ರವನ್ನು ಇದರೊಂದಿಗೆ ಲಗತ್ತಿಸಿದ್ದೇನೆ. ಅದೇ ರೀತಿಯಲ್ಲಿ ಸದಾನಂದ ಗೌಡ ಶಾಸಕರು, ಪುತ್ತೂರು ಇವರು ಮುಖ್ಯಮಂತ್ರಿಗಳಿಗೆ ಏನು ಪತ್ರ ಬರೆದಿದ್ದಾರೆ ಅದನ್ನೂ ಸಹ ಲಗತ್ತಿಸಿದ್ದೇನೆ. ನಾನು ಬರೆದಿರುವ ಪತ್ರ ದಿನಾಂಕ 30:1:95 ರಂದು ಶಿಕಾರಿಪುರ ತಾಲ್ಲೂಕಿನಲ್ಲಿ ಆಗಬೇಕಾಗಿರುವ ಕೆಲಸ ಕಾರ್ಯಗಳ ಬಗ್ಗೆ ಶಿಕಾರಿಪುರ ತಾಲ್ಲೂಕಿನ ಗ್ರಾಮ ಪಂಚಾಯಿತಿ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳನ್ನು ಸಭೆಸೇರಿಸಿ ಕ್ರಿಯಾ ಯೋಜನೆಯನ್ನು ತಯಾರು ಮಾಡಿರುವುದು ಸರಿಯಷ್ಟೆ. ಈ ವಿಚಾರ ತಾಲ್ಲೂಕಿನ ಶಾಸಕನಾಗಿ ನನ್ನ ಗಮನಕ್ಕೆ ಬಂದಿರುವುದಿಲ್ಲ.

ಈ ವಿಚಾರವನ್ನು ತಾಲ್ಲೂಕಿನ ಶಾಸಕರ ಗಮನಕ್ಕೆ ತರುವುದು ಅಗತ್ಯವಿಲ್ಲವೇ? ಶಿಕಾರಿಪುರ ತಾಲ್ಲೂಕಿನಲ್ಲಿ ನಡೆಯುತ್ತಿರುವ ಯಾವುದೇ ಕಾಮಗಾರಿಗಳ ಬಗ್ಗೆ ತಾವುಗಳು ಆಗಾಗ ಆಗಮಿಸಿ ಸ್ಥಳ ಪರಿಶೀಲನೆ ಮಾಡದೆ ಇರುವುದು ಅಲ್ಲಿ ಒಂದು ಒಳ್ಳೆಯ ಕೆಲಸ ಆಗುವುದಕ್ಕೆ ಅಡ್ಡಿ ಆಗಿದೆ. ತಾವು ಈ ದಿವಸ ಶಿಕಾರಿಪುರ ತಾಲ್ಲೂಕಿಗೆ ಆಗಮಿಸುವ ಪ್ರವಾಸದ ವಿಚಾರ ನನ್ನ ಗಮನಕ್ಕೆ ಬಂದಿರುವುದಿಲ್ಲ. ಜಿಲ್ಲಾಮಟ್ಟದ ಅಧಿಕಾರಿಗಳು, ತಾಲ್ಲೂಕಿನಲ್ಲಿ ಪ್ರವಾಸದ ವಿಚಾರ ನನ್ನ ಗಮನಕ್ಕೆ ಬಂದಿರುವುದಿಲ್ಲ. ಜಿಲ್ಲಾ ಮಟ್ಟದ ಅಧಿಕಾರಿಗಳು ತಾಲ್ಲೂಕಿನಲ್ಲಿ ಪ್ರವಾಸ ಕೈಗೊಳ್ಳುವಾಗ ಶಾಸಕರಿಗೆ ಪ್ರವಾಸದ ಪಟ್ಟಿ ಕಳುಹಿಸುವುದು ಅಗತ್ಯವಿಲ್ಲವೇ? ಈ ಪತ್ರ ನಾನು ಬರೆದಿದ್ದೇನೆ. ಆದರೆ ನೀವು ಜಿಲ್ಲಾಧಿಕಾರಿಗಳು, ಮುಖ್ಯ ಕಾರ್ಯದರ್ಶಿಗಳು ಯಾವುದೇ ಕಾರ್ಯಕ್ಕೆ ಶಿಕಾರಿಪುರಕ್ಕೆ ಶಾಸಕರ ಅನುಮತಿ ಇಲ್ಲದೆ ಬರ ಕೂಡದು ಎಂದು ಬೆದರಿಸಿದ್ದಾರೆ. ಜಿಲ್ಲಾಧಿಕಾರಿಗಳು ವರದಿಯನ್ನು ಕೊಟ್ಟಿದ್ದಾರೆಂದು ತಾವು ಬಹಿರಂಗವಾಗಿ ಪತ್ರಿಕೆಗೆ ಹೇಳಿಕೆ ಕೊಡುವಂತಹ ಕೆಲಸವನ್ನು ಮಾಡಿದಿರಿ. ಮತ್ತು ಸದಾನಂದ ಗೌಡರ ಬಗ್ಗೆ

ತಾವು ಜನಗಳಿಗೆ ತಪ್ಪು ತಿಳಿದುಕೊಳ್ಳುವ ರೀತಿಯಲ್ಲಿ ಶಾಸಕರ ಬಗ್ಗೆ ಬಹಿರಂಗ ಪತ್ರಿಕಾ ಹೇಳಿಕೆಯನ್ನು ಕೊಡುವಂತಹ ಪ್ರಯತ್ನ ತಾವು ಮಾಡಿದಿರಿ. ಅದೇ ರೀತಿ ಶಾಸಕರಾದ ಅಪ್ಪಚ್ಚು ರಂಜನ್ ಎಂಬುವವರ ಬಗ್ಗೆ ಏನು ಹೇಳಿದ್ದೀರಿ? ಯಡಿಯೂರಪ್ಪನವರ ನಡವಳಿಕೆ ಹೀಗೆ ಇದ್ದರೆ ಇನ್ನು ಅವರ ಪಕ್ಷದ ಶಾಸಕರು ಅಧಿಕಾರಿಗಳಿಗೆ ಕಟ್ಟಾಜ್ಞೆಗಳನ್ನ ಕೊಡುವ ಪರಿಪಾಠ ಆರಂಭಿಸಿದ್ದಾರೆ.

ಕೊಡಗು ಜಿಲ್ಲೆಯ ಶಾಸಕರಾದ ಅಪ್ಪಚ್ಚು ರಂಜನ್ ಹಾಗೂ ಬಸವರಾಜುರವರು ಸೂಚಿಸಿ ಪತ್ರ ಬರೆದಿದ್ದಾರೆ. ಶಾಸಕರು ಪೊಲೀಸ್ ಪಡೆಯವರಿಗೆ ದೂರು ಕೊಟ್ಟಿದ್ದಾರೆ. ಹಾಗೆಯೇ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ಶಾಸಕರಾದ ಸದಾನಂದ ಗೌಡರು ಕೂಡ ಪೊಲೀಸರಿಗೆ ಇದೇ ರೀತಿಯ ಕಟ್ಟಾಜ್ಞೆಗಳನ್ನು ಹೊರಡಿಸುತ್ತಿದ್ದಾರೆ. ದೈನಂದಿನ ಆಡಳಿತದಲ್ಲಿ ಶಾಸಕರಿಗೆ ಹಸ್ತಕ್ಷೇಪ ಮಾಡಲು ಮುಂದೆ ಸರ್ಕಾರ ನಡೆಸಲು ಸಾಧ್ಯವೇ? ಸನ್ಮಾನ್ಯ ಅಧ್ಯಕ್ಷರೇ, ನಾನು ಕೇಳುತ್ತೇನೆ, ಇವತ್ತು ಮುಖ್ಯ ಮಂತ್ರಿಗಳಿಗೆ ಸದಾನಂದ ಗೌಡ ಅವರು 10:1:95 ರಂದು ಪತ್ರ ಬರೆದಿದ್ದಾರೆ. ಪ್ರಕೃತ ಪುತ್ತೂರು ತಾಲ್ಲೂಕಿನ ಎಲ್ಲಾ ಇಲಾಖಾ ಅಧಿಕಾರಿಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿದ್ದು ಹಲವು ವ್ಯಕ್ತಿಗಳು ಅನಪೇಕ್ಷಿತವಾಗಿ ಹಲವಾರು ಅಧಿಕಾರಿಗಳನ್ನು ವರ್ಗಾವಣೆ ಮಾಡಬೇಕೆಂದು ಪ್ರಯತ್ನ ಪಡುತ್ತಿರುವುದಾಗಿ ನನಗೆ ತಿಳಿದು ಬಂದಿದೆ. ಯಾವುದೇ ಅಧಿಕಾರಿಗಳನ್ನು ಪುತ್ತೂರು ಕ್ಷೇತ್ರದಿಂದ ವಿನಾಕಾರಣ ಅವಧಿಗೆ ಮುಂಚಿತವಾಗಿ ವರ್ಗಾವಣೆ ಮಾಡಬಾರದಾಗಿದೆ. ಈ ರೀತಿಯ ಒಂದು ಅಧಿಕಾರಿಗಳ ವರ್ಗಾವಣೆ ಅವಧಿಯ ಮುಂಚಿತವಾಗಿ ಅಥವಾ ವಿನಾ ಕಾರಣ ವರ್ಗಾವಣೆ ಮಾಡುವುದಾಗಲಿ, ನನ್ನ ಅನುಮತಿ ಇಲ್ಲದೆ ಮಾಡಬಾರದಾಗಿ ಮತ್ತು ಯಾವುದೇ ಅಧಿಕಾರಿಗಳ ವರ್ಗಾವಣೆ ನನ್ನ ಕ್ಷೇತ್ರದಲ್ಲಿ ರಾಜಕೀಯ ಪ್ರೇರೀತವಾಗಬಾರದು ಎಂದು ಈ ಮೂಲಕ ತಮ್ಮಲ್ಲಿ ಪ್ರಾರ್ಥಿಸುತ್ತೇನೆ ಎಂದು ಮಾನ್ಯ ಮುಖ್ಯ ಮಂತ್ರಿಗಳಿಗೆ ಪತ್ರ ಬರೆದಿದ್ದಾರೆ. ಇಲ್ಲಿರುವ ಅಧಿಕಾರಿಗಳು ಬಹಳ ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ಅವರನ್ನು ವರ್ಗಾವಣೆ ಮಾಡುವಂತಹ ಅಗತ್ಯವಿಲ್ಲವೆಂದು ಯಾವುದೇ ಒಂದು ರಾಜಕೀಯ ಪ್ರೇರಣೆಯನ್ನು ಇಟ್ಟುಕೊಂಡು ಅವರು ಪತ್ರ ಬರೆದರೆ ಪೊಲೀಸ್ ಅಧಿಕಾರಿಗಳನ್ನು ಬೆದರಿಸುತ್ತಾರೆ. ಎನ್ನತಕ್ಕಂತಹ ಮಾತನ್ನು ತಾವು ಬಹಿರಂಗವಾಗಿ ಹೇಳುತ್ತೀರಿ ಎನ್ನುವುದಾದರೆ ಅದೇ ರೀತಿ ಅಪ್ಪಚ್ಚು ರಂಜನ್ ಅವರು ಏನು ನಿಮಗೆ ಪತ್ರ ಬರೆದಿದ್ದಾರೆ ಅದನ್ನು ತಿರುಚಿ ಅವರಿಗೆ ಅಪಮಾನ ಮಾಡುವ ರೀತಿಯಲ್ಲಿ ಒಂದು ಹೇಳಿಕೆಯನ್ನು ತಾವು ಕೊಡುತ್ತೀರಿ ಎನ್ನುವುದಾದರೆ ನಾವು ಯಾವ ರೀತಿ ಶಾಸಕರಾಗಿ ಕೆಲಸ ಮಾಡಬೇಕು ಎಂದು ನನಗೆ ಅರ್ಥವಾಗುತ್ತಿಲ್ಲ. ಅದಕ್ಕಾಗಿ ಸನ್ಮಾನ್ಯ ಅಧ್ಯಕ್ಷರೇ, ನಾನು ತಮ್ಮಲ್ಲಿ ವಿನಂತಿ ಮಾಡುತ್ತಿದ್ದೇನೆ, ಯಾವ ದಾಖಲೆಗಳನ್ನು ನಾವು ಶಾಸಕರು ತೆಗೆದುಕೊಳ್ಳುವುದಕ್ಕೆ ಎಲಿಜಿಬಿಲಿಟಿ ಇದೆ, ಯಾವುದನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಮತ್ತೆ ಈ ದಾಖಲೆಗಳು ಬೇಕು ಎಂದು ಹೇಳಿದಾಗ ಇವತ್ತು ತಾವು ಏನು ಆದೇಶ ಕೊಡುತ್ತೀರಿ ನಿಮ್ಮ ಮೂಲಕ ತೆಗೆದುಕೊಳ್ಳಬೇಕು ಅಥವಾ ಬೇರೆ ಯಾವ ರೀತಿ ನಾವು ತೆಗೆದುಕೊಳ್ಳಬೇಕು,ಮತ್ತೆ ಯಾವ ವಿಷಯ ಮಾಹಿತಿಗಳು ಗೋಪ್ಯತೆಯ ಅಡಿಯಲ್ಲಿ ಅಂದರೆ ಅಫಿಷಿಯಲ್ ಸೀಕ್ರೆಟ್ ಆಕ್ಟ್ ಕೆಳಗಡೆ ಯಾವುದು ಬರುತ್ತದೆ ಯಾವುದು ಬರುವುದಿಲ್ಲ, ಮತ್ತೆ ವಿರೋಧ ಪಕ್ಷದ ನಾಯಕರಾಗಿ ನಾನು ಎಲ್ಲಿಗೆ ಹೋಗಬಾರದು. ಎಲ್ಲಿ ಹೋಗಬೇಕು ಇದರ ಕಟ್ಟುನಿಟ್ಟುಗಳು ಏನು ಇವೆ ಇದರ ಬಗ್ಗೆ ಸ್ವಲ್ಪ ತಾವು ಮಾರ್ಗದರ್ಶನ ಮಾಡಿದರೆ ಮುಂದೆ ನಾವು ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತೆ. ಸನ್ಮಾನ್ಯ ಅಧ್ಯಕ್ಷರೇ, ಇತ್ತೀಚಿನ ದಿವಸಗಳಲ್ಲಿ ನಾವು ಕೆಲವು ಜವಾಬ್ದಾರಿ ಸ್ಥಾನದಲ್ಲಿ ಕುಳಿತು ಕೆಲಸ ಮಾಡುತ್ತಿದ್ದೇವೆ. ಅದು ಆಶ್ರಯ ಸಮಿತಿ ಇರಬಹುದು, ಲ್ಯಾಂಡ್‌ಗ್ರ್ಯಾಂಟ್ ಕಮಿಟಿ ಇರಬಹುದು, ಒಂದು ಅಧ್ಯಕ್ಷತೆಯನ್ನು ವಹಿಸಿ ನಾವು ಕೆಲಸ ಮಾಡುತ್ತಿದ್ದೇವೆ. ಕಳೆದ 100 ದಿವಸಗಳಿಂದ ತಾಲ್ಲೂಕು

ಅಭಿವೃದ್ಧಿ ಸಮಿತಿಯಲ್ಲಾಗಲೀ ಜಿಲ್ಲಾ ಅಭಿವೃದ್ಧಿ ಸಮಿತಿಯಲ್ಲಾಗಲೀ ಯಾವುದೇ ಸಮಿತಿ ಸಭೆ ನಡೆಯುತ್ತಿಲ್ಲ. ಶಾಸಕರನ್ನು ಯಾವುದೇ ವಿಷಯದಲ್ಲಿ ಕನ್‌ಸಲ್ಟ್ ಮಾಡುವಂತಹ, ಸಲಹೆಯನ್ನು ತೆಗೆದುಕೊಳ್ಳುವಂತಹ ಕೆಲಸವನ್ನು ಇವತ್ತು ಮಾಡುತ್ತಿಲಲ. ಮತ್ತು ಯಾವುದೋ ಒಂದು ಆಶ್ರಯ ಯೋಜನೆಯಲ್ಲಿ ಯಾವುದೇ ಶಾಸಕರು ಎಲ್ಲೋ ಅಪರಾಧ ಮಾಡಿದರೆ ಸಂಬಂಧ ಪಟ್ಟ ಸಚಿವವು ಇದಕ್ಕೆ ಹೇಳಿಕೆ ಕೊಡುತ್ತಾರೆ. ಶಾಸಕರು ಇಲ್ಲಿ ಅವ್ಯವಹಾರ ಮಾಡುತ್ತಿದ್ದಾರೆ. ಅದಕ್ಕೋಸ್ಕರ ಆಶ್ರಯ ಸಮಿತಿಯ ಸ್ಥಾನದಿಂದ ಅವರನ್ನು ಬದಲಾವಣೆ ಮಾಡುವಂತಹ ತೀರ್ಮಾನವನ್ನು ಸರ್ಕಾರ ತೆಗೆದುಕೊಳ್ಳುತ್ತಿದೆ. ಎಂದು ಸಾರಾ ಸಗಟು ಎಲ್ಲರ ಬಗ್ಗೆ ಆರೋಪ ಮಾಡುವಂತಹ ಪ್ರಯತ್ನವನ್ನು ನಿಮ್ಮ ಮಂತ್ರಿಗಳು ಮಾಡುತ್ತಾರೆ. ಈ ಒಂದು ಪರಿಸ್ಥಿತಿಯಲ್ಲಿ ನಾವು ಹೇಗೆ ಕೆಲಸ ಮಾಡುವುದಕ್ಕೆ ಸಾಧ್ಯ ಇದೆ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಕೇಳುವುದಕ್ಕೆ ಇಚ್ಛೆ ಪಡುತ್ತೇನೆ. ಈ ರೀತಿ ಮುಖ್ಯ ಮಂತ್ರಿಗಳು ಮಾತನಾಡುವುದಕ್ಕೆ ಮೂಲ ಕಾರಣ ಏನಿದೆ? ಮಾನ್ಯ ಅಧ್ಯಕ್ಷರೇ, ಈ ಸದನದ ಕಾರ್ಯಕಲಾಪ ಪ್ರಾರಂಭವಾದ ಕೊನೆ ದಿವಸದಲ್ಲಿ ಹಿಂದೆ 30:12:94ರಲ್ಲಿ ತಾವು ಈ ಸದನದ ಕಾರ್ಯ ಕಪಾಲಗಳ ಚರ್ಚೆಯನ್ನು ತೆಗೆದು ತಾವು ನೋಡಿದ್ದೀರಾ? ಇವರಿಗೆ ಸಿಟ್ಟು ಬರುವುದಕ್ಕೆ, ಇವರು ದಾಖಲೆಗಳನ್ನು ಕೊಡುವುದಿಲ್ಲ ಎಂದು ಹೇಳುವುದಕ್ಕೆ ಕಾರಣ ಕೋರಮಂಗಲದಲ್ಲಿ ರಾಷ್ಟ್ರೀಯ ಕ್ರೀಡಾ ಗ್ರಾಮ ನಿರ್ಮಾಣವಾದ ಬಗ್ಗೆ ನಾನು ಪ್ರಸ್ತಾಪ ಮಾಡಿದ್ದು? ಇದಕ್ಕೆ ಮೂಲ ಕಾರಣ 1966 ಜನವರಿ ಮತ್ತು ಫೆಬ್ರವರಿ ತಿಂಗಳಲ್ಲಿ ನಡೆಯುವಂತಹ 11 ದಿನಗಳ ರಾಷ್ಟ್ರೀಯ ಕ್ರೀಡಾ ಕೂಟಕ್ಕೆ ಆ ವ್ಯವಸ್ಥೆಯನ್ನು ಮಾಡುತ್ತೇವೆ. ಎನ್ನುವ ನೆಪದಲ್ಲಿ ಈ ಕ್ರೀಡಾ ಗ್ರಾಮವನ್ನು ತರಾತುರಿಯಿಂದ ಏನು ಮಾಡಲಿಕ್ಕೆ ಹೊರಟಿದ್ದಾರೆ ಈ ಬಗ್ಗೆ ನಾನು ಕೆಲವು ವಿವರಗಳನ್ನು ಕೇಳಿದೆ ನಿಜ. ತಮಗೂ ಪತ್ರಬರೆದಿದ್ದೇನೆ. ಮುಖ್ಯ ಮಂತ್ರಿಗಳಿಗೂ ಪತ್ರ ಬರೆದಿದ್ದೇನೆ. ಆ ವಿವರವನ್ನು ಕೇಳಿದಾಗ ಈ ಕ್ರೀಡಾ ಗ್ರಾಮವನ್ನು ನಿರ್ಮಾಣ ಮಾಡುವಾತಹ ಸಂದರ್ಭದಲ್ಲಿ ಸುಮಾರು 30 ರಿಂದ 40 ಕೋಟಿ ರೂಪಾಯಿ ಹೆಚ್ಚುವರಿ ಮಾಡಿದ್ದಾರೆ. ಎಸ್ಟಿಮೇಟ್ನಲ್ಲಿ ಆ ವಿವರಗಳನ್ನು ನಾನ ತೋರಿಸುವುದಕ್ಕೆ ಸಿದ್ಧನಿದ್ದೇನೆ. ಇದಕ್ಕೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ನನಗೆ ಕಳುಹಿಸಿಕೊಡಬೇಕು ಎನ್ನುವಂತಹ ಮಾತನ್ನು ಹೇಳಿದ್ದೇನೆ. ಅದಕ್ಕೆ ಸನ್ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಹೇಳಿದರು. ಇದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ತರಿಸಿಕೊಂಡು ನಾಳೆ ಬೇಕಾದರೆ ನನಗೆ ಅದರ ವಿವರವನ್ನು ಹೇಳಿ ನಾನು ಉತ್ತರ ಕೊಡುವುದಕ್ಕೆ ಸಿದ್ಧನಿದ್ದೇನೆ, ನನ್ನದು ಪಾರದರ್ಶಕ ಸರ್ಕಾರ. ವಿರೋಧ ಪಕ್ಷದ ನಾಯಕನಾಗಿ ನೀವು ದಾಖಲೆ ನೋಡುವುದಕ್ಕೆ ನಿಮಗೆ ಅಧಿಕಾರವಿದೆ - ಈ ಮಾತನ್ನು ಸಹಿತ ಈ ಸದನದಲ್ಲಿ ಅವರು ಉತ್ತರ ಕೊಡುವ ಸಂದರ್ಭದಲ್ಲಿ ಹೇಳಿದರು. ವಿರೋಧ ಪಕ್ಷದ ನಾಯಕನಾಗಿ ಒಂದು ಜವಾಬ್ದಾರಿಯುತವಾಗಿ ಮಾತನಾಡಿ ಈ ರೀತಿ ಅಂಕಿ ಅಂಶ ಇಲ್ಲದೆ ಬೇಜವಾಬ್ದಾರಿಯಿಂದ ಮಾಡಬಾರದು ಎನ್ನುವಂತಹ ಉಪದೇಶವನ್ನು ಸಹ ಅವರು ಮಾಡಿದರು. ಸನ್ಮಾನ್ಯ ಅಧ್ಯಕ್ಷರೇ, 31:12:94 ರಂದೇ ನಾನು ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಸಿ ಪತ್ರವನ್ನು ಬರೆದು ಈ ರಾಷ್ಟ್ರೀಯ ಕ್ರೀಡಾ ಗ್ರಾಮದ ನಿರ್ಮಾಣಕ್ಕೆ ಹುಡ್ಕೋ ಕೊಟ್ಟಿರುವ ಡಿಸೈನ್ ಪ್ರತಿ ಮತ್ತು ಸ್ಪೆಸಿಫಿಕೇಷನ್ ವಿವರವನ್ನು ನಾನು ಕೇಳಿದ್ದೇನೆ.

ಹುಡ್ಕೋಗೆ ಕೊಟ್ಟಿರುವ ಡಿಸೈನ್ ಮತ್ತು ಸ್ಪೆಸಿಫಿಕೇಷನ್ ಆಧಾರದ ಮೇಲೆ ಕರ್ನಾಟಕ ಗೃಹಮಂಡಳಿ ತಯಾರು ಮಾಡಿರುವ ಅಂದಾಜು ವೆಚ್ಚದ ವಿವರಗಳು ಏನು ಅದನ್ನು ಕೊಡಿ ಎಂದು ನಾನು ಕೇಳಿದ್ದೇನೆ. ರಾಷ್ಟ್ರೀಯ ಕ್ರೀಡಾ ಗ್ರಾಮದ ನಿರ್ಮಾಣ ಗುತ್ತಿಗೆ ಬಗ್ಗೆ ಅಂತಿಮ ತೀರ್ಮಾನ ತೆಗೆದುಕೊಳ್ಳಲು ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವಂತಹ ಹೈಪವರ್‌ಕಮಿಟಿ ಸಭೆಯ ನಡವಳಿಕೆಯ ವಿವರಗಳನ್ನು ನಾನು ಕೇಳಿದ್ದೇನೆ. ಅದಕ್ಕೆ ಸಂಬಂಧಪಟ್ಟ ಗೃಹಮಂಡಳಿಯ

ಅಧ್ಯಕ್ಷರು ಮತ್ತು ಪಿಡಬ್ಲ್ಯೂಡಿ ಅಧಿಕಾರಿಗಳನ್ನು ಕರೆಯಿಸಿ ನಾನು ಮಾತನಾಡಿದಾಗ ಅವರು ಎಲ್ಲಾ ದಾಖಲೆಗಳನ್ನು ಕೊಡುತ್ತೇವೆ ಎಂದು ಹೇಳಿ ಕೆಲವು ಮಾಹಿತಿಗಳನ್ನು ಕೊಟ್ಟು ಹೋದಂತಹ ಕೆಲವು ಅಧಿಕಾರಿಗಳು ನಂತರ ಮಾನ್ಯ ಮುಖ್ಯಮಂತ್ರಿಗಳಿಂದ ಯಾವುದೇ ದಾಖಲೆಗಳನ್ನು ಕೊಡಬಾರದು ಎಂದು ನಮಗೆ ಆದೇಶ ಬಂದಿದೆಯೆಂದು ಹೇಳಿ ನಮಗೆ ಅವರು ಇದುವರೆಗೂ ಯಾವುದೇ ದಾಖಲೆಗಳನ್ನು ಕೊಡಲಿಲ್ಲ. ಸನ್ಮಾನ್ಯ ಅಧ್ಯಕ್ಷರೇ, ನಾನು ನಿಮ್ಮನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ನಾಗಾರ್ಜುನ ಕನಸ್ಟ್ರಕ್ಷನ್ ಕಂಪನಿಗೆ ಅಥವಾ ಸಿರ್ಕೆ ಅಂಡ್ ಕಂಪನಿಗೆ ಇರಬಹುದು ಸುಮಾರು ಎಸ್ಟಿಮೇಟ್ ಕಾಸ್ಟ್‌ಗಿಂತ ಕರ್ನಟಾಕ ಗೃಹಮಂಡಲಿ ಅಂದಾಜಿಗಿಂತ ಸುಮಾರು ಶೇಕಡ 42.71 ಹೆಚ್ಚಳದ ಹಣವನ್ನು ತಾವು ಕೊಟ್ಟಿದ್ದೀರಿ. ನಾನು ಈ ಸಂದರ್ಭದಲ್ಲಿ...

ಶ್ರೀ ಹೆಚ್.ಡಿ. ದೇವೇಗೌಡ : ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಪ್ರತ್ಯೇಕವಾಗಿ ಚರ್ಚೆ ತೆಗೆದುಕೊಳ್ಳುವುದಾದರೆ ಏನೂ ತಕರಾರು ಇಲ್ಲ ಎಂದು ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಏನೂ ತಕರಾರು ಇಲ್ಲ ಎಂದು ನಾನು ಮೊದಲೇ ಹೇಳಿದ್ದೇನೆ. ನೀವು ವಿವರಣೆ ಹೇಳುವುದಕ್ಕೆ ಹೋಗುತ್ತಿದ್ದೀರಿ. ನ್ಯಾಷನಲ್‌ಗೇಮ್ಸ್ ಬಗ್ಗೆ ನೀವು ಪ್ರತ್ಯೇಕವಾದಂತಹ ಚರ್ಚೆಯನ್ನು ಈ ಸಭೆಯಲ್ಲಿ ತೆಗೆದುಕೊಳ್ಳುವುದಾದರೆ ನಾನ ಅದಕ್ಕೆ ಉತ್ತರ ಕೊಡಬಹುದು. ಆದರೆ ಈಗ ಎತ್ತಿರುವ ವಿಷಯವೇ ಬೇರೆ. ನಾನು ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ನ್ಯಾಷನಲ್‌ಗೇಮ್ಸ್ ಬಗ್ಗೆ ಚರ್ಚೆಗೆ ಒಪ್ಪಿಕೊಂಡಿದ್ದೇನೆ. ಈಗ ನೀವು ಇಲ್ಲಿ ಅದರ ಬಗ್ಗೆ ಏನೋ ಮಧ್ಯೆ ಹೇಳುವುದಕ್ಕೆ ಹೋದಾಗ ಅದಕ್ಕೆ ಉತ್ತರ ಸರಿ ಬರುವುದಿಲ್ಲ ಅಷ್ಟೇ. ಯಾವ ರೀತಿ ಬೇಕಾದರೂ ಮಾಡಿ. I have already agreed for a discussion on the National Games

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಿಮ್ಮ ನ್ಯಾಷನಲ್‌ಗೇಮ್ಸ್ ಬೇರೆ ಸ್ಟೇಟ್‌ಗೇಮ್ಸ್ ಬೇರೆ.

ಶ್ರೀ ಹೆಚ್.ಡಿ. ದೇವೇಗೌಡ : ಈಗ ವಿಷಯ ಆರೋಗ್ಯಕರವಾಗಿ ಚರ್ಚೆ ಆಗಬೇಕು ಎನ್ನುವ ದೃಷ್ಟಿಯಿಂದ ನಾನು ಹೇಳಿದೆ. ಬೇಡ ಈಗ ಮಾತನಾಡಲಿ ಎಂದರೆ ಅದಕ್ಕೆ ನನ್ನದೇನೂ ತಕರಾರು ಇಲ್ಲ.

ಅಧ್ಯಕ್ಷರು : ಸನ್ಮಾನ್ಯ ಮುಖ್ಯಮಂತ್ರಿಗಳ ಅಭಿಪ್ರಾಯ ಇಷ್ಟೇ, ವಿರೋಧ ಪಕ್ಷದ ನಾಯಕರ ಸ್ಥಾನದಿಂದ ತಾವು ಕೆಲವು ಗಂಭೀರವಾದಂತಹ ವಿಚಾರಗಳನ್ನು ಪ್ರಸ್ತಾಪ ಮಾಡಿದಾಗ ಅವರು ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಸವಿಸ್ತಾರವಾಗಿ ತಾವು ಪ್ರಸ್ತಾಪ ಮಾಡಿರತಕ್ಕಂಥ ಎಲ್ಲಾ ವಿಚಾರಗಳನ್ನು ಒಳಗೊಂಡು ಉತ್ತರ ಕೊಡಬೇಕಾಗುತ್ತದೆ. ಮೂಲತಃ ನಾವು ಇವತ್ತು 159ನೆ ನಿಯಮದ ಕೆಳಗೆ ತೆಗೆದುಕೊಂಡಿರತಕ್ಕಂಥಾದ್ದು ಶಾಸಕರ ಕರ್ತವ್ಯ, ಕರ್ತವ್ಯ ನಿರ್ವಹಣೆಗಾಗಿ ಅವರಿಗೆ ಉಂಟಾಗಿರತಕ್ಕಂಥ ಕೆಲವು ತೊಂದರೆಗಳು, ಇವುಗಳನ್ನು ಕುರಿತಾಗಿ ಚರ್ಚೆ ಮಾಡುತ್ತಿದ್ದೇನೆ. ನ್ಯಾಷನಲ್ ಗೇಮ್ಸ್ ಮತ್ತು ಅಲ್ಲಿ ಆಗಿರತಕ್ಕಂಥ ಕೆಲವು ಅವ್ಯವಹಾರಗಳ ಬಗ್ಗೆ ತಾವು ಮಾತನಾಡುವುದಾದರೆ ಅದಕ್ಕೆ ನಾನು ಸಿದ್ಧನಾಗಿ ಬಂದಿಲ್ಲ. ಅದರ ಬಗ್ಗೆ ಮಾಹಿತಿ ಕೂಡ ನನ್ನ ಹತ್ತಿರ ಈಗ ಸಿದ್ಧವಿರುವುದಿಲ್ಲ. ಆದುದರಿಂದ ಅದಕ್ಕೆ ಅಸಮರ್ಪಕವಾದ ಉತರ ಕೊಟ್ಟೆ ಎನ್ನುವ ಮಾತು ಬೇಡ.ಇವತ್ತಿನ ದಿವಸ ತೆಗೆದುಕೊಂಡಿರತಕ್ಕಂಥ ವಿಷಯಕ್ಕೆ ಚರ್ಚೆಯನ್ನು ಸೀಮಿತ ಮಾಡಿಕೊಂಡರೆ ಮಾತ್ರ ಈಗ ಇದಕ್ಕೆ ಸಮರ್ಪಕವಾದ ಉತ್ತರವನ್ನು ಕೊಡುತ್ತೇನೆ, ಹಾಗೆ ಎಂದು ಹೇಳಿ ಆ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳುವುದು ಬೇಡ ಎಂದು ಹೇಳುತ್ತಾ ಇಲ್ಲ. ನಾನು ಹೇಳಿದ್ದೇನಲ್ಲ ಸದನದ ಕಲಾಪದ ಸಮಯದಲ್ಲಿ ಇನ್ನೊಂದು ಸಾರಿ ಅದನ್ನು ತೆಗೆದುಕೊಳ್ಳೋಣ ಎಂದು ಹೇಳುತ್ತಿದ್ದಾರೆ. ಆದರಿಂದ ಚರ್ಚೆಗೂ ಅನುಕೂಲವಾಗುತ್ತದೆ ಮತ್ತು ಸದನಕ್ಕೂ ಅನುಕೂಲವಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಈ ಕ್ರೀಡಾ ಗ್ರಾಮದ ಬಗ್ಗೆ 42 ಪರ್ಸೆಂಟ್‌ಗಿಂತ ಹೆಚ್ಚು ಹಣವನ್ನು ಹೆಚ್ಚುವರಿ ಎಸ್ಟಿಮೇಟ್‌ಗಿಂತ ಜಾಸ್ತಿ ಕೊಟ್ಟು ನೀವು ಒಪ್ಪಂದ ಮಾಡಿಕೊಳ್ಳುತ್ತಿದ್ದೀರಿ, ಅದಕ್ಕೆ ಸಂಬಂಧಪಟ್ಟ ಎಸ್ಟಿಮೇಟ್ ಕಾಪಿ ಕೊಡುವುದು ಆಗಲಿ, ಪ್ಲಾನ್ ಎಸ್ಟಿಮೇಟ್ ಕಾಪಿ ಕೊಡುವುದಾಗಲೀ ಅದಕ್ಕೆ ಅಡ್ಡಿ ಆತಂಕಗಳು ಏನಿವೆ? ಮತ್ತು ಈ ಹೈಪವರ್‌ಕಮಿಟಿಯಲ್ಲಿ ಅವರಿಗೆ ಬೇಕಾದಂತಹ ಕೆಲವು ಕಂಟ್ರಾಕ್ಟರ್‌ಗೆ ಗುತ್ತಿಗೆ ಕೊಟ್ಟಂತಹ ಆ ತೀರ್ಮಾನ ಏತಕ್ಕೋಸ್ಕರ ಆಯಿತು ಎನ್ನುವ ಪ್ರಶ್ನೆ ಕೇಳಿದಾಗ ಮತ್ತು ಅದಕ್ಕೆ ಸಂಬಂಧಪಟ್ಟ ದಾಖಲೆಗಳು ಬೇಕು ಎಂದು ಕೇಳಿದಾಗ, ಸುಮಾರು 24 ಕೋಟಿ ರೂಪಾಯಿ ನೀವು ಯಾವ ಕಾರಣಕ್ಕೋಸ್ಕರ ಕೊಟ್ಟಿರಿ, 16 ಪರ್ಸೆಂಟ್‌ನಲ್ಲಿ ಏತಕ್ಕೋಸ್ಕರ 12 ಕೋಟಿ ರೂಪಾಯಿಗಳನ್ನು ಕೊಟ್ಟಿರಿ ಎನ್ನುವ ಎಲ್ಲಾ ಕಾರಣಗಳನ್ನು ನಾವು ತೆಗೆದುಕೊಳ್ಳಬೇಕಾದರೆ ಇವತ್ತು ಆ ಗುತ್ತಿಗೆ ಒಪ್ಪಂದ ಏನು? ಟೆಂಡರ್ ಕರೆಯುವಂತಹ ಸಂದರ್ಭದಲ್ಲಿ 'ಎ' ಕ್ಲಾಸ್ ಕಂಟ್ರಾಕ್ಟರ್‌ಗಳು ಯಾರು ಬೇಕಾದರೂ ಹಾಕಬಹುದು ಎಂದು ಹೇಳಿಬಿಟ್ಟು ಅದು ಆದಮೇಲೆ 50 ಕೋಟಿ ರೂಪಾಯಿಗಿಂತ ಹೆಚ್ಚು ವ್ಯವಹಾರ ಇರುವಂತಹವರಿಗೆ, ಟರ್ನ್‌ಓವರ್ ಆಗುವಂತಹವರಿಗೆ ಮಾತ್ರ ಗುತ್ತಿಗೆ ಕೊಡುತ್ತೇವೆ ಎಂದು ಹೇಳಿಬಿಟ್ಟು ಈಗ ಸುಮಾರು ಅದಕ್ಕೆ 42 ಪರ್ಸೆಂಟ್ ಜಾಸ್ತಿ ಕೊಟ್ಟು, ನೂರು ಕೋಟಿಗೂ ಹೆಚ್ಚು ಹಣವನ್ನು ಏನು ಕೊಟ್ಟಿದ್ದೀರಿ, ಅದರಲ್ಲಿ ಏನು ಅವ್ಯವಹಾರ ಆಗಿದೆ ಎಂದು ನಾನು ಹೇಳುತ್ತಿದ್ದೇನೆ, ಅದನ್ನು ಸಾಬೀತು ಮಾಡಬೇಕಾದರೆ, ನನಗೆ ಅಲ್ಲಿ ಇರುವಂತಹ ಎಸ್ಟಿಮೇಟ್ ಕಾಪಿ, ಪ್ಲಾನ್ ಅಂಡ್ ಎಸ್ಟಿಮೇಟ್ ಕಾಪಿ ಕೊಡುವುದಕ್ಕೆ ನಿಮಗೆ ತೊಂದರೆ ಏನು ಇದೆ? ಈ ದಾಖಲೆಗಳನ್ನು ಕೊಡುವುದಕ್ಕೆ ಬರುವುದಿಲ್ಲ ಎಂದು ತಾವು ಹೇಳುವುದಾದರೆ ನಾವು ಯಾವ ಆಧಾರದ ಮೇಲೆ ಇಲ್ಲಿ ಇದ್ದುಕೊಂಡು ಈ ಸರ್ಕಾರ ಇದರಲ್ಲಿ ಏನು ತಪ್ಪು ಮಾಡಿದೆ ಅಥವಾ ಸು ದಾರಿಯಲ್ಲಿ ಹೋಗಿದೆ ಎಂದು ಹೇಳುವುದಕ್ಕೆ ನಮಗೆ ಹೇಗೆ ಸಾಧ್ಯವಾಗುತ್ತದೆ. ಇನ್ನು ಎರಡನೆಯದಾಗಿ ನಾನು ಏನೂ ಚರ್ಚೆ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಇವತ್ತು ನಾನು ತಮಗೆ ಇಷ್ಟೇ ಕೇಳುವಂಥಾದ್ದು, ನಾನು ವಿರೋಧ ಪಕ್ಷದ ನಾಯಕನಾಗಿ ನನ್ನ ಜವಾಬ್ದಾರಿ ನಿರ್ವಹಿಸುವುದಕ್ಕೆ ನೇರವಾಗಿ ಅಧಿಕಾರಿಗಳಿಗೆ ಕೆಲವು ವಿವರಗಳು ಬೇಕು ಎಂದು ಪತ್ರ ಬರೆದಾಗ ಆ ವಿವರಗಳನ್ನು ನನಗೆ ಅವರು ಕೊಡುವುದಕ್ಕೆ ಅಧಿಕಾರ ಇದೆಯೋ ಇಲ್ಲವೋ, ಅವುಗಳನ್ನು ನಾನು ತೆಗೆದುಕೊಳ್ಳುವಂತಹ ಅಧಿಕಾರ ಇದೆಯೋ ಇಲ್ಲವೋ ಎಂಬುದು ಸ್ಪಷ್ಟವಾಗಬೇಕು. ಮತ್ತೇ ನೀವು ಮುಖ್ಯಮಂತ್ರಿಗಳಾಗಿ ನಾನ ಅಧಿಕಾರಿಗಳಿಗೆ ಯಾವುದೇ ದಾಖಲೆಗಳನ್ನು ಕೊಡಬೇಡಿ ಎಂದು ಹೇಳಿಲ್ಲ. ಅದು ಪತ್ರಿಕೆಯಲ್ಲಿ ಬಂದಿರುವಂತಹ ವರದಿ ಸರಿಯಲ್ಲ ಎಂದು ನೀವು ಹೇಳುವುದಾದರೆ, ಕಳೆದ ಒಂದೂವರೆ ತಿಂಗಳಿನಿಂದ ನಾನು ಬರೆದಿರುವಂತಹ ಇದುವರೆಗೂ ನಾನು ವಿವರಣೆ ಕೊಟ್ಟಂತಹ ಈ ಪತ್ರಿಕೆಗಳಿಗೆ ಉತ್ತರವನ್ನು ಕೊಡುವಂತಾದ್ದು ಆಗಲಿ, ಇದಕ್ಕೆ ಬೇಕಾದಂತಹ ದಾಖಲೆಗಳನ್ನು ಕೊಡದೆ ಇದ್ದಮೇಲೆ ನಾನು ಈ ಸದನದ ಒಳಗಡೆ ಯಾವ ರೀತಿ ಕೆಲಸ ಮಾಡಬೇಕು. ಮತ್ತು ಸನ್ಮಾನ್ಯ ಅಧ್ಯಕ್ಷರ ಅಪ್ಪಣೆಯನ್ನು ಕೋರಿ ಮಾತ್ರ ನಾನು ದಾಖಲೆಯನ್ನು ಕೊಡುತ್ತೇನೆ, ಅವರು ಆಜ್ಞೆ ಮಾಡಿದರೆ ಮಾತ್ರ ದಾಖಲೆ ಕೊಡುತ್ತೇನೆ, ಇಲ್ಲದೆ ಇದ್ದರೆ ಇಲ್ಲ ಎನ್ನುವಂತಹ ಮಾತನ್ನು ತಾವು ಹೇಳಿದ್ದೀರಿ. ಇದರ ಪರಿಣಾಮ ಇನ್ನು ಮುಂದೆ ಚುನಾಯಿತ ಶಾಸಕನಿಗೂ, ಅಧಿಕಾರಿಗೂ ಯಾವ ರೀತಿಯ ಒಂದು ಕಂದಕ ಬೆಳೆಯಬಹುದು, ಇದರ ಪರಿಣಾಮ ಏನಾಗಬಹುದು? ಒಬ್ಬ ಮುಖ್ಯ ಕಾರ್ಯದರ್ಶಿಯಾಗಿ ಈ ರೀತಿಯ ಒಂದು ಪರಿಸ್ಥಿತಿ ಬಂದಿರಬೇಕಾದರೆ, ಮುಖ್ಯಮಂತ್ರಿಗಳ ಹೇಳಿಕೆ ಪತ್ರಿಕೆಯಲ್ಲಿ ಬಂದಿರಬೇಕಾದರೆ, ನಾನು ಮುಖ್ಯಮಂತ್ರಿಗಳಿಗೆ ದಾಖಲೆಗಳು ಕೊಟ್ಟಿಲ್ಲ ಎಂದು ಹೇಳಿ ಪತ್ರ ಬರೆದ ಮೇಲೂ ಉತ್ತರ ಬರುವುದಿಲ್ಲ. ಅವರು ಈ ದಾಖಲೆಗಳನ್ನು ಈ ಕಾರಣಕ್ಕೋಸ್ಕರ

ಕೊಡುವುದಕ್ಕೆ ಬರುವುದಿಲ್ಲ. ಈ ಕಾರಣಕ್ಕೋಸ್ಕರ ಕೊಡುತ್ತೇನೆ ಎನ್ನುವ ಮಾತನ್ನು ಹೇಳದೆ ಇದ್ದ ಮೇಲೆ ನಾನು ಇಲ್ಲಿ ಕುಳಿತು ಕೆಲಸ ಮಾಡುವುದು ಹೇಗೆ? ಮತ್ತೆ ಸನ್ಮಾನ್ಯ ಅಧ್ಯಕ್ಷರೇ, ತಮಗೆ ಪತ್ರ ಬರೆದ ಮೇಲೂ ತಾವು ರಕ್ಷಣೆ ಮಾಡುತ್ತೀರಿ ಎಂದು ತಿಳಿಸಿದ ಮೇಲೂ ಯಾವುದೇ ದಾಖಲೆಗಳನ್ನು ಈ ನಿಮಿಷದವರೆಗೂ ಕೊಟ್ಟಿಲ್ಲ.

ನಾನು ಏನು ಹೇಳುತ್ತಿದ್ದೇನೆಂದರೆ, ಉದ್ದೇಶ ಪೂರ್ವಕವಾಗಿ ಸನ್ಮಾನ್ಯ ಸಭಾನಾಯಕರು ಒಂದು ರೀತಿ ವಿರೋಧ ಪಕ್ಷದ ನಮ್ಮ ಕೆಲಸದ ಬೆಳವಣಿಗೆಯನ್ನು, ಕೆಲಸ ಮಾಡದ ರೀತಿಯಲ್ಲಿ, ಉಸಿರು ಕಟ್ಟುವಂತಹ ವಾತಾವರಣವನ್ನು ಮಾಡಿ ನಮ್ಮ ಹಕ್ಕನ್ನು ಚ್ಯುತಿ ಮಾಡುವಂತಹ ಒಂದು ಪ್ರಯತ್ನವನ್ನು ಈ ರಾಜ್ಯದ ಮುಖ್ಯಮಂತ್ರಿಗಳು ಮಾಡುತ್ತಿದ್ದಾರೆ ಎನ್ನುವಂತಹ ಒಂದು ಪ್ರಯತ್ನವನ್ನು ಈ ರಾಜ್ಯದ ಮುಖ್ಯಮಂತ್ರಿಗಳು ಮಾಡುತ್ತಿದ್ದಾರೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಇಂತಹ ಒಂದು ಸಂದರ್ಬದಲ್ಲಿ ನಾವು ಮುಂದೆ ಬರುವಂತಹ ದಿವಸಗಳಲ್ಲಿ ಯಾವ ರೀತಿ ಕೆಲಸ ಮಾಡಬೇಕು? ವಿರೋಧ ಪಕ್ಷದ ನಾಯಕನಾಗಿ ನನ್ನ ಕರ್ತವ್ಯಗಳೇನು? ಅದನ್ನು ನಿರ್ವಹಿಸುವುದು ಹೇಗೆ? ಅವರು ದಾಖಲೆಗಳನ್ನು ಕೊಡದೇ ಇದ್ದರೆ. ಇದರ ಬಗ್ಗೆ ತಾವು ಅಧ್ಯಕ್ಷರ ಒಂದು ಸರಿಯಾದಂತಹ ನಿರ್ಧಾರಕ್ಕೆ ಬಂದು ನಮಗೆ ಮಾರ್ಗದರ್ಶನ ಮಾಡಬೇಕಾಗುತ್ತದೆ. ಮತ್ತೆ ಕಳೆದ 3 ತಿಂಗಳಿನಿಂದ ಕರ್ನಾಟಕ ರಾಜ್ಯದಲ್ಲಿ ಈ ಕಡೆ ಕುಳಿತಿರುವಂತಹ ವಿರೋಧ ಪಕ್ಷದ ಶಾಸಕರನ್ನು ಯಾವುದೇ ಒಂದು ಕಾರ್ಯಕ್ರಮದಲ್ಲಿ ಭಾಗವಹಿಸದಂತೆ ನೋಡಿಕೊಂಡು ದೂರ ಇಡುವಂತಹ ಪ್ರಯತ್ನ ಮತ್ತು ಲ್ಯಾಂಡ್‌ಗ್ರಾಂಟ್ ಕಮಿಟಿಯಲ್ಲಿ ಅಧ್ಯಕ್ಷರಾಗಿ ಕೆಲಸ ಮಾಡುತ್ತಿದ್ದಂಥ ಒಂದು ಹಕ್ಕನ್ನು ಚ್ಯುತಿ ಮಾಡುವಂತಹ ಪ್ರಯತ್ನ ಹಾಗೂ ಆಶ್ರಯ ಯೋಜನೆಯಲ್ಲಿ ಅಧ್ಯಕ್ಷರಾಗಿ ಅಲ್ಲಿ ಬಡವರಿಗೆ ಸೈಟ್ ಹಂಚುವಂತಹ ಕೆಲಸ ಮಾಡುವುದಕ್ಕೆ ಅಡ್ಡಿ ಮಾಡುವಂತಹ ಪ್ರಯತ್ನ, ಇಂತಹ ಒಂದು ಕೆಲಸವನ್ನು ಇವತ್ತು ಈ ಸರ್ಕಾರದ ಮುಖ್ಯಮಂತ್ರಿಗಳು ಮಾಡುತ್ತಿದ್ದಾರೆ. ಅದಕ್ಕಾಗಿ ಇವತ್ತು ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟವಾಗಿ ಹೇಳಬೇಕು. ಯಾವುದೇ ದಾಖಲೆಗಳನ್ನು ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ಪತ್ರಿಕೆಯಲ್ಲಿ ಕೊಟ್ಟಿರುವಂತಾದ್ದು ಮತ್ತು ನಮ್ಮ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿರುವಂತಾದ್ದು ಮತ್ತು ಚಿಕ್ಕಮಗಳೂರಿನಲ್ಲಿ ನಾನು ಆಸ್ಪತ್ರೆಗೆ ಭೇಟಿ ಮಾಡಿದಾಗ ಇವರಿಗೆ ಏನು ಕೆಲಸ ಇತ್ತು ಇವರಿಗೆ ಯಾರು ಅಲ್ಲಿಗೆ ಹೋಗುವುದಕ್ಕೆ ಹೇಳಿದ್ದು ಎಂದು ಹೇಳಿರುವಂತಾದ್ದು, ಈ ಹೇಳಿಕೆಗಳು ಎಷ್ಟರಮಟ್ಟಿಗೆ ಸಮಂಜಸ. ಈ ಹೇಳಿಕೆಗಳನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿದ್ದಾರೋ ಇಲ್ಲರೋ ಎಂದು ಸ್ಪಷ್ಟೀಕರಣ ಹೇಳಿದರೆ ಮುಂದೆ ನಾನು ಮಾತನಾಡಲು ಅನುಕೂಲವಾಗಬಹುದು. ಸನ್ಮಾನ್ಯ ಅಧ್ಯಕ್ಷರೇ, ಇದು ಪತ್ರಿಕಾ ವರದಿ ಇರಬಹುದು, ಮಾನ್ಯ ಶಾಸಕರುಗಳ ಬಗ್ಗೆ ಅಪಮಾನಕರವಾದಂತಹ ಮಾತನಾಡಿರತಕ್ಕಂಥಾದ್ದರ ಬಗ್ಗೆ ದಾಖಲೆಗಳನ್ನು ನಿಮಗೆ ನಾನು ಕೊಟ್ಟಿದ್ದೇನೆ, ಮತ್ತು ಮುಖ್ಯ ಮಂತ್ರಿಗಳಿಗೂ ಕಳುಹಿಸಿಕೊಟ್ಟಿದ್ದೇನೆ. ಆದರೂ ಸಹ ಈ ರೀತಿ ನಮ್ಮ ಮೇಲೆ ಆರೋಪ ಮಾಡುವಂತಹ ಪ್ರಯತ್ನವನ್ನು ಈ ರಾಜ್ಯದ ಮುಖ್ಯಮಂತ್ರಿಗಳು ಉದ್ದೇಶಪೂರ್ವಕವಾಗಿ ಮಾಡುತ್ತಿದ್ದಾರೆ. ಆದುದರಿಂದ ದಯಮಾಡಿ ಅಧ್ಯಕ್ಷರೇ, ನಾವು ಹೇಗೆ ಕೆಲಸ ಮಾಡಬೇಕು ಎನ್ನುವುದರ ಬಗ್ಗೆ ಮಾರ್ಗದರ್ಶನ ಮಾಡಬೇಕು ಎನ್ನುವುದರ ಬಗ್ಗೆ ಮಾರ್ಗದರ್ಶನ ಮಾಡಬೇಕು ಎಂದು ಒತ್ತಾಯ ಮಾಡುತ್ತಿದ್ದೇನೆ. ಬಹುಶಃ ಸನ್ಮಾನ್ಯ ಮುಖ್ಯಮಂತ್ರಿಗಳು ಮರೆತಿರಬಹುದು, ಎಂದು ನಾನು ತಿಳಿದುಕೊಂಡಿದ್ದೇನೆ. ಅವರ ಕಾಲದಲ್ಲೇ ಅವರು ಶಾಸಕರು ಆಗಿದ್ದಾಗ ಅವರ ಒಂದು ಕ್ಷೇತ್ರದಲ್ಲೇ ಅವರನ್ನು ಕೇಳದೇ ಒಂದು ಕಾರ್ಯಕ್ರಮವನ್ನು ಅಂದಿನ ಮಂತ್ರಿಗಳಾಗಿದ್ದಂತಹ ಶ್ರೀಕಂಠಯ್ಯನವರು ಆ ಸಂದರ್ಭದಲ್ಲಿ ಮಾಡಿದರು ಎಂದು ಹೇಳಿ ಜನರನ್ನು ಕರೆದುಕೊಂಡು ಹೋಗಿ ಪ್ರತಿಭಟನೆ ಮಾಡಿ, ಗೋಲಿಬಾರ್

ಮಾಡಿದಂತಹ ಸಂದರ್ಭದಲ್ಲಿ ಇಬ್ಬರು ಸತ್ತಿದ್ದನ್ನು ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಜ್ಞಾಪಕ ಇರಬಹುದು ಎಂದು ತಿಳಿದುಕೊಂಡಿದ್ದೇನೆ. ಎಂದರೆ ಅವರು ಶಾಸಕರು ಆಗಿದ್ದಾಗ...

MR. SPEAKER : He is making some reference. ತಮ್ಮ ಗಮನ ಆ ಕಡೆ ಇದೆ.

ಶ್ರೀ ಹೆಚ್.ಡಿ. ದೇವೇಗೌಡ : ನನ್ನ ಕಿವಿ ಎಲ್ಲಾ ಕಡೆಯೂ ಹೋಗುತ್ತದೆ.

MR. SPEAKER : It should not miss your attention.

ಶ್ರೀ ಬಿ.ಎಸ್. ಯಡಿಯೂರಪ್ಪ : ಈಗ ನಾನು ದೊಡ್ಡ ಹಳ್ಳಿ ಪ್ರಕರಣವನ್ನು..

ಅಧ್ಯಕ್ಷರು : ಇದು ನನ್ನ ಕರ್ತವ್ಯ, ನಾನು ನಿಮ್ಮ ರಕ್ಷಣೆಗೆ ಬರಬೇಕಲ್ಲ, ನೀವು ಮುಖ್ಯವಾದ ವಿಚಾರವನ್ನು ಪ್ರಸ್ತಾಪ ಮಾಡಿ ಅದನ್ನು ಅವರು ಒಂದು ವೇಳೆ ಕೇಳಿಸಿಕೊಳ್ಳದೆ ಇದ್ದರೆ...

4.40 ಪಿ.ಎಂ.

ಶ್ರೀ ಬಿ.ಎಸ್. ಯಡಿಯೂರಪ್ಪ : ನನಗೆ ಏನು ಅನಿಸುತ್ತದೆ ಎಂದರೆ, ಮುಖ್ಯಮಂತ್ರಿಗಳೇ ಮೊದಲು ಚೆನ್ನಾಗಿದ್ದೀರಿ. ಈಗ ನೀವು ಹೊಸದೇಶಕ್ಕೆ ಹೋಗಿ ಸೂಟ್ ಹಾಕಿಕೊಂಡ ಮೇಲೆ ಬದಲಾದರೇನೋ ಎಂಬ ಭಯವಾಗುತ್ತದೆ. ಏಕೆಂದರೆ, ಇವತ್ತು ನೀವು ಪತ್ರಿಕ್ ಹೇಳಿಕೆಯನ್ನು ಕೊಡುವಂತಹ ಪ್ರಯತ್ನವನ್ನು ಏನು ಮಾಡಿದ್ದೀರಿ ಅಥವಾ ಅಧಿಕಾರಿಗಳನ್ನು ತಮ್ಮ ಕಪಿಮುಷ್ಠಿಯಲ್ಲಿಟ್ಟುಕೊಂಡು ಯಾವುದೇ ದಾಖಲೆಗಳು ವಿರೋಧಪಕ್ಷದವರಿಗೆ ಸಿಗದಂತೆ ನೋಡಿಕೊಂಡು ನಮ್ಮ ಕರ್ತವ್ಯವನ್ನು ನಿರ್ವಹಿಸುವುದಕ್ಕೆ ಉಸಿರು ಕಟ್ಟುವಂತಹ ವಾತಾವರಣ ತಂದು ತಾವು ಏನು ಯಶಸ್ ಆಗಬಹುದೆಂದು ತಿಳಿದಿದ್ದೀರಿ, ಇದು ಸಾಧ್ಯವಾಗುವುದಿಲ್ಲ. ನನಗೆ ಅರ್ಥವಾಗದೆ ಇರುವಂತಹ ಇನ್ನೊಂದು ಮಾತು ಏನೆಂದರೆ, ನಾನು ವಿರೋಧಪಕ್ಷದ ನಾಯಕನಾಗಿ ಕೆಲಸ ಮಾಡಿದ್ದೇನೆ, ಶಾಸಕನಾಗಿ ಕೆಲಸ ಮಾಡಿದ್ದೇನೆ. ನಾನು ದಾಖಲೆಗಳನ್ನು ಹೇಗೆ ತರಿಸಿಕೊಳ್ಳಬೇಕೆಂಬುದು ನನಗೆ ಗೊತ್ತಿತ್ತು ಎಂದು ಹೇಳುವುದಾದರೆ ಸನ್ಮಾನ್ಯ ಅಧ್ಯಕ್ಷರೇ, ನಾನು ಸಭಾನಾಯಕರನ್ನು ಕೇಳುವುದಕಿಚ್ಛಿಸುತ್ತೇನೆ. ಇವತ್ತು ಆ ರೀತಿಯ ಪ್ರಾಮಾಣಿಕ ಅಧಿಕಾರಿಗಳು ಅಲ್ಲಿದ್ದರೂ ಸಹ ಅಲ್ಲಿ ಉಸಿರು ಕಟ್ಟುವಂತಹ ವಾತಾವರಣದಲ್ಲಿ ಇದ್ದರೂ ಸಹ ಸರ್ಕಾರದಲ್ಲಿ ನಡೆಯುವಂತಹ ಅವ್ಯವಹಾರಗಳನ್ನು ಬಯಲು ಮಾಡಿ ದಾಖಲೆಗಳನ್ನು ಕೊಡುವಂಹದರ ಸಂಖ್ಯೆ ಎಷ್ಟಿರಬಹುದು ಅಥವಾ ಆ ರೀತಿ ದಾಖಲೆಗಳು ಹೊರಗಡೆ ಬಂದರೆ ಅವರನ್ನು ನೀವು ಅಲ್ಲಿ ಇರುವುದಕ್ಕೆ ಬಿಡುತ್ತೀರೇನು? ಅಥವಾ ನಮಗೆ ನಿಮ್ಮ ಮಾರ್ಗವೇನು ಎಂಬುದು ಗೊತ್ತಿಲ್ಲ. ಕೆಲವು ಇಲಾಖೆಗಳಲ್ಲಿ ಕೆಲವು ಮೀಸಲಾತಿಗಳನ್ನು ಇಟ್ಟುಕೊಂಡು ಹಿಂಬಾಗಿಲಿನಿಂದ ದಾಖಲೆಗಳನ್ನು ತರಿಸಿಕೊಳ್ಳುವಂತಹ ಮಾರ್ಗ ನನಗೆ ಗೊತ್ತಿಲ್ಲ. ನಾನು ನೇರವಾದ ಮಾರ್ಗದಲ್ಲಿ ಕೆಲಸ ಮಾಡಬೇಕೆಂದು ಅಪೇಕ್ಷೆಯುಳ್ಳವನು. ಕಳೆದ ಅನೇಕ ವರ್ಷಗಳಿಂದ ವಿರೋಧಪಕ್ಷದಲ್ಲಿ ಇದ್ದು ಹೋರಾಟ ಮಾಡಿ ಇವತ್ತು ಈ ಅಧಿಕಾರ ಸಿಕ್ಕಿರುವಂತಹ ಸಂದರ್ಭದಲ್ಲಿ ನೀವು ಯಾವ ರೀತಿ ನಿಮ್ಮ ಹಕ್ಕನ್ನು ಪ್ರತಿಪಾದಿಸುತ್ತಿದ್ದೀರೋ ಒಬ್ಬ ಶಾಸಕನಾಗಿ ಗೌರವ ಸಿಗಬೇಕೆಂದು ಅಪೇಕ್ಷಿಪಡುತ್ತಿದ್ದೀರೋ ಅದು ಎಲ್ಲವನ್ನು ವಿರೋಧಪಕ್ಷದ ನಾಯಕಾರಿದ್ದಾಗ ಹೇಳುತ್ತಿದ್ದ ಮಾತನ್ನ ಇವತ್ತು ಸಭಾನಾಯಕರಾಗಿ ಎಲ್ಲವನ್ನು ಮರೆತು ಇವತ್ತು ಅಧಿಕಾರವಿದೆ ಎಂದು, ಈ ಅಧಿಕಾರ ಶಾಶ್ವತವೆಂದು ತಿಳಿದುಕೊಂಡು ಇವತ್ತು ನೀವೇನು ಹೊರಟದ್ದೀರಾ, ಇದು ಬಹುಶಃ ಬಹಳ ದಿವಸ ನಡೆಯುವುದಿಲ್ಲವೆಂದು ಹೇಳುತ್ತೇನೆ. ಇವತ್ತು ಇಲ್ಲಿ ಪ್ರಸ್ತಾಪ ಮಾಡುವಂತಹ ಒಂದು ಉದ್ದೇಶವೇನೆಂದರೆ ನಾನು ಈ ವಿಧಾನಸೌಧದ ಮುಂದೆ ಕೆಲವು ದಾಖಲೆಗಳು ಕೊಡಲಿಲ್ಲವೆಂದು ಹೇಳಿ ಧರಣಿ

ಕುಳಿತುಕೊಂಡಾಗ ಸನ್ಮಾನ್ಯ ಮುಖ್ಯಮಂತ್ರಿಯವರು ಕಾರಲ್ಲಿ ಬಂದರು. ಈ ರೀತಿ ಹಿಂದೆಯೂ ಅನೇಕ ಸತ್ಯಾಗ್ರಹಗಳು ನಡೆದಿತ್ತು. ವಿರೋದಪಕ್ಷದ ನಾಯಕರು ಈ ರೀತಿ ಕುಳಿತಾಗ ಮುಖ್ಯಮಂತ್ರಿಗಳು ಬಂದು ಅವರನ್ನು ಮಾತನಾಡಿಸಿ ಎಬ್ಬಿಸಿ ಜೊತೆಯಲ್ಲಿ ಕರೆದುಕೊಂಡು ಹೋಗಿದ್ದುದು ಉಂಟು. ಅವರ ಸಮಸ್ಯೆಗಳು ಏನು ಎಂದು ಕೇಳಿದ್ದುದು ಉಂಟು. ಆದರೆ ನೀವು ಏನು ಮಾಡಿದ್ದೀರಿ. ಅವತ್ತು ನೀವು ಬಂದು ನಿಮ್ಮ ಕೊಠಡಿಗೆ ಹೋಗಿ ಪೋಲೀಸ್‌ನವರನ್ನು ಕರೆಯಿಸಿ ಅರೆಸ್ಟ್ ಮಾಡಿ ಎಂದು ಹೇಳಿದ್ದೀರಿ. ತಾವು ಸೌಜನ್ಯಕ್ಕಾದರೂ ವಿರೋಧಪಕ್ಷದ ನಾಯಕರು ಕೆಲವು ದಾಖಲೆಗಳು ಬೇಕೆಂದು ಅಲ್ಲಿ ಕುಳಿತುಕೊಂಡಾಗ ನಾವು ಏತಕ್ಕೋಸ್ಕರ ಅಲ್ಲಿ ಕುಳಿತುಕೊಂಡಿದ್ದೇವೆ, ಸಮಸ್ಯೆ ಏನು ಎಂಬುದನ್ನು ತಿಳಿದುಕೊಳ್ಳುವ ಸೌಜನ್ಯವನ್ನು ತೋರಿಸದೇ ಇದುವರೆಗೂ ಬರೆದಂತಹ ಯಾವುದೇ ಪತ್ರಕ್ಕೂ ಉತ್ತರವನ್ನು ತಾವು ಕೊಡದೇ, ಅಧಿಕಾರಿಗಳು ಯಾವುದೇ ದಾಖಲೆಗಳನ್ನು ಕೊಡಬಾರದೆಂದು ಕಟ್ಟಾಜ್ಞೆ ಮಾಡಿದ್ದೀರೋ ಇದು ಪ್ರಜಾತಂತ್ರ ವ್ಯವಸ್ಥೆಗೆ ಮಾರಕವಾದಂಥದ್ದು. ನಾನು ಯಾವ ರೀತಿ ದಾಖಲೆಗಳನ್ನು ತರಿಸಿಕೊಳ್ಳಬೇಕು ಹೇಗೆ ಕೆಲಸ ಮಾಡಬೇಕೆಂಬುದು ನನಗೆ ಗೊತ್ತಿದೆ. ಆದರೆ ನಾನು ನಿಮಗೆ ಕೇಳುತ್ತಿರುವಂಥಾದ್ದು ಈ ರೀತಿ ಪತ್ರವನ್ನು ಬರೆದಿದ್ದರೂ ಸಹ ಯಾವುದೇ ದಾಖಲೆಗಳನ್ನು ಕೊಡದೆ ಈ ರೀತಿ ವಿರೋಧಪಕ್ಷದ ನಾಯಕನ ಸ್ಥಾನದಲ್ಲಿ ಕುಳಿತು ಕೆಲಸ ಮಾಡಲಾಗದಂತಹ ಈ ಪರಿಸ್ಥಿತಿಯಲ್ಲಿ ನನಗೆ ನೇರವಾಗಿ 2-3 ಸಂಗತಿಗಳು ಬೇಕು. ಪತ್ರಿಕಾ ವರದಿಗಳು ಏನು ಬಂದಿವೆ ಈ ವರದಿಗಳು ಸತ್ಯ ಹೌದೋ, ಅಲ್ಲವೋ, ನೀವು ಮತ್ತು ಗೃಹಸಚಿವರು ಹೇಳಿಕೆ ಕೊಟ್ಟಿರುವಂಥಾದ್ದು ಹೌದೋ, ಅಲ್ಲವೋ, ಇದರ ಬಗ್ಗೆ ನನಗೆ ಸ್ಪಷ್ಟೀಕರಣ ಬೇಕು. ಕೊನೆಯ ಪಕ್ಷ ಈ ರೀತಿ ಅವಹೇಳನವಾದಂತಹ ಮಾತನ್ನು ನಮ್ಮ ಶಾಸಕರ ಬಗ್ಗೆ ತಿರುಚಿ ಅಪಮಾನ ಮಾಡುವಂತಹ ಒಂದು ಹೇಳಿಕೆಯನ್ನು ಕೊಟ್ಟು ಇಡೀ ರಾಜ್ಯಕ್ಕೆ ಜಾಹೀರಾತು ಮಾಡುವಂತಹ ಪ್ರಯತ್ನ ಏನು ಮಾಡಿದ್ದೀರಿ ಇದರ ಬಗ್ಗೆ ನಿಮಗೆ ನಿಜವಾಗಿ ಏನಾದರೂ ತಪ್ಪು ಮಾಡಿದ್ದೇವೆಂದು ಅನ್ನಿಸಿದ್ದರೆ ಇದರ ಬಗ್ಗೆ ವಿಷಾದವನ್ನಾದರೂ ವ್ಯಕ್ತಪಡಿಸಿ ಇನ್ನು ಮುಂದೆ ಈ ಪ್ರಜಾತಂತ್ರ ವ್ಯವಸ್ಥೆಯ ಸತ್ಸಂಪ್ರದಾಯಗಳನ್ನು ಉಳಿಸಿಕೊಂಡು ಹೋಗಬೇಕು. ಈ ಕಡೆ ಕುಳಿತಿರುವಂತಹ ಸದಸ್ಯರು, ಯಾವುದೇ ಶಾಸಕರು ದಾಖಲೆಗಳನ್ನು ಕೇಳಿದರೆ ನೀವು ಪ್ರಾಮಾಣಿಕವಾಗಿದ್ದರೆ, ನಮ್ಮದು ಪಾರದರ್ಶಕ ಸರ್ಕಾರ ಯಾವುದು ಗುಟ್ಟಿನಲ್ಲಿಲ್ಲ. ಯಾರು ಏನು ಬೇಕಾದರೂ ನೋಡಬಹುದು ಎಂದು ಪ್ರಾಮಾಣಿಕವಾಗಿ ಅಧಿಕಾರವನ್ನು ನೀವು ನಡೆಸುತ್ತಿದ್ದರೆ ನಮಗೆ ಬೇಕಾದಂತಹ ದಾಖಲೆಗಳನ್ನು ಕೊಡುವುದಕ್ಕೆ ಏನು ಅಡ್ಡಿ ಇದೆ, ಎಂಬುದು ನಮಗೆ ಅರ್ಥವಾಗದಂತಹ ಸಂದರ್ಭವಿದೆ. ನಾನು ಇದನ್ನು ಇಲ್ಲಿ ಪ್ರಸ್ತಾಪ ಮಾಡಬೇಕೆಂದು ಇರಲಿಲ್ಲ. ಆದರೆ ಮಾನ್ಯ ಮುಖ್ಯಮಂತ್ರಿಯವರಿಗೆ ಪತ್ರ ಬರೆದ ಮೇಲೂ ಸಹ, ನಿಮ್ಮನ್ನು ಬಂದು ಕಂಡಮೇಲೂ ಸಹ ನಮಗೆ ಸಿಗಬೇಕಾದಂತಹ ದಾಖಲೆಗಳು ಸಿಗಲಿಲ್ಲ. ಅಂದಮೇಲೆ ಇದು ಈ ಸದನದಲ್ಲಿ ಚರ್ಚೆಯಾದರೆ ಯಾವ ದಾಖಲೆಗಳನ್ನು ತೆಗೆದುಕೊಳ್ಳಬಹುದು, ಯಾವ ದಾಖಲೆಗಳನ್ನು ತೆಗೆದುಕೊಳ್ಳಬಾರದು, ನಾವು ಎಲ್ಲಿಗೆ ಹೋಗಬೇಕು, ಎಲ್ಲಿಗೆ ಹೋಗಬಾರದು ನಾನು ವಿರೋಧಪಕ್ಷದ ನಾಯಕನಾಗಿ ತಿಳಿದುಕೊಂಡಿದ್ದೇನೆ. ಹಿಂದೆ ಎಲ್ಲಾ ಸಂದರ್ಭದಲ್ಲಿ ಪ್ರತಿಯೊಂದು ಜಿಲ್ಲೆಗೆ ಹೋದಾಗ ಆ ಜಿಲ್ಲೆಯ ಪ್ರಮುಖ ಅಧಿಕಾರಿಗಳ ಜೊತೆಗೆ ಚರ್ಚೆ ಮಾಡಿ, ಆ ಜಿಲ್ಲೆಯಲ್ಲಿ ಆಗುತ್ತಿರುವ ಆಗುಹೋಗುಗಳನ್ನು ತಿಳಿದುಕೊಂಡು ಅದರ ಅಂಕಿಅಂಶಗಳನ್ನು ತೆಗೆದುಕಂಡು ಬಂದು ಅದನ್ನು ಸದನದಲ್ಲಿ ಸರ್ಕಾರದ ಗಮನಕ್ಕೆ ತಂದು, ಮುಖ್ಯಮಂತ್ರಿಯವರ ಮತ್ತು ಮಂತ್ರಿಗಳ ಗಮನಕ್ಕೆ ತಂದು ಜನರ ಅಪೇಕ್ಷೆಯಂತೆ ಸರಿಯಾಗಿ ಈ ಸರ್ಕಾರ ನಡೆಯಬೇಕೆಂಬ ಉದ್ದೇಶದಿಂದ ನಾವು ಬಂದಿದ್ದೇವೆ. ಆದರೆ ಇವತ್ತು ಆಡಳಿತ ಪಕ್ಷದ...

ಅಧ್ಯಕ್ಷರು : ಮಾನ್ಯ ಯಡಿಯೂರಪ್ಪನವರೇ, ನಿಮ್ಮ ವಿಚಾರಕ್ಕೆ ಬ್ರೇಕ್ ಹಾಕಬೇಕೆಂದು ಅಲ್ಲ. ಈಗ ಗಂಟೆ 4.45 ಆಗಿದೆ ತಾವು 1 ಗಂಟೆ 5 ನಿಮಿಷಗಳ ಕಾಲಾವಕಾಶವನ್ನು ತೆಗೆದುಕೊಂಡಿದ್ದೀರಿ. ಈಗ ನಾವು 7 ಗಂಟೆಯವರೆಗೂ ಕಾರ್ಯಕ್ರಮಗಳನ್ನು ನಡೆಸಬೇಕು. ಮಾನ್ಯ ಮುಖ್ಯಮಂತ್ರಿಯವರಿಗೆ ಉತ್ತರವನ್ನು ಕೊಡಲು ಮುಕ್ಕಾಲು ಗಂಟೆ ಕಾಲಾವಕಾಶ ಬೇಕಾಗುತ್ತದೆ. ಅಂದರೆ ಇನ್ನು ಎರಡು ಕಾಲು ಗಂಟೆ ಉಳಿಯುತ್ತದೆ. ಅದರಲ್ಲಿ ನಿಮಗೆ ಒಂದೂವರೆ ಗಂಟೆಗಳು ಮುಖ್ಯಮಂತ್ರಿಯವರಿಗೆ ಮುಕ್ಕಾಲು ಗಂಟೆ, ಇನ್ನು ಕೆಲವು ಸದಸ್ಯರು ಮಾತನಾಡುವವರು ಇದ್ದಾರೆ. ಸನ್ಮಾನ್ಯ ವಾಟಾಳ್ ನಾಗರಾಜ್ ರವರು ಕೂಡ ಸಹಿ ಹಾಕಿದ್ದಾರೆ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ಆರೋಪಪಟ್ಟಿಯಲ್ಲಿ ಮಾತನಾಡುವುದಕ್ಕೆ ನಮಗೂ ಒಂದು ಅವಕಾಶವಿರಬೇಕು.

ಅಧ್ಯಕ್ಷರು : ನಿಮ್ಮ ಪಕ್ಷದ ಸದಸ್ಯರು ಸುಮಾರು ಜನರು ಇರುವುದರಿಂದ ತಾವು ಇದನ್ನು ಗಮನಿಸಿ ತಾವೇ ಅನುಸರಿಸಿದರೆ ಒಳ್ಳೆಯದು. ನಮ್ಮ ಸ್ಥಿತಿ ಹೇಗಿದೆ ಎಂಬುದನ್ನು ತಮ್ಮ ಗಮನಕ್ಕೆ ತಂದೆ ಅಷ್ಟೇ. ಅದನ್ನು ತಾವೇ ಗಮನಿಸಿ ನಮಗೆ ಅನುಕೂಲ ಮಾಡಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಇತ್ತೀಚಿನ ದಿವಸಗಳಲ್ಲಿ ಈ ಕಡೆ ಕುಳಿತಿರುವಂತಹ ಅನೇಕ ಜನರಿಗೆ ಅನುಭವ ಬಂದಿರುವಂಥಾದ್ದು..

ಅಧ್ಯಕ್ಷರು : ಮಾನ್ಯ ವೀರಪ್ಪ ಮೋಯಿಲಿಯವರು ಏನೋ ಹೇಳುತ್ತಿದ್ದಾರೆ. ತಾವು ಏನು ಹೇಳುತ್ತೀರೋ ಹೇಳಿ.

ಶ್ರೀ ಎಂ. ವೀರಪ್ಪ ಮೊಯಿಲಿ : ತಾವು ಸ್ಥಿತಿಯ ಬಗ್ಗೆ ಹೇಳಿದ್ದೀರಿ. ನಾನು ಬಂದು 23 ವರ್ಷಗಳು ಆಯಿತು.

ಅಧ್ಯಕ್ಷರು : ನನಗೆ ಜ್ಞಾಪಕ ಇದೆ ನೀವು 1972ರಲ್ಲಿ ಬಂದದ್ದು. ತಾವು ಹೇಳಿ.

ಶ್ರೀ ಎಂ. ವೀರಪ್ಪ ಮೊಯಿಲಿ : 24ನೇ ವರ್ಷ ನಡೆಯುತ್ತಿದೆ. ಒಬ್ಬ ವಿರೋದಪಕ್ಷದ ನಾಯಕರು ಶಾಸಕರ ಒಂದು ಸೌಜನ್ಯತೆ ಬಗ್ಗೆ ಈ ರೀತಿ ಚರ್ಚೆ ನಡೆದಿದ್ದು ಯಾವಾಗಲೂ ಇಲ್ಲ. ಇಷ್ಟು ಚರ್ಚೆಯೂ ಅವಶ್ಯಕವಿಲ್ಲ. ಬಹುಶಃ ತಾವು ಶಾಸಕರ ವಿರೋಧಪಕ್ಷದವರ ಸ್ಥಾನವನ್ನು ಗುರುತಿಸಿ ಆ ಸೌಜನ್ಯದ ಒಂದು ಮಾತನ್ನು ಹೇಳಿದರೆ ಸಾಕು. ಮುಕ್ಕಾಲು ಗಂಟೆ ಏಕೆ ಮಾತನಾಡಬೇಕು?

ಅಧ್ಯಕ್ಷರು : ನೀವೆಲ್ಲಾ ಎಕ್ಸ್ ಚೀಫ್‌ಮಿನಿಸ್ಟರ್‌ಗಳು ನೀವು ಆಗಾಗ ಭೇಟಿಯಾಗಿ ಅವರಿಗೆ ಗೈಡ್‌ಮಾಡಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಯಡಿಯೂರಪ್ಪನವರನ್ನು ಈಗ ಪೇಚಿಗೆ ಸಿಕ್ಕಿಸಿದೆವಲ್ಲಾ ಆ ವ್ಯಥೆ ನನಗೆ ಆಗುತ್ತಿದೆ. ಏಕೆ ಈ ಪರಿಸ್ಥಿತಿ ಬಂತು. ಈ ರೀತಿ 24 ವರ್ಷಗಳಲ್ಲಿ ಈ ಒಂದು ಸೌಜನ್ಯದ ಬಗ್ಗೆ ಕೇಳಿಕೊಳ್ಳುವಂತಹ ಪರಿಸ್ಥಿತಿ ಉದ್ಭವವಾಗಿರತಕ್ಕದ್ದು...

ಅಧ್ಯಕ್ಷರು : ಈಗ ನೀವು ಯಾರ ಪರ ಎನ್ನುವುದೇ ಗೊತ್ತಾಗುತ್ತಿಲ್ಲ. ನೀವು ಅವರನ್ನು ಪೇಚಿಗೆ ಸಿಕ್ಕಿಸಿದ್ದೀರೋ, ಇವರನ್ನು ಪೇಚಿಗೆ ಸಿಕ್ಕಿಸಿದ್ದೀರೋ ನನಗೆ ಏನೂ ಅರ್ಥವಾಗಲಿಲ್ಲ.

ಶ್ರೀ ಹೆಚ್.ಎನ್. ನಂಜೇಗೌಡ : ಸನ್ಮಾನ್ಯ ವೀರಪ್ಪ ಮೊಯಿಲಿಯವರು ಹೇಳಿದ್ದನ್ನು ಕೇಳಿ ಮಾನ್ಯ ಮುಖ್ಯಮಂತ್ರಿಯವರ ಮನಸ್ಸು ತುಂಬ ಅರಳಿರಬಹುದು. ಏಕೆಂದರೆ ಅವರಿಗೆ ಅದೇ ಬೇಕು. ಮೊಯಿಲಿಯವರಿಗೆ ಏಕೆ ಅನ್ನಿಸಿತು. ಅವರೊಬ್ಬರೇ ಏಕೆ ಪೇಚಿಗೆ ಸಿಕ್ಕಿ ಹಾಕಿಕೊಂಡಿದ್ದಾರೆ. ನಮ್ಮ ಇಡೀ ಶಾಸಕರೇ ಪೇಚಿಗೆ ಸಿಕ್ಕಿ ಹಾಕಿಕೊಂಡಿದ್ದಾರೆ. ಈ ಪಾರ್ಟಿ ಎಂದು ನಾನು ಹೇಳುವುದಿಲ್ಲ. ಅದು ಈ ಕಡೆ ಆ ಕಡೆ ಇರುವ ಎಲ್ಲರೂ ಪೇಚಿಗೆ ಸಿಕ್ಕಿಹಾಕಿಕೊಂಡಿರತಕ್ಕದ್ದು.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಒಂದು ಮಾತನ್ನು ಹೇಳಲಿಚ್ಛಿಸುತ್ತೇನೆ. ನಾನು ಪೇಚಿಗೆ ಸಿಕ್ಕಿಹಾಕಿಕೊಳ್ಳಲಿಲ್ಲ. ನಾಲ್ಕು ಜನ ಶಾಸಕರು ಇದ್ದಾಗಲೂ ಕೆಲಸ ಮಾಡಿದ್ದೇನೆ. ಒಬ್ಬನೇ ಇದ್ದಾಗಲೂ ಆಡಳಿತ ಪಕ್ಷದವರು ಎಲ್ಲರೂ ನನ್ನ ಮೇಲೆ ಬಿದ್ದಾಗಲೂ ಕೆಲಸ ಮಾಡಿದ್ದೇನೆ. ಆದರೆ ಇಲ್ಲಿ ಪ್ರಶ್ನೆ ಬಂದಿರುವಂಥಾದ್ದು ನಾನು ಏತಕ್ಕೆ ಇಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ ಎಂದರೆ ಕಳೆದ ಮೂರು ತಿಂಗಳುಗಳಿಂದ ನೂರಾರು ಪತ್ರಗಳನ್ನು ಬರೆದರೂ ಒಂದು ಪತ್ರಕ್ಕೂ ನಿಮ್ಮ ಅಧಿಕಾರಿಗಳು ಉತ್ತರ ಬರೆಯಲಿಲ್ಲ. ಉತ್ತರವನ್ನು ಬರೆಯಬಾರದು, ದಾಖಲೆಗಳನ್ನು ಕೊಡಬಾರದೆಂದು ಆದೇಶ ಕೊಟ್ಟಿದ್ದೇವೆಂದು ಈ ರಾಜ್ಯದ ಮುಖ್ಯಮಂತ್ರಿಯವರು ಹೇಳುವುದಾದರೆ ನಾನು ಪ್ರಜಾತಂತ್ರ ವ್ಯವಸ್ಥೆಯಲ್ಲಿದ್ದೇವೆಯೋ, ಅಥವಾ ಬೇರೆ ವ್ಯವಸ್ಥೆಯಲ್ಲಿ ಇದ್ದೇವೆಯೋ ಎಂದು ಅನುಮಾನ ಬರುತ್ತದೆ. ಸನ್ಮಾನ್ಯ ವೀರಪ್ಪ ಮೊಯಿಲಿಯವರು ಇರಲಿಲ್ಲ. ನಿಮ್ಮ ಕಾಲದಲ್ಲಿ ಕೃಷ್ಣ ಬೇಸಿಸ್‌ನಲ್ಲಿ ಏನು ಕೆಲಸವಾಗುತ್ತಿದೆ ಎಂದು ನೋಡಲು ಡಾ. ತಂಗಾರವರು ಶಾಸಕರುಗಳು, ನಾವು ಹೋಗಿದ್ದೇವು. ತಾವು ಗೌರವದಿಂದ ಅಲ್ಲಿ ಇರುವಂತಹ ಎಲ್ಲಾ ಅಧಿಕಾರಿಗಳಿಗೆ ತಾವು ಸಹಕಾರ ಕೊಡಬೇಕೆಂದು ಹೇಳಿದ್ದೀರಿ. ಆಗ ನಾವು ಒಂದು ದಿವಸ ಅಧಿಕಾರಿಗಳ ಜೊತೆಯಲ್ಲಿ ಓಡಾಟ ಮಾಡಿದೆವು. ಅದನ್ನು ಸೌಜನ್ಯ ಎನ್ನುವುದಕ್ಕಿಂತ ಆ ಕೆಲಸ ಮಾಡುವುದಕ್ಕೆ ಅವಕಾಶ ಮಾಡಿದ್ದೀರಿ. ನೀವು ದಾಖಲೆಗಳನ್ನು ಕೊಡಬೇಡಿ ಎಂದು ಆ ಸಮಯದಲ್ಲಿ ಅಧಿಕಾರಿಗಳಿಗೆ ಹೇಳಲಿಲ್ಲ. ಹೇಮಾವತಿ ಪ್ರಾಜೆಕ್ಟಲ್ಲಿ ಏನಾಗಿದೆ ಎಂದರೆ ಅಲ್ಲಿ ನೋಡುವುದಕ್ಕೆ ಒಬ್ಬ ಮಾಜಿ ಮುಖ್ಯಮಂತ್ರಿಯವರು ಹೋಗುತ್ತಾರೆಂದರೆ ಪತ್ರ ಬರೆಯುವಂತಹ ಅಗತ್ಯವಿರಲಿಲ್ಲ. ನಾವು ಹೋಗುತ್ತಿರುವ ವಿಷಯ ಗೊತ್ತಾದ ತಕ್ಷಣ ಅವರು ಏನು ಹೇಳಬಹುದು. ಒಬ್ಬ ಶಾಸಕನಾದವನು ತನ್ನ ಕ್ಷೇತ್ರ ಬಿಟ್ಟು ರಾಜ್ಯದಲ್ಲಿ ಓಡಾಟ ಮಾಡುವಂತಹ ಹಕ್ಕು ಇದೆಯೋ ಎಂದು ಕಾನೂನು ಪ್ರಶ್ನೆ ಬಂದಾಗ ಕೇಳಬಹುದು. ಮಾಜಿ ಮುಖ್ಯಮಂತ್ರಿಗಳಿಗೆ ಹೇಮಾವತಿ ಪ್ರಾಜೆಕ್ಟಲ್ಲಿ ಏನು ಕೆಲಸ ಆಗುತ್ತಿದೆ. ಯಾವುದು ಪ್ರಗತಿಯಾಗುತ್ತಿದೆ ಎಂಬುದನ್ನು ನೋಡಿ ಈ ಸರ್ಕಾರಕ್ಕೆ ಮಾರ್ಗದರ್ಶನ ಮಾಡಬಹುದು. ತಪ್ಪು ಇದ್ದರೆ ಸರಿಯಾದ ಮಾರ್ಗದಲ್ಲಿ ಹೋಗುವುದಕ್ಕೆ ಮತ್ತು ಕೊರತೆಗಳನ್ನು ಸರಿಪಡಿಸಲು ಅಲ್ಲಿಗೆ ಹೋಗುತ್ತಾರೆ. ಅಂದರೆ ಶಾಸಕರಾಗಿ ಕ್ಷೇತ್ರ ಬಿಟ್ಟು ನೀವು ಅಲ್ಲಿಗೆ ಹೋಗುವುದಕ್ಕೆ ಬರುವುದಿಲ್ಲ. ಎಂದು ಪತ್ರ ಬರೆಯುವುದಾದರೆ ಇತಿಮಿತಿ ಗೊತ್ತಿರಬೇಕೆಂದು ಪತ್ರ ಬರೆಯುವುದಾದರೆ, ಹೇಗೆ ಕೆಲಸ ಮಾಡಬೇಕು.

ಶಾಸಕರಾಗಿ ನಾವು ಎಲ್ಲೋ ಒಂದು ಸಮಾರಂಭದಲ್ಲಿ, ಯಾವುದೇ ಸಮಾರಂಭಗಳಾದರೂ ಸಹ ಅಧ್ಯಕ್ಷತೆಯನ್ನು ವಹಿಸಬೇಕು, ಅದು ಶಾಸಕನಿಗೆ ಬಂದಿರುವಂಥ ಪರಿಪಾಠ. ಅದು ಆಗಲಿಲ್ಲ ಎನ್ನುವ ಒಂದು ಕಾರಣಕ್ಕೋಸ್ಕರ ಒಂದು ಕಾಲದಲ್ಲಿ ಹೋರಾಟ ಮಾಡಿ, ಗೋಲಿಬಾರ್ ಆಯಿತು, ಇಬ್ಬರು ಸತ್ತರು. ಅದಾದ ಮೇಲೆ ಸರ್ಕಾರ ಒಂದು ಆದೇಶ ಹೊರಡಿಸಬೇಕಾಯಿತು. ಯಾವುದೇ ಶಾಸಕನ ಕ್ಷೇತ್ರದಲ್ಲಿ ಯಾವುದೇ ಸಾರ್ವಜನಿಕ ಸಮಾರಂಭ, ಸರ್ಕಾರೀ ಸಮಾರಂಭಗಳಾದರೆ, ಸರ್ಕಾರದ ಮಂತ್ರಿಗಳು ಬಂದರೆ ಶಾಸಕನನ್ನು ಕರೆಯಬೇಕು ಎಂಬ ಆದೇಶವನ್ನು ಹೊರಡಿಸುವಂಥ ಒಂದು ಪರಿಸ್ಥಿತಿ ಬಂತು. ನೀವು ನಿಮ್ಮ ಶಾಸಕನ ಸ್ಥಾನಮಾನವನ್ನು ಉಳಿಸಿಕೊಳ್ಳುವುದಕ್ಕೋಸ್ಕರ

ಅವತ್ತು ಹೋರಾಟ ಮಾಡಿದಿರಿ, ಆದರೆ ಇವತ್ತು ನೀವು ಮುಖ್ಯಮಂತ್ರಿಗಳಾಗಿರುವಂಥ ಕಾಲದಲ್ಲಿ ಇವತ್ತು ರಾಜ್ಯದ ಅನೇಕ ಕಡೆಗಳಲ್ಲಿ, ವಿರೋಧಪಕ್ಷದ ಶಾಸಕರು ಇರುವಂಥ ಒಂದು ಪರಿಸ್ಥಿತಿ ಇವತ್ತು ಇಲ್ಲಿ ಬಂದಿದೆ. ಮತ್ತೆ ಇವತ್ತು ಅಧಿಕಾರಿಗಳು ಯಾವ ರೀತಿ ಪ್ರಾಮಾಣಿಕವಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಒಬ್ಬ ಮುಖ್ಯಮಂತ್ರಿ ಯಾವುದೇ ಮಾಹಿತಿಯನ್ನು ಕೊಡಬೇಡ ಎಂಬ ಆದೇಶವನ್ನು ಕೊಟ್ಟಿದ್ದೇನೆ ಎಂಬ ಪತ್ರಿಕಾ ಹೇಳಿಕೆಯನ್ನು ಕೊಡುವಂಥ ಧೈರ್ಯ ಮಾಡುತ್ತೀರಾ ಅಂದಮೇಲೆ ಅಧಿಕಾರಿ ನೌಕರರಿಗೆ ನೀವು ಏನು ಹೇಳಿರಬಹುದು. ಈ ಪರಿಸ್ಥಿತಿ ಇದೆ. ಮತ್ತು ಇವತ್ತು ಅಧ್ಯಕ್ಷರ ಮೂಲಕ ಯಾವುದೇ ದಾಖಲೆಯನ್ನು ಕೊಡುವುದಕ್ಕೆ ಸಿದ್ಧನಿದ್ದೇನೆ ಎಂದು ಇಲ್ಲಿ ತಾವು ಕುಳಿತುಕೊಂಡು ಹೇಳುತ್ತೀರಿ, ಸನ್ಮಾನ್ಯ ಅಧ್ಯಕ್ಷರೇ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಗೊತ್ತಿದೆ, ಒಂದು ಕೋ-ಆಪರೇಟಿವ್ ಸೊಸೈಟಿಯಲ್ಲಿ ಡೈರೆಕ್ಟರ್ ಇಲ್ಲ, ಪ್ರೆಸಿಡೆಂಟ್ ಇಲ್ಲ. ಒಬ್ಬ ಸಾಮಾನ್ಯ ಸದಸ್ಯ ಅಲ್ಲಿ ಆದಂಥ ತೀರ್ಮಾನದ ದಾಖಲೆಗಳನ್ನು ಕೇಳಿದರೆ ಕೊಡುತ್ತಾರೆ.

ಪುರಸಭಾ, ನಗರಸಭೆಗಳಲ್ಲಿ ಸಾಮಾನ್ಯ ಒಬ್ಬ ಟ್ಯಾಕ್ಸ್ ಪೇಯರ್ ಅಲ್ಲಿನ ದಾಖಲೆಯನ್ನು ಕೇಳಿದರೆ ಕೊಡುತ್ತಾರೆ. ನಾನು ಶಾಸಕನಾಗಿ ಇಲ್ಲಿರುವಂಥ ದಾಖಲೆಗಳು ಬೇಕು ಎಂದು ಬೇಡುವಂಥ ಕೇಳುವಂಥ, ಒಂದು ಸ್ಥಿತಿ ಬಂದಿದೆ ಎನ್ನುವುದಾದರೆ ಇದು ನಾಚಿಕೆಯಿಂದ ತಲೆ ತಗ್ಗಿಸಬೇಕಾಗಿರುವುದು ಈ ಕಡೆ ಕುಳಿತವರು ನಾವಲ್ಲ, ಈ ಸ್ಥಿತಿಗೆ ತಂದಿರುವಂಥ ತಾವು ಈ ಪರಿಸ್ಥಿತಿಯನ್ನು ಏತಕ್ಕೆ ತರುತ್ತಿದ್ದೀರಾ ಎನ್ನುವುದನ್ನು ನೀವು ಪ್ರಶ್ನೆ ಮಾಡಿಕೊಳ್ಳಬೇಕಾಗುತ್ತದ. ಇಲ್ಲ ನೀವು ಮುಂದೆ ಹೇಳಬೇಕಾಗುತ್ತದೆ. ಇವತ್ತು ನೀವು ದಾಖಲೆಗಳನ್ನು ಕೊಡದೆ ಇರತಕ್ಕಂಥದ್ದಕ್ಕೆ ಕ್ರೀಡಾಂಗಣದ ಉದಾಹರಣೆಯನ್ನು ಏಕೆ ಕೊಡುತ್ತಿದ್ದೇನೆ. ಈ ಸದನದಲ್ಲಿ ಮೊದಲನೆ ದಿವಸ ಇದನ್ನ ಪ್ರಸ್ತಾಪ ಮಾಡಿದೆ. ಸನ್ಮಾನ್ಯ ಮುಖ್ಯಮಂತ್ರಿಗಳು ಎದ್ದುನಿಂತುಕೊಂಡು ಹೇಳಿದರು, ಯಡಿಯೂರಪ್ಪನವರೇ ನೀವು ಮಾತನಾಡಬೇಕಾದರೆ ಎಚ್ಚರಿಕೆಯಿಂದ ಮಾತನಾಡಿ ವಿರೋಧಪಕ್ಷದ ನಾಯಕನ ಜವಾಬ್ದಾರಿ ಸ್ಥಾನದಲ್ಲಿ ಇದ್ದೀರಿ, ಯಾವ ದಾಖಲೆ ಬೇಕು ತೆಗೆದುಕೊಂಡು ನೋಡಿ ಎಂದು ಹೇಳಿದಿರಿ. ಈಗ ನಾನು ಕೇಳಿರುವ ದಾಖಲೆ ಯಾವುದು ಕಾನ್‌ಫಿಡೆನ್ಷಿಯಲ್ ಇದೆ ಆ ದಾಖಲೆಗಳನ್ನು ಕೊಟ್ಟರೆ ಇವತ್ತು ಯಾವ ರೀತಿ ಸುಮಾರು 120 ಕೋಟಿಗೂ ಹೆಚ್ಚು ಹಣವನ್ನು ಕೊಟ್ಟು ಸರ್ಕಾರದ ಬೊಕ್ಕಸವನ್ನು ಲೂಟಿ ಮಾಡುವಂಥ ಕೆಲಸ ಅಲ್ಲಿ ನಡೆಯುತ್ತಿರುವುದರಿಂದ ಇದನ್ನು ಸಾಬೀತು ಮಾಡದೆ ಹೋದರೆ ನಾನು ಈ ಸ್ಥಾನದಲ್ಲಿ ನಿಂತುಕೊಳ್ಳುವುದಿಲ್ಲ, ದಾಖಲೆಗಳನ್ನು ಏಕೆ ಕೊಡುವುದಿಲ್ಲ? ಕಳೆದ ಒಂದೂವರೆ ತಿಂಗಳು ದಾಖಲೆಯನ್ನು ಕೊಡದೆ ಇರುವಂಥ ಉದ್ದೇಶವೆ ನಿಮಗೆ ಬೇಕಾದಂತೆ ತಿರುಚಿಕೊಳ್ಳುವ, ಬದಲಾಯಿಸಿಕೊಳ್ಳುವ ಪ್ರಯತ್ನ ಮಾಡುತ್ತೀರಿ ಎಂದು ಆರೋಪ ಮಾಡಿದರೆ ತಾವೇನು ಉತ್ತರ ಕೊಡುತ್ತೀರಿ? ಸನ್ಮಾನ್ಯ ಅಧ್ಯಕ್ಷರೆ, ನಾನು ನಿಮ್ಮನ್ನು ಕೇಳುತ್ತೇನೆ.

ವೀರಪ್ಪ ಮೊಯಿಲಿಯವರು ಅದು ಯಾವ ದೃಷ್ಟಿ ಇಟ್ಟುಕೊಂಡು ಹೇಳಿದರೋ ಗೊತ್ತಿಲ್ಲ. ಆದರೆ ನಾನು ಇವರನ್ನು ಕೇಳುತ್ತೇನೆ. ಈ ಸದನದಲ್ಲಿ ಕಳೆದ ಇಷ್ಟು ವರ್ಷಗಳಲ್ಲಿ ವಿರೋದಪಕ್ಷದ ನಾಯಕರು ಕೇಳುವಂಥ ದಾಖಲೆಗಳನ್ನು ಕೊಡುವುದಿಲ್ಲ ಎಂದು ಹೇಳುವಂಥ ಒಬ್ಬ ಮುಖ್ಯಮಂತ್ರಿಯನ್ನು ಕಂಡಿದ್ದೀರೇನು? ಹಾಗಾದರೆ ನಿಮ್ಮ ಉದ್ದೇಶ ಏನು? ಸನ್ಮಾನ್ಯ ಅಧ್ಯಕ್ಷರೇ, ಇವತ್ತು ನಮ್ಮ ಮಾನ್ಯ ಮುಖ್ಯಮಂತ್ರಿಗಳ ಮನಸ್ಸಿನಲ್ಲಿ ಈ ರೀತಿ ದಾಖಲೆಯನ್ನು ಕೊಡದೆ ನಮ್ಮೆದುರು ವಿರೋಧಪಕ್ಷ ಬೆಳೆಯದ ಹಾಗೆ ಹತ್ತಿಕ್ಕಬಹುದು ಎಂದು ನಿಮ್ಮ ಮನಸ್ಸಿನಲ್ಲಿ ಏನಾದರೂ ಇದ್ದರೆ ಅಥವಾ ನೂರು ಜನ ಇರುವಂಥ ಶಾಕರು, ಇನ್ನೂ ಕೆಲವರು ಸೇರಿಕೊಂಡು 114ರಷ್ಟು ನೀವು ಆಗಿದ್ದೀರಿ.

ನೂರು ಜನಕ್ಕೆ ಸರಿಸಮಾನವಾದ ಗೌರವ ಸಿಗುತ್ತದೆ ಎಂದು ಹೇಳಿ ಇವತ್ತು ತಾಲ್ಲೂಕು ಪಂಚಾಯಿತಿಯಲ್ಲಿ ಒಂದು ಸಮಿತಿ ಅಧ್ಯಕ್ಷ ಕೆಲಸ ಮಾಡುವಂಥದ್ದು ಇರಬಹುದು ಅಥವಾ ಲ್ಯಾಂಡ್‌ಗ್ರಾಂಟ್ ಕಮಿಟಿಯಲ್ಲಿ ಅಧ್ಯಕ್ಷರಾಗಿ ಕೆಲಸ ಮಾಡುವಂಥದ್ದು ಇರಬಹುದು, ಆಶ್ರಯ ಸಮಿತಿಯಲ್ಲಿ ಅಧ್ಯಕ್ಷರಾಗಿ ಕೆಲಸ ಮಾಡುವಂಥದ್ದು ನಮ್ಮ ಹಕ್ಕು ಇರಬಹುದು. ಇದನ್ನು ಮೊಟಕು ಮಾಡಿ ಅಲ್ಲಿ ಒಂದು ಅಸಿಸ್ಟೆಂಟ್ ಕಮೀಷನ್‌ರ ಮೇಲೆ ಭಾರ ಹೇರುವಂಥ ಒಂದು ಕೆಲಸವನ್ನು ನೀವು ಮಾಡುವುದಕ್ಕೆ ಹೊರಟಿದ್ದೀರಿ ಎನ್ನುವುದಾದರೆ ಬಹುಶಃ ಹೇರುವಂಥ ಒಂದು ಕೆಲಸವನ್ನು ನೀವು ಮಾಡುತ್ತಿದ್ದೀರಿ ಎಂದು ಇದಕ್ಕಿಂತ ಬೇರೆ ಉದಾಹರಣೆಗಳು ಬೇಕಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ.

ಸನ್ಮಾನ್ಯ ಅಧ್ಯಕ್ಷರೆ, ಅದಕ್ಕೋಸ್ಕರ ನಾನು ತಮ್ಮನ್ನು ಕೇಳುತ್ತಿರುವುದು ಇವತ್ತು ಸ್ಪಷ್ಟ ಆಗಬೇಕು, ನಮಗೆ ಯಾವುದಾದರೂ ದಾಖಲೆಗಳು ಬೇಕು ಎನ್ನುವುದಾದರೆ ನಿಮಗೆ ಪತ್ರ ಬರೆದು ನಿಮ್ಮ ಮೂಲಕವೇ ತೆಗೆದುಕೊಳ್ಳಬೇಕು ಎನ್ನುವುದಾದರೆ ಈ ಸರ್ಕಾರದ ಅಧಿಕಾರಿಗಳಿಗೆ ಪತ್ರ ಬರೆಯುವಂಥ ಅಗತ್ಯ ಬರುವುದಿಲ್ಲ. ಅಧಿಕಾರಿಗಳು ಈ ದಾಖಲೆಗಳನ್ನು ಕೊಡುವುದಕ್ಕೆ ಬರುವುದಿಲ್ಲ ಎಂದು ದಿವಸಗಟ್ಟಲೆ ಇಲ್ಲಿ ಚರ್ಚೆಯಾಗಿ ನಿಮ್ಮ ಅಧ್ಯಕ್ಷರ ಕೊಠಡಿಯಲ್ಲಿ ದಾಖಲೆಗಳನ್ನು ನೋಡಬೇಕಾಯಿತು. ಅಂತಹ ವಿಶೇಷ ಸಂದರ್ಭ ಬಂದಾಗ ಯಾವುದೇ ದಾಖಲೆಗಳನ್ನು ತರಿಸಿಕೊಡುವಂತಹ ಅಧಿಕಾರನಿಗೆ ಇದೆ, ಅದಕ್ಕೆ ಮುಖ್ಯಮಂತ್ರಿಗಳು ಅನುಮತಿ ಕೊಡುವಂಥ ಅಗತ್ಯ ಇಲ್ಲ. ಈ ಕಾನೂನು ವ್ಯವಸ್ಥೆಯಲ್ಲಿ ಅಧ್ಯಕ್ಷರಿಗೆ ಆ ಅಧಿಕಾರ ಇದೆ.

ಆದರೆ ನಿತ್ಯ ಕೆಲಸದಲ್ಲಿ ನೀವು ಪ್ರವೇಶ ಮಾಡುತ್ತೀರಿ ದಿನನಿತ್ಯದ ಚಟುವಟಿಕೆಗಳನ್ನು ಮಾಡುವುದು ಹೇಗೆ ಎನ್ನುವುದಾದರೆ ಒಬ್ಬ ಶಾಸಕನಾಗಿ ಯಾವುದಾದರೂ ಒಂದು ತಾಲ್ಲೂಕಿನಲ್ಲಿ ನಾಳೆ ದಿವಸ ಯಾವುದಾದರೂ ಒಂದು ಲಕ್ಷ ರೂಪಾಯಿ ಆಗುವಂಥ ಕೆಲಸಕ್ಕೆ 5 ಲಕ್ಷ ಎಸ್ಟಿಮೇಟ್ ಮಾಡಿಬಿಟ್ಟು ತಿನ್ನುವಂಥ ಪ್ರಯತ್ನ ಮಾಡಿದರೆ ಆ ಎಸ್ಟಿಮೇಟ್ ಕಾಪಿಯನ್ನು ಕೇಳಿದರೆ ಅದನ್ನು ತಂದು ಅಲ್ಲಿನ ಒಬ್ಬ ತಾಲ್ಲೂಕಿನ ಶಾಸಕನಿಗೆ ಕೊಡುವುದಿಲ್ಲ. ಈ ಪೇಪರನ್ನು ನೋಟೀಸ್ ಬೋರ್ಡಿನಲ್ಲಿ ಹಾಕಬೇಕಾಗುತ್ತದೆ. ಸಾರ್ವಜನಿಕರಿಗೆ ಗೊತ್ತಾಗುವಂತೆ ಪ್ರಕಟಣೆ ಮಾಡಬೇಕಾಗುತ್ತದೆ. ಇಂತಹ ಪರಿಸ್ಥಿತಿ ಇದ್ದರೂ ಸಹ ಯಾವುದೇ ದಾಖಲೆಯನ್ನು ಕೊಡದೆ, ಅಧಿಕಾರಿಗಳು ಸಹ ಯಾವುದು ಮಾಡಬೇಕು, ಯಾವುದು ಮಾಡಬಾರದು, ಯಾವುದೇ ಕಛೇರಿಗೆ ಹೋಗಿ, ಯಾವುದಾದರೂ ಇನ್‌ಫರ್ಮೇಷನ್ ಬೇಕು ಎಂದು ಪತ್ರ ಬರೆದರೆ ಯಾವುದು ಕೊಡಬೇಕು, ಯಾವು ಕೊಡಬಾರದು ಎಂಬ ಗೊಂದಲದಲ್ಲಿ ನಿಲ್ಲುವಂಥ ಪರಿಸ್ಥಿತಿಗೆ ಇವತ್ತು ತಂದಿದ್ದೀರಿ. ಸನ್ಮಾನ್ಯ ಅಧ್ಯಕ್ಷರೇ, ನಾನು ಅದಕ್ಕೆ ಕೇಳುತ್ತಿದ್ದೇನೆ. ಇವತ್ತು ನಮ್ಮ ಮುಖ್ಯ ಕಾರ್ಯದರ್ಶಿಗಳು ಏನು ಮಾಡುತ್ತಿದ್ದಾರೆ? ಈ ವ್ಯವಸ್ಥೆ ಇರುತ್ತದೆ, ಹೋಗುತ್ತದೆ, ಮುಖ್ಯಮಂತ್ರಿಗಳು ಇರುತ್ತಾರೆ, ಹೋಗುತ್ತಾರೆ, ಸರ್ಕಾರ ಬದಲಾವಣೆಗಳು ಆಗುತ್ತದೆ. ಆದರೆ ಮುಖ್ಯಕಾರ್ಯದರ್ಶಿಗಳಿಗೆ ಪತ್ರ ಬರೆದರೆ ವಾಪಸ್ಸು ಉತ್ತರ ಬರೆಯುವಂಥ ಒಂದು ಸೌಜನ್ಯ ಇಲ್ಲ. ಅದಕ್ಕೆ ಬೇಕಾದ ದಾಖಲೆಗಳನ್ನು ಕಳುಹಿಸಿಕೊಡಲಿಲ್ಲ, ಅಂದರೆ ಈ ಕಾರಣಕ್ಕೋಸ್ಕರ ಈ ದಾಖಲೆಯನ್ನು ಕೊಡುವುದಕ್ಕೆ ಬರುವುದಿಲ್ಲ ಎಂದು ಹೇಳಿರಿ.

ನಿಮ್ಮ ಅಧಿಕಾರಿಗಳಿಗೆ ಈ ಪತ್ರ ಬರೆದ ಮೇಲೆ ಅದರ ಕಾಪಿಗಳನ್ನು ತರಿಸಿ ರಿಮೈಂಡ್ ಹಾಕಿಸಿ ಮುಖ್ಯ ಕಾರ್ಯದರ್ಶಿಗಳಿಗೆ ಕಳುಹಿಸಿದರೆ ಅವರಿಂದ ಉತ್ತರ ಬರಲಿಲ್ಲ ಎನ್ನುವುದಾದರೆ ವಿರೋಧ ಪಕ್ಷದ ನಾಯಕನಾಗಿ ಹೇಗೆ ಕೆಲಸ ಮಾಡುವುದಕ್ಕಾಗುತ್ತದೆ? ಹೇಗೆ ಕೆಲಸ ಮಾಡಬೇಕು ಎಂಬುದನ್ನು ಯೋಚನೆ ಮಾಡೋಣ. ಸನ್ಮಾನ್ಯ ಅಧ್ಯಕ್ಷರೇ ನಾನು ನಿಮ್ಮನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ.

ಈ ಪತ್ರಿಕಾ ಹೇಳಿಕೆಗಳು ಏನು ಇವೆ ಅವು ಸತ್ಯರೇ, ಅವರು ಗೃಹಸಚಿವರ ಹೇಳಿದ್ದರೋ ಇಲ್ಲವೋ? ಎರಡನೆಯದು ಅಧಿಕಾರಿಗಳಿಗೆ ಯಾವುದೇ ಮಾಹಿತಿಯನ್ನು ಕೊಡಬೇಡಿ ಎಂದು ಆದೇಶ ಕೊಟ್ಟಿದ್ದೇವೆ ಎಂದು ಅವರು ಹೇಳಿದ್ದಾರೋ ಇಲ್ಲವೋ? ಎರಡನೆಯದು ಅಧಿಕಾರಿಗಳಿಗೆ ಯಾವುದೇ ಮಾಹಿತಿಯನ್ನು ಕೊಡಬೇಡಿ ಎಂದು ಆದೇಶ ಕೊಟ್ಟಿದ್ದೇವೆ ಎಂದು ಅವರು ಹೇಳಿದ್ದಾರೋ ಇಲ್ಲವೋ? ಮೂರನೆಯದು ಯಾವುದೇ ದಾಖಲೆಗಳು ಬೇಕಾದರೆ ಸಭಾಧ್ಯಕ್ಷರ ಮೂಲಕ ತೆಗೆದುಕೊಳ್ಳಬೇಕು, ನೇರವಾಗಿ ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿರುವಂಥ ಮಾತು ಏನಿದೆ ಇದು ಹೌದೋ ಇಲ್ಲವೋ? ಇದರ ಬಗ್ಗೆ ಸ್ಪಷ್ಟೀಕರಣ ನೀಡಿದಲ್ಲಿ ಮುಂದೆ ನಾನು ಉಳಿದಂಥ ಏನು ವಿಷಯಗಳನ್ನು ಹೇಳಬೇಕು ನಾನು ಆ ಸಮಯದಲ್ಲಿ ಹೇಳುತ್ತೇನೆ.

+ಶ್ರೀ ಹೆಚ್.ಎಸ್. ನಂಜೇಗೌಡ : ಮಾನ್ಯ ಸಭಾಧ್ಯಕ್ಷರೇ, ನಾನು ದೊಡ್ಡ ಭಾಷಣವನ್ನೇನು ಮಾಡುವುದಕ್ಕೆ ಹೋಗುವುದಿಲ್ಲ. ಇದರ ವಿಚಾರವನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ದೊಡ್ಡದು ಮಾಡಿಬಿಟ್ಟಿದ್ದಾರೆ ಅಷ್ಟೆ. ಇಲ್ಲಿ ದೊಡ್ಡದಾಗತಕ್ಕಂಥ ಸಮಸ್ಯೆ ಏನೂ ಇಲ್ಲ. ಸನ್ಮಾನ್ಯ ಜೆ.ಹೆಚ್. ಪಟೇಲರಿಗೆ ಗೊತ್ತಿದೆ, ಸನ್ಮಾನ್ಯ ಮುಖ್ಯಮಂತ್ರಿಗಳಿಗೂ ಗೊತ್ತಿದೆ. ಲೋಕಸಭೆಯಲ್ಲಿ ಏನು ಪದ್ಧತಿ ಇದೆ ಎಂದರೆ, ಒಬ್ಬ ಮಂತ್ರಿಗೆ ಯಾವುದಾದರೂ ಇನ್‌ಫರ್‌ಮೇಷನ್ ಕೇಳಿ ಕಾಗದ ಬರೆದರೆ, ಇಲ್ಲಿ ಒಂದು ಶಿಷ್ಟಾಚಾರ ಇದೆ, ಬರೆದ ಒಂದೆರಡು ದಿನಕ್ಕೆ ಅಕ್ನಾಲೆಡ್ಜ್ ಮಾಡುತ್ತಾರೆ, ನಿಮ್ಮ ಪತ್ರ ತಲುಪಿದೆ "Thank you for your letter dated so and so. You will hear in the matter"

ಆದಾದ ಸ್ವಲ್ಪ ದಿನಕ್ಕೆ ಉತ್ತರ ಕಳುಹಿಸುತ್ತಾರೆ. ಕಳುಹಿಸುವುದಕ್ಕೆ ಆಗದಿದ್ದರೆ ನಾವು ಈ ಕಾರಣಕ್ಕೆ ಉತ್ತರವನ್ನು ಕಳುಹಿಸುವುದಕ್ಕಾಗುವುದಿಲ್ಲ ಎಂದು ತಿಳಿಸುತ್ತಾರೆ. ಸನ್ಮಾನ್ಯ ಅಧ್ಯಕ್ಷರೇ, ಈ ದಾಖಲಾತಿ ಬಗ್ಗೆ ನನಗೆ ಸ್ವಲ್ಪ ತಲೆ ಕೆಡಿಸಿಬಿಟ್ಟರು. ಶಾಸಕರು ಕೇಳಿದ ದಾಖಲಾತಿಯೆಲ್ಲಾ ಸರ್ಕಾರ ಕೊಡಬೇಕೇ? ಕೊಡಬಾರದೆ? ಎಲ್ಲಿಯಾದರೂ ಕೋ ಡಿಫೈ ಮಾಡಿರುವುದು ಮಾಡಿದರೆ ಸಿಗುತ್ತದೋ, ನಮ್ಮಲ್ಲಿ ಸಿಗುವುದಿಲ್ಲ, ನಾವೆಲ್ಲಾ ಅಡಾಪ್ಟ್ ಮಾಡಿಕೊಂಡಿರತಕ್ಕಂಥಾದ್ದು ಬ್ರಿಟೀಷ್ ಪಾರ್ಲಿಮೆಂಟ್ ಪದ್ಧತಿ ಎಂದು ಹೇಳಿ, ಇಲ್ಲಿ ನೋಡಿ Walter Hogehat - English Constitution and the British Govt. and politics - Harway and Beker.

ಇಲ್ಲಿ ಸುಮ್ಮನೆ ಸರ್ಕಾರ ನಡೆಯಬೇಕು ಎನ್ನುವುದು ಸಿಕ್ಕಿತೇ ಹೊರತು, ಶಾಸಕರು ಕೇಳಿದ್ದುದು ಏನು ಕೊಡಬೇಕು ಎನ್ನುವುದು ಎಲ್ಲೂ ಕೋಡಿಫೈ ಆಗಿಲ್ಲ. ಒಂದೈದು ಪುಸ್ತಕ ರೆಫರ್ ಮಾಡಿದೆ. ಸರ್ಕಾರದ ಬಗ್ಗೆ ಕೆಲವು ಉಚಿತವಾದಂಥ ಮಾಹಿತಿಗಳು ಇತ್ತು ಅದನ್ನು ಸುಮ್ಮನೆ ಫೋಟೋಸ್ಟಾಟ್ ಮಾಡಿ ಇಟ್ಟುಕೊಂಡೆ. ಆದರೆ ಇವತ್ತಿಗೆ ಇದು ಉಪಯೋಗ ಆಗತಕ್ಕಂಥದ್ದು ಅಲ್ಲ ಇನ್ನೊಂದು ಸಂದರ್ಭದಲ್ಲಿ ಸರ್ಕಾರದ ಬಗ್ಗೆ ಹೇಳುವುದಿದ್ದರೆ ನಾವು ಉಪಯೋಗಿಸಿಕೊಳ್ಳಬಹುದು. ಇಲ್ಲಿರತಕ್ಕಂಥದ್ದು ಏನು ಅಂದರೆ ಈ ಶಾಸನಸಭಾ ಸದಸ್ಯರುಗಳ ಸ್ಥಾನಮಾನವನ್ನು ನೋಡತಕ್ಕಂಥ ದೃಷ್ಟಿ ಬದಲಾದದ್ದು ಅವರಿಂದ. 1983ನೇ ಇಸವಿಯಲ್ಲಿ ಅವರು ಅಧಿಕಾರಕ್ಕೆ ಬಂದರಲ್ಲ, ತಾವು ಬಂದಾಗ ಏನಾಯಿತು ಶಾಸಕರು ಹೇಳಿದ ಹಾಗೆ ಅಧಿಕಾರಿಗಳನ್ನು ಟ್ರಾನ್ಸ್ಫರ್ ಮಾಡಬೇಕು, ಶಾಸಕರು ಹೇಳಿದಂಥ ಅಧಿಕಾರಿಗಳೆ ಅವರವರ ಕ್ಷೇತ್ರದಲ್ಲಿ ಇರಬೇಕು. ಶಾಸಕರ ಹಿಂದೆ ಅವರು ತಿರುಗಬೇಕು. ಇದನ್ನು ನೀವು ಹೋದಮೇಲೆ ಬಂದವರು ಪಾಲಿಸಿಕೊಂಡು ಬಂದರು. ಎಲ್ಲಿಯವರೆಗೆ ಪಾಲಿಸಿಕೊಂಡು ಬಂದರು ಎಂದರೆ ಬಂಗಾರಪ್ಪನವರ ಕಾಲದಲ್ಲಿ ಶಾಸಕರು ಸರ್ವಾಧಿಕಾರಿಗಳು. ಇದು ನನ್ನ ಅಭಿಪ್ರಾಯ. ಸರ್ವಾಧಿಕಾರಿಗಳು ಎಂದರೆ ಆ ಕ್ಷೇತ್ರದಲ್ಲಿ ಅಧಿಕಾರಿ ಶಾಸಕರು ಹೇಳಿದ ಹಾಗೆ ಕೇಳುತ್ತಾರೆ. ಒಂದು ಏನಾಯಿತು ಎಂದರೆ..

ಶ್ರೀ ವಾಟಾಳ್ ನಾಗರಾಜ್ : ಬಹಳ ದಿವಸದ ನಂತರ ಶಾಸನಸಭೆಗೆ ಬಂದಿದ್ದೀರಾದ್ದರಿಂದ ನೀವು ಪಾರ್ಲಿಮೆಂಟಿನಲ್ಲಿ ಇದ್ದವರು. ಅಲ್ಲಿ ಏನು ವ್ಯವಸ್ಥೆ ಇತ್ತೋ ಗೊತ್ತಿಲ್ಲ. ಆ ತರಹ ಶಾಸಕರು ಯಾರೂ ಸರ್ವಾಧಿಕಾರಿಗಳಾಗಿ ನಡೆಸಿದ್ದು ಇಲ್ಲ..

ಶ್ರೀ ಹೆಚ್.ಎನ್. ನಂಜೇಗೌಡ : ನಡೆಸಿದರು ಎಂದು, ನಾನು ಹೇಳುತ್ತಿಲ್ಲ. ಅದನ್ನು ಮಾಡಬೇಕು ಎಂದು ಪ್ರಯತ್ನ ಪಟ್ಟರು.

ಶ್ರೀ ವಾಟಾಳ್ ನಾಗರಾಜ್ : ಹಾಗಾದರೆ ಶಾಸಕನನ್ನು ಕಸದಪೊರಕೆ ಕೊಟ್ಟು ಕಸ ಗುಡಿಸುವುದಕ್ಕೆ ಕಳುಹಿಸಿ? ಹೌದು ತಾನೆ, ಇದಲ್ಲ ಅಂದರೆ ಅದನ್ನೇ ಮಾಡಬೇಕಾಗುತ್ತದೆ.

ಶ್ರೀ ಹೆಚ್.ಎನ್. ನಂಜೇಗೌಡ : ನಾನು ಪದೇ ಪದೇ ಹೇಳುತ್ತೇನೆ, ಶಾಸಕರು ಅಂದರೆ ಶಾಸಕಾಂಗ. ಈ ಶಾಸಕಾಂಗ ಒಂದು ಅಂಗ. ಸೀಮಿತ ಎಂದು ಅಲ್ಲ. ನಾನು ಹೇಳುತ್ತೇನೆ ಕೇಳಿ, ಕಸದಪೊರಕೆ ತೆಗೆದುಕೊಂಡು ಹೋಗಿ ಎಂದು ನಾನು ಹೇಳುತ್ತೇನೋ?

ಶ್ರೀ ವಾಟಾಳ್ ನಾಗರಾಜ್ : ಇಲ್ಲ ನಾವು ಹೋಗಿ ಗಮನಸೆಳೆಯುವ ಸೂಚನೆ ತರುವ ಹಾಗಿಲ್ಲ, ನಿಲುವಳಿ ತರುವ ಹಾಗಿಲ್ಲ ಬರೀ ಕಾಯಿದೆಗಳನ್ನು ಮಾತ್ರ, ಅಷ್ಟೇ ಸೀಮಿತ.

ಶ್ರೀ ಹೆಚ್.ಎನ್. ನಂಜೇಗೌಡ : ಹಾಗಲ್ಲ ನಾನು ಏಕೆ ಹೇಳುತ್ತೇನೆ ಎಂದರೆ, ಈಗ ಏನಾಗಿದೆ ಈಗ ಪ್ರಾಕ್ಟಿಕಲ್ ಆಗಿ ನಮ್ಮ ಆತ್ಮಶೋಷಣೆ ಮಾಡಿಕೊಳ್ಳೋಣ. ಇವತ್ತು ಯಾವುದಾದರೂ ಕ್ಷೇತ್ರದಲ್ಲಿ ಒಬ್ಬ ಶಾಸಕನ ಶಕ್ತಿ ಅಳೆಯಬೇಕಾದರೆ ಏನು ಅಳತೆಗೋಲು? ಇವತ್ತು ವಾಟಾಳ್ ಕ್ಷೇತ್ರಲ್ಲಿ ವಾಟಾಳ್‌ರು ಪ್ರಬಲರೋ ಇಲ್ಲವೋ ಎಂಬುದು ಅವರ ಜನಕ್ಕೆ ಅರ್ಥವಾಗಬೇಕಪ್ಪ, ಹೇಗೆ ಅರ್ಥವಾಗಬೇಕು? ನೀವು ಅವರಿಗೆ ಬೇಕಾದವರೊಬ್ಬ ತಹಸೀಲ್ದಾರ್ ಇದ್ದರೆ ಟ್ರಾನ್ಸ್ಫರ್ ಮಾಡಿಬಿಡಿ ಅವರಿ ರಿಟೇನ್ ಮಾಡಿಸಿಕೊಳ್ಳುವುದಾದರೆ ಆ ಶಾಸಕ ಉಪಯೋಗ ಇಲ್ಲ ಎಂದು ಜನ ಹೇಳುತ್ತಾರೆ. ಜನರನ್ನು ಆ ಮಟ್ಟಕ್ಕೆ ನಾವು ತಂದಿದ್ದೇನೆ.

ವಾಟಾಳರು ದಿನಂಪ್ರತಿ ಇಲ್ಲಿ ಶಾಸನ ಸಭೆಯಲ್ಲಿ ಸಕ್ರೀಯವಾಗಿ ಪಾಲ್ಗೊಂಡು ತಮ್ಮ ಕರ್ತವ್ಯವನ್ನು ಪ್ರಬುದ್ಧವಾಗಿ ನೆರವೇರಿಸಿದರೂ ಕೂಡ ಅವರಿಗೆ ಅವರ ಕ್ಷೇತ್ರದಲ್ಲಿ ಏನು ಅಂತಹ ಶಾಭಾಸ್‌ಗಿರಿ ಸಿಗುವುದಿಲ್ಲ. ಯಾರೋ ಒಬ್ಬ ಸಬ್‌ಇನ್ಸ್‌ಪೆಕ್ಟರೋ, ಶಿರಸ್ತೇದಾರೋ, ತಹಸೀಲ್ದಾರ ಟ್ರಾನ್ಸ್‌ಫರ್ ವಿಚಾರದಲ್ಲಿ ಶಾಸಕರ ಶಕ್ತಿಯನ್ನು ಅಳೆಯತಕ್ಕ ಮಟ್ಟಕ್ಕೆ ಇವತ್ತು ನಾವು ಜನರನ್ನು ತಂದಿದ್ದೇವೆ. Mainly, the Executive is responsible for the prevailing situation. ಸನ್ಮಾನ್ಯ ಮುಖ್ಯಮಂತ್ರಿಗಳು ಈ ಕಡೆ ಇದ್ದರು. ಕೆಲವು ಡಿಮ್ಯಾಂಡ್‌ಗಳು ಚರ್ಚೆಗೆ ಬರುತ್ತವೆ. ದಯಮಾಡಿ ಇಂತಹ ವಿಚಾರಗಳನ್ನು, ಮಾಹಿತಿಗಳನ್ನು ಒದಗಿಸಿದರೆ ಚರ್ಚೆಯಲ್ಲಿ ಹೆಚ್ಚು ಸಮರ್ಪಕವಾಗಿ ನಾವು ಭಾಗವಹಿಸುವುದಕ್ಕೆ ಸಾಧ್ಯವಾಗುತ್ತದೆ ಎಂದು ನಾವು ಕೇಳುತ್ತೇವೆ. ದಯಮಾಡಿ ಕಳುಹಿಸಿಕೊಡಿ ಎಂದರೆ, ಸನ್ಮಾನ್ಯ ವೀರಪ್ಪ ಮೊಯ್ಲಿಯವರು ಮುಖ್ಯಮಂತ್ರಿಯಾಗಿದ್ದಾಗ ಕಳುಹಿಸಿಕೊಡುತ್ತಿದ್ದರೂ. ಮಾಹಿತಿ ಕೊಡಲಿಕ್ಕೆ ಏನು ತೊಂದರೆ? ನಾವು ನೋಟೀಸ್ ಕೊಟ್ಟು ಉತ್ತರ ತೆಗೆದುಕೊಳ್ಳುವುದು ಬೇರೆ. ಈಗ ಮಾಹಿತಿ ಕೊಡಬೇಕೆಂಬುದರ ಬಗ್ಗೆ ಮೂರು ರೀತಿ ಇದೆ. ಒಂದು, ಯಾವ ಮಾಹಿತಿ ಕೊಡಬೇಕೆಂದು ಹೇಳಿ ಕೋಡಿಷ್ಟೈ ಮಾಡದೇ ಇದ್ದರೂ ಕೆಲವು ಮಾಹಿತಿಗಳನ್ನು ನೀವು ಕೊಡಲೇಬೇಕು. ಇನ್ನು ಕೆಲವು ಮಾಹಿತಿಗಳ ಬಗ್ಗೆ ನಿಮ್ಮ ಪ್ರಿರಾಗೇಟಿವ್. ಅದು ನೀವು ಬೇಕಾದರೆ ಕೊಡಬಹುದು. ನಿಮಗೆ ಇಷ್ಟವಿಲ್ಲದಿದ್ದರೆ ಬಿಡಬಹುದು. ಇನ್ನು ಕೆಲವು ನಿಮಗೆ

ಕೊಡುವುದಕ್ಕಾಗುವುದಿಲ್ಲ. ಅದು ನನಗೆ ಗೊತ್ತಿದೆ. ಆದರೆ ಒಂದು ಶಿಷ್ಟಾಚಾರ ಎನ್ನುವುದು ಇರುತ್ತದೆ. ಕೊಡಲಿಕ್ಕೆ ಆಗಲಿಲ್ಲ ಎಂದರೆ ಏಕೆ ಕೊಡುವುದಕ್ಕಾಗುವುದಿಲ್ಲ ಎಂದು ಕಾರಣ ನೀಡಿ, ಬೇಸರ ಪಟ್ಟುಕೊಳ್ಳಬೇಡಿ ಎಂದು ಉತ್ತರ ಬರೆಯುವ ಸೌಜನ್ಯ ಇಲ್ಲವೇ? ಒಂದು ದಂಡು ಅಧಿಕಾರಿಗಳನ್ನು ಕೊಟ್ಟಿರುತ್ತಾರೆ ನಿಮಗೆ. ಬಹುಶಃ ಇವತ್ತು ಮಂತ್ರಿಗಳಿಗೆ ನಾಲ್ಕಾರು ಸ್ಟೆನೋ ಕೊಟ್ಟಿರುತ್ತಾರೆ. ನಾವು ಸ್ಟೆನೋ ಇಲ್ಲದೇ ಅಲ್ಲಿ ಇಲ್ಲಿ ಟೈಪು ಮಾಡಿಸಿಕೊಂಡು ಬಂದು ಒಂದು ಪತ್ರ ಕೊಟ್ಟರೆ, ನಮ್ಮ ಪತ್ರಕ್ಕೆ ಉತ್ತರ ಕೊಡುವ ಶಿಷ್ಟಾಚಾರ ಬೇಡವೇ? ಎರಡನೆಯದಾಗಿ ಸದುದ್ದೇಶದ ಅಭಾವ. ಹೋಮ್ ಮಿನಿಸ್ಟರು. ಸನ್ಮಾನ್ಯ ಮುಖ್ಯಮಂತ್ರಿಗಳು ಪ್ರೆಸ್ ಕಾನ್‌ಫರೆನ್ಸ್ ನಡೆಸುತ್ತಾರೆ ಅವರಿಗೆ ನಾನು ಬರೆದಿದ್ದದ್ದನ್ನು ಕಾಪಿ ಮಾಡಿಕೊಂಡು ಏನೊ ಮಾಡಿದರು. ನನಗೆ ಆಶ್ಚರ್ಯವಾಗುತ್ತಿದೆ. ಒಬ್ಬ ಪೋಲೀಸ್ ಅಧಿಕಾರಿ ಒಬ್ಬ ಶಾಸಕನ ಮೇಲೆ ಗೃಹ ಮಂತ್ರಿಗಳಿಗೆ ಒಂದು ದೂರು ಕೊಟ್ಟರೆ, ಅವರು ಅದನ್ನು ಪತ್ರಿಕೆಗೆ ಕೊಡುತ್ತಾರೆಯೇ? It is administrative decency. Where is the propriety?

ಒಂದು ಲೆಕ್ಕಾಚಾರ ಬೇಡವೇ? ಹಾಗಾದರೆ ನಾನೂ ಒಂದು ಕೆಲಸ ಮಾಡಬಹುದು. ನನ್ನನ್ನು ಕಂಡರೆ ನಿಮಗೆ ಆಗುವುದಿಲ್ಲ. ನಿಮಗೆ ಬೇಕಾದ ಒಬ್ಬ ನೌಕರ ಇರುತ್ತಾನೆ ಅವರ ಹತ್ತಿರ ಒಂದು ದೂರು ತರಿಸಿಕೊಳ್ಳುತ್ತೀರಿ. ನಾಳೆ ಅದನ್ನು ನಿಮ್ಮ ಮಂತ್ರಿ ಪತ್ರಿಕೆಗೆ ಕೊಡುತ್ತಾರೆ. ಪತ್ರಿಕೆಯವರು ಅದನ್ನು ಹಾಕುತ್ತಾರೆ. ನಾನೂ ಬೇಕಾದರೆ ನಿಮ್ಮ ಯಾರಾದರೂ ಮಂತ್ರಿಗಳ ಬಗ್ಗೆ ಒಂದು ದೂರು ತೆಗೆದುಕೊಳ್ಳಲಾಗುವುದಿಲ್ಲವೇ? ಅಧಿಕಾರಿಗಳಿಂದ ತೆಗೆದುಕೊಳ್ಳಲಾಗದಿದ್ದರೂ ಖಾಸಗಿಯವರಿಂದ ತೆಗೆದುಕೊಳ್ಳಬಹುದು. ಬ್ಲಾಕ್‌ಮೇಲ್ ಮಾಡಲಿಕ್ಕೆ ನಾನು ಅದನ್ನು ಪಬ್ಲಿಷ್ ಮಾಡಿಕೊಂಡು ಕುಳಿತುಕೊಳ್ಳಲೇನು. ನಾವು ಏನಾದರೂ ಒಂದು ರಿಸ್ಟ್ರಿಕ್ಷನ್ ಹಾಕಿಕೊಳ್ಳಬೇಕಲ್ಲ. ನಮ್ಮ ಸೋಮವಾರಪೇಟೆ. ಪುತ್ತೂರು ಶಾಸಕರು ಏನಾದರೂ ಮಹಾಪರಾಧ ಮಾಡಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೆ. ಬಹುಶಃ ಬೇರೆ ಯಾರಾದರೂ ಹೃದಯವಂತಿಕೆ ಇರತಕ್ಕ ಜನ ಆ ಸ್ಥಾನದಲ್ಲಿ ಕುಳಿತುಕೊಂಡಿದ್ದರೆ, ಅವರು ಅಪರಾಧ ಮಾಡಿದ್ದರೂ ಪತ್ರಿಕೆಗಳಿಗೆ ಹೇಳತಕ್ಕದ್ದನ್ನು ಮಾಡುತ್ತಿರಲಿಲ್ಲ. ಅವರು ಏನೋ ಮಹಾಪರಾಧ ಮಾಡಿದ್ದಾರೆ ಎಂಬಂತೆ ಆ ವಿಚಾರ ಪತ್ರಿಕೆಗೆ ಹೇಳಿದರೆ ಹೇಗೆ? Government should not try to blackmail the MLAs. This, in effect, amounts to blackmailing the Members of the Legislature, for which I am opposed to. ನಾವು ಕೇಳಿದ್ದೆಲ್ಲಾ ನೀವು ನಮಗೆ ಕೊಡಲೇಬೇಕೆಂದು ನಾನು ಹೇಳುವುದಿಲ್ಲ. ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ನನಗೂ ಅನುಭವವಾಗಿದೆ. ಯಾವುದನ್ನು ಕೊಡುವುದಕ್ಕಾಗುತ್ತದೆ. ಯಾವದನ್ನು ಕೊಡುವುದಕ್ಕಾಗುವುದಿಲ್ಲ ಎಂದು. ಈಗ ಅಫೀಷಿಯಲ್ ನೋಟಿಂಗ್ಸ್ ಇರುತ್ತದೆ. ಯಾವುದೋ ಒಂದು ಕೇಸ್‌ನಲ್ಲಿ ಒಂದು ಕಾನ್‌ಫಿಡೆನ್‌ಷಿಯಲ್ ರಿಪೋರ್ಟ್ ಇರುತ್ತದೆ. ಅದನ್ನು ಕೊಡಿ ಎಂದರೆ ಕೊಡುವುದಕ್ಕಾಗುವುದಿಲ್ಲ. ಯಾವುದೇ ಒಂದು ಜನರಲ್ ಎನ್‌ಕ್ವೈರಿ ಆರ್ಡರ್ ಮಾಡುತ್ತೀರಿ. ಅದರ ರಿಪೋರ್ಟ್ ನಾವು ಕೇಳಿದರೆ ನೀವು ಕೊಡಬೇಕಾಗುತ್ತದೆ.

ನಿಮ್ಮ ಆಫೀಸ್‌ನಲ್ಲಿ ಒಂದು ಫೈಲ್‌ನಲ್ಲಿ ನೋಟಿಂಗ್ಸ್ ಎಲ್ಲಾ ಇರುತ್ತವೆ. ಈ ನೋಟಿಂಗ್ಸ್ ಇರುವ ಷೀಟ್‌ಗಳೆಲ್ಲಾ ಕೊಡಿ ಎಂದರೆ ನೀವು ಕೊಡುವುದಕ್ಕಾಗುವುದಿಲ್ಲ. ಈ ಎಲ್ಲಾ ವಿಚಾರಗಳು ನನಗೆ ಗೊತ್ತಿದೆ. ಆದರೆ ಉದ್ದೇಶ ಚೆನ್ನಾಗಿ ಇರಬೇಕು. ನನಗೇನನಿಸುತ್ತದೆ ಎಂದರೆ, ಆ ಕಡೆ ಕುಳಿತಿದ್ದಂತಹ ಮುಖ್ಯಮಂತ್ರಿಗಳು. ಈ ಕಡೆ ಕುಳಿತಿದ್ದಂತಹ ವಿರೋಧ ಪಕ್ಷದವರನ್ನು ವಿರೋಧ ಪಕ್ಷದ ನಾಯಕರನ್ನು ಬಹಳ ಗಂಭೀರವಾಗಿ ಹಿಂದೆ ಪರಿಗಣಿಸುತ್ತಿದ್ದರು.

ವಿರೋಧ ಪಕ್ಷದ ನಾಯಕರನ್ನು ಬಹಳ ಗಂಭೀರವಾಗಿ ಹಿಂದೆ ಪರಿಗಣಿಸುತ್ತಿದ್ದರು. ಶ್ರೀ ಡಿ.ಬಿ. ಚಂದ್ರೇಗೌಡರು, ಶ್ರೀ ದೇಶಪಾಂಡೆಯವರು ಇಲ್ಲಿದ್ದರು. ಅವರು 40

ಜನ ಇರಲಿ. 23 ಇರಲಿ. ಮೊಯ್ಲಿಯವರು ಅವರನ್ನು ಯಾವ ರೀತಿ ನಡೆಸಿಕೊಂಡರು. ಅವರು ಹೇಳಿದರೆ ಎಷ್ಟು ತೂಕವಾಗಿ ಗಂಭೀರವಾಗಿ ನಡೆದುಕೊಳ್ಳುತ್ತಿದ್ದರು. ಇದು ಒಂದು ಶಿಷ್ಟಾಚಾರ. ಕೆಲವು ಏನಾಗುತ್ತದೆ ಎಂದರೆ ನೀವು ಗಂಭೀರವಾಗಿ ನಡೆದುಕೊಳ್ಳುವುದಿಲ್ಲ. ಸರಿ ಅದು ನಿಮ್ಮ ಇರಾದೆ. ಸರ್ಕಾರದ ಮುಲಾಜಿನಲ್ಲಿ ವಿರೋಧ ಪಕ್ಷದವರೆಲ್ಲಾ ಇರಬೇಕೆಂದು ನೀವು ಆಸೆ ಪಟ್ಟರೆ ಕಷ್ಟವಾಗುತ್ತದೆ. ನೀವು ಹೇಗೆ ಸಭೆಯನ್ನು ನಡೆಸುತ್ತೀರಿ. ನಾವು ಎಲ್ಲಾ ಒಗ್ಗಟ್ಟಾಗುತ್ತೇವೆ. ಅದು ಮುಯ್ಯಿಗೆ ಮುಯ್ಯಿ ಆಗುತ್ತದೆ. ನೀವು ಯಾವಾಗ ನಮಗೆ ಗೌರವ ಕೊಡುವುದಿಲ್ಲವೋ ನಾವು ನಿಮಗೆ ಗೌರವ ಕೊಡುವುದಿಲ್ಲ. ಆಗ ನಾವು ಎಲ್ಲಿಗೆ ತಲುಪುತ್ತೇವೆ. Then it will amount to washing our dirty linen in public. ಅದಕ್ಕೆ ಅವಕಾಶವಾಗುವುದು ಬೇಡ. ಕೆಲವು ಶಿಷ್ಟಾಚಾರ ಹಾಕಿಕೊಳ್ಳೋಣ.

MR. SPEAKER ; You are basically agreeing to wash in public linen o both of you. (laughter)

ಶ್ರೀ ಹೆಚ್.ಎನ್. ನಂಜೇಗೌಡ : ಈಗ ಶಾಸಕರ ಸ್ಥಾನಮಾನ ಎಂತಹದ್ದು. ಕೆಲವರು ಈ ಕಡೆ ಕುಳಿತರಬಹುದು. ನಾಳೆ ಅವರೇ ಅಧಿಕಾರಕ್ಕೆ ಬರಬಹುದು. ಚಿಕ್ಕ ವಯಸ್ಸಿನಿಂದ ಕೆಂಗಲ್ ಹನುಮಂತಯ್ಯನವರು ಮತ್ತು ಶ್ರೀ ಹೆಚ್.ಎಂ. ಚನ್ನಬಸಪ್ಪನವರ ಜೊತೆಯಲ್ಲಿ ಬೆಳೆದವನು ನಾನು. ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಬಹುಶಃ ಇದು ಗೊತ್ತಿದೆ. ನಾನು ಎಂ.ಎಲ್.ಎ. ಆಗಿದ್ದಾಗ ಒಬ್ಬರು ಜಿಲ್ಲಾಧಿಕಾರಿಗಳಿದ್ದವು. ನಾನು ಅವರನ್ನು 'ಸಾರ್' ಎಂದು ಮಾತನಾಡಿಸುತ್ತಿರಲಿಲ್ಲ. ನಾನು ಯಾವ ಅಧಿಕಾರಿಗಳನ್ನೂ 'ಸಾರ್' ಎಂದು ಮಾತನಾಡಿಸುತ್ತಿರಲಿಲ್ಲ. ನಮಗೆ ಪಾಠ ಹೇಳಿಕೊಟ್ಟವರು ಆ ರೀತಿ ನಮಗೆ ಕೇಳಿ ಕೊಟ್ಟಿದ್ದರು.

ಅಂದರೆ ಅವರನ್ನು ಬಯ್ಯಿರಿ ಎಂದಲ್ಲ. ಇದರ ಬಗ್ಗೆ ಒಬ್ಬ ಐ.ಎ.ಎಸ್. ಅಧಿಕಾರಿ ಕಾಮೆಂಟ್ ಮಾಡಿದರು. ವಿರೋಧ ಪಕ್ಷದ ನಾಯಕರಾಗಿ. ಆಗ ಶಿವಪ್ಪನವರು ಇದ್ದರು. ಎಂತಹ ಎಂತಹವರೋ ನಮ್ಮನ್ನು 'ಸಾರ್' ಎನ್ನುತ್ತಾರೆ. ಈ ನಂಜೇಗೌಡ ಎನ್ನುವುದಿಲ್ಲವಲ್ಲ ಎಂದು ಐ.ಎ.ಎಸ್. ಅಧಿಕಾರಿ ಕಾಮೆಂಟ್ ಮಾಡಿದರು. ನಾನು ಹೇಳುತ್ತಿರುವುದು 1967-68 ರಲ್ಲಿ. ನಾನು ಚಿಕ್ಕವನು ಆಗಿದ್ದೆ. ನಮ್ಮ ಹೆಸರನ್ನು ಹಿಡಿದು ಕರೆಯುತ್ತಾರಲ್ಲ ಎಂದು ಹೇಳುತ್ತಿದ್ದರು. ಅಧಿಕಾರಿಗಳಿಗೆ ಹೆಸರು ಹಿಡಿದು ಕರೆಯುವುದೇ ಅಪರಾಧ ನಾನು ಅವರನ್ನು ಒಂದು ಟೀ ಪಾರ್ಟಿಗೆ ಕರೆಯಿಸಿ ಹೇಳಿದೆ. ನೋಡಿಯಪ್ಪ ಈಗ ನಾನು ನಿಮ್ಮನ್ನು 'ಸ್ವಾಮಿ', 'ಸಾರ್' ಎಂದು ಕೊಂಡು ತಿರುಗಿದರೆ ನಾಳೆ ಹೇಗೆ ನಾನು ನಿಮ್ಮ ಹತ್ತಿರ ಡಿಸಿಪ್ಲೀನ್ ಕಮ್ಯಾಂಡ್ ಮಾಡುವುದು? ಅದು ಆಗುವುದಿಲ್ಲ, ಸಾಧ್ಯವಿಲ್ಲ ಎಂದೆ. Tomorrow if I become a Minister you have to work under me. Don't team of these things. Fortunately for me, unffortunately for him, I become a Minister and he was to work under me. That also hgappened. ನಾನು ಈ ಮಾತನ್ನು ಏಕೆ ಹೇಳುತ್ತಿದ್ದೇನೆ ಎಂದರೆ ಅಧಿಕಾರಿಗಳನ್ನು ಶಾಸಕರ ತಲೆ ಮೇಲೆ ಕೂರಿಸತಕ್ಕಂಥ ವ್ಯವಹಾರ ಮಾತ್ರ ದಯಮಾಡಿ ತಾವು ಮಾಡಬೇಡಿ. Otherwise, you will only be helping to collapse the system; that is not the system our forefathers while enunciating our Constitution dreamt. ಚುನಾಯಿತ ಪ್ರತಿನಿಧಿಗಳ ಮೇಲೆ ಒಬ್ಬ ಅಧಿಕಾರಿ ದೂರು ಕೊಟ್ಟರೆ ಅದನ್ನು ಎಂಟರ್‌ಟೈನ್ ಮಾಡಬೇಡಿ. ಒಬ್ಬ ಎಸ್.ಪಿ. ದೂರು ಕೊಟ್ಟಕ್ಷಣ ಅದು ಹೇಗೆ ನಿಮ್ಮ ಗೃಹ ಮಂತ್ರಿ ನಂಬಿದ್ದರು ಎಂದು ನನಗೆ ಆಶ್ಚರ್ಯವಾಗುತ್ತಿದೆ. Without verifying, without verifying your own colleague, you were to the

press. you are a Minister but you are originally an MLA.

ದೂರು ಸುಳ್ಳೋ, ನಿಜವ್ವೋ ಎಂದು ಪರಿಶೀಲಿಸುವ ಸೌಜನ್ಯ ಬೇಡವೇ. ಯಾರೋ ಸುಮ್ಮನೆ ಒಬ್ಬ ಅಧಿಕಾರಿ ದೂರು ಬರೆದರೆ ನಂಬಿ ಬಿಡುವುದೇ ನೀವು. ಪೋಲೀಸರು ಏನಾದರೂ ಮಂತ್ರಿಗಳಿಗೆ ಹೇಳಬೇಕಾದರೆ ಅವರು ತಪ್ಪನ್ನೇ ಹೇಳುವುದು. ತಾವು ಉಳಿದುಕೊಳ್ಳಬೇಕಲ್ಲ. ಒಬ್ಬ ಹರಿಜನರ ಕಾಲು ಕತ್ತರಿಸಿ ಹಾಕಿದರೆ ನೀವು ಕೇಸ್ ಬುಕ್ ಮಾಡಬೇಡಿ. ಪತ್ರಿಕೆಯವರು ಎವಿಡಿನ್ಸ್ ಕೊಟ್ಟು, ದೂರು ಕೊಟ್ಟು ಇಂತಹ ಅನಾಚಾರ ನಡೆಯುತ್ತಿದೆ ಎಂದು ಹೇಳಿದರೆ ವಿಚಾರಣೆ ಮಾಡುವುದಿಲ್ಲ ನಿಮ್ಮ ಪೋಲೀಸರು ಶಾಸಕರು ಸುಮ್ಮನಿರಬೇಕು. What is the impact of his presence as Member of Legislative Assembly?

ಕಣ್ಣು ಮುಚ್ಚಿಕೊಂಡು ಕುಳಿತಿರುವುದಾದರೆ ಶಾಸಕರು ಏಕೆ ಇರಬೇಕು ನಾವು ಏನು ಕೇಳುವ ಹಾಗಿಲ್ಲವೇ. ಸನ್ಮಾನ್ಯ ಶ್ರೀ ದೇವೇಗೌಡರೂ ವಿರೋಧ ಪಕ್ಷದಲ್ಲಿದ್ದರು. ಎಷ್ಟು ವಿಚಾರಗಳನ್ನು ಅವರು ಆಗ ಪ್ರಸ್ತಾಪ ಮಾಡಲಿಲ್ಲ.

ಯಾವ ಅಧಿಕಾರಿಗಳನ್ನು ಅವರು ಗದರಿಸಿಲ್ಲ. ಅವರಿಗೆ ಬುದ್ಧಿವಂತಿಕೆ ಇರಬಹುದು. ಅವರು ಬರೆದು ಕೊಡದೇ ಇರಬಹುದು. ಈಗ ಜೆ.ಹೆಚ್. ಪಟೇಲರೂ ಮತ್ತು ನಾವು ಸ್ವಲ್ಪ ಫ್ರಾಂಕಾಗಿ ಇರುತ್ತೇವೆ. ಯಾರಿಗಾದರೂ ಟ್ರಾನ್ಸ್‌ಫರ್ ಮಾಡಬೇಕಾದರೆ ಇಂತಹವರನ್ನು ಟ್ರಾನ್ಸ್‌ಫರ್ ಮಾಡಿ ಎಂದು ಬರೆದು ಕೊಡುತ್ತೇವೆ. ಅವರು ಹಾಗೆ ಮಾಡದೇ ಇರಬಹುದು. ಸುಮ್ಮನೆ ಟೈಪು ಮಾಡಿಸಿ ಕೊಟ್ಟು, ಮಾಡಿ ಎಂದು ಹೇಳಿರಬಹುದು. ಎವಿಡೆನ್ಸ್ ಏನೂ ಇಲ್ಲದಿರುವ ಹಾಗೆ ಕೆಲಸ ಮಾಡಿಸಿಕೊಂಡಿರಬಹುದು.

ಶ್ರೀ ಜೆ.ಹೆಚ್. ಪಟೇಲ್: ನಿಮ್ಮನ್ನು ಏನೂ ಹೇಳಲಿಕ್ಕೆ ಬಿಡುವುದಿಲ್ಲ ಎನ್ನುತ್ತೀರಿ. ಏನು ಹೇಳಲಿಕ್ಕೆ ಬಿಟ್ಟಿಲ್ಲ ನಿಮಗೆ ಎಂದು ನಾನು ಕೇಳುತ್ತಿದ್ದೇನೆ. ಹೇಳಬಾರದ್ದೆಲ್ಲಾ ಹೇಳಿದ್ದೀರಿ. ನಾವು ಕೇಳಿಕೊಂಡು ಕುಳಿತಿದ್ದೇವೆ.

5.10 ಪಿ.ಎಂ.

ಶ್ರೀ ಹೆಚ್.ಎನ್. ನಂಜೇಗೌಡ : ಶಾಸಕರು ಎಂದರೆ ಲಾ ಮೇಕರ್ಸ್. ಈಗ ನಮ್ಮಲ್ಲಿ ಅವರನ್ನು ಹಂತ ಹಂತವಾಗಿ ತಳ ಮಟ್ಟಕ್ಕೆ ತರತಕ್ಕಂಥ ಪ್ರಯತ್ನ ನಡೆಯುತ್ತಿದೆ. ಇಲ್ಲಿಂದಲ್ಲ ಈ ಮೊನ್ನೆ ಮೊನ್ನೆ ಹೋದ ಸಾರಿ ಪ್ರಧಾನ ಮಂತ್ರಿಗಳು ಒಂದು ಕೋಟಿ ರೂಪಾಯಿಯನ್ನು ಮಂಜೂರು ಮಾಡತಕ್ಕಂಥ ಹಕ್ಕನ್ನು ಒಬ್ಬ ಎಂ.ಪಿ.ಗೆ ಕೊಟ್ಟು ಬಿಡತಕ್ಕಂಥದ್ದು ಏಕೆ? ಅಧಿಕಾರದಲ್ಲಿದ್ದಂತಹ ಮುಖ್ಯಮಂತ್ರಿಯವರು, ಪ್ರಧಾನ ಮಂತ್ರಿಯವರು ತನ್ನ ಸೀಟು ಭದ್ರ ಮಾಡಿಕೊಳ್ಳಬೇಕು, ಏನೇ ಆದರೂ ಸೀಟು ಬಿಡಬಾರದು. ಒಂದನ್ನು ನಾವು ಮರೆತು ಬಿಟ್ಟಿದ್ದೇವೆ. Just because we have come to this House, we are not the best in the society. There may be better people. Only we are lucky, that is why we are here. ಇದನ್ನು ನಾವು ಮರೆತೇ ಬಿಟ್ಟಿದ್ದೇವೆ. ಪ್ರಧಾನ ಮಂತ್ರಿಯವರು ತಮ್ಮ ಸೀಟನ್ನು ಉಳಿಸಿಕೊಳ್ಳಲು ಒಬ್ಬ ಎಂ.ಪಿ.ಗೆ ಒಂದು ಕೋಟಿ ರೂಪಾಯಿಯನ್ನು ಕೊಟ್ಟು ಅವರು ಎಕ್ಸಿಕ್ಯೂಟಿವ್ ಇಂಜಿನಿಯರ್‌ಗೆ ಕೊಟ್ಟು ಕೆಲಸ ಮಾಡಿಸಬೇಕು ಎಂದು ಹೇಳುತ್ತಾರೆ. ಈ ರೀತಿ ಮಂಜೂರು ಮಾಡುತ್ತಾರೆ. ಅವರುಗಳಿಗೆ ವರ್ಷಕ್ಕೆ ಒಂದು ಕೋಟಿ ರೂಪಾಯಿ ಕೊಟ್ಟರೆ, ಮತ್ತೆ ಈ ಅಧಿಕಾರಿಗಳು ಏತಕ್ಕೆ ಬೇಕು? Is that the system we have evolved?

ನಾನು ಸನ್ಮಾನ್ಯ ಜೆ.ಹೆಚ್. ಪಟೇಲರಿಗೆ ಕೇಳುತ್ತೇನೆ. ಇದು ಅವರಿಗೆ ಗೊತ್ತಿದೆ. ನಮ್ಮ ಎಂ.ಪಿ.ಗಳು ಒಂದು ಕೋಟಿ ರೂಪಾಯಿ ತೆಗೆದುಕೊಂಡು ಅಲ್ಲಿ ಕೆಲಸ ಮಂಜೂರು ಮಾಡಿ, ಇಲ್ಲಿ ಕೆಲಸ ಮಂಜೂರು ಮಾಡಿ ಎಂದು ಹೇಳುವುದು. ಎಲ್ಲಾ ಓಟಿನ ರಾಜಕಾರಣ. ಆದರೆ ಸ್ವಲ್ಪ ನೀತಿ ರಾಜಕಾರಣವೂ ಬೇಕಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಇದು ಪಾರ್ಲಿಮೆಂಟ್ ಸದಸ್ಯರಿಗೆ ಒಂದು ಕೋಟಿ ರೂಪಾಯಿ ಕೊಟ್ಟಿದ್ದು, ಒಂದು ಕೋಟಿ ರೂಪಾಯಿದಷ್ಟು ಕೆಲಸ ಅವರು ಪ್ರಪೋಸ್ ಮಾಡಬೇಕು. ಅವರ ಕೈಯಲ್ಲಿ ಕೊಡುವುದಿಲ್ಲ. ಡಿ.ಸಿ.ಯವರ ಮುಖಾಂತರ ಅವರು ಒಂದು ಕೋಟಿ ರೂಪಾಯಿಯ ಕೆಲಸವನ್ನು ಅವರ ಮತ ಕ್ಷೇತ್ರದಲ್ಲಿ ಪ್ರಪೋಸ್ ಮಾಡಬಹುದು. ಯಾವ ರೀತಿಯಾಗಿ ಮಲೆನಾಡು ಡೆವಲಪ್‌ಮೆಂಟ್ ಮಂಡಳಿಯಲ್ಲಿ ನೀವು ಶಾಸಕರು ಮಾಡುತ್ತೀರೋ ಹಾಗೂ ಹೆಚ್.ಕೆ.ಡಿ.ನಲ್ಲಿ ಶಾಸಕರು ಮಾಡುತ್ತೀರೋ, ಆಶ್ರಯ ಕಮಿಟಿಯಲ್ಲಿ ನೀವು ಬೆನಿಫಿಶಿಯರೀಸ್‌ಗೆ ಐಡೆಂಟಿಫೈ ಮಾಡುತ್ತೀರಿ, ಅದೇ ರೀತಿಯಾಗಿ ಅವರು ಕೂಡ ಅವರ ಮತಕ್ಷೇತ್ರದಲ್ಲಿ ಯಾವ ಯಾವ ಕೆಲಸ ತೆಗೆದುಕೊಳ್ಳಬೇಕು ಎಂದು ಪ್ರಪೋಸ್ ಮಾಡುವುದಕ್ಕೆ ಕೊಟ್ಟಿದ್ದಾರೆ. ಅವರು ಕೆಲಸವನ್ನು ಐಡೆಂಟಿಫೈ ಮಾಡುತ್ತಾರೆ ಹೊರತಾಗಿ ಬೇರೆ ಏನೂ ಕೂಡ ನೇರವಾಗಿ ಎಕ್ಸಿಕ್ಯೂಟಿವ್ ಇಂಜಿನಿಯರ್ ಥ್ರೂ ಅಥವಾ ಡಿಸಿಯವರ ಥ್ರೂನೇ ಆಗತಕ್ಕಂಥದ್ದು ಅವರ ಇಂಟರ್‌ಫೀಯರ್‌ನ್ಸ್ ಇದೆ. ಮತ್ತು ಇರ್ರೆಸಪೆಕ್ಟೀವ್ ಆಫ್ ಪಾರ್ಟಿ ಕೂಡ, ರಾಜ್ಯ ಸಭಾ ಸದಸ್ಯರಿಗೂ ಕೂಡ ಇದೆ, ಲೋಕಸಭಾ ಸದಸ್ಯರಿಗೂ ಕೂಡ ಇದೆ, ಮತ್ತು ಅಲ್ಲಿ ನಿಮಗೆ ಗೊತ್ತಿದ್ದ ಹಾಗೆ ಪಾರ್ಲಿಮೆಂಟ್‌ನಲ್ಲಿ ಸದಸ್ಯರ ಸಂಖ್ಯೆ ಈಕ್ವಲ್ ಇದೆ. ಇದು ಎಲ್ಲರಿಗೂ ಅನುಕೂಲವಾಗುತ್ತದೆ.

ಶ್ರೀ ಹೆಚ್.ಎನ್. ನಂಜೇಗೌಡ : ಇದು ಅವರ ಕೈಗೆ ಕೊಡುತ್ತಾರೆ ಎಂದು ತಿಳಿದುಕೊಳ್ಳುವಷ್ಟು ದಡ್ಡ ಅಲ್ಲ ನಾನು. ವರ್ಕ್ ಪ್ರಪೋಸ ಮಾಡುತ್ತಾರೆಂದೇ ನಾನು ಹೇಳಿದ್ದುದು.

ಅಧ್ಯಕ್ಷರು : ಅವರ ಕರ್ತವ್ಯವನ್ನು ಅವರು ಮಾಡಬೇಕಾಗುತ್ತದೆ.

ಶ್ರೀ ಹೆಚ್.ಎನ್. ನಂಜೇಗೌಡ : ನಾನು ಟೀಕೆಯನ್ನೂ ಮಾಡಲಿಲ್ಲ. The system that we have evolved...

ಅಧ್ಯಕ್ಷರು : ಖರ್ಗೆಯವರು ಕಾಂಗ್ರೆಸ್ ಪಕ್ಷದ ನಾಯಕರಾಗಿ ಇದ್ದುಕೊಂಡು ನಿಮ್ಮ ಪಕ್ಕದಲ್ಲಿ ಕುಳಿತುಕೊಂಡು ನೀವು ವ್ಯಾಖ್ಯಾನ ಮಾಡಿದಾಗ ಕೂಡ ಅವರು ಹೇಳದೇ ಹೋದರೆ ತಪ್ಪಾಗುತ್ತದೆ. ಅದಕ್ಕೋಸ್ಕರ ಅವರು ಹೇಳಿದರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಆ ಕನ್ಸೇಶನ್ ತಮಗೂ ಕೊಟ್ಟಿದ್ದೇವೆ ನಮ್ಮ ಸರ್ಕಾರದಲ್ಲಿ. ಎಲ್ಲಾ ಶಾಸಕರಿಗೂ ಆ ಸವಲತ್ತನ್ನು ನಾವು ಕೊಟ್ಟಿದ್ದೇವೆ.

ಶ್ರೀ ಹೆಚ್.ಎನ್. ನಂಜೇಗೌಡ : ಎಲ್ಲಾ ಸೇರಿ ಅನಾಹುತ ಮಾಡಿದಿರೆಂದು ಅವರು ಹೇಳುತ್ತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅನಾಹುತ ಮಾಡಿದ್ದೇವೆಂದು ಹೇಳುತ್ತಿದ್ದಾರೆ. ಮತ್ತೇನು ಆಶ್ರಯ ಕಮಿಟಿ ಚೇರಮನ್ ಮಾಡಿ, ಲ್ಯಾಂಡ್‌ಗ್ರ್ಯಾಂಟ್ಸ್ ಕಮಿಟಿ ಚೇರ್‌ಮನ್ ಮಾಡಿ ಪ್ರಪೋಸ್ ಮಾಡುವುದಕ್ಕೆ ಕೊಡಿ ಎಂದು ನೀವು ಕೇಳುತ್ತಿಲ್ಲವೇ? ಇದನ್ನು ನೀವು ಕೇಳಬೇಡಿ. ನಿಮಗೆ ಅನುಕೂಲ ಇದ್ದಾಗ ಒಂದು ರೀತಿ ಅನಾನುಕೂಲ ಇದ್ದಾಗ ಒಂದು ರೀತಿಯಲ್ಲಿ ಹೇಳಲಿಕ್ಕೆ ಹೋಗಬೇಡಿ. ಜೊತೆಯಲ್ಲಿ ನಡೆಯಿರಿ ಇಲ್ಲದಿದ್ದರೆ ಸುಮ್ಮನೆ ಕುಳಿತುಕೊಳ್ಳಿ.

ಶ್ರೀ ಹೆಚ್.ಎನ್. ನಂಜೇಗೌಡ : ನಮಗೆ ಎಷ್ಟು ಮರಳು ಮಾಡಿಬಿಟ್ಟಿದ್ದಾರೆ ಎಂದರೆ ಈಗ ಇರುವ ಸಿಸ್ಟಮ್‌ನಲ್ಲಿ ಶಾಸಕರಿಗೆ ಏನೂ ಕೆಲಸವೇ ಇಲ್ಲ; ಇದೊಂದೇ ಕೆಲಸ ಎನ್ನುವ ಮಟ್ಟಕ್ಕೆ ತಂದಿದ್ದಾರೆ. ನಾವು ಕಮಿಟಿ ಚೇರ್‌ಮನ್ ಆಗಬೇಕು. ಶಾಸನ ಮಾಡತಕ್ಕ ಕೆಲಸ ನಾವು ಏನೂ ಮಾಡದೇ ಇದ್ದರೂ ಪರ್ವಾಗಿಲ್ಲ, ಅಧಿಕಾರಿಗಳನ್ನು ಇಟ್ಟುಕೊಂಡು ಕೇಳಿದವರಿಗೆ ಸ್ವಲ್ಪ ಕೆಲಸ ಮಾಡಿಕೊಂಡು ಹೋಗುವುದು. ಇದು ಇಷ್ಟೇ ಆಗುತ್ತಿರುವುದು. ನಾನು ಇಷ್ಟನ್ನು ಮಾತ್ರ ಹೇಳುತ್ತೇನೆ. ಹೆಚ್ಚಿಗೆ ಹೇಳುವುದಿಲ್ಲ. ಈ ಸಂದರ್ಭದಲ್ಲಿ ಸನ್ಮಾನ್ಯ ಅಧ್ಯಕ್ಷರೇ, ಒಂದು ನನ್ನ ಅನಿಸಿಕೆ. ವಿರೋಧಪಕ್ಷದವರು ಸ್ವಲ್ಪ ಗಂಭೀರವಾಗಿ ಎಫೆಕ್ಟೀವಾಗಿ ಕೆಲಸ ಮಾಡಬೇಕಾಗುತ್ತದೆ. ಇದು ಒಂದು ರೀತಿ ಆಗುತ್ತದೆ. We cannot become Her Majesty's Opposition. ಅದು ಹಾಗೆ ಆಗುವುದಿಲ್ಲ, ನೀವು ಹಾಗೆ ನಿರೀಕ್ಷೆ ಮಾಡಲೂಬಾರದು. ನಿಮ್ಮ ಇರಾದೆ ಮೇಲೆ ನಾವು ಕೆಲಸ ಮಾಡಬೇಕಾದರೆ ಅದು ವಿರೋಧಪಕ್ಷದಿಂದ ಆಗುವುದಿಲ್ಲ. ನಾನು ದಯಮಾಡಿ ತಮ್ಮಲ್ಲಿ ಒಂದು ವಿನಂತಿ ಮಾಡಿಕೊಳ್ಳುತ್ತೇನೆ. ಇದು ಯಾವಾಗಲೂ ಆಗಿಲ್ಲ. ಯಾವ ಮಾಹಿತಿ ಸರ್ಕಾರ ಕೊಡಬೇಕು, ಯಾವುದನ್ನು ಕೊಡಬಾರದು, ಶಾಸಕರ ಸ್ಥಾನಮಾನ ಏನು, ಸರ್ಕಾರಕ್ಕೆ ಇರತಕ್ಕಂಥ ಇತಿಮಿತಿ ಏನು; ಒಬ್ಬ ಮಂತ್ರಿ ಶಿಷ್ಟಾಚಾರ ಎಲ್ಲೆ ಮೀರಿ ವರ್ತಿಸಿದರೆ ಏನು ಮಾಡಬೇಕು ಎಂಬುದು ಗೊತ್ತಾಗಬೇಕು. ಈಗ ನಮ್ಮ ಎಂ.ಎಲ್.ಎ. ಕಾಗದ ಬರೆದದ್ದನ್ನು ಪ್ರೆಸ್‌ಗೆ ರಿಲೀಸ್ ಮಾಡಲಿಲ್ಲವೇ? ಅಲ್ಲಿ ಎಂ.ಎಲ್.ಎ. ಕಾಗದ ಬರೆದದ್ದನ್ನು ಪ್ರೆಸ್‌ಗೆ ರಿಲೀಸ್ ಮಾಡಲಿಲ್ಲವೇ? ಅಲ್ಲಿ ಎಂ.ಎಲ್.ಎ. ಮೇಲೆ ಎಸ್.ಪಿ. ದೂರು ಬರೆದರೆ ಗೃಹ ಮಂತ್ರಿಗಳು ಅದನ್ನು ಪ್ರೆಸ್‌ಗೆ ರಿಲೀಸ್ ಮಾಡಿದರು. ಇದಕ್ಕೆ ನಾವು ಏನಾದರೊಂದು ಮಾಡಬೇಕಾಗುತ್ತದೆ. Codification of some details; which are obligatory on the part of the Government to provide information and which are not.

ಇದಕ್ಕಾಗಿ ಏನು ಮಾಹಿತಿ ಕೊಡಬೇಕು, ಏನು ಕೊಡಬಾರದು, ಕೆಲವು ನಾವು ಕೇಳುವುದಕ್ಕೆ ಆಗದೇ ಇರುವಂಥದ್ದು ಯಾವುದು, ಇದನ್ನೆಲ್ಲಾ ವರ್ಕ್‌ಔಟ್ ಮಾಡಿ ಸರ್ಕಾರದ ಇತಿಮಿತಿ ಏನು? ಇದನ್ನು ವರ್ಕ್‌ಔಟ್ ಮಾಡಿ ಒಂದು ಗೈಡ್‌ಲೈನ್ಸ್ ಹಾಕುವುದಕ್ಕೆ ತಾವು ದಯಮಾಡಿ ಸದನದ ಸಮಿತಿ ಮಾಡುತ್ತೀರಾ? ಯಾವ ರೀತಿ ಮಾಡುತ್ತೀರಾ? ಅಥವಾ ಹೊರಗಡೆ ಇದ್ದಂಥ ಅಡ್‌ಮಿನಿಸ್ಟ್ರೇಟಿವ್ ಸೇರಿಸಿಕೊಂಡು ಏನಾದರೂ ಮಾಡುವುದು ಸೂಕ್ತ. ಇಲ್ಲದಿದ್ದರೆ ಸರ್ಕಾರದವರು ಕೊಡುವುದಿಲ್ಲ ಎನ್ನುವುದು ನಾವು ಬೇಕು ಎನ್ನುವುದು ಆಗುತ್ತದೆ. This far, no further ಎಂದಾದರೂ ಆಗಬೇಕಲ್ಲ. ಆದರೆ ಇಲ್ಲಿಯವರೆಗೆ ಆಗಿರತಕ್ಕಂಥದ್ದು ನಾವೆಲ್ಲಾ ವಿಷಾದ ಪಡತಕ್ಕಂಥದ್ದು. ಸನ್ಮಾನ್ಯ ಮುಖ್ಯಮಂತ್ರಿಗಳು ಮಾಡತಕ್ಕಂಥಾದ್ದು.

ಏಕೆಂದರೆ ನಾನು ಪದೇ ಪದೇ ಹೇಳುತ್ತಿರುತ್ತೇನೆ. ಸನ್ಮಾನ್ಯ ಮುಖ್ಯಮಂತ್ರಿಗಳ ಧ್ವನಿ ಇತ್ತೀಚೆಗೆ ಬದಲಾವಣೆಯಾಗಿದೆ. ಒರಟು ಭಾಷೆಯಲ್ಲಿ ಹೇಳುವುದಾದರೆ ಈ ಉಡಾಫೆ ವ್ಯವಹಾರ; ನಾವು ಮಾಡುವುದು ಮಾಡಿಕೊಂಡು ಹೋಗುತ್ತೇವೆ ನೀವು ಏನು ಮಾಡತ್ತೀರಿ ಎನ್ನುವ ರೀತಿಯಲ್ಲಿ. ಸನ್ಮಾನ್ಯ ದಿವಂಗತ ಕೆ.ಹೆಚ್. ಪಾಟೀಲರು ಒಂದು ಗಾದೆಯನ್ನು ಹೇಳುತ್ತಿದ್ದರು. ನನಗೆ ಏನಾದರೂ ಬುದ್ಧಿ ಹೇಳಬೇಕಾದರೆ ಅವರು ನೇರವಾಗಿ ಹೇಳುತ್ತಿರಲಿಲ್ಲ. ಗೌಡರೇ, ನಮ್ಮ ಊರಿನಲ್ಲಿ ಒಬ್ಬ ಧರ್ಮಪ್ಪ ಎಂಬುವನು ಇದ್ದ, ಅವನಿಗೊಬ್ಬ ಮಗ ಇದ್ದ ಅದಕ್ಕೆ ನಾನು ಏನು ಸಾರ್ ಎಂದೆ, ಏನಿಲ್ಲಾ ಪಕ್ಕದರ ಊರಿನಲ್ಲಿ ಜಾತ್ರೆಯಾಗುತ್ತಿದೆ ಎಂದು ಹೇಳಿದ ಅದಕ್ಕೆ ಏನಪ್ಪಾ ಅಂದರೆ, ನೀನು ಹೋಗು ಎಂದರೂ ಜಾತ್ರೆಗೆ ಹೋಗುತ್ತೇನೆ, ಬೇಡ ಎಂದರೂ ಜಾತ್ರೆಗೆ ಹೋಗುತ್ತೇನೆ, ಹೋದಲೋ ಬೇಡವೋ ಹೇಳು ಎಂದ. ಆ

ಲೆಕ್ಕವಾದರೆ ಬಹಳ ಕಷ್ಟವಾಗುತ್ತದೆ. ಆ ರೀತಿ ಆಗಬಾರದು. ಸ್ವಲ್ಪ ದಯಮಾಡಿ ಇದರ ಬಗ್ಗೆ ಗಮನಕೊಡಿ. ಇದು ರಾಜ್ಯದ ವ್ಯವಹಾರ ಸರ್ವರ [illegible], ಇದರಲ್ಲಿ ಚುನಾಯಿತ ಪ್ರತಿನಿಧಿಗಳಿಗೆ ಎಲ್ಲರಿಗೂ ಸಮಾನವಾದಂಥ ಅವಕಾಶ ಇದೆ; ಅರ್ಥ ಮಾಡಿಕೊಳ್ಳುವುದಕ್ಕೆ. ಏನಾದರೂ ಅನಾಹುತಗಳಾದರೆ ತಪ್ಪಿಸಲು ಅವಕಾಶಬೇಕು. ಆ ದೃಷ್ಟಿ ಇಟ್ಟುಕೊಂಡು ತಾವು ವ್ಯವಹರಿಸಬೇಕು ಎನ್ನುವುದನ್ನು ನಾನು ವಿನಂತಿಸಿಕೊಳ್ಳುತ್ತೇನೆ. ಸನ್ಮಾನ್ಯ ಜೆ.ಹೆಚ್. ಪಟೇಲರಿಗೂ ಗೊತ್ತಿದೆ. [illegible] ಡಿಸೆಂಬರ್ 13, 1973ರಲ್ಲಿ ನನ್ನನ್ನು ಮಂತ್ರಿಮಂಡಲದಿಂದ ಡ್ರಾಪ್ ಮಾಡಿದರು ಸಾಯಂಕಾಲ 6.30 ಗಂಟೆಗೆ. 14ನೇ ತಾರೀಖು ಬೆಳಿಗ್ಗೆ 8.00 ಗಂಟೆಗೆ ನಾನು ಮನೆ ಖಾಲಿ ಮಾಡಿದೆ. ನಾನು ಒಬ್ಬ ತಲೆ ಕೆಟ್ಟವನು ಎಂದು ಅಂದರು ಎಂದು ಇಟ್ಟುಕೊಳ್ಳಿ. ಯಾವುದು ಉಳಿದುಕೊಂಡಿಲ್ಲ ಇವೊತ್ತು. ಇವೊತ್ತು ಯಾವುದಾದರೂ ಕರೆಕ್ಟಾಗಿ ಮಾಡಿದರೆ ಅವನು ಅಯೋಗ್ಯ ಎನಿಸಿಕೊಳ್ಳುತ್ತಾನೆ. ಆ ಪರಿಸ್ಥಿತಿ ತಲುಪಿದ್ದೇವೆ. ಮುಂದೆ ಅಂತಹದ್ದನ್ನೇ ನಾವು ಬೆಳೆಸಿಕೊಂಡು ಹೋಗುವುದು ಬೇಡ. ಸ್ವಲ್ಪ ಒಳ್ಳೆಯ ಶಿಷ್ಟಾಚಾರಗಳನ್ನು ಹಾಕಿಕೊಂಡು ಹೋಗುವಂಥ ಕಾರ್ಯಕ್ರಮಗಳನ್ನು ನಾವು ಮಾಡೋಣ ಎಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ನಾನು ಒಂದು ಹಳ್ಳಿಗಾಡಿನ ಕ್ಷೇತ್ರದಿಂದ ಬಂದಂತಹ ಶಾಸಕ. ಮತ್ತು ಪಟ್ಟಣ ಪ್ರದೇಶಗಳಿಂದ ಬಂದಂತಹ ಶಾಸಕರೂ ಇಲ್ಲಿದ್ದಾರೆ. ಎರಡು ವರ್ಗ ಇದೆ. ನಂಜೇಗೌಡರು ಪಟ್ಟಣದ ಪ್ರದೇಶದಿಂದ ಬಂದಿರತಕ್ಕವರು. ನನ್ನ ಪಕ್ಕದಲ್ಲಿ ಕುಳಿತಿರತಕ್ಕಂಥ ರಾಜಣ್ಣ, ಮುನಿಯಪ್ಪ, ಕೃಷ್ಣಪ್ಪ ಇತ್ಯಾದಿಗಳು ಪಟ್ಟಣದ ಕ್ಷೇತ್ರದಿಂದ ಬಂದಿರತಕ್ಕವರು, ನಾವು ನೀವು ಹಳ್ಳಿಯಿಂದ ಬಂದಂಥವರು. ಮಾನ್ಯ ಮುಖ್ಯಮಂತ್ರಿಗಳೂ ಕೂಡ ಹಳ್ಳಿಗಾಡಿನ ಕ್ಷೇತ್ರದಿಂದ ಬಂದಿರತಕ್ಕವರು; ಇದರಲ್ಲಿ ವಿಧಾನ ಪರಿಷತ್ತಿನ ಸದಸ್ಯರು ಅವರ ಕರ್ತವ್ಯಗಳೇ ಜೀರೆ, ನಮ್ಮ ಕರ್ತವ್ಯಗಳೇ ಬೇರೆ. ಒಂದೊಂದು ಸಾರಿ ನಮಗನಿಸುತ್ತದೆ, ನಾವು ವಿಧಾನ ಪರಿಷತ್ತಿನ ಸದಸ್ಯರಾಗಿದ್ದರೆ ಚೆನ್ನಾಗಿರತಿತ್ತು, ನಮಗೆ ಯಾರೂ ಹೇಳುವವರು, ಕೇಳುವವರು ಇರುತ್ತಿರಲಿಲ್ಲ. ಆರಾಮವಾಗಿ ಇರಬಹುದು. ನಮ್ಮ ಶಿವಪ್ಪನವರು ಇದ್ದರು ಆಗ ಅವರನ್ನು ರಸ್ತೆ ಮಾಡಿಸಿಕೊಡಿ ಎಂದು ಯಾರೂ ಕೇಳುತ್ತಿರಲಿಲ್ಲ, ಕುಡಿಯುವ ನೀರು ಕೊಡಿ ಎಂದು ಯಾರೂ ಕೇಳುತ್ತಿರಲಿಲ್ಲ, ಕುಡಿಯುವ ನೀರು ಕೊಡಿ ಎಂದು ಯಾರೂ ಕೇಳುತ್ತಿರಲಿಲ್ಲ, ವಿದ್ಯುಚ್ಛಕ್ತಿ ಕೊಡಿ ಎಂದು ಯಾರೂ ಕೇಳುತ್ತಿರಲಿಲ್ಲ, ವಿದ್ಯುಚ್ಛಕ್ತಿ ಕೊಡಿ ಎಂದು ಕೇಳುತ್ತಿರಲಿಲ್ಲ, ಒಂದು ಅರ್ಜಿ ಕೊಡಿ ಎಂದು ಯಾರೂ ಕೇಳುತ್ತಿರಲಿಲ್ಲ ವಿಧಾನ ಪರಿಷತ್ತಿನಲ್ಲಿ ಅವರದೇ ಆದಂಥ ಧಾಟಿಯಲ್ಲಿ ಎಷ್ಟು ಉದ್ದ ನಾಲಿಗೆಯನ್ನು ಚಾಚಿ ಯಾರನ್ನೂ ಹೇಗೆ ಬೇಕಾದಾರೂ ಒಯ್ಯುಬಹುದು. ಮತ್ತು ಯಾರನ್ನು ಯಾವ ರೀತಿ ಬೇಕಾದರೂ ಕೇಳಬಹುದು. ನಮ್ಮಲ್ಲಿ ಬಹಳ ಶಕ್ತಿ ಶೌರ್ಯ ಇದ್ದರೂ ಒಂದು ರೀತಿಯ ಬೃಹನ್ನಳೆಯಾಗಿದ್ದೇವೆ.

ನಾವು ಹೆದರಬೇಕು, ಪಕ್ಕದಲ್ಲಿರುವವನು ಏನಂತಾನೋ, ಇನ್ನೊಬ್ಬ ರೈತ ಏನಂತಾನೋ, ನಾಳೆ ವಿದ್ಯುತ್ ಇಲ್ಲ ಹೀಗೆ ಎಲ್ಲಾ ನೂರೆಂಟು ಸಮಸ್ಯೆಗಳು ನಮಗೆ ಅಡ್ಡಿ ಆತಂಕಗಳು ಭಯ ಭೀತಿಗಳು ಹುಟ್ಟತಕ್ಕಂಥದ್ದು ಈ ನಮ್ಮ ವ್ಯವಸ್ಥೆ. ಇದರಲ್ಲಿ ಮೂರು ಭಾಗವಾಗಿ ನಾನು ಇವೊತ್ತು ತಮ್ಮ ಎದುರಿನಲ್ಲಿ ಹೇಳಬೇಕು ಎಂದು ನಿಂತಿದ್ದೇನೆ. ಒಂದು, ಈ ಸದನದ ಅಧ್ಯಕ್ಷರು, ಮತ್ತೊಂದು ಈ ಸದನ, ಈ ಸದನದ ಸದಸ್ಯರು, ಹೀಗೆ ಮೂರು ಭಾಗವಾಗಿ ಕೆಲವು ವಿಚಾರಗಳನ್ನು ನಾನು ಇಲ್ಲಿ ಹೇಳಬೇಕು ಎನ್ನತಕ್ಕಂಥದ್ದು ನನ್ನ ಅನಿಸಿಕೆ. ಸದನದ ಅಧ್ಯಕ್ಷರು ನಮಗೆ ರಕ್ಷಣೆ ಕೊಡಬೇಕು. ಹೇಗೆ ನೀವು ರಕ್ಷಣೆ ಕೊಡಬಹುದು ಎನ್ನುವುದು ಬಹಳ

ತೀವ್ರವಾದಂತ ಚಿಂತನೆಯಾಗಬೇಕು. ಏಕೆಂದರೆ ನಮ್ಮನ್ನು ರಕ್ಷಿಸುವಂಥ ಒಂದು ಸ್ಥಾನದಲ್ಲಿ ನೀವು ಇದ್ದೀರಿ. ಇದರ ಬಗ್ಗೆ ಒಂದು ಸಮಗ್ರವಾದ ಚರ್ಚೆಯಾಗಬೇಕು. ಇದರಲ್ಲಿ ಯಾವ ಪಕ್ಷ ಎನ್ನತಕ್ಕಂಥದ್ದು ಮುಖ್ಯವಲ್ಲ. ನಿಮ್ಮ ಅಂತಿಮವಾದ ಒಂದು ಮಾರ್ಗದರ್ಶನ, ಆದೇಶ ಇದಕ್ಕೆ ಜಾಸ್ತಿ ಇರಬೇಕು. ಈಗ ಈ ಸಭೆ ಕರೆಯತಕ್ಕಂಥದ್ದು. ಸಭೆ ಕರೆದ ನಂತರ ತಾವು ಅಧ್ಯಕ್ಷತೆ ವಹಿಸುತ್ತೀರಿ, ಇದರಲ್ಲಿ ಬೇರೆ ಮಾತಿಲ್ಲ. ಸಭೆ ಕರೆಯುವುದಕ್ಕೆ ಮುಂಚೆ, ಯಾರು ಸಭೆಯನ್ನು ಕರೆಯಬೇಕು ಮತ್ತು ಬಿಡಬೇಕು ಎನ್ನುವುದರ ಬಗ್ಗೆ ಒಂದು ದೊಡ್ಡ ವಿಶ್ಲೇಷಣೆ, ವಿಚಾರ ಎಲ್ಲಾ ಇದೆ. ನೀವು ಅಧ್ಯಕ್ಷರುಗಳ ಸಮ್ಮೇಳನದಲ್ಲೂ ಸಹಿತ ಈ ಬಗ್ಗೆ ಬಹಳ ತೀವ್ರವಾದಂತಹ ಚರ್ಚೆ ಮಾಡಬೇಕಾಗಿತ್ತು. ಈ ಸದನ ಸೇರಬೇಕು ಎನ್ನುವಾಗ ಯಾರು ತೀರ್ಮಾನ ಮಾಡುವವರು? ಸರ್ಕಾರದ ಸಚಿವ ಸಂಪುಟ ತೀರ್ಮಾನ ಮಾಡಿ ಈ ಸದನವನ್ನು ಕರೆಯಬೇಕು ಎಂದು ಹೇಳುತ್ತಾರೆ. ಅವರು ಸಚಿವ ಸಂಪುಟದಲ್ಲಿ ತೀರ್ಮಾನ ಆದನಂತರ ತಕ್ಷಣ ಪತ್ರಿಕೆಗಳಿಗೆ ಇಂಥಿಂಥ ತಾರೀಖಿನಂದು ನಾವು ಸದನ ಕರೆಯುತ್ತೇವೆ ಎಂದು ಹೇಳುತ್ತಾರೆ. ನಾನು ಅಂದುಕೊಂಡಿರುವುದು.....

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೇ, ಈ ವಿಷಯದಲ್ಲಿ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರಬೇಕಾಗಿದೆ. ಈ ಚರ್ಚೆಯನ್ನು ನಾನು ಬಹಳ ಸೂಕ್ಷ್ಮವಾಗಿ ನೋಡುತ್ತಿದ್ದೇನೆ. ಬಹುಶಃ ಇಂಥ ವಿಚಾರಗಳು ಸಾಮಾನ್ಯವಾಗಿ ಇಲ್ಲಿ ಚರ್ಚೆಗೆ ಬರುವುದಿಲ್ಲ. ಏಕೆಂದರೆ ಒಂದು ಸೂಚನೆ ಕೊಟ್ಟ ಕೂಡಲೇ ಬಹುಶಃ ತಮ್ಮ ಜವಾಬ್ದಾರಿ ಇರುತ್ತದೆ. ಇದರಲ್ಲಿ ಹೆಚ್ಚು ಇಲ್ಲಿ ಚರ್ಚೆಗೆ ಅವಕಾಶ ಕೊಡದೆ ನಾಯಕರನ್ನೋ, ವಿರೋಧ ಪಕ್ಷದ ನಾಯಕರನ್ನೋ, ಸಂಬಂಧಪಟ್ಟವರನ್ನು ಕರೆದು ಈ ವಾಗ್ವಾದವನ್ನು ತಾವು ಒಳಗಡೆ ತೀರ್ಮಾನ ಮಾಡುವುದು ಒಳ್ಳೆಯದು. ಹಿಂದೆ ಎಲ್ಲಾ ಇದೇ ತರಹ ಆಗುತ್ತಿತ್ತು. ಈಗ ಒಮ್ಮೆ ತಾವು ಚರ್ಚೆಗೆ ಆಲೋ ಮಾಡಿದ್ದೀರಿ ಎಂದರೆ ಇದರ ಅರ್ಥ ಏನು? ಈ ಕಡೆ ಆ ಕಡೆ ಚರ್ಚೆಯಾಗುತ್ತದೆ. ಇದರಲ್ಲಿ ತಮ್ಮ ರೋಲ್ in relation to arbitration will be more.

ತಮ್ಮ ತಿಳಿವಳಿಕೆಗೆ ಮತ್ತು ಸದನದ ಗಮನಕ್ಕೆ ತರತಕ್ಕಂಥದ್ದು, ಇಲ್ಲಿ ಇದ್ದರೆ ಬಹುಶಃ ನಾಯಕರದ್ದು ಜವಾಬ್ದಾರಿ ಜಾಸ್ತಿಯಿರುತ್ತದೆ. ಈಗ ನಾಯಕರ ಜವಾಬ್ದಾರಿ ಸ್ವಲ್ಪ ಕಡಿಮೆಯಾಯಿತು, ತಮ್ಮ ಜವಾಬ್ದಾರಿ ಸ್ವಲ್ಪ ಜಾಸ್ತಿಯಾಯಿತು. ಆದರೆ ತಾವು ಚರ್ಚೆಯನ್ನು ಮುಂದುವರಿಸಿಕೊಂಡು ಹೋಗುವುದಕ್ಕೆ ಅಡ್ಡಿಯಿಲ್ಲ. We are not joined in the party ನನಗೂ ಕೂಡ ಒಂದು ಗಧಾಪ್ರಹಾರ ಮಾನ್ಯ ಮುಖ್ಯಮಂತ್ರಿಗಳು ಮಾಡಿದ್ದರೂ ಕೂಡ, ನನ್ನ ಇತಿಮಿತಿ ಏನು ಎಂದು ನನಗೆ ತೋರಿಸಿಕೊಟ್ಟಿದ್ದಾರೆ. ಆದ್ದರಿಂದ ತೆಪ್ಪಗೆ ನಾನು ಕುಳಿತುಕೊಂಡು ಬಿಟ್ಟಿದ್ದೇನೆ. ಏಕೆಂದರೆ ನಾಯಕರು ನಿಮ್ಮ ಇತಿಮಿತಿ ಇಷ್ಟೇ ಎಂದು ಹೇಳಿಬಿಟ್ಟಿದ್ದಾರೆ. ಆದ್ದರಿಂದ ನಾನು ಕುರ್ಚಿಯಲ್ಲಿ ಅಂಟಿಕೊಂಡು ಕೂತುಬಿಟ್ಟಿದ್ದೇನೆ.

MR. SPEAKER : You are accepted in a very humble way.

SRI M. VEERAPPA MOLIY : I have accepted it in all humility.

ಇನ್ನು ಮುಂದ ಬಹಳ ನೂರು ಆಲೋಚನೆಗಳನ್ನು ಮಾಡುತ್ತೇನೆ. ಯಾವುದಕ್ಕೆ ಕಾಗದ ಬರೆಯ ಬೇಕು, ಯಾರುದಕ್ಕೆ ಕಾಗದ ಬರೆಯಬಾರದು ಎಂದು ಬಹಳ ಆಲೋಚನೆ ಮಾಡಿಕೊಂಡು ಕಾಗದ ಬರೆಯಬೇಕಾಗುತ್ತದೆ. ಏಕೆಂದರೆ ಈ ರೀತಿ ಗಧಾಪ್ರಹಾರ ಸ್ವೀಕರಿಸುವಂಥ ಶಕ್ತಿ ನಮಗೆ ಇಲ್ಲ. ಏಕೆಂದರೆ ಈ ವಿಚಾರದಲ್ಲಿ ಸೌಜನ್ಯತೆಯನ್ನು ಡಿಮ್ಯಾಂಡ್ ಮಾಡುವುದಕ್ಕೆ ಆಗುವುದಿಲ್ಲ. ಸೌಜನ್ಯತೆ ಕೊಡಬೇಕು. ಈ ವಿಚಾದಲ್ಲಿ ಸೌಜನ್ಯತೆಯನ್ನು ಡಿಮ್ಯಾಂಡ್ ಮಾಡುವುದಕ್ಕೆ ಆಗುವುದಿಲ್ಲ, ಸೌಜನ್ಯತೆ

ಕೊಡಬೇಕು. ಸೌಜನ್ಯತೆಯನ್ನು ನೀವು ಕೊಡಬೇಕು ಎಂದು ಹೇಳಿದರೆ ಹೇಗೆ ಆಗುತ್ತದೆ. ಇದು ಸೌಜನ್ಯತೆಯ ಪ್ರಶ್ನೆ. ಇಂಥದ್ದಕ್ಕೆಲ್ಲಾ ಕೋಡಿಫಿಕೇಶನ್ ಮಾಡುವುದಕ್ಕೆ ಆಗುವುದಿಲ್ಲ ಇದಕ್ಕೆ ಕಾನೂನು ಮಾಡುವುದಕ್ಕೆ, ನಿಯಮ ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಇದು We are as legislatures ಫಸ್ಟ್ ಮಾನ್ಯ ಮುಖ್ಯಮಂತ್ರಿಗಳು ಲಿಜಿಸ್ಲೇಟರ್ ದೆನ್ ಚೀಫ್ ಮಿನಿಸ್ಟರ್ ಆದ್ದರಿಂದ ಲೆಜಿಸ್ಲೇಟರ್ ಆಗಿ ಇಂಥ ವಿಚಾರಗಳನ್ನು as you said we are washing the dirty lienen in the Dent. ಇವರಲ್ಲಿ ಪಬ್ಲಿಕ್ ಇಂಟರೆಸ್ಟ್ ಇಲ್ಲ. ಆದುದರಿಂದ ತಾವು ಚರ್ಚೆ ಮುಂದುವರಿಸುವ ಬದಲು ತಾವೇ ಮಧ್ಯಸ್ಥಿಕೆ ವಹಿಸಿ ತೀರ್ಮಾನ ಮಾಡದೇ ಇದನ್ನು ಚರ್ಚೆಗೆ ತಾವು ಬಿಟ್ಟು ಬಿಟ್ಟರೆ ಆಮೇಲೆ ತಾವು ಅರ್ಬಿಟ್ರೇಶನ್ ಮಾಡಬೇಕಾಗುತ್ತದೆ. ಇದನ್ನು ಚರ್ಚೆಯಲ್ಲಿ ಮುಗಿಸಲಿಕ್ಕೆ ಆಗುವುದಿಲ್ಲ. You will have to take care ಇದರಲ್ಲಿ ನನ್ನ ಅನಿಸಿಕೆಯನ್ನು ತಮ್ಮ ಮುಂದಿಟ್ಟಿದ್ದೇನೆ.

ಅಧ್ಯಕ್ಷರು : ತಾವು ಬಹಳ ಬುದ್ಧಿವಂತಿಕೆಯಿಂದ ಅರ್ಥ ಹೇಳಿ ಅರ್ಥ ಹೇಳದೇ ಇದ್ದರೂ, ಉಳಿದರ್ಥ ತಮ್ಮ ಮನಸ್ಸಿನಲ್ಲಿ ಏನಿದೆ ಎನ್ನುವುದನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ನಾನು ತಮಗೆ ಇಷ್ಟು ಹೇಳಲಿಕ್ಕೆ ಇಷ್ಟಪಡುತ್ತೇನೆ. ಈ ಹಿಂದೆಯೂ ಕೂಡ ಈ ಸಾಧನದಿಂದ ಅನೇಕ ಜನ ಕೆಲಸ ನಿರ್ವಹಿಸಿದ್ದಾರೆ. ಸದನದ ಒಳಗೆ ಆಗತಕ್ಕಂಥ ಎಲ್ಲಾ ಕ್ರಿಯೆಗಳಿಗೆ ನಾನು ಜವಾಬ್ದಾರನಾಗುತ್ತೇನೆ. ಸದಸ್ಯರನ್ನು ರಕ್ಷಣೆ ಮಾಡತಕ್ಕಂಥ ಕರ್ತವ್ಯ ನನ್ನ ಮೇಲಿದೆ. ಸದನದ ಹೊರಗೂ ಕೂಡ ನಡೆಯತಕ್ಕಂಥ ಕೆಲವು ವಿಷಯಗಳಲ್ಲಲಿ ನಾನು ನನ್ನ ಸದಸ್ಯರಿಗೆ ರಕ್ಷಣೆ ಕೊಡುವುದಕ್ಕೆ ಪ್ರವೇಶ ಮಾಡುತ್ತೇನೆ.

ಸರ್ವವ್ಯಾಪಿಯಾಗಿ ರಾಜ್ಯದ ಎಲ್ಲಾ ಕಡೆಗಳಲ್ಲಿ ಯಾವಾಗಲೋ ಸದನದ ಹೊರಗೆ ನಡೆಯತಕ್ಕಂಥ ವಿಷಯಗಳಿಗೆಲ್ಲಾ ಕೂಡ ನಾನುಕೈ ಚಾಚುವುದಕ್ಕೆ ಆಗುವುದಿಲ್ಲ. ಏಕೆಂದರೆ ನನಗೂ ಕೂಡ ಸ್ವಲ್ಪ ನಿರ್ಬಂದಗಳಿವೆ. ತಾವು ಸೂಚನೆ ಮಾಡಿದಂಥ ಕೆಲಸವೇನಿದೆ ಅದನ್ನು ನಾನು ಮಾಡಬಹುದು. ಇಲ್ಲಿ ಚರ್ಚೆ ಏಕೆ ಉದ್ಭವವಾಗಿದೆ ಎಂದು ಹೇಳಿದರೆ ಸದನದ ಹೊರಗೆ ನಡೆದಿರತಕ್ಕಂಥ ಕೆಲವು ಘಟನೆಗಳನ್ನು ಅವರು ಪ್ರಸ್ತಾಪ ಮಾಡುತ್ತಿರುವುದರಿಂದ ಇದು ಅನಿವಾರ್ಯವಾಗಿದೆ.

ಶ್ರೀ ವಾಟಾಳ್ ನಾಗರಾಜ್ : ಈಗ ವೀರಪ್ಪಮೊಯಿಲಿಯವರು ಮಾತನಾಡುವುದಿಲ್ಲ ಎಂದು ಹೇಳಿಬಿಟ್ಟರು. ಅವರು ಏನು ಹೇಳಬೇಕಾಗಿತ್ತೋ ಅದನ್ನು ಬುದ್ಧಿವಂತಿಕೆಯಿಂದ ಅವರು ಹೇಳಿಬಿಟ್ಟರು. ಅವರ ಬುದ್ಧಿವಂತಿಕೆಯನ್ನು ನಾನು ಮೊದಲಿನಿಂದಲೂ ಒಪ್ಪಿದ್ದೇನೆ ಮತ್ತು ಈಗಲೂ ಒಪ್ಪುತ್ತೇನೆ.

ಅಧ್ಯಕ್ಷರು : ಅವರು ಅಧಿಕಾರದಲ್ಲಿದ್ದಾಗ ಒಪ್ಪಿದ್ದರೆ ಪ್ರಯೋಜನವಾಗುತ್ತಿತ್ತು. ಅವರು ಅಧಿಕಾರ ಕಳೆದುಕೊಂಡ ಮೇಲೆ ಹೇಳಿದರೆ ಏನು ಪ್ರಯೋಜನ?

ಶ್ರೀ ವಾಟಾಳ್ ನಾಗರಾಜ್ : ಆಗ ಅಧಿಕಾರದಲ್ಲಿದ್ದಾಗ ಒಪ್ಪುವುದಕ್ಕೆ ಹೋದರೆ ಏನೋ ಮರ್ಜಿ ಎಂದು ಹೇಳುತ್ತಾರೆ. ಮುಕ್ತ ಸಂದರ್ಭದಲ್ಲಿ, ಅವರ ಮಾತನ್ನು ನಾವು ಒಪ್ಪಲೇಬೇಕು. ಮಾನ್ಯ ಅಧ್ಯಕ್ಷರೇ, ಈಗ ವಿರೋಧ ಪಕ್ಷದ ನಾಯಕರು ಕೇಳಿರತಕ್ಕಂಥ ಅನೇಕ ಪ್ರಶ್ನೆಗಳ ಬಗ್ಗೆ ನಮಗೆಲ್ಲಾ ಪತ್ರ ಬರೆದಿದ್ದಾರೆ. ಇಂಥಿಂಥ ಮಾಹಿತಿ ಬೇಕು ಎಂದು ಹೇಳಿ ನಾವು ಕೇಳಿದ್ದೇವೆ. ಇದನ್ನು ಕೊಟ್ಟಿಲ್ಲ ಎಂದು ಹೇಳಿದ್ದಾರೆ. ಆ ಪಾಯಿಂಟ್‌ಗಳನ್ನು ನಾನು ನೋಡಿದಾಗ ನನಗನ್ನಿಸಿದ್ದು, ಅದನ್ನು ಮುಚ್ಚಿಟ್ಟು ಅದನ್ನು ವಿರೋಧ ಪಕ್ಷದ ನಾಯಕರಿಗೆ ಕೊಡಲೇಬಾರದು ಅಂಥ ಅವರನ್ನು ಕುತ್ತಿಗೆಗೆ ಹಗ್ಗ ಹಾಕತಕ್ಕಂಥ ಮಾಹಿತಿಗಳನ್ನೇನೂ ಅವರು ಕೇಳಿಲ್ಲ. ಅವರು ಕಳುಹಿಸಿರತಕ್ಕಂಥ ಎಲ್ಲಾ ಪತ್ರಗಳನ್ನು ನಾನು ಓದಿದ ಇದು ಒಪ್ಪಿ ಸಾಮಾನ್ಯ

ರಸ್ತೆಯಲ್ಲಿರತಕ್ಕಂಥ ಮತದಾರ ಕೇಳಿದರೂ ಕೊಡಬೇಕು ಆ ರೀತಿ ಇದೆ ಅವರು ಕೇಳತಕ್ಕಂಥದ್ದು. ಅದನ್ನು ನಮ್ಮ ಸದನದ ನಾಯಕರು ಈ ಕಡೆ ಇದ್ದು ಬಹಳ ವರ್ಷಗಳ ಕಾಲ ಕೆಲಸ ಮಾಡಿದವರು ಮತ್ತು ಅವರು ವಿರೋಧ ಪಕ್ಷದ ನಾಯಕರಾಗಿದ್ದಾಗ ಅವರ ಜೊ[illegible] ನಾವೆಲ್ಲಾ ಕೆಲಸ ಮಾಡಿದ್ದೇವೆ. ಆದರೆ ಅವರ ಕಾಲದಲ್ಲಿ ಈ ರೀತಿ ಬಂದಿದ್ದರೆ ಸರ್ಕಾರದ ವಿರುದ್ಧವಾಗಿ ಅವರು ಸುದೀರ್ಘವಾಗಿ ಎರಡೆರಡು ದಿನ ಮಾತನಾಡುತ್ತಿದ್ದನು. ಸಣ್ಣ ಸಣ್ಣ ವಿಚಾರಕ್ಕೆ ದಿನಗಟ್ಟಲೇ ಮಾತನಾಡಿದ್ದಾರೆ, ಶ್ರೀಮಾನ್ ದೇವೇಗೌಡರು ಅವರು ವಿರೋಧ ಪಕ್ಷದ ನಾಯಕರಾಗಿದ್ದಾಗಲೇ ಸಿಟ್ಟುಗಿಟ್ಟು ಬರುತ್ತಿರಲಿಲ್ಲ, ನಾನು ತಿಳಿದಹಾಗೆ ನಮ್ಮ ಜೊತೆ ಯಾವಾಗಲೂ ನಗುನಗುತ್ತಲೇ ಓಡಾಡುತ್ತಿದ್ದರು. ಯಾವಾಗಲೂ ಅದರದೊಂದು ವಾದ ಗುರುಗಳೇ ಎನ್ನುವುದು. ಇದು ಏಕೆ ಅವರು ಮುಖ್ಯ ಮಂತ್ರಿಗಳಾದ ನಂತರ ಆ ಒಂದು ಸಿಟ್ಟು ಹೊರಟುಹೋಗಿದೆ, ಮತ್ತು ಗುರುಗಳೇ ಎನ್ನತಕ್ಕಂಥ ಧಾಟಿ, ಸೌಜನ್ಯತೆಯ ಧಾಟಿ ಹೋಗಿದೆ. ಅಂದರೆ ಯಾರಾದರೂ ಸಲಹೆ ಮಾಡತಕ್ಕಂಥವರು ಅವರನ್ನು ತಪ್ಪು ದಾರಿಗೆ ಎಳೆದುಕೊಂಡು ಹೋಗುತ್ತಿದ್ದಾರೇನೋ ಎಂದೆನಿಸುತ್ತದೆ. ಇದು ಬಹಳ ಅತ್ಯಂತ ನನ್ನ ಮನಸ್ಸಿನ ವೇದನೆ. ನನಗೇನೂ ಅವರನ್ನು ಈ ಸದನದಲ್ಲಿ ನೀವೇ ಮಾಡಿದಿರಿ, ನೀವೇ ಮಾಡಿದಿರಿ ಎನ್ನುವುದಕ್ಕಿಂತ ಈಗ ಯಾರಾದರೂ ಹೇಳಬಹುದು, ನೀವು ಈ ರೀತಿ ವಿರೋಧ ಪಕ್ಷದ ನಾಯಕರಿಗೆ ಪತ್ರಗಿತ್ರ ಕೊಟ್ಟೀರಿ, ಕೊಟ್ಟುಬಿಟ್ಟರೆ ನಿಮ್ಮ ಕಡೆ ಹೋಯಿತು. ನಿಮ್ಮದು ಅರ್ಧ ಅವರು ತೆಗೆದುಕೊಂಡು ಬಿಡುತ್ತಾರೆ ಎಂದು ಯಾರು ಏನು ಹೇಳುತ್ತಾರೋ ಗೊತ್ತಿಲ್ಲ.

ಅವರು ಕೇಳುವುದಿಲ್ಲ ಎಂದು ನಾನು ಅಂದುಕೊಂಡಿದ್ದೇನೆ. ಇತ್ತೀಚೆಗೆ ಅವರು ಮುಖ್ಯಮಂತ್ರಿ ಆದ ಮೇಲೆ ಈ ರೀತಿ ಕೇಳುವುದರಿಂದ ನನಗೆ ಅನುಕೂಲ ಎಂದು ಅವರು ತಿಳಿದುಕೊಂಡಿದ್ದಾರೋ ಏನೋ ನನಗೆ ಗೊತ್ತಿಲ್ಲ. ಆದರೆ ಮಾನ್ಯ ವಿರೋಧ ಪಕ್ಷದ ನಾಯಕರು ಕೇಳಿರತಕ್ಕಂತಹ ಪ್ರಶ್ನೆಗಳು ಸರ್ಕಾರಕ್ಕೆ ತಲೆ ಹೋಗತಕ್ಕಂತಹ ಪ್ರಶ್ನೆಗಳಲ್ಲ, ಯಡಿಯೂರಪ್ಪನವರ ಮನೆಗೆ ತೆಗೆದುಕೊಂಡು ಹೋಗಿ ಕೊಡಬೇಕೆ? ಎಂದು ವರದಿಯಾಗಿತ್ತು. ಅದು ಮಾನ್ಯ ದೇವೆಗೌಡರ ಬಾಯಿಯಲ್ಲಿ ಬರತಕ್ಕಂತಹ ಪದವೇ ಎಂದು ಮನಸ್ಸಿಗೆ ನೋವಾಯಿತು. ಮಾನ್ಯ ದೇವೆಗೌಡರು ಜನತಂತ್ರದ ಬಗ್ಗೆ ಬಹಳ ವಿಚಾರ ಹೇಳುತ್ತಿದ್ದರು, ವಿರೋಧ ಪಕ್ಷಗಳ ಬಗ್ಗೆ ಹೇಳುತ್ತಿದ್ದರು. ಸಂಘಟನೆಯ ಬಗ್ಗೆ ಹೇಳುತ್ತಿದ್ದರು. ಅವರೆ ಹೇಳುತ್ತಾರೆ ಸಮೃದ್ಧ ಕರ್ನಾಟಕ, ಸ್ವಾಭಿಮಾನ ಕರ್ನಾಟಕ ಹೀಗೆ ಒಂದೊಂದು ಮಾತನ್ನು ಹೇಳಿದ್ದಾರೆಯೆ ಹಾಗೂ ಭಾಷಣ ಮಾಡಿದ್ದಾರೆಯೇ? ಆದರೆ ಅಧಿಕಾರಕ್ಕೆ ಬಂದ ಮೇಲೆ ಒಂದು ರೀತಿ ವಿರೋದಪಕ್ಷಗಳ ಬಗ್ಗೆ ಮುನಿಸು, ಕೋಪ ಹಾಗೂ ತಾತ್ಸಾರ. ಇವೆಲ್ಲವನ್ನು ಅವರು ಬಳಸಲಿಕ್ಕೆ ಹೊರಟಿದ್ದಾರೆ. ಇದರಿಂದ ಲಾಭ ಏನು? ಲಾಭವೇನಾದರೂ ಇದ್ದರೆ ಹೇಳಲಿ. ನಾನು ಪ್ರಾಮಾಣಿಕವಾಗಿ ಹೇಳುತ್ತೇನೆ. ಎಲ್ಲಿಂದ ಅವರು ತಪ್ಪಿದರು ಅಂದರೆ, ತರಾತುರಿಯಿಂದ ಅವರು ಮುಖ್ಯಮಂತ್ರಿಗಳಾಗುವುದಕ್ಕೆ ಹೋದರು, ಜೊತೆಗೆ ಉಪಮುಖ್ಯಮಂತ್ರಿಗಳು, ಈ ಇಬ್ಬರು ಪ್ರಮಾಣವಚನಕ್ಕೆ ಹೋದಾಗ ಶಿಷ್ಟಾಚಾರ ಇದೆ. ಪ್ರಮಾಣವಚನಕ್ಕೆ ಹೋದಾಗ ವಿರೋಧ ಪಕ್ಷದ ಮುಖಂಡರುಗಳನ್ನು ಕರೆಯಬೇಕು ಎಂಬ ಶಿಷ್ಟಾಚಾರ, ಮಾಜಿ ಮುಖ್ಯಮಂತ್ರಿಗಳನ್ನು ಕರೆಯುವ ಶಿಷ್ಟಾಚಾರ. ನಮ್ಮ ಯಾರನ್ನು ಕರೆಯಲಿಲ್ಲ. ನಾವೇನು ನಿಮ್ಮದನ್ನು ಕಿತ್ತುಕೊಳ್ಳುತ್ತಿರಲಿಲ್ಲ. ನಾವು ಗಂಭೀರವಾಗಿ ಮುಂದಿನ ಕುರ್ಚಿಯಲ್ಲಿ ಕುಳಿತುಕೊಳ್ಳುತ್ತಿದ್ದೆವು, ನೀವು ಮುಖ್ಯಮಂತ್ರಿಯಾಗಿದ್ದೀರಿ ಎಂದು ಸಂತೋಷಪಟ್ಟುಕೊಳ್ಳುತ್ತಿದ್ದೇವು. ನಾವು ಅದಕ್ಕೆ ಏನೂ ಅಡ್ಡಿ ಬರುತ್ತಿರಲಿಲ್ಲ. ನಮ್ಮನ್ನು ಏತಕ್ಕೆ ಕರೆಸಲಿಲ್ಲ? ನಾವು ಏನು ಅಪರಾಧ ಮಾಡಿದ್ದೇವು? ನಮಗೆ ರಾಜಭವನದಲ್ಲಿ ನಾಲ್ಕು ಕುರ್ಚಿಗಳನ್ನು ಯಾರೂ ಹಾಕುತ್ತಿರಲಿಲ್ಲವೆ? ಯಾರಿಗೂ ಗೊತ್ತಿಲ್ಲದೆ ಬೇಲಿಬಿದ್ದು ಈ ಕಡೆ ನೀವು ಹೊರಟಿರಿ. ಏನಾದರೂ ಉಂಟೇ? ಇದು ಸರಿಯೇ? ಸೌಜನ್ಯವೇ?

ನಾನು ಇದನ್ನು ಖಂಡಿತಾ ಒಪ್ಪುವುದಿಲ್ಲ. ಪ್ರಾಮಾಣಿಕವಾಗಿ ನನ್ನ ಮನಸ್ಸಿಗೆ ಬಹಳ ನೋವಾಯಿತು. ನೀವು ಮುಖ್ಯಮಂತ್ರಿಗಳಾಗಿದ್ದಕ್ಕೆ ಸಂತೋಷ ಪಡುತ್ತೇನೆ, ನಿಮಗೆ ಶುಭಾಶಯ ಹಾರೈಸುತ್ತೇನೆ. ದೇವರು ಒಳ್ಳೆಯದು ಮಾಡಲಿ ಎಂದು ಆಶಿಸುತ್ತೇನೆ. ನಾವು ನಿಮಗೆ ಏನು ಮಾಡುತ್ತಿದ್ದೇವು? ಯಾರಿಗೆ ಹೇಳದೆ ಮುಖ್ಯಮಂತ್ರಿಗಳಾಗಿದ್ದೀರಿ. ಬೆಳಿಗ್ಗೆ ನಾವು ಪತ್ರಿಕೆಗಳಲ್ಲಿ ನೋಡುತ್ತೇವೆ,

ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಅವರ ಗಲ್ಲ ನೀವು ಹಿಡಿಯುತ್ತೀರಿ. ನಿಮ್ಮ ಗಲ್ಲ ಅವರು ಹಿಡಿಯುತ್ತಾರೆ. ನಿಮ್ಮಿಬ್ಬರ ಗಲ್ಲ ಹಿಡಿದ ಚಿತ್ರ ನೋಡಿದ್ದೇವೆ ಹೊರತು ನಿಮ್ಮ ಪ್ರಮಾಣವಚನ ಯಾವುದೂ ನಾವು ನೋಡಲಿಲ್ಲ, ಇದು ಯಾವ ಶಿಷ್ಟಾಚಾರ ಸ್ವಾಮಿ? ದಯವಿಟ್ಟು ಹೇಳಿ. ತಾವು ಮಾಜಿ ಮುಖ್ಯಮಂತ್ರಿಗಳು ತಮಗೇನಾದರೂ ತಿಳಿದಿತ್ತೆ? ಮಾನ್ಯ ಯಡಿಯೂರಪ್ಪನವರೆ ತಮಗೆ ಏನಾದರೂ ಪತ್ರ ಬಂದಿತ್ತೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ಲೀಡರ್ ಆದ ಮೇಲೆ ಸೌಜನ್ಯಕ್ಕಾದರೂ ಕರೆದು ಒಂದು ಮಾತನ್ನು ಆಡಲಿಲ್ಲ ಇನ್ನು ಆಗ ಕರೆಯುವ ಪ್ರಶ್ನೆ ಎಲ್ಲಿಂದ ಬರುತ್ತದೆ?

ಶ್ರೀ ವಾಟಾಳ್ ನಾಗರಾಜ್ : ಎಲ್ಲರಿಗೂ ಈ ಒಂದು ಹೊಡೆತ ಬಿದ್ದಿದೆ. ಇದು ನನಗನ್ನಿಸುತ್ತದೆ. ದೇವೇಗೌಡರು ಮಣ್ಣಿನ ಮಗ ಎಂದು ಏನು ಹೇಳಿಕೊಳ್ಳುತ್ತಾರೆ ಅದಕ್ಕೆ ಇದು ಅನ್ವರ್ಥನಾಮವಾಗುವುದಿಲ್ಲ. ಅವರು ಮಣ್ಣಿನ ಮಗ ಎನ್ನುವುದು ನಿಜ. ನಾವೆಲ್ಲಾ ಮಣ್ಣಿನ ಮಕ್ಕಳಲ್ಲವೇ? ನಿಮ್ಮ ಒಬ್ಬರಿಗೆ ಮಣ್ಣಿನ ಮಗ ಎಂದು ಹೇಳುವುದಕ್ಕಾಗುವುದಿಲ್ಲ. ನಾನು ತಮ್ಮಲ್ಲಿ ಅತ್ಯಂತ ಕಳಕಳಿ, ವಿನಯದಿಂದ ಪ್ರಾರ್ಥಿಸಿಕೊಳ್ಳುತ್ತೇನೆ, ಈ ರೀತಿಯ ಧಾಟಿ ಬೇಡ. ತಾವು ಇದನ್ನು ಮುಂದುವರಿಸತಕ್ಕಂತದ್ದು ಒಳ್ಳೆಯದಲ್ಲ. ಶಾಸನ ಸಭೆ ಕೇವಲ ನಮ್ಮದೆ ಸ್ವತ್ತು ಸರ್ಕಾರ ನಮ್ಮದೆ, ನೀವು ಏನೋ ಶಾಸಕರಾಗಿ ಬಂದಿದ್ದೀರಿ, ನಿಮಗೆ ನಾವು ಏನೂ ಹೇಳುವ ಹಾಗಿಲ್ಲ ನೀವು ನಮ್ಮನ್ನು ಕೇಳುರ ಹಾಗಿಲ್ಲ ಎನ್ನುವುದಾದರೆ ಅದು ಸರಿಯಲ್ಲ. ನೀವು ನಮ್ಮನ್ನು ನಾಮಕರಣ ಮಾಡುವುದಾದರೆ ನೀವು ಹೇಳಿದಂತೆ ನಾವು ಕೇಳಬಹುದಿತ್ತು. ನಾವು ನಿಮ್ಮ ಹಾಗೆ ಚುನಾಯಿತರಾಗಿ ಮತ ತೆಗೆದುಕೊಂಡು ಬಂದಿದ್ದೇವೆ. ಆದುದರಿಂದ ಇದು ನಾಮಕರಣದ ಪ್ರಶ್ನೆಯಲ್ಲ,

ನಾವು ನೀವು ಈ ಸರ್ಕಾರದಲ್ಲಿ ಧರ್ಮದರ್ಶಿಗಳು. ಇದೊಂದು ಟ್ರಸ್ಟ್ ನಾವೆಲ್ಲಾ ಒಟ್ಟಾಗಿ ಸೇರಿ ಸರ್ಕಾರವನ್ನು ನಡೆಸತಕ್ಕ ವ್ಯವಸ್ಥೆಯಲ್ಲಿ ಪಾಲುಗೊಳ್ಳಬೇಕು. ಪ್ರಜಾಪ್ರಭುತ್ವದಲ್ಲಿ ಬಹುಮತ ಬಂದಿರುವವರು ಆಡಳಿತ ನಡೆಸುತ್ತಾರೆ, ಕಡಿಮೆ ಮತ ಬಂದಿರುವವರು ವಿರೋಧಪಕ್ಷದಲ್ಲಿ ಕುಳಿತಿರುತ್ತೇವೆ. ವಿರೋಧಪಕ್ಷದವರು ಹೇಳುವುದೆಲ್ಲಾ ಸರಿಯಲ್ಲ ಎಂದು ಹೇಳುವ ಧಾಟಿ ನಿಮ್ಮದಲ್ಲ. ನಿಮ್ಮ ಧಾಟಿ ಬದಲಾದದ್ದು ಮುಖ್ಯಮಂತ್ರಿಗಳಾದ ಮೇಲೆ, ನಾನು ಅವರ ಜೊತೆಯಲ್ಲಿ ಕುಳಿತಿದ್ದೇನೆ, ಮಾತನಾಡಿದ್ದೇನೆ, ಸ್ವಲ್ಪ ಸಿಟ್ಟುಬಟ್ಟು ಬರುತ್ತದೆ. ಆದರೆ ಒಂದು ರೀತಿಯ ದಭಾವನೆ, ದೌರ್ಜನ್ಯ ಮೊದಲು ಇರಲಿಲ್ಲ. ಯಡಿಯೂರಪ್ಪನವರ ಮನೆಗೆ ಹೋಗಿ ಫೈಲ್ ಕೊಡಬೇಕೇ ಎಂದರೆ, ಯಡಿಯೂರಪ್ಪನವರು ಇವರ ಮನೆಗೆ ಬಂದು ಫೈಲ್ ನೋಡಬೇಕೇ? ಇವರ ಮನೆಗೆ ಬಿಡುತ್ತಾರೆಯೇ? ಹೊರಗಡೆ ಗನ್‌ಮೆನ್ ಇರುತ್ತಾರೆ, ಮುಖ್ಯಮಂತ್ರಿಗಳನ್ನು ನೋಡಬೇಕಾದರೆ ಟೈಂ ಕೊಡಬೇಕು.

ಸ್ವಾಮಿ, ಶಾಸಕರುಗಳ ಬಗ್ಗೆ ಒಂದು ಮಾತು ಹೇಳಬೇಕಾಗಿದೆ. ಈಗ ಜಿಲ್ಲಾಪಂಚಾಯತ್ ತಾಲ್ಲೂಕು ಪಂಚಾಯತಿಯ ಚುನಾವಣೆಗಳು ಆದವು, ಮೊದಲು ತಾಲ್ಲೂಕು ಪಂಚಾಯತಿಯಲ್ಲಿ ಪ್ರಧಾನರು ಚುನಾಯಿತರಾಗುತ್ತಿದ್ದರು. ಈ ಪ್ರಧಾನರುಗಳ

ಒಕ್ಕೂಟಕ್ಕೆ ಶಾಸಕರು ಅಧ್ಯಕ್ಷರು. ಆ ಸಬೆಯ ವ್ಯವಸ್ಥೆ ಏನು ಅಂದರೆ, ಪ್ರಗತಿಯನ್ನು ಪರಿಶೀಲನೆ ಮಾಡತಕ್ಕಂಥದ್ದು. ಪ್ರತಿ ತಿಂಗಳ 5ನೇ ತಾರೀಖು ಶಾಸಕರ ಅಧ್ಯಕ್ಷತೆಯಲ್ಲಿ ಇಡೀ ತಾಲ್ಲೂಕಿನ ಪ್ರಗತಿಯನ್ನು ಪರಿಶೀಲನೆ ಮಾಡತಕ್ಕಂಥದ್ದು. ಪ್ರತಿ ತಿಂಗಳು 5ನೇ ತಾರೀಖು ಶಾಸಕರ ಅಧ್ಯಕ್ಷತೆಯಲ್ಲಿ ಇಡೀ ತಾಲ್ಲೂಕಿನ ಪ್ರಗತಿಯನ್ನು ಪರಿಶೀಲನೆ ಮಾಡತಕ್ಕದ್ದು. ನಾವು ಏನು ದುಡ್ಡು ಕೊಡುವುದಲ್ಲೂ, ಅಥವಾ ಕೆಲಸ ಕೊಡುವುದಲ್ಲ. ಸುಮ್ಮನೆ ಯಾವ ಅಧಿಕಾರಿ ಏನು ಕೆಲಸ ಮಾಡಿದ್ದೀರಿ, ಏನು ಕೆಲಸ ಬಿಟ್ಟಿದ್ದೀರಿ ಎಂದು ಹೇಳತಕ್ಕ ಒಂದು ಸಾಮಾನ್ಯ ಅಧಿಕಾರವಿತ್ತು. ಆ ಸಭೆಯಲ್ಲಿ ಎರಡಾಣೆ ಪಕೋಡ / ತಿಂಡಿ ಕೊಡುತ್ತಿದ್ದರು. ಇದೊಂದು ವ್ಯವಸ್ಥೆ ಇತ್ತು. ಅದನ್ನು ಕೂಡ ಒಂದು ಸಣ್ಣ ದೊನ್ನೆಯಲ್ಲಿ ಕೊಡುತ್ತಿದ್ದರು. ನಾನು ಹೋದ ಮೇಲೆ ಇದನ್ನು ತಪ್ಪಿಸಿ ಕೈಯಿಂದ ಸ್ವಲ್ಪ ದುಡ್ಡು ಹಾಕಿ ತಟ್ಟೆಯಲ್ಲಿ ಕೊಡತಕ್ಕಂತಹ ವ್ಯವಸ್ಥೆಯಾಯಿತು. ಇಂತಹ ಒಂದು ಕೆಳದರ್ಜೆಯ ವ್ಯವಸ್ಥೆಯಲ್ಲಿ ನಾವು ಅಧ್ಯಕ್ಷರಾಗಿದ್ದೇವು. ಅದು ನಿಮಗೆ ಬೇಕಾಗಿಲ್ಲ. ಅಧ್ಯಕ್ಷರಾಗಿರುವುದು ಬೇಕಾಗಿಲ್ಲ. ಅದು ಹೋಯಿತು.

ಈಗ ತಿದ್ದುಪಡಿಯಾಗಿ ವ್ಯವಸ್ಥೆ ಬದಲಾವಣೆಯಾಯಿತು. ಈಗ ಪಂಚಾಯತಿ ಸದಸ್ಯರು ಆಯ್ಕೆ ಮಾಡುವಂಥ ಅಧ್ಯಕ್ಷರು ಇರುತ್ತಾರೆ. ಜಿಲ್ಲಾ ಪಂಚಾಯತಿ ಅಧ್ಯಕ್ಷರು ಅವರು, ತಾಲ್ಲೂಕು ಪಂಚಾಯತಿ ಅಧ್ಯಕ್ಷರು ಅವರು. ಶಾಸಕರು ಅಧ್ಯಕ್ಷತೆ ವಹಿಸತಕ್ಕಂಥ ವ್ಯವಸ್ಥೆ ತಪ್ಪಿಹೋಯಿತು. ನಾನು ಅದನ್ನು ವಿರೋಧ ಮಾಡುವುದಕ್ಕೆ ಹೋಗುವುದಿಲ್ಲ. ಇದು ವಿಕೇಂದ್ರಿಕರಣ, ನಾನು ವಿರೋಧ ಮಾಡುವುದಕ್ಕೆ ಹೋಗುವುದಿಲ್ಲ ಮತ್ತು ತಾಲ್ಲೂಕು ಪಂಚಾಯತಿ ಕಾರ್ಯಾಲಯದಲ್ಲಿ ಶಾಸಕರಿಗೂ ಒಂದು ಕಾರ್ಯಾಲಯವಿತ್ತು. ತಾಲ್ಲೂಕು ಪಂಚಾಯತಿ ಅಧ್ಯಕ್ಷರಿಗೆ ಒಂದು ಸಣ್ಣ ನಾಮಫಲಕ ಇತ್ತು. ಅವರಿಗೆ ಅದು ದೊಡ್ಡ ಪದ್ಮಶ್ರೀ ಬಂದ ಹಾಗೆ. ಇವರ ಕೆಲಸವೇನೆಂದರೆ ಪ್ರತಿ ತಿಂಗಳು 5ನೇ ತಾರೀಖು ಬಿ.ಡಿ.ಓ. ತಹಸಿಲ್ದಾರರನ್ನು ಕರೆಯಿಸಿ ಚರ್ಚೆ ಮಾಡುವುದು. ಇಷ್ಟೇ ಅವನ ಕೆಲಸ. ಈ ವ್ಯವಸ್ಥೆಯು ಕೂಡ ಮೊನ್ನೆಯವರ ತಿದ್ದುಪಡಿಯಿಂದ ನೆಗೆದು ಬಿದ್ದು ಹೋಯಿತು. ಇದು ಒಂದು ಕಡೆಯಾಯಿತು. ಈಗ ಎಲ್ಲಾ ಕಡೆ ಮಂತ್ರಿಗಳು ಏನು ಭಾಷಣ ಮಾಡುತ್ತೀರಿ? ರಾಜಕಾರಣಿಗಳ ಹಸ್ತಕ್ಷೇಪ ಬೇಡ. ರಾಜಕಾರಣಿಗಳ ಹಸ್ತಕ್ಷೇಪ ನಮ್ಮ ಸರ್ಕಾರದಲ್ಲಿ ನಡೆಯುವುದಿಲ್ಲ. ನೀವು ಮಂತ್ರಿಗಳು ರಾಜಕಾರಣಿಗಳು ಅಲ್ಲವ್ರೋ? ಮಂತ್ರಿಗಳ ಹಸ್ತಕ್ಷೇಪ ಇಲ್ಲವ್ರೋ? ನಿವೆಲ್ಲಾ ತಲೆಗೆ ಮಡಿಕೆ ಹಾಕಿಕೊಂಡಿದ್ದೀರಾ? ಯಾವ ದಿಕ್ಕಿಗೂ ಕಣ್ಣು ಕಿವಿ ಯಾವುದೂ ನೋಡುತ್ತಿಲ್ಲ ಕಾಣುತ್ತಿಲ್ಲ ಎಂದು ಕಾಣುತ್ತದೆ. ಸಂಪೂರ್ಣವಾಗಿ ಒಳಗಡೆ ಕತ್ತಲಲ್ಲಿ ಕುಳಿತಿದ್ದೀರಾ? ನೀವು ಯಾರು ಅಧಿಕಾರಿಗಳನ್ನು ಈ ಕಡೆಯಿಂದ ಆ ಕಡೆ ವರ್ಗಾ ಮಾಡಿಸಿ ಇಚ್ಛೆ ಬಂದವರನ್ನು ಹಾಕಿಸಿಕೊಂಡಿಲ್ಲವ್ರೋ? ಪ್ರತಿ ಸರ್ಕಾರ ಬಂದಾಗಲೂ ಅಧಿಕಾರಿಗಳನ್ನು ಒದ್ದು ಹೊರಗೆ ಹಾಕುತ್ತೀರಿ. ಒಬ್ಬ ಮುಖ್ಯಮಂತ್ರಿ ಬಂದ ತಕ್ಷಣ ಅವರ ಸುತ್ತಾ ಇರತಕ್ಕಂತವರೆಲ್ಲಾ ಹೋಗಬೇಕು. ಈ ರೀತಿ ಪ್ರತಿ ಮಂತ್ರಿಮಂಡಲ ಬಂದಾಗ ನಿಮ್ಮ ಇಚ್ಛೆ- ಬಂದವರು ಇಟ್ಟು ಕೊಳ್ಳುತ್ತೀರಿ ಬೇರೆಯವರನ್ನು ಹೊರಗಡೆಗೆ ಹಾಕುತ್ತೀರಿ. ಆ ಅಧಿಕಾರಿಗಳ ಮೇಲೆ ಮಾತನಾಡಬಾರದು, ಜಿಲ್ಲಾಧಿಕಾರಿಗಳ ಜೊತೆ ಮಾತನಾಡಬಾರದು, ಕ್ಷೇತ್ರಾಭಿವೃದ್ಧಿ ಅಧಿಕಾರಿ ಜೊತೆ ಮಾತನಾಡಬಾರದು, ತಹಸಿಲ್ದಾರ್ ಹತ್ತಿರ ಹೋಗಬಾರದು. ಈ ರೀತಿಯಾದರೆ ನಾವು ಏತಕ್ಕೆ ಇದ್ದೇವೆ ಎನ್ನುವುದು ದೇವರಾಜ್ ನನಗೆ ಇನ್ನೂ ಅರ್ಥವಾಗಿಲ್ಲ. ನಮ್ಮ ಹಣೆಬರಹ ಏನು?

ಮಾನ್ಯ ಪಟೇಲರೆ ನಿಮ್ಮ ವ್ಯವಸ್ಥೆ ಬಂದು ಏನು ಮಾಡಿದ್ದೀರೆಂದರೆ, ತಾಲ್ಲೂಕಿನಲ್ಲಿ ಜಿಲ್ಲಾಧಿಕಾರಿ ಜನಸಂಪರ್ಕ ಸಭೆ ಕರೆಯುವುದು, ಆ ಜನಸಂಪರ್ಕ ಸಭೆಯಲ್ಲಿ ಜಿಲ್ಲಾಧಿಕಾರಿ ಶಾಸಕರು ಕುಳಿತುಕೊಳ್ಳತಕ್ಕಂಥ ಕುರ್ಚಿಯಲ್ಲಿ ಕುಳಿತುಕೊಂಡು ಎಲ್ಲಾ ಅಧಿಕಾರಿಗಳ ದರ್ಬಾರು. ಅಲ್ಲಿ ಶಾಸಕರಿಗೆ ಆಗದೆ ಇದ್ದವರು ಹೋಗಿ ಜಿಲ್ಲಾಧಿಕಾರಿಗಳ ಮುಂದೆ, ಸ್ವಾಮಿ ನಮ್ಮ ಈ ಶಾಸಕರು ನಮಗೆ ಅನ್ಯಾಯ ಮಾಡಿದ್ದಾರೆಂದು ಹೇಳಿ ಹಾಳೆಗಟ್ಟಲೆ ಆ ಒಂದು ಆರೋಪಣೆ ಪಟ್ಟಿಯನ್ನು ಕೊಟ್ಟಾಗ ಜಿಲ್ಲಾಧಿಕಾರಿ ತೆಗೆದುಕೊಳ್ಳುವುದು.

5.40 ಪಿ.ಎಂ

ಶ್ರೀ ವಾಟಾಳ್ ನಾಗರಾಜ್ (ಮುಂದು)

ಇದು ಎಂಥ ನಾಚಿಕೆಗೇಡು? ಒಬ್ಬ ಜಿಲ್ಲಾಧಿಕಾರಿ ತಾಲ್ಲೂಕು ಪಂಚಾಯಿತಿ ಸಭೆಯಲ್ಲಿ ಜನಸಂಪರ್ಕ ಸಭೆಯನ್ನು ನಡೆಸಿ ನಮ್ಮ ಶಾಸಕರ ಬಗ್ಗೆ ಬೇರೆಯವರು ಕೊಟ್ಟಂಥ ದೂರನ್ನು ಅವರು ತೆಗೆದುಕೊಳ್ಳುವುದೆಂದರೆ ಇದು ಪ್ರಜಾಪ್ರಭುತ್ವಕ್ಕೆ ನಾಚಿಕೆಗೇಡು, ಇದಕ್ಕಿಂತ ಅವಮಾನ ಮತ್ತೊಂದಿಲ್ಲವೆಂದು ನಾನು ಘಂಟಾಘೋಷವಾಗಿ ಹೇಳುತ್ತೇನೆ.

ಒಬ್ಬ ಮಾನ್ಯ ಸದಸ್ಯರು : ಯಾವ ತಾಲ್ಲೂಕು ಪಂಚಾಯಿತಿಯಲ್ಲಿ ಹೇಳುತ್ತಿದ್ದೀರಿ?

ಶ್ರೀ ವಾಟಾಳ್ ನಾಗರಾಜ್ : ಇದು ಎಲ್ಲಾ ಕಡೆಗಳಲ್ಲೂ ಇರತಕ್ಕದ್ದು

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಇದು ಎಲ್ಲಾ ತಾಲ್ಲೂಕುಗಳಲ್ಲಿ ನಡೆಯುತ್ತಿರತಕ್ಕದ್ದು. ಇದು ನಾಚಿಕೆಗೇಡು.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ಆ ಜನಸಂಪರ್ಕ ಸಭೆಗೆ ಶಾಸಕರನ್ನು ಕರೆಯಬೇಕೆಂದು ನಿಯಮ ಏನೂ ಇಲ್ಲವೆಂದು ಜಿಲ್ಲಾಧಿಕಾರಿಗಳು ತೀರ್ಮಾನ ಮಾಡಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಜಿಲ್ಲಾಧಿಕಾರಿ ಆ ಸಭೆಯಲ್ಲಿ ಅಧ್ಯಕ್ಷತೆ ವಹಿಸುವುದು ಜನಸಂಪರ್ಕ ಸಭೆಯನ್ನು ಕರೆಯುವುದು.

ಶ್ರೀ ಜೆ.ಹೆಚ್. ಪಟೇಲ್ : ನೀವು ಹೇಳುತ್ತಿರತಕ್ಕ ಪರಿಸ್ಥಿತಿ ಯಾರ ಕಾಲದಲ್ಲಿತ್ತು?

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ಇದುವರೆಗೂ ಎಲ್ಲೂ ಕೂಡ ಜನಸಂಪರ್ಕ ಸಭೆಯನ್ನೇ ಕರೆದಿಲ್ಲ. ಯಾವ ತಾಲ್ಲೂಕಿನಲ್ಲಿ ಕರೆದಿದ್ದಾರೆ?

ಶ್ರೀ ವಾಟಾಳ್ ನಾಗರಾಜ್ : ನಾವು ಆತ್ಮಶೋಧನೆ ಮಾಡಿಕೊಳ್ಳೋಣ. ನಿಮ್ಮ ತಾಲ್ಲೂಕಿನಲ್ಲಿ ಕರೆದಿಲ್ಲದಿದ್ದರೆ ನಮ್ಮ ತಾಲ್ಲೂಕಿನಲ್ಲಿ ಕರೆದಿದ್ದಾರೆ. ನಿಮ್ಮಲ್ಲಿ ಕರೆದಿಲ್ಲದಿರಬಹುದು. ಹಾಗಾದರೆ ಜನತಾ ದಳದ ಶಾಸಕರು ಮಾತ್ರ ನೀವೇ ಕರೆದುಕೊಳ್ಳುವುದು, ನಮಗೆ ಜಿಲ್ಲಾಧಿಕಾರಿಗಳನ್ನು ಬಿಟ್ಟಿದ್ದೀರಾ? ನಾವು ಪ್ರಮಾಣಿಕವಾಗಿ ಮಾತನಾಡೋಣ. ಮಾನ್ಯ ಅಧ್ಯಕ್ಷರಿಗೆ ನಾನು ಹೇಳುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ನೀವು ಕುಳಿತು ಕೊಳ್ಳಿಸ್ವಾಮಿ, ಹಳ್ಳಿಗೆ ಬರಬೇಡ ಎಂದು ಅವರಿಗೆ ಯಾರು ಹೇಳುತ್ತಾರೆ? ಶ್ರೀಮತಿ ಲೀಲಾದೇವಿ ಪ್ರಸಾದ್‌ರವರಿಗೆ ನಾನು ಹೇಳುತ್ತಿರುವುದು ಏನೆಂದು ಗೊತ್ತಿಲ್ಲ. ನಾನು ಹೇಳುವುದನ್ನು ತಾವು ತಮ್ಮ ಎರಡೂ ಕಿವಿಗಳಿಂದ ಆಲಿಸಬೇಕು. ಜಿಲ್ಲಾಧಿಕಾರಿಗಳು ಜನಸಂಪರ್ಕ ಸಭೆಯನ್ನು ಪ್ರತಿ ತಾಲ್ಲೂಕಿನಲ್ಲಿ ಕರೆಯಬೇಕೆಂದು ಮಾನ್ಯ ಮುಖ್ಯಮಂತ್ರಿಗಳಿಂದ ಹೊರಟಂಥ ಆದೇಶದ ಪ್ರಕಾರ ಎಲ್ಲಾ ಜಿಲ್ಲೆಗಳಲ್ಲೂ ಸಂಪರ್ಕ ಸಭೆಯನ್ನು ಜಿಲ್ಲಾಧಿಕಾರಿಗಳು ಕರೆಯುತ್ತಿದ್ದಾರೆ. ಈ ರೀತಿ ಜನಸಂಪರ್ಕ ಸಭೆಗಳನ್ನು ಕರೆದಿರುವ ಚಿತ್ರಗಳು ಎಲ್ಲಾ ಪತ್ರಿಕೆಗಳಲ್ಲೂ ಪ್ರಕಟವಾಗಿದೆ. ಜಿಲ್ಲಾಧಿಕಾರಿಗಳು ಜನಸಂಪರ್ಕ ಸಭೆಯನ್ನು ಕರೆದಿರುವುದು ಎಂದು ಪತ್ರಿಕೆಗಳಲ್ಲಿ ಬಂದಿದೆ. ನನ್ನ ಕ್ಷೇತ್ರದಲ್ಲೂ ಕೂಡ ಜನಸಂಪರ್ಕ ಸಭೆಯನ್ನು ಕರೆದಿದ್ದಾರೆ.

ನನ್ನ ಪಕ್ಕದ ಕ್ಷೇತ್ರದಲ್ಲಿ, ಅದರ ಅಕ್ಕದ ಕ್ಷೇತ್ರದಲ್ಲೂ ಕರೆದಿದ್ದಾರೆ. ಇದು ಎಲ್ಲ ಜಿಲ್ಲೆಗಳಲ್ಲೂ ನಡೆದಿರುವಂಥ ಒಂದು ವ್ಯವಸ್ಥೆ. ಜಿಲ್ಲಾಧಿಕಾರಿ ಜನಸಂಪರ್ಕ ಸಭೆಯನ್ನು ಕರೆಯುವುದು, ಹಾಗಾದರೆ ಅಲ್ಲಿ ಶಾಸಕನ ಪರಿಸ್ಥಿತಿ ಏನು? ಆ ಜನಸಂಪರ್ಕ ಸಭೆಯಲ್ಲಿ ಜಿಲ್ಲಾಧಿಕಾರಿ ಅಧ್ಯಕ್ಷತೆಯನ್ನು ವಹಿಸುವುದಾದರೆ ಶಾಸಕ ಏನು ಮಾಡಬೇಕು. ಈ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಚುನಾಯಿತ ಪ್ರತಿನಿದಿ ಎಲ್ಲಿರಬೇಕು? ಜಿಲ್ಲಾಧಿಕಾರಿ ಬರುವವರೆಗೂ ಕೈಕಟ್ಟಿಕೊಂಡು ನಿಂತರಬೇಕು, ಅವರು ಕುರ್ಚಿಯಲ್ಲಿ ಕುಳಿತುಕೊಳ್ಳುವವರೆಗೂ ನಾವು ಕಾದಿರಬೇಕು. ಈ ವ್ಯವಸ್ಥೆ ಯಾವ ಓಬೀರಾಯನ ಕಾಲದಲ್ಲೂ ಇರಲಿಲ್ಲ.

ಒಬ್ಬ ಮಾನ್ಯ ಸದಸ್ಯರು : ಜಿಲ್ಲಾಧಿಕಾರಿಗಳು ಜನಸಂಪರ್ಕ ಸಭೆಯನ್ನು ಕರೆದು ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಸಾರ್ವಜನಿಕ ಕುಂದುಕೊರತೆಗಳನ್ನು ಕೇಳತಕ್ಕದ್ದು. ಶಾಸಕರ ಮೇಲೆ ಆಪಾದನೆಗಳನ್ನು ಸ್ವೀಕಾರ ಮಾಡುವುದಕ್ಕೆ ಬರುವುದಿಲ್ಲ.

(ಗೊಂದಲ)

ಶ್ರೀ ಎಸ್. ಶಿವಪ್ಪ : ಜಿಲ್ಲಾಧಿಕಾರಿಗಳ ಬಗ್ಗೆ ಮಾನ್ಯ ವಾಟಾಳ್ ರವರು ಮಾತನಾಡುತ್ತಿದ್ದಾರೆ. ಜಿಲ್ಲಾ ಉಸ್ತುವಾರಿ ಮಂತ್ರಿಗಳು ಆ ಕ್ಷೇತ್ರದ ಶಾಸಕರನ್ನು ಬಿಟ್ಟು ಬೇರೆ ಕ್ಷೇತ್ರದ ಶಾಸಕರನ್ನು ಕರೆದುಕೊಂಡು ಬಂದು ಜನಸಂಪರ್ಕ ಸಭೆಯನ್ನು ಮಾಡುವಂಥ ವ್ಯವಸ್ಥೆ ಇದೆಯೇ ಎಂಬುದನ್ನು ಹೇಳಬೇಕು.

ಅಧ್ಯಕ್ಷರು : ವಾಟಾಳ್ ನಾಗರಾಜ್‌ರವರೇ, ನಿಮ್ಮ ಮಾತಿಗೆ ತಡೆ ಹಾಕಬೇಕೆಂಬ ಅಭಿಪ್ರಾಯ ನನ್ನದಲ್ಲ. ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಪ್ರಾರಂಭದಲ್ಲೆ ನಾನು ಹೇಳಿದ್ದೇನೆ. 7 ಗಂಟೆಯ ಹೊತ್ತಿಗೆ ಉತ್ತರ ಮುಗಿಯಬೇಕಾಗುತ್ತದೆ. ಈಗಾಗಲೇ 5.45 ಗಂಟೆಯಾಗಿದೆ. ಇನ್ನೂ ಒಬ್ಬಿಬ್ಬರು ಮಾತನಾಡಬೇಕಾದ ಶಾಸಕರಿದ್ದಾರೆ.

ಶ್ರೀ ಡಿ.ಕೆ. ಶಿವಕುಮಾರ್ : ಮಾನ್ಯ ಅಧ್ಯಕ್ಷರೆ, ಮಾತನಾಡುವವರಿಗೆ ದಯವಿಟ್ಟು ಕಾಲವನ್ನು ನಿಗದಿ ಮಾಡಬೇಡಿ. ಇದು ಎಲ್ಲಾ ಶಾಸಕರ ಹಕ್ಕಿನ ವಿಚಾರ. ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿ ಎಂದರೆ ನಮ್ಮ ಕಥೆ ಮುಗಿದುಹೋದಂತೆ. ಮುನ್ನೂರು ಅರವತ್ತೈದು ದಿವಸವೂ ಈ ಅಸೆಂಬ್ಲಿಯನ್ನೇ ನಡೆಸಿ. ನಾವು ಇಲ್ಲೇ ಇದ್ದುಬಿಡುತ್ತೇನೆ. ನಮ್ಮ ಹಕ್ಕನ್ನು ಮಾತ್ರ ಮೊಟಕುಮಾಡಬೇಡಿ.

(ಗೊಂದಲ)

ಅಧ್ಯಕ್ಷರು : ಹಾಗೆಲ್ಲಾ ಮಾಡುವುದಕ್ಕಾಗುವುದಿಲ್ಲ.

ಶ್ರೀ ಡಿ.ಕೆ. ಶಿವಕುಮಾರ್ : ಇಲ್ಲದಿದ್ದರೆ ನಮಗೆ ಈ ವಿಧಾನಸೌಧದಲ್ಲೇ ಒಂದು ಕೊಠಡಿಯನ್ನು ಕೊಟ್ಟರೆ ನಾವು ಆರಾಮವಾಗಿರುತ್ತೇವೆ.

ಒಬ್ಬ ಮಾನ್ಯ ಸದಸ್ಯರು : ಸರ್ಕಾರದಿಂದ ಹಣ ಕೊಟ್ಟಿದ್ದೇವೆ. ಅಲ್ಲಿ ಬರಗಾಲವನ್ನು ನೋಡುವುದಕ್ಕೆ ಶಾಸಕರಿಗೇನು ಕೆಲಸವಿದೆ. ಉಸ್ತುವಾರಿ ಸಚಿವರು..

ಅಧ್ಯಕ್ಷರು : ವಾಟಾಳ್ ನಾಗರಾಜ್‌ರವರೇ, ಸಾಕಷ್ಟು ಪರಿಣಾಮಕಾರಿಯಾಗಿ 3-4 ಜನ ಸದಸ್ಯರು ಹೇಳಿದ್ದೀರಿ. ಇನ್ನುಳಿದ ಶಾಸಕರು 5-5 ನಿಮಿಷಕಾಲ ಅವರವರ ಕ್ಷೇತ್ರಗಳಿಗೆ ಸಂಬಂಧಪಟ್ಟಂತೆ ಹೇಳಿದರೆ ಮುಖ್ಯ ಮಂತ್ರಿಗಳು ಉತ್ತರ ಹೇಳುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಮುಖ್ಯಮಂತ್ರಿಗಳು ಏನು ಉತ್ತರ ಹೇಳುತ್ತಾರೆ? ನಾವು ಹೇಳಿದರೆ ತಾನೇ ಅವರು ಹೇಳುವುದು.

ಅಧ್ಯಕ್ಷರು : ನೀವು ಹೇಳಬೇಡಿ ಎಂದು ನಾನು ಹೇಳುತ್ತಿಲ್ಲ. ಅತ್ಯಂತ ಪರಿಣಾಮಕಾರಿಯಾಗಿ ತಾವು ಮಾತನಾಡುತ್ತಿದ್ದೀರಿ. ನಾಳೆ ಬಜೆಟ್ ಮಂಡನೆ ಇದೆ. ನಾಳೆ ನಾವು ಯಾವ ವ್ಯವಹಾರವನ್ನೂ ನಡೆಸುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ತಾವು ಗಮನಿಸಿರಬಹುದು. ನಾನು 12 ವರ್ಷಗಳಿಂದ ಇಲ್ಲಿ ಕೆಲಸ ಮಾಡುತ್ತಿದ್ದೇನೆ. ಇವತ್ತು ನಾನು ಇಲ್ಲಿ ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ. ಈ ಪರಿಸ್ಥಿತಿಯಿಂದ ನಾವು ನಮ್ಮ ಕರ್ತವ್ಯವನ್ನು ನಿರ್ವಹಿಸುವುದಕ್ಕೆ ಆಗುತ್ತಿಲ್ಲ ನಮ್ಮನ್ನು ಈ ಸ್ಥಿತಿಗೆ ತಂದಿದ್ದೀರಿ ಎಂದು ಚರ್ಚೆ ಈ ಕಡೆಯ ಸದಸ್ಯರು ಚರ್ಚೆಮಾಡುವ ಮಟ್ಟಕ್ಕೆ ಆ ಕಡೆಯ ಸದ್ಯಸರೂ ಅದೇ ಪರಿಸ್ಥಿತಿಯಲ್ಲಿದ್ದಾರೆ. ನಾವು ಯಾರೂ ಕೂಡ ಮಾತನಾಡುವ ಸ್ಥಿತಿಯಲ್ಲಿಲ್ಲ. ಇವತ್ತು ಅನೇಕರಿಗೆ ಅಸಮಾಧಾವಗಳಾಗಿವೆ. ಯಾವುದನ್ನು ಹೇಳಬೇಕು, ಯಾವುದನ್ನು ಹೇಳಬಾರದೆಂಬ ಗೊಂದಲದಲ್ಲಿದ್ದಾರೆ. ಶಾಸಕರು ತಮ್ಮ ತಮ್ಮ ಅಭಿಪ್ರಾಯಗಳನ್ನು ಹೇಳಲಿ. ನಾವು ಹೇಗೋ ಹೊರಗಡೆ ಬಂದು ಬಿಟ್ಟದ್ದೇವೆ. ರಾತ್ರಿ 9-10 ಗಂಟೆ ಆದರೂ ಪರವಾಗಿಲ್ಲ. ಮಾನ್ಯ ಮೊಯ್ಲಿಯವರು ಹೇಳಿದಂತೆ ಈ ಸ್ಥಿತಿ ಹಿಂದೆದೂ ಬಂದಿರಲಿಲ್ಲ. ಈಗ ಬಂದಿರತಕ್ಕದ್ದು ನಮ್ಮ ತಲೆಯನ್ನು ತಗ್ಗಿಸುವಂಥಾದ್ದು. ಅನೇಕ ವಿಷಯಗಳು ಅನಿವಾರ್ಯವಾಗಿ ಹೊರಗಡೆ ನಡೆದಿರುವುದರಿಂದ ತಾವು ಅದನ್ನು ತಿಳಿಸುವುದಕ್ಕೆ ಅವಕಾಶವನ್ನು ಕೊಟ್ಟಿದ್ದೀರಿ, ಎಲ್ಲರೂ ಆವರವರ ಅಭಿಪ್ರಾಯಗಳನ್ನು ವ್ಯಕ್ತಪಡಿಸಲಿ. ಇದು ಒಂದೇ ಸಾರಿ ತೀರ್ಮಾನವಾಗಲಿ. ನಮಗೆ ಯಾವ ಅಧಿಕಾರವಿಲ್ಲ ಅದನ್ನು ಮಾಡುವುದಕ್ಕೆ ನಾವು ಯಾರೂ ಕೂಡ ಇಚ್ಛಿಪಡುವುದಿಲ್ಲ. ಇದು ತೀರ್ಮಾನವಾಗಲಿ. ಅವರು ಏನು ಮಾಡುತ್ತಾರೋ ಮಾಡಿಕೊಳ್ಳಲಿ. ನಮಗೆ ಜನತೆ ಇದ್ದಾರೆ. ಈ ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಾವು ಏನೇನು ಕಾರ್ಯಕ್ರಮಗಳನ್ನು ನಡೆಸಬೇಕೋ ನಡೆಸೋಣ. ಕಳೆದ 3 ತಿಂಗಳಿಂದ ನಮಗೆ ಏನು ಆಗಿದೆ ಅದರ ಅಳಲನ್ನು, ನೋವನ್ನು, ಹೇಳಿಕೊಳ್ಳುವುದಕ್ಕೆ ದಯವಿಟ್ಟು ನಮಗೆ ಅವಕಾಶ ಮಾಡಿಕೊಡಿ. ಉಸಿರು ಕಟ್ಟುವಂಥ ಪರಿಸ್ಥಿತಿ ಏನು ಉಂಟಾಗಿದೆ ಅದನ್ನು ಹೇಳಿಕೊಳ್ಳುವುದಕ್ಕೆ ದಯವಿಟ್ಟು ನಮಗೆ ಅವಕಾಶಮಾಡಿಕೊಡಿ.

ಅಧ್ಯಕ್ಷರು : ಅವಕಾಶವನ್ನು ಮಾಡಿಕೊಡಬಾರದೆಂದು ನಾನಿಲ್ಲ. ಸಂಕ್ಷಿಪ್ತವಾಗಿ ತಾವು ಏನೇನು ಹೇಳಬೇಕೋ ಅದನ್ನು ಹೇಳಿದಿರಿ ಹಿರಿಯ ಸದಸ್ಯರಾದ ಮಾನ್ಯ ವೀರಪ್ಪಮೊಯಿಲಿಯವರು ಬಹಳ ಸೂಕ್ಷ್ಮವಾಗಿ ಈ ವಿಷಯ ಎಂಥಾದ್ದೆಂದು ಪ್ರಸ್ತಾಪ ಮಾಡಿದ್ದಾರೆ. ಅದೇರೀತಿ ಮಾನ್ಯ ನಂಜೇಗೌಡರೂ ಮಾತನಾಡಿದ್ದಾರೆ. ಎಲ್ಲರೂ ಕೂಡ ಈ ವಿಷಯದ ಗಂಭೀರತೆಯನ್ನು ತಿಳಿಸಿದ್ದಾರೆ. ಹೆಚ್ಚು ಹೊತ್ತು ಮಾತನಾಡಿದರೆ ಮಾತ್ರ ಹೆಚ್ಚು ವಿಷಯ ಹೊರಗೆ ಬರುತ್ತದೆಂದು ಏನೂ ಇಲ್ಲ. ತಮ್ಮಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಬೇಗ ಬೇಗ ಮುಗಿಸಿದರೆ, 7.30 ಕ್ಕೆ ಪಕ್ಷದ ಸಭೆಯನ್ನು ಅವರು ಕರೆದಿದ್ದಾರೆ. ಆದ್ದರಿಂದ ಬೇಗ ಮುಗಿಸುವಂತೆ ಕೇಳಿ ಕೊಂಡಿದ್ದಾರೆ. ನಾಳೆದಿವಸ ಬಜೆಟ್ ಮಂಡನೆ ಇದೆ. ಅದರ ಮೇಲೆ ನಾವೇನೂ ಚರ್ಚೆ ಮಾಡುವುದಕ್ಕಾಗುವುದಿಲ್ಲ. ಇವತ್ತು ಅವರಿಗೆ ಅವರದ್ದೇ ಆದ ಕಾರ್ಯಕ್ರಮಗಳಿವೆ. ನಿನ್ನೆ ನಿಮಗೂ ನಿಮ್ಮ ಕಾರ್ಯಕ್ರಮಗಳಿದ್ದುವು. ದಯವಿಟ್ಟು ಎಲ್ಲರೂ ಸಹಕರಿಸಬೇಕು. 365 ದಿವಸವೂ ನಾವು ಕುಳಿತುಕೊಳ್ಳೋಣ, ರಾತ್ರಿ 9 ಗಂಟೆಯಾದರೂ ಕುಳಿತುಕೊಳ್ಳೋಣ, 10 ಗಂಟೆಯಾದರೂ ಕುಳಿತುಕೊಳ್ಳೋಣವೆಂದರೆ ಹೇಗೆಸಾಧ್ಯ?

ಒಬ್ಬ ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರೆ, ನನಗೆ ಎರಡು ನಿಮಿಷ ಅವಕಾಶ ಕೊಡಿ. ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ನಾನು ಹೇಳಬೇಕಾಗಿದೆ.

ಶ್ರೀ ವಾಟಾಳ್ ನಾಗರಾಜ್ : ಜಿಲ್ಲಾಧಿಕಾರಿಗಳು ಜನಸಂಪರ್ಕ ಸಭೆಯನ್ನು ಕರೆಯುವಂಥ ವ್ಯವಸ್ಥೆ ಜಾರಿಯಾಗಿದೆ. ಅಲ್ಲಿ ಶಾಸಕರನ್ನು ಕಡೆಗಣಿಸಲಾಗಿದೆ. ತಾಲ್ಲೂಕು

ಪಂಚಾಯಿತಿಯಲ್ಲಿ ಶಾಸಕರು ಅಧ್ಯಕ್ಷರಾಗಿದ್ದವರು ಇನ್ನು ಮುಂದೆ ಅಧ್ಯಕ್ಷರಾಗುವಂಥ ವ್ಯವಸ್ಥೆ ಇಲ್ಲ. ಅಕ್ರಮ ಮತ್ತು ಸಕ್ರಮ ಸಾಗುವಳಿ ಸಮಿತಿ. ಅದರಲ್ಲೂ ಅಧ್ಯಕ್ಷರೇ ಶಾಸಕರಾಗಿದ್ದರು. ಈಗ ಉಪ ವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿದ್ದಾರೆ. ಆ ಸಮಿತಿಗೆ ನಾವು ಸದಸ್ಯರು. ನಾವು ಅಧ್ಯಕ್ಷರಾಗಿದ್ದೆವಲ್ಲ ಆ ಸಮಿತಿಯಲ್ಲಿ ಉಪ ವಿಭಾಗಧಿಕಾರಿಯವರು ಸದಸ್ಯರಾಗಿದ್ದರು ಮೊದಲು. ಶಾಸಕರಿಗೆ ಹಿಂಬಡ್ತಿ ಕೊಟ್ಟು, ಉಪ ವಿಭಾಗಾಧಿಕಾರಿ ಬಂದಾಗ ನಾವು ಶಾಸಕರು ಆದವರು ಎದ್ದು ನಿಂತಿರಬೇಕು.

ಅಧ್ಯಕ್ಷರು : ಆ ಬಗ್ಗೆ ಸರ್ಕಾರಿ ಆಜ್ಞೆ ಬಂದಿದೆಯೇ?

ಶ್ರೀ ವಾಟಾಳ್ ನಾಗರಾಜ್ : ಬಂದು ಯಾವುದೋ ಕಾಲವಾಯಿತು.

ಅಧ್ಯಕ್ಷರು : ಉಪ ವಿಭಾಗಾಧಿಕಾರಿಯನ್ನು ಅಧ್ಯಕ್ಷರನ್ನಾಗಿ ಮಾಡಿ ಶಾಸಕರನ್ನು ಸದಸ್ಯರನ್ನಾಗಿ ಮಾಡಿರತಕ್ಕ ಸರ್ಕಾರಿ ಆಜ್ಞೆ ರೆವಿನ್ಯೂ ಇಲಾಖೆಯಿಂದ ಬಂದಿದೆಯೇ?

ಒಬ್ಬ ಮಾನ್ಯ ಸದಸ್ಯರು : ಅದನ್ನು ಸರ್ಕಾರ ಹೇಳಿದೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಶಿವಕುಮಾರ್ ಅವರೆ, ದಯಮಾಡಿ ಕೇಳಿ.

ಶ್ರೀ ವಾಟಾಳ್ ನಾಗರಾಜ್ : ನಾನು ಎಲ್ಲೆಲ್ಲೂ ಹೋಗುವುದಿಲ್ಲ. ನಾನು ಈ ಸದನದ ಒಳಗೇ ಇರುತ್ತೇನೆ. ಇದು ಸರ್ಕಾರದ ನೀತಿ. ಎರಡನೆಯದು ಆಶ್ರಯ ಯೋಜನೆ. ಅದಕ್ಕೆ ಯಾರು ಅಧ್ಯಕ್ಷರು? ನನಗೆ ಗೊತ್ತಿರುವ ಹಾಗೆ ತಾವು ಅಧ್ಯಕ್ಷರಾಗಿದ್ದಿರೆಂದು ಅಂದು ಕೊಂಡಿದ್ದೇನೆ. ನನಗೆ ಅಷ್ಟು ಅಧಿಕೃತಿವಾಗಿ ಗೊತ್ತಿಲ್ಲ.

ಅಧ್ಯಕ್ಷರು : ಆಶ್ರಯಬಂದಾಗ ನಾನು ನಿರಾಶ್ರಿತನಾಗಿದ್ದೆ. ನನಗೆ ಆಶ್ರಯ ಸಿಕ್ಕುವ ವೇಳೆಗೆ ಅಲ್ಲಿ ನಿರಾಶ್ರಯವಾಗಿದೆ.

ಶ್ರೀ ವಾಟಾಳ್ ನಾಗರಾಜ್ : ಅದು ನಿಜ. ಅದು ಅತ್ಯಂತ ಸಮಂಜಸವಾದ ಮಾತು ಮತ್ತು ಸತ್ಯ ಕೂಡ ಹೌದು. ತಾವು ಆಗ ಶಾಸಕರಾಗಿರಲಿಲ್ಲ. ಈಗ ಶಾಸಕರಾದಿರಿ. ಅಲ್ಲಿ ನಿರಾಶ್ರಯವಾದಾಗ ಇಲ್ಲಿಗೆ ಬಂದಿದ್ದೀರಿ, ಸಂತೋಷ. ಆದುದರಿಂದ ನೀವು ಇಲ್ಲಿ ನಮಗೆ ಆಶ್ರಯ ಕೊಡಬೇಕು. ಆಶ್ರಯ ಕಮಿಟಿಯಲ್ಲಿ ಹಿಂದೆ ಶಾಸಕರು ಅಧ್ಯಕ್ಷರಾಗಿದ್ದರು. 20 ಅಂಶಗಳ ಕಾರ್ಯಕ್ರಮ ಅಂದರೆ ಅದರಲ್ಲಿ ಏನು ನಾವು ಅಲ್ಲಿ ಕುಳಿತುಕೊಂಡು ಮಾಡುವುದು. ಅಲ್ಲಿ ಏನೂ ಇಲ್ಲ. ಸುಮ್ಮನೆ 20 ಅಂಶಗಳ ಕಾರ್ಯಕ್ರಮ ಏನು ಮಾಡಿದರೂ ಅಷ್ಟೆ. ಎಲ್ಲ ಶಾಸಕರನ್ನು ಕಡೆಗಣಿಸಿದ್ದಾರೆ ಮುಖ್ಯ ಮಂತ್ರಿಗಳು. ಪತ್ರಕರ್ತರು ಏನು ಶಾಸಕರನ್ನು ಕಡೆಗಣಿಸಿದ್ದೀರಿ ಎಂದು ಕೇಳಿದ್ದಾರೆ. ಶಾಸಕರಿಗೆ ರೆವಿನ್ಯೂ ಇನ್ಸ್‌ಪೆಕ್ಟರ್ ಕೆಲಸ ವಹಿಸಲಿ ಅಂದರು. ಇದು ನ್ಯಾಯವೆ? ನಾನು ಹೇಳಲೆ ಹಾಗಾದರೆ, ಮುಖ್ಯಮಂತ್ರಿ ಕೆಲಸ ಮುಖ್ಯ ಕಾರ್ಯದರ್ಶಿ ಮಾಡುವುದಕ್ಕೆ ಸಾಧ್ಯವಿಲ್ಲವೆ? ನಾನು ಈ ಮಾತು ಹೇಳಲೆ? ಇದರಿಂದ ಎಷ್ಟು ಮನಸ್ಸಿಗೆ ನೋವಾಗುತ್ತದೆ. ನಮ್ಮನ್ನೆಲ್ಲ ಒಬ್ಬ ರೆವಿನ್ಯೂ ಇನ್ಸ್‌ಪೆಕ್ಟರ್ ಮಟ್ಟಕ್ಕೆ ಇಳಿಸಿದಿರಲ್ಲ. ಇದು ನಮ್ಮ ಹಣೇಬರಹ. ಈ ಮಟ್ಟಕ್ಕೆ ಇಳಿಸಿದರೆ ಇದಕ್ಕಿಂತ ಅವಹೇಳನ ಇಲ್ಲ.

ಒಂದು ಕಡೆ ತಾಲ್ಲೂಕು ಪಂಚಾಯಿತಿ ವ್ಯವಸ್ಥೆ. ಶಾಸಕರೆಲ್ಲ ಅಧ್ಯಕ್ಷರಿದ್ದರು. ಸ್ವಲ್ಪ ಹಾಗೂ ಹೀಗೂ ಆ ಊರಿನಲ್ಲಿ ಈ ಊರಿನಲ್ಲಿ ಬಡಬಗ್ಗರಿಗೆ ಸೈಟು ಆಯಿತು. ಎಲ್ಲೆಲ್ಲಿ ಅಕ್ರಮ ನಡೆದಿದೆ ಹೇಳಿ. ನಾವು ಶಾಸಕರು ಸೈಟು ಹಂಚಿಕೆಯಲ್ಲಿ ಅಕ್ರಮ

ನಡೆದಿದ್ದರೆ ನೀವು ಕೊಟ್ಟಂತ ಶಿಕ್ಷೆಯನ್ನು ಅನುಭವಿಸುವುದಕ್ಕೆ ನಾವು ಸಿದ್ಧ. ನಿಮಗೆ ಅಧಿಕಾರ ಇದೆ, ನೀವು ನಿಮ್ಮ ಅಧಿಕಾರ ಚಲಾಯಿಸಿ. ಅದು ಬಿಟ್ಟು ಎಲ್ಲ ಶಾಸಕರು ಮಾಡಿದ್ದು ಅಕ್ರಮ ಎನ್ನುವ ರೀತಿಯಲ್ಲಿ ನಿಮ್ಮ ಧೋರಣೆ ಆದರೆ ಎಲ್ಲ ಶಾಸಕರನ್ನು ತೆಗೆದುಹಾಕಿ. ಆಗ ಎಲ್ಲರೂ ನೀವು ಹೇಳಿದ ಹಾಗೆ ಕೇಳಿಕೊಂಡು ಇರುತ್ತಾರೆ, ಎಂದು ಹೇಳಿದ್ದಾರೋ. ಅದು ನಮ್ಮಿಂದ ಸಾಧ್ಯವಿಲ್ಲ. ನಮ್ಮ ಪ್ರಾಣ ಹೋದರೂ ನೀವು ಹೇಳಿದ ಹಾಗೆ ಕೇಳುವುದಕ್ಕೆ ಸಾಧ್ಯವಿಲ್ಲ. ಈ ಪ್ರಜಾಪ್ರಭುತ್ವದಲ್ಲಿ ನಮ್ಮನ್ನು ಈ ಮಟ್ಟಕ್ಕೆ ನೀವು ಇಳಿಸುವುದಾದರೆ, ಅದೂ ನಿಮ್ಮ ಕಾಲದಲ್ಲಿ ನನಗೆ ಅತ್ಯಂತ ನೋವಾಗುತ್ತದೆ. ನೀವು ಹೊಸದಾಗಿ ಬಂದಿರಿ, ಬಹಳ ಲವಲವಿಕೆಯಿಂದ ಬಹಳ ವಿಶ್ವಾಸದಿಂದ, ಜನತಾದಳ, ಬಿಜೆಪಿ ಬೇರೆ ಅಲ್ಲ ಅನ್ನದೆ ಹೊಸ ವಾತಾವರಣ ರಾಜ್ಯದಲ್ಲಿ ಸೃಷ್ಟಿಯಾಗುತ್ತದೆಂದರೆ ಇನ್ನೂ ಗಂಭೀರವಾಗಿ ಕಗ್ಗತ್ತಲಾಗುತ್ತದಲ್ಲ ಏಕೆ? ಇನ್ನಾದರೂ ತಾವು ಚಿಂತನೆ ಮಾಡಿ, ಶಾಸಕರ ವ್ಯವಸ್ಥೆ ಬಗ್ಗೆ ತಾವು ಚಿಂತನೆ ಮಾಡಬೇಕು. ಲೋಕಸಭಾ ಸದಸ್ಯರ ಬಗ್ಗೆ ಮಾನ್ಯ ಖರ್ಗೆಯವರು ಹೇಳಿದ್ದಕ್ಕೆ ನಾನು ಹೇಳುತ್ತಿದ್ದೇನೆ. ದುಡ್ಡು ಏನು ಅವರ ಜೇಬಿಗೆ ಕೊಡುವುದಿಲ್ಲ. ಆದರೂ ಸಹ ಒಂದೊಂದು ಕೋಟಿ ರೂಪಾಯಿ ಕೆಲಸ ಮಾಡುವುದಕ್ಕೆ ಲೋಕಸಭಾ ಸದಸ್ಯರೇ ಅಲ್ಲಿ ಕೇಳಿದರು. ನಮ್ಮದೇನು ನಮ್ಮ ನಮ್ಮ ಕ್ಷೇತ್ರಗಳಲ್ಲಿ ನಡೆಯುವುದಿಲ್ಲ.

ನಮಗೆ ಬಹಳ ತೊಂದರೆ ಇದೆ. ಅದಕ್ಕೆ ನಮಗೂ ಅಭಿವೃದ್ಧಿ ಕಾರ್ಯಗಳಲ್ಲಿ ಭಾಗವಹಿಸುವುದಕ್ಕೆ ಅವಕಾಶ ಕೊಡಿ ಅಂದರು. ಪ್ರಧಾನ ಮಂತ್ರಿಗಳನ್ನು ಕೇಳಿದಾಗ ನಿಮ್ಮ ನಿಮ್ಮ ಕ್ಷೇತ್ರದಲ್ಲಿ ಒಂದು ಕೋಟಿ ರೂಪಾಯಿ ಕೆಲಸ ಮಾಡತಕ್ಕ ವ್ಯವಸ್ಥೆ ಮಾಡುತ್ತೇವೆ, ಜೊತೆಗೆ ಜಿಲ್ಲಾಧಿಕಾರಿಗಳ ಕಾರ್ಯಾಲಯದಲ್ಲಿ ಒಂದು ಕಾರ್ಯಾಲಯ, ಜೊತೆಗೆ ಒಂದು ಮೋಟಾರು ವಾಹನ. ಆದರೆ ನಮಗೆ ಶಾಸಕರಿಗೆ ಒಂದು ಜಟಕಾ ಗಾಡಿ ಕೂಡ ಇಲ್ಲ. ಅಂದರೆ ಎಷ್ಟು ಸಣ್ಣಮಟ್ಟದಲ್ಲಿ ಶಾಸಕರನ್ನು ಕಾಣುತ್ತಿದ್ದೀರಿ? ಲೋಕಸಭಾ ಸದಸ್ಯರಿಗೆ ಜಿಲ್ಲಾಧಿಕಾರಿಗಳ ಕಾರ್ಯಾಲಯದಲ್ಲಿ ಒಂದು ಕಾರ್ಯಾಲಯ, ಮೋಟಾರು ಕಾರು, ಒಂದು ಕೋಟಿ ರೂಪಾಯಿ ವ್ಯವಸ್ಥೆ. ದಯವಿಟ್ಟು ನೀವು ನಮಗೆಲ್ಲ ಶಾಸಕರಿಗೆ ಕನಿಷ್ಠ ಎರಡು ಕೋಟಿ ರೂಪಾಯಿ ಕೆಲಸ ಕೊಡತಕ್ಕ ವ್ಯವಸ್ಥೆ ಮಾಡಿ. ನಮಗೆ ನೀವು ದುಡ್ಡು ಕೊಡಬೇಡಿ. ಎರಡು ಕೋಟಿ ರೂಪಾಯಿಗಳನ್ನು ಆಯವ್ಯಯದಲ್ಲಿ ತೋರಿಸಿ. ರಸ್ತೆಗಳು, ಮನೆಗಳು, ಏನೆಲ್ಲ ಕೆಲಸ ಬೇಕು ತೋರಿಸಿ. ಪ್ರತಿವರ್ಷ ಆಯವ್ಯಯದಲ್ಲಿ ಹಣ ಒದಗಿಸಿ. ಯಾವ ಯಾವ ರಸ್ತೆ ಬೇಕು ಮಾಡಿಸಿಕೊಳ್ಳಬೇಕೆಂದು ಕೇಳುತ್ತಾರೆ ಅದಕ್ಕೆ ಹಣ ಕೊಡಿ. ನಮಗೆ ಆಶ್ರಯ ಬೇಡ, ಏನೂ ಬೇಡ. ನಮಗೆ ಅಭಿವೃದ್ಧಿ ಕೆಲಸ ಕಾರ್ಯಗಳಿಗೆ ಎರಡು ಕೋಟಿ ರೂಪಾಯಿಗಳನ್ನು ಕೊಡಿ. ಅವರು ಯಾವುದೇ ಪಕ್ಷದವರಾಗಲಿ. ಒಬ್ಬೊಬ್ಬ ಶಾಸಕರಿಗೆ ಎರಡೆರಡು ಕೋಟಿ ರೂಪಾಯಿಗಳನ್ನು ಕೊಡಿ. ನಾವು ನಮ್ಮ ನಮ್ಮ ಕ್ಷೇತ್ರದಲ್ಲಿ ಅದಕ್ಕೆ ವ್ಯವಸ್ಥೆ ಮಾಡಿಕೊಳ್ಳುತ್ತೇವೆ. ಯಾವ ಹೋಬಳಿ, ಯಾವ ಹಳ್ಳಿ ಆಗಲಿ ಮಾಡುತ್ತೇವೆ. ವರ್ಷಕ್ಕೆ ಎರಡು ಕೋಟಿ ರೂಪಾಯಿಗಳನ್ನು ಪ್ರಾಮಾಣಿಕವಾಗಿ ಕೊಡಿ. ನಮಗೆ ಬರೀ ಭರವಸೆ ಬೇಡ. ದುಡ್ಡು ಕೊಡದೆ ಎಷ್ಟೋ ಭರವಸೆಗಳು ಹುಸಿಯಾಗಿವೆ. ಆಯವ್ಯಯದಲ್ಲಿ ಒಬ್ಬ ಶಾಸಕರ ಕ್ಷೇತ್ರಕ್ಕೆ ಎರಡು ಕೋಟಿ ರೂಪಾಯಿಗಳನ್ನು ನಾವು ಕೊಡುತ್ತೇವೆಂದು ಹೇಳಿದರೆ ನನಗೆ ಸಮಂಜಸವಾಗುತ್ತದೆ. ಕ್ಷೇತ್ರದಲ್ಲಿ ಇದೇ ಪರಿಸ್ಥಿತಿ ಮುಂದುವರಿದರೆ ಮುಂದಿನ ಸಾರಿ ಈ ಕಡೆ ಆಗಲಿ, ಆ ಕಡೆ ಆಗಲಿ ಎಲ್ಲ ಠೇವಣಿ ಹಣವನ್ನು ಸರ್ಕಾರಕ್ಕೆ ಒಪ್ಪಿಸಬೇಕಾಗುತ್ತದೆ. ನೀವು ಬದುಕಿರುವವರೆಗೆ ತಾವೇ ಅಧಿಕಾರದಲ್ಲಿ ಇರಿ, ನಮ್ಮ ಅಭ್ಯಂತರವಿಲ್ಲ. ಆದರೆ ನಮ್ಮ ಶಾಸಕರ ಪರಿಸ್ಥಿತಿ ಏನು? ವಾಟಾಳ್ ನಾಗರಾಜ್ ಇರಬಹುದು, ಮತ್ತೊಬ್ಬರು ಇರಬಹುದು. ನಾನು ಸ್ವಲ್ಪ ಜೋರು ಮಾಡಿ ಅಧಿಕಾರಿಗಳ ಹತ್ತಿರ ಕೆಲಸ ಮಾಡಿಸಿಕೊಳ್ಳಬಲ್ಲೆ ಎಂದು ಇಟ್ಟುಕೊಳ್ಳೋಣ. ಜೋರು ಮಾಡದೆ ಸೌಜನ್ಯದಿಂದ

ಇರುವವರ ಗತಿ ಏನು? ನಾನು ಎಲ್ಲಾ ಶಾಸಕರಲ್ಲಿ ಕೈಮುಗಿದು ಕೇಳುತ್ತೇನೆ. ನಮ್ಮ ಅಧಿಕಾರಿಗಳ ಹತ್ತಿರ ಯಾರೂ ಕೂಡ ಕೈಜೋಡಿಸಿ ನಿಲ್ಲುವುದು ಬೇಡ. ಸರ್, ಸರ್ ಎಂದರೆ ಅವರ ಪಿತ್ತನೆತ್ತಿಗೆ ಏರುತ್ತದೆ. ನಮ್ಮ ಹಣೇಬರಹ ಅದು. 1969ರಲ್ಲಿ ಮಾನ್ಯ ವೀರೇಂದ್ರ ಪಾಟೀಲರು ಬಂದಾಗ ಒಂದು ಶಿಷ್ಟಾಚಾರದ ಆದೇಶ ಹೊರಡಿಸಿದ್ದರು. ಒಬ್ಬ ಶಾಸಕರು ಕಾರ್ಯಾಲಯಕ್ಕೆ ಬಂದನಂತರ ಅಧಿಕಾರಿ ಎದ್ದು ನಿಲ್ಲಬೇಕು, ಶಾಸಕರನ್ನು ಕರೆಯಬೇಕು, ನಂತರ ಕುಳಿತುಕೊಳ್ಳಬೇಕು. ಏನು ಸಮಸ್ಯೆ ಎಂದು ಕೇಳಬೇಕು. ಕೆಲಸ ಆಗುವುದಾದರೆ ಆಗುತ್ತದೆಂದು ಇಲ್ಲದಿದ್ದರೆ ಇಲ್ಲವೆಂದು ಹೇಳಬೇಕು, ಇಷ್ಟು ಇತ್ತು. ಈಗ ಇದೆಯೇ? ಇಲ್ಲ. ಸಿಗರೇಟ್ ಸೇದಿ ನಿಮ್ಮ ಮುಖಕ್ಕೇ ಬಿಡುತ್ತಾರೆ.

ಒಬ್ಬ ಮಾನ್ಯ ಸದಸ್ಯರು : ಪಾಯಿಂಟ್ ಆಫ್ ಆರ್ಡರ್.

ಶ್ರೀ ವಾಟಾಳ್ ನಾಗರಾಜ್ : ಪಾಯಿಂಟು ಇಲ್ಲ, ಆರ್ಡರು ಇಲ್ಲ, ಎಲ್ಲಿದೆ ಆರ್ಡರ್?

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರೆ, ಹಿಂದೆ ಸರ್ಕಾರ ಇದ್ದಾಗ 180 ಚಿಲ್ಲರೆ ಶಾಸಕರಿದ್ದರು. ಎಲ್ಲಾ ಆಶ್ರಯ ಕಮಿಟಿಗಳಲ್ಲಿ ಶಾಸಕರೇ ಅಧ್ಯಕ್ಷರಾಗಿದ್ದರು. ಈಗ ಅವರೇ 36ಕ್ಕೆ ಬಂದಿದ್ದಾರೆ. ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜು ಅವರು ಹೇಳುವ ಪ್ರಕಾರ 180 ರಿಂದ 36 ಕ್ಕೆ ಇಳಿಸಿದ್ದಾರೆ. ಈಗ ಅವರು ಹೇಳುತ್ತಾರೆ ನಮಗೆ ಠೇವಣಿ ಹೋಗುತ್ತದೆ ಎಂದು.ಇನ್ನೂ ವೃದ್ಧಿ ಆಗುತ್ತದೆ. ಶಾಸಕರು ತಪ್ಪು ಮಾಡಿದ್ದರಿಂದ ಇವತ್ತು 36 ಕ್ಕೆ ಇಳಿದಿದೆ ಎಂದು ನನ್ನ ಅಭಿಪ್ರಾಯ.

ಮಾನ್ಯ ವಾಟಾಳ್ ನಾಗರಾಜ್‌ರವರು ಪ್ರತಿಪಾದಿಸುವ ರೀತಿಯಲ್ಲಿ 180 ಇದ್ದದ್ದು 220ಕ್ಕೆ ಬರಬೇಕಾಗಿತ್ತು.

(ಗೊಂದಲ)

ಶ್ರೀ ಜಿ.ವಿ. ಶಿವರಾಮರೆಡ್ಡಿ : 1985ರಲ್ಲಿ ಎಲ್ಲಾ ಮಂಡಲಗಳಲ್ಲಿ ಇವರಿಗೇ ಅಧಿಕಾರಕ್ಕೆ ಬಂತಿತ್ತು 1989ರಲ್ಲಿ ಸೋತರು ಎಂದು ಅವರು ಹೇಳಬೇಕು. ಅದಕ್ಕೆ ಅವರು ಉತ್ತರ ಹೇಳಲಿ. ಇದೆಲ್ಲ ಮಾತನಾಡುವುದಕ್ಕೆ ನಮಗೂ ಗೊತ್ತಿದೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ನಾನು ಹೇಳತಕ್ಕದ್ದು ಯಾರೋ ಒಬ್ಬರನ್ನು...

ಶ್ರೀ ಜಿ.ವಿ. ಶ್ರೀರಾಮ ರೆಡ್ಡಿ : ಠೇವಣಿಗಳ ವಿಷಯ ಮಾತನಾಡುವುದಾದರೆ ನಾನು ಬೇರೆ ವಿಷಯ ಮಾತನಾಡುವುದಕ್ಕೆ ದಯವಿಟ್ಟು ಅಪ್ಪಣೆ ಕೊಡಬೇಕು. ಇವರು ಯಾರ್ಯಾರು ಠೇವಣಿ ಕಳೆದುಕೊಂಡಿದ್ದರು, ಎಷ್ಟೆಷ್ಟು ಠೇವಣಿ ಸರ್ಕಾರಕ್ಕೆ ಕೊಟ್ಟಿದ್ದಾರೆಂದು ನಮ್ಮ ಹತ್ತಿರ ಮಾಹಿತಿ ಇದೆ. ನಾವು ಹೇಳುತ್ತೇವೆ.

(ಗೊಂದಲ)

ಅಧ್ಯಕ್ಷರು : ಶ್ರೀ ರಾಮರೆಡ್ಡಿಯವರೇ ಸಮಯ ಬಹಳ ಕಡಿಮೆ ಇದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಆ ರೀತಿ ಮಾತನಾಡುವುದನ್ನು ನಾನು ಒಪ್ಪುವುದಿಲ್ಲ, ಬೇರೆ ವಿಷಯವನ್ನು ಬೇಕಾದರೆ ಮಾತನಾಡಲಿ, ರಾಜಕೀಯದ ಬಗ್ಗೆ ಮಾತನಾಡಲಿ. ಆ ವಿಷಯದ ಬಗ್ಗೆ ಮಾತನಾಡಲಿ. ಅದನ್ನು ಬಿಟ್ಟು ಸೋತದ್ದು

ಗೆದ್ದದ್ದನ್ನು ಮಾತನಾಡಿದರೆ ನಮಗೂ ಗೊತ್ತಿದೆ, ಅವತ ಮಾಹಿತಿ ನಮ್ಮಲ್ಲೂ ಇದೆ. ಇವರು ಎಲ್ಲೆಲ್ಲಿ ಸೋತಿದ್ದಾರೆ?

(ಗೊಂದಲ)

ಅಧ್ಯಕ್ಷರು : ಸುಮಾರು ಜನರಿಗೆ ಠೇವಣಿ ಭಯ ಹುಟ್ಟಿಸಿ ಬಿಟ್ಟಿದ್ದೀರಿ. ನೀವು

ಶ್ರೀ ವಾಟಾಳ್ ನಾಗರಾಜ್ : ನಾನು ಪರಿಸ್ಥಿತಿಯನ್ನು ವಸ್ತು ಸ್ಥಿತಿಯನ್ನು ಹೇಳುತ್ತಿದ್ದೇನೆ. ನಾನು ರಾಜಕೀಯವನ್ನು ಪ್ರಾಮಾಣಿಕವಾಗಿ ಮಾಡುತ್ತಿಲ್ಲ. ನಾನು ರಾಜಕೀಯ ಮಾಡುತ್ತಿಲ್ಲ. ಅಥವಾ ಆ ಪಾರ್ಟಿ, ಈ ಪಾರ್ಟಿ ಎಂದು ಮಾತನಾಡುತ್ತಿಲ್ಲ. ಎಲ್ಲಾ ಶಾಸಕರ ಬಗ್ಗೆಯೂ ನಾನು ಮಾತನಾಡುತ್ತಿದ್ದೇನೆ. ಆದರೆ ಕೆಲವು ಶಾಸಕರು ಪಕ್ಷದ ದೃಷ್ಟಿಯಿಂದ ಮಾತನಾಡಬೇಕೆಂದಿದ್ದಾರೆ. ನಾನು ಯಾವುದೇ ಪಕ್ಷದ ಪರವಾಗಿ ಅಥವಾ ಯಾರೊಬ್ಬರ ಪರವಾಗಿ ಮಾತನಾಡುತ್ತಿಲ್ಲ, ಎಲ್ಲರ ಬಗ್ಗೆಯೂ ಮಾತನಾಡುತ್ತಿದ್ದೇನೆ. ನಾನು ತಮಗೆ ಏನು ಹೇಳುತ್ತಿದ್ದೇನೆಂದರೆ, ಶಾಸಕರುಗಳು ಯಾವ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಭಾಗವಹಿಸಬಾರದು, ಭಾಗವಹಿಸುವುದಕ್ಕೆ ಅವಕಾಶ ಏನು ಇದೆ? ಇಲ್ಲ. ನಾನು ತಮ್ಮನ್ನು ನೇರವಾಗಿ ಮನವಿ ಮಾಡಿಕೊಳ್ಳುತ್ತೇನೆ. ನಮ್ಮ ಶಾಸಕರುಗಳು ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಹಾಗೂ ಕ್ಷೇತ್ರಗಳಲ್ಲಿ ಭಾಗವಹಿಸಬಹುದೇ? ಇಲ್ಲರೇ ಆ ವ್ಯವಸ್ಥೆಯೇ ಇಲ್ಲ. ಅಂದ ಮೇಲೆ ನೀವು ಶಾಸನ ಸಭೆಯನ್ನು ಕರೆದ ತಕ್ಷಣ ನಾವು ಎಲ್ಲೋ ನಮ್ಮ ತಾಲ್ಲೂಕನ್ನು ಬಿಟ್ಟು, ಜನಗಳ ಮಧ್ಯೆ ಇರದೆ, ಜನಗಳಿಗೆ ಮುಖ ತೋರಿಸದೆ ನಾವು ಬೆಂಗಳೂರಿನಲ್ಲಿ ಹೇಗೋ ನಮಗೆ ಪ್ರತಿಯೊಬ್ಬರಿಗೂ ತಾವು ಒಳ್ಳೊಳ್ಳೆಯ ಕೊಠಡಿಗಳನ್ನು ಕೊಟ್ಟಿದ್ದೀರಿ.

ಮುಂದೆ ಸ್ವಲ್ಪ ದೊಡ್ಡದಾಗಿ ಕೂಡ ಮಾಡಿಕೊಡುತ್ತಿದ್ದೀರಿ. ಜೊತೆಗೆ ನಮ್ಮ ಮನೆಯವರನ್ನು ಕರೆದುಕೊಂಡು ಊರುಬಿಟ್ಟು ಬಂದು ಇಲ್ಲೇ ಇದ್ದುಬಿಟ್ಟರೆ 5 ವರ್ಷಗಳೂ ಸಂಪೂರ್ಣವಾಗಿ ಇಲ್ಲೇ ಇದ್ದು ಬಿಟ್ಟರೆ ಮುಂದೆ ಹೋಗುವುದೇ ಬೇಡ. ಅದಕ್ಕೆ ತೀರ್ಮಾನವಾಗಿ ಹೋಯಿತಲ್ಲ. ಮುಂದೆ ನಾವು ಠೇವಣಿ ಕಟ್ಟೋದು ಬೇಕಾಗಿಲ್ಲ. ಠೇವಣಿ ಕಳೆದುಕೊಳ್ಳೋದು ಬೇಕಾಗಿಲ್ಲ. ಒಟ್ಟಿನಲ್ಲಿ 5 ವರ್ಷಗಳು ಇಲ್ಲೇ ಇದ್ದು ಬಿಟ್ಟು, ನಮ್ಮದು ಮುಗಿಯಿತು, ಮುಂದೆ ಬೇರೆಯವರು ಯಾರೋ ಹೊಸಬರಿಗೆ ಕೊಟ್ಟುಕೊಳ್ಳಿ ಎನ್ನುವ ಕೆಲಸ ಮಾಡಬೇಕಾಗುತ್ತದೆ. ಇಲ್ಲವೇ 360 ದಿವಸವೂ ಶಾಸಕರ ಕೆಲಸ ಏನು? ಶಾಸನ ಸಭೆಯಲ್ಲಿರುವುದು. ಅಂದ ಮೇಲೆ ಪ್ರತಿ ದಿನ 360 ದಿನವೂ ತಾವು ಸಭೆಯನ್ನು ಕರೆಯಬೇಕು. 360 ದಿವಸವೂ ನಾವು ಇಲ್ಲೇ ಬರುತ್ತೇವೆ. ಬೆಳಗ್ಗೆ 11 ಗಂಟೆಗೆ ಬರುತ್ತೇವೆ. ಸಂಜೆ 6 ಗಂಟೆಗೆ ಹೋಗುತ್ತೇವೆ. ನಮ್ಮ ಎಲ್ಲಾ ಚರ್ಚೆಗಳೂ ಇಲ್ಲೇ ನಡೆಯಲಿ. ಅದು ಇಲ್ಲ ಅಂದರೆ ನನಗನ್ನಿಸುತ್ತದೆ ಇದು ಸರಿಯಲ್ಲ. ಅಧಿಕಾರಿಗಳಿಗೆ ಹೆಚ್ಚಿನ ಅಧಿಕಾರವನ್ನು ಕೊಡುವುದು ಸರಿಯಲ್ಲ. ಬಹಳ ಹಿಂದೆ ಯಾವ ರೀತಿಯಾಗಿ ಶಿಷ್ಟಾಚಾರ ಅಂತ ಏನು ಇತ್ತು. ಆ ಶಿಷ್ಟಾಚಾರವನ್ನು ಮಾನ್ಯ ಮುಖ್ಯಮಂತ್ರಿಗಳಾದ ಶ್ರೀಮಾನ್ ದೇವೇಗೌಡ್ರು ಮತ್ತೆ ಆ ಶಿಷ್ಟಾಚಾರ ಎಲ್ಲಿ ಬಿದ್ದು ಹೋಗಿದೆ ನೋಡಿ ಅದನ್ನು ಹೊರಗಡೆಗೆ ಅಂದರೆ ಅದನ್ನು ಬೆಳಕಿಗೆ ತನ್ನಿ. ಆ ಶಿಷ್ಟಾಚಾರದಲ್ಲಿ ಅಧಿಕಾರಿಗಳು ಶಾಸಕರುಗಳನ್ನು ನೋಡಿಕೊಳ್ಳಬೇಕಾದ ವಿಚಾರವನ್ನು ತಮಗೆ ಹೇಳಬೇಕು. ನನ್ನಂತಹವನ ಪರಿಸ್ಥಿತಿಯೇ ಒಂದೊಂದು ಸಾರಿ ಈ ಅಧಿಕಾರಿಗಳು ಹೇಗೆ ಮಾಡುತ್ತಾರೆಂಬುದನ್ನು ಒಂದು ಉದಾಹರಣೆಯನ್ನು ತಮ್ಮ ಗಮನಕ್ಕೆ ತರುತ್ತೇನೆ. ನಾನು ಮೈಸೂರು ಜಿಲ್ಲಾಧಿಕಾರಿಗಳ ಮುಖ ನೋಡಿ ಹೆಚ್ಚು ಕಡಿಮೆ ಒಂದೂವರೆ ವರ್ಷವೇ ಆಗಿಹೋಯಿತು. ಅದು ನಿಮಗೆ ಗೊತ್ತಿದೆ. ನಾನು ತಮ್ಮ ಪತ್ರಿರವೂ ಹೇಳಿದೆ. ಸ್ವಾಮಿ ಸ್ವಲ್ಪ ಅವರು ನಮ್ಮ ಮುಖ ನೋಡಲಿ, ನಾವು ಚುನಾಯಿತ ಪ್ರತಿನಿಧಿಗಳು ಬರೀ ಬೇರೆಯವರ ಮುಖವನ್ನೇ ನೋಡುತ್ತಾರೆ ಎಂದು ಹೇಳಿದೆ.

ಪಾಪ ನನಗೇನೂ ಅವರ ಬಗ್ಗೆ ಯಾವುದನ್ನೇ ಮಾತನಾಡುವುದಿಲ್ಲ. ಅವರಿಗೆ ಪ್ರಜಾಪ್ರಭುತ್ವ ಕಂಡರೆ ಒಂದು ರೀತಿ ತಾತ್ಸಾರ. ಬಹಳ ಜನ ಅಧಿಕಾರಿಗಳಿಗೆ. ನಮ್ಮಲ್ಲಿ ಅನೇಕ ಜನ ಅಧಿಕಾರಿಗಳು ಇದ್ದಾರೆ. ಅವರನ್ನು ಪ್ರಶಂಸೆ ಮಾಡಬೇಕು. ಅವರಿಗೆ ಯಾವುದೇ ಮನ್ನಣೆ ಕೊಟ್ಟರೂ ಸಂತೋಷ. ಹಿರಿಯ ಒಳ್ಳೊಳ್ಳೆಯ ಐ.ಎ.ಎಸ್. ಅಧಿಕಾರಿಗಳು ಇದ್ದಾರೆ. ಎಷ್ಟು ಪ್ರೀತಿಯಿಂದ, ವಾತ್ಸಲ್ಯದಿಂದ ಮಾತನಾಡತಕ್ಕಂತಹ ಅಧಿಕಾರಿಗಳಿದ್ದಾರೆ, ಅಂತಹವರನ್ನು ನಾನು ಮೆಚ್ಚುತ್ತೇನೆ. ಆದರೆ ಬಹಳ ಜನ ಅಧಿಕಾರಿಗಳು ಯಾವ ರೀತಿ ಇದ್ದಾರೆಂದರೆ ಸರ್ವಾಧಿಕಾರವನ್ನು ಮೀರಿಸತಕ್ಕಂತಹವರು ಇದ್ದಾರೆ. ನಾನು ಹೇಳಿದರೆ. ಮೈಸೂರಿನಲ್ಲಿ ಸರ್ಕಾರಿ ಅತಿಥಿ ಗೃಹದಲ್ಲಿ ವಾಟಾಳ್ ನಾಗರಾಜ್‌ರವರಿಗೆ ರೂಮು ಏಕೆ ಕೊಟ್ಟೆ ಎಂದು ನನ್ನ ಮೇಲೆ ನೋಟೀಸ್ ಜಾರಿ ಮಾಡಿದ್ದಾರೆ. ಇದು ನಾಚಿಕೆಗೇಡು ಇದನ್ನು ಹೇಳಬಾರದು. ನಮ್ಮ ಮುಖ್ಯ ಮಂತ್ರಿಗಳಿಗೆ, ಇವರು ಮುಖ್ಯ ಮಂತ್ರಿಗಳಾಗಿ ಬಂದ ನಂತರ ಒಂದು ಗುಟ್ಟಾಗಿ ಅದನ್ನು ಯಾರಲ್ಲೂ ಹೇಳುವಂತಹದ್ದು ಅಲ್ಲ. ಹೇಳಬೇಕಾದ ಪರಿಸ್ಥಿತಿ ಬಂತು. ಅವರಿಗೆ ಒಂದು ಪತ್ರ ಬರೆದಿದ್ದೇನೆ. ಇದನ್ನು ಹೇಳಿಕೊಳ್ಳಬಾರದು. ಒಬ್ಬ ಶಾಸಕರಿಗೆ ರೂಮು ಸಿಕ್ಕುವುದಿಲ್ಲ ಅಂದರೆ ನಮ್ಮ ಊರಿನಲ್ಲಿ ಇಷ್ಟೇನಾ ಇವರ ಹಣೆ ಬರಹ. ಇವರದ್ದೇನೂ ನಡೆಯುವುದಿಲ್ಲವಂತೆ ಅಂತ ಅಂದುಕೊಂಡು ಬಿಡುತ್ತಾರೆ. ಇದೊಂದು ದರಿದ್ರ. ಬಹಿರಂಗವಾಗಿ ಹೇಳಿಕೊಳ್ಳಬಾರದು. ಪತ್ರಿಕೆಗಳಲ್ಲೂ ಬರೆಯಬಾರದು. ತಾವು ದಯಮಾಡಿ ಇದನ್ನು ಬರೆಯಬೇಡಿ. ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳಿಗೆ ಪತ್ರ ಬರೆದಿದ್ದೇನೆ. ಮುಖ್ಯ ಮಂತ್ರಿಗಳು ಅದರ ಬಗ್ಗೆ ತನಿಖೆಗೆ ಆರ್ಡರ್ ಮಾಡಿದರು. ಒಂದು ವಾರವಾದರೂ ತನಿಖೆ ನಡೆದಿಲ್ಲ. ಜಿಲ್ಲಾಧಿಕಾರಿಗಳು ಏಕೆ ಅವರಿಗೆ ರೂಮು ಕೊಟ್ಟೆ ಅಂದರೆ, ರಾತ್ರಿ ಒಂದು ಗಂಟೆಗೆ ಹೋದರೆ, ಒಂದು ಗಂಟೆ ರಾತ್ರಿಯಲ್ಲಿ ಎಲ್ಲೋ ಸುತ್ತುಕೊಂಡು ಹೋದರೆ ಒಂದು ಕೊಠಡಿ ಕೊಡಪ್ಪ ಅಂದಾಗ ಆತ ಕೊಟ್ಟುಬಿಟ್ಟ. ಶಾಸಕರು ಬಂದ ಮೇಲೆ ಅವನು ಕೊಡಬೇಕಲ್ಲ. ಅದರಂತೆ ಕೊಟ್ಟುಬಿಟ್ಟ ಆದರೆ ಅವನ ಮೇಲೆ ನೀವು ಹೇಗೆ ಕೊಟ್ಟೆ? ಅಂತ ಪ್ರಶ್ನೆ ಮಾಡುತ್ತಿದ್ದಾರೆ. ಹಾಗಾದರೆ ಆ ಜವಾನ ರಾತ್ರಿಯಲ್ಲಿ ಜಿಲ್ಲಾಧಿಕಾರಿಗಳ ಮನೆಗೆ ಹೋಗಬೇಕೇನು? ನಮ್ಮ ಶಾಸಕರು ಬಂದು ಕುಳಿತರೆ, ಏನು ಅವರಿಗೆ ರೂಮು ಕೊಡಲೋ ಬಿಡಲೋ ಎಂದು ಕೇಳುವಷ್ಟರೊಳಗೆ ಬೆಳಕು ಹರಿದು ಹೋಗುತ್ತದೆ. ಇದು ಉಂಟೇ? ನಮ್ಮ ಶಾಸಕರ ಹಣೆಬರಹ ಈ ಮಟ್ಟಕ್ಕೆ ಬಂದಿದೆ. ಶ್ರೀಮಾನ್ ದೇವೇಗೌಡರೇ ಕೈಮುಗಿದು ನಿಮ್ಮನ್ನು ಕೇಳಿಕೊಳ್ಳುತ್ತಿದ್ದೇನೆ. ಇದು ಬೇಡ. ನಾನು ನಗುನಗುತ್ತಾ ಮಾತನಾಡುತ್ತಿದ್ದೇನೆಂದು ತಿಳಿದುಕೊಳ್ಳಬೇಡಿ.

ಈ ಪ್ರಜಾಸತ್ತೆಯಲ್ಲಿ ಪ್ರಜಾಸತ್ತೆಯ ಕೈಕಾಲುಗಳನ್ನು ಕಡಿದು ಹಾಕಿ ಆ ಗ್ಯಾಲರಿಗೆ ನೀವು ಅಧಿಕಾರವನ್ನು ಕೊಡಬೇಡಿ. ನಿಮ್ಮ ಪಕ್ಕದಲ್ಲಿ ಕುಳಿತಿರತಕ್ಕ ಗ್ಯಾಲರಿಗೆ ಸಂಪೂರ್ಣ ಅಧಿಕಾರವನ್ನು ಕೊಡಬೇಡಿ. ನಾನು ಎಲ್ಲರೂ ಕೆಟ್ಟವರು ಎಂದು ಹೇಳುತ್ತಿಲ್ಲ; ಎಲ್ಲರೂ ಸರಿಯಿಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಆ ಗ್ಯಾಲರಿ ಅಧಿಕಾರಿಗಳ ವ್ಯವಸ್ಥೆ ಇದೆಯಲ್ಲಾ, ಆ ವ್ಯವಸ್ಥೆಗೆ ದಯಮಾಡಿ ಕೊಡಬೇಡಿ. ಕೊಟ್ಟರೆ ಅದು ಒಳ್ಳೆಯದಲ್ಲ. ನಿಮಗೆ ಕೀರ್ತಿ ಬರುತ್ತದೆ ಅಂತ ಅಲ್ಲ. ನೀವು ಎಷ್ಟು ವರ್ಷ ಬೇಕಾದರೆ ಇರಿ. ಆ ಪ್ರಶ್ನೆ ಬೇರೆ. ಜನ ಎಲ್ಲಿಯವರೆಗೆ ನಿಮಗೆ ಅಧಿಕಾರವನ್ನು ಕೊಟ್ಟಿರುತ್ತಾರೋ ಅಲ್ಲಿಯವರೆಗೆ ಇರಿ. ನಾಳೆ ಶಪಿಸತಕ್ಕ ದಾರಿಯನ್ನು ನೀವು ಮಾಡಿಕೊಳ್ಳಬೇಡಿ. ಇದು ಒಳ್ಳೆಯದಲ್ಲ.

ಅಧ್ಯಕ್ಷರು : ಶ್ರೀ ವಾಟಾಳ್ ನಾಗರಾಜ್ ರವರೆ....

ಶ್ರೀ ವಾಟಾಳ್ ನಾಗರಾಜ್ : ಆಯಿತು. ನಾನು ಮುಗಿಸುತ್ತೇನೆ. ನಾನು ಮೊದಲೇ ಹೇಳಿದ್ದೇನೆ. ನನ್ನದನ್ನೇ ಬೇರೆಯಾಗಿ ಕಳುಹಿಸುತ್ತೇನೆ ಎಂದು ಹಳಿದೆ.

ಅದಕ್ಕೆ ನೀವು ಇಲ್ಲಿ ಎಲ್ಲವನ್ನೂ ಸೇರಿಸಿ ಕಳುಹಿಸಿ ಅದರ ಮೇಲೆ ಮಾತನಾಡಿ ಅಂತ ಹೇಳಿದಿರಿ.

ಅಧ್ಯಕ್ಷರು : ನೀವು ಸಂಯುಕ್ತ ವಿಧಾಯಕ ದಳದ ನಾಯಕರಾಗಿಬಿಟ್ಟಿದ್ದೀರಿ.

ಶ್ರೀ ವಾಟಾಳ್ ನಾಗರಾಜ್ : ನಿಮ್ಮ ಆಶೀರ್ವಾದ ಮತ್ತು ಅಭಿಮಾನಕ್ಕೆ ಮೆಚ್ಚುತ್ತೇನೆ. ಒಂದೊಂದು ಸಾರಿ ಅಭಿನಂದನೆ ಕೊಡುತ್ತೀರಿ. ಒಂದೊಂದು ಸಾರಿ ನನ್ನ ಮೇಲೆ ಸಮಿತಿಯನ್ನು ರಚನೆ ಮಾಡುತ್ತೀರಿ. ನಾನು ನಿಮ್ಮನ್ನು ಹೇಗೆ ನಂಬಬೇಕೋ ಆ ದೇವರಿಗೇ ಗೊತ್ತು. ನಿಮ್ಮನ್ನು ಯಾವ ರೀತಿಯಿಂದ ಅರ್ಥ ಮಾಡಿಕೊಳ್ಳಬೇಕೆಂಬುದೇ ಅರ್ಥವಾಗುತ್ತಿಲ್ಲ. ನಾನು ನಿನ್ನೆಯಿಂದ ಸುಸ್ತು ಹೊಡೆದು ಹೋಗಿಬಿಟ್ಟಿದ್ದೇನೆ. ನೀವು ಯಾವ ಕಡೆಯಿಂದ ವರ ಕೊಡುತ್ತೀರೋ, ಯಾವ ಕಡೆಯಿಂದ ಶಾಪ ಕೊಡುತ್ತೀರೋ ಅದೂ ನನ್ನಂತಹವನ ಮೇಲೆ, ಇತಿಹಾಸದಲ್ಲೇ ನನ್ನ ಮೇಲೆ ಸಮಿತಿಯಾಗಿರಲಿಲ್ಲ. ನಾನು ಏನು ತಪ್ಪು ಮಾಡಿದ್ದೇನೆ. ನನ್ನ ಮೇಲೆ ಸಮಿತಿ ರಚನೆ ಮಾಡಲು; ಆ ದೇವರೇ ಕಾಪಾಡಬೇಕು. ನೀವು ಏಕೆ ಈ ನಿರ್ಣಯವನ್ನು ತೆಗೆದುಕೊಂಡಿರೋ ಅದು ನನಗೆ ಗೊತ್ತಾಗಲೇ ಇಲ್ಲ. ಹೋಗಲಿ ಇದರಿಂದ ಲಾಭವಾದರೂ ಆಗಿದೆಯೇ, ನಾಳೆ ಪತ್ರಿಕೆಯಲ್ಲಿ ನನ್ನ ಮೇಲೆ ಬರಬಹುದು ಅಂತ. ಪತ್ರಿಕೆಯವರೂ ಕೂಡ ಸರಿಯಾಗಿ ಕೊಡಲೇ ಇಲ್ಲ ಅದು ನಿಮಗೆ ಗೊತ್ತೆ. ಅಂದರೆ ಅವರು ಸಂಪೂರ್ಣವಾಗಿ ಮುನಿಸಿಕೊಂಡು ಬಿಟ್ಟರು. ಆದರೆ ಇವತ್ತು ನಿನ್ನೆ ಆದದ್ದನ್ನು ಸೇರಿಸಿ ಬಯ್ದದ್ದನ್ನೆಲ್ಲಾ ಸೇರಿಸಿ ಬರೆದುಬಿಟ್ಟಿದ್ದಾರೆ. ಶ್ರೀಮಾನ್ ನಂಜೇಗೌಡರು ನನ್ನನ್ನು ಬಯ್ದದ್ದನ್ನೆಲ್ಲಾ ಸೇರಿಸಿಬಿಟ್ಟು ಬರೆದಿದ್ದಾರೆ. ಇವತ್ತು ಬೆಳಿಗ್ಗೆ ಎದ್ದು ಪೇಪರನ್ನು ನೋಡಿದರೆ ನಾನು ಅವರೂ ಹೊಡೆದಾಡಬೇಕು ಆ ತರಹ ಮಾಡಿದ್ದಾರೆ. ಅದು ಬಂದಿದೆ; ಬರಲಿ. ನಮ್ಮ ಸ್ನೇಹಿತರು ಪತ್ರಿಕಾ ಕರ್ತರು. ಅವರಿಗೆ ನಮೋ ನಮಃ ಅವರು ಏನು ಬೇಕಾದರೂ ಬರೆದುಕೊಳ್ಳಲಿ ಅದರ ಬಗ್ಗೆ ತಕರಾರು ಏನೂ ಇಲ್ಲ. ಅವರೆಲ್ಲರೂ ನಮ್ಮ ಸ್ನೇಹಿತರು.

ಶ್ರೀ ಹೆಚ್. ಎನ್. ನಂಜೇಗೌಡ : ನಾನು ನಿಮ್ಮನ್ನು ಬಯ್ದೇ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ನಿಮ್ಮ ಧಾಟಿಯಲ್ಲಿ ನನ್ನನ್ನು ಬಯ್ದಿದ್ದೀರಿ, ಅದನ್ನೇ ಅವರು ತೆಗೆದುಕೊಂಡರು.

ಅಧ್ಯಕ್ಷರು : ಆ ಗ್ಯಾಲರಿ (ಅಧಿಕಾರಿಗಳ ಗ್ಯಾಲರಿ) ಈ ಗ್ಯಾಲರಿ (ಪತ್ರಿಕಾ ಕರ್ತರ ಗ್ಯಾಲರಿ) ನಾನೂ, ಸದನ, ಮುಖ್ಯಮಂತ್ರಿಗಳು, ಯಾರನ್ನೂ ಬಿಟ್ಟೇ ಇಲ್ಲ. ಅಲ್ಲಿಗೆ ಮುಗಿದೇ ಹೋಯಿತಲ್ಲ.

ಶ್ರೀ ವಾಟಾಳ್ ನಾಗರಾಜ್ : ನೀವು ನನ್ನನ್ನು ಕಟಕಟೆಯಲ್ಲಿ ನಿಲ್ಲಿಸಿದಾಗ ನಾನು ನನ್ನ ಪರಿಸ್ಥಿತಿಯನ್ನು ಹೇಳಿಕೊಳ್ಳದಿದ್ದರೆ ಅದು ಅಷ್ಟಾಗಿ ಸರಿಯಾದ ಮಾರ್ಗ ಅಲ್ಲ. ಆದ್ದರಿಂದ ಬಹಳ ಸ್ವಾರಸ್ಯವಾಗಿ ಹೇಳುತ್ತಿದ್ದೇನೆ. ಮತ್ತೊಂದು ತೀವ್ರ ಕೋಪದಿಂದ ಕೆಂಡಕಾರಿ ಹೇಳತಕ್ಕಂತಹ ಧಾಟಿಯೂ ಉಂಟು. ಅದು ಸರಿಯಾದ ಮಾರ್ಗ ಅಲ್ಲ. ಅವರು ತೀರ ಇನ್ನೂ ಹೆಚ್ಚಿನ ರೀತಿಯಲ್ಲಿ ಕೋಪಿಸಿಕೊಂಡರೆ ಪರಿಸ್ಥಿತಿ ಏನು ಎಂದು ಆ ಧಾಟಿಗೆ ಹೋಗುವುದು ಬೇಡ ಎಂದು ಸ್ಪಷ್ಟವಾಗಿ ನನ್ನ ದಾಟಿಯಲ್ಲೇ ಒಳ್ಳೆಯ ಮಾತಿನಲ್ಲೇ ಕೆಲವು ಮಾತುಗಳನ್ನು ಹೇಳಿದ್ದೇನೆ. ಆದ್ದರಿಂದ ಇದು ಒಂದಾಯಿತು. ಇನ್ನು ನಮ್ಮ ಸಿಟಿಯಿಂದ ಗೆದ್ದಿರತಕ್ಕ ನಗರ ಪ್ರದೇಶಗಳಿಂದ ಗೆದ್ದಿರತಕ್ಕ ಶಾಸಕರು ಇದ್ದಾರಲ್ಲಾ, ಅವರಿಗೆ ಒಬ್ಬೊಬ್ಬರಿಗೆ 8-8 ಜನ ಕಾರ್ಪೊರೇಟರ್‌ಗಳು. ಅವರು ಶಾಸಕರ ಮಾತನ್ನು ಕೇಳುವುದೇ ಇಲ್ಲ. ಅವರು ನೀವು ಯಾರು ನಮ್ಮ ಕ್ಷೇತ್ರಕ್ಕೆ ಅಂತ ಅನ್ನುತ್ತಾರೆ. ಅವರಿಗೆ ಟಾರ್ ಹಾಕಿಸುವುದಕ್ಕೆ ಬರುವುದಿಲ್ಲ. ಕೊಳವೆ ಬಾವಿಯನ್ನು ಹಾಕಿಸುವುದಕ್ಕೆ ಬರುವುದಿಲ್ಲ. ಏನಿದ್ದರೂ ಬಂದವರಿಗೆ ಹರಿಕಥೆಯ

ಸರ್ಟಿಫಿಕೇಟ್ ಕೊಟ್ಟುಕೊಂಡು ಕುಳಿತುಕೊಳ್ಳಬೇಕು ಅಷ್ಟೇ. ಅವರಿಗೆ ಏನೇನೂ ಇಲ್ಲ. ಬಿ.ಜೆ.ಪಿ.ಯವರು, ಅವರು ತತ್ವ ಸಿದ್ಧಾಂತದ ಮೇಲೆ ಗೆದ್ದು ಬರಬೇಕು ಅಷ್ಟೇ ಹೊರತು ಏನಾದರೂ ನೀರು-ಪಾರು, ರಸ್ತೆ ಗಿಸ್ತೆ ಅಭಿವೃದ್ಧಿ ಕಾರ್ಯಗಳು ಅಂದರೆ ಇವರು ಅಲ್ಲಾಡಿ ಹೋಗಿ ಬಿಡುತ್ತಾರೆ. ಈ ಪರಿಸ್ಥಿತಿ ನಗರ ಪ್ರದೇಶದ ಶಾಸಕರಿಗೆ ಇದೆ. ಆದ್ದರಿಂದ ನಾನು ಹೇಳುವುದೇನೆಂದರೆ, ಶಾಸಕರಾದವರು ಶಾಸನ ಸಭೆಯಲ್ಲಿ ಶಾಸನವನ್ನೇ ಅವರು ಮಾಡುವಂತಹದ್ದು ಎನ್ನುವ ನಿರ್ಧಾರವಾದರೆ, ಇಲ್ಲಿ ಗಮನ ಸೆಳೆಯುವ ಸೂಚನೆಗಳು ಬೇಡ, ನಿಲುವಳಿ ಸೂಚನೆಗಳು ಬೇಡ ಬೇರೆ ಯಾವುದೇ ಸಾರ್ವಜನಿಕ ಕೆಲಸಕಾರ್ಯಗಳ ಬಗ್ಗೆ ನಾವು ಚರ್ಚೆ ಮಾಡಬಾರದು. ಬರೀ ಮಸೂದೆಗಳ ಬಗ್ಗೆ ಮಾತ್ರ ಚರ್ಚೆ ಮಾಡುವುದು. ತಾಲ್ಲೂಕಿನಲ್ಲಿ ಪಾಪ ಶ್ರೀಮಾನ್ ನಂಜೇಗೌಡರಿಗೆ ಅದು ಗೊತ್ತಿಲ್ಲ, ಒಬ್ಬ ರೆವಿನ್ಯೂ ಇನ್ಸ್ಪೆಕ್ಟರ್ ಟ್ರಾನ್ಸ್‌ಫಾರ್ ಬಗ್ಗೆ ಹೇಳುವುದಾದರೆ, ನಾವು ಏಕೆ ಈ ವರ್ಗಾವಣೆಯ ಬಗ್ಗೆ ಕೈ ಹಾಕುತ್ತೇವೆಂದರೆ, ಆ ಕಷ್ಟ ಪಾಪ ಶ್ರೀ ನಂಜೇಗೌಡರಿಗೆ ಗೊತ್ತಿಲ್ಲ, ನಾವು ತಾಲ್ಲೂಕಿದ ಗೆದ್ದು ಬಂದಿರತಕ್ಕ ನಮಗೆ ಗೊತ್ತು ಅದರ ಕಷ್ಟ. ರೆವಿನ್ಯೂ ಇನ್ಸ್‌ಪೆಕ್ಟರ್‌ನನ್ನು ವರ್ಗಾವಣೆಯನ್ನು ಮಾಡಿಸದಿದ್ದರೆ ಏನು ಹೇಳುತ್ತಾರೆ ಗೊತ್ತೆ. ಇವರದ್ದೇನೂ ನಡೆಯುವುದಿಲ್ಲವಂತೆ ಸರ್ಕಾರದಲ್ಲಿ ಎಲ್ಲ ಮಾಡಿದೇ ನಡೆಯುತ್ತದೆಂದೆ ಅಂತ ಅಂದು ಬಿಡುತ್ತಾರೆ. ಹಾಗಾದರೆ ನಾವು ಇಲ್ಲಿ ಏನು ಮಾಡಬೇಕು? ಆವಾಗ ಜೆ.ಹೆಚ್. ಪಟೇಲ್ ರವರ ಹತ್ತಿರ ಬರಬೇಕು. ಒಬ್ಬ ಇಂಜಿನಿಯರ್ ಹಾಕಿಕೊಡಿ ಎಂದು ಕೇಳಬೇಕು. ಕೇಳುವ ದಾಕ್ಷಿಣ್ಯಕ್ಕೆ ಕೇಳುವ ದೈನ್ಯತೆಗೆ ನಾವು ಅವರ ಮೇಲೆ ಮಾತನಾಡುವ ಹಾಗೇ ಇಲ್ಲ, ನಮ್ಮ ಹಣೆ ಬರಹ ಇಷ್ಟಕ್ಕೆ ಬಂದಿದೆ. ಆದ್ದರಿಂದ ತಮಗೆ ಹೇಳುತ್ತಿದ್ದೇನೆ. ವರ್ಗಾವರ್ಗಿಯಾಗಲಿ. ಕ್ಷೇತ್ರವಾಗಲೀ, ಅಭಿವೃದ್ಧಿಯಾಗಲಿ ಮಾಡಬಾರದು. ಎಲ್ಲ ಕ್ಷೇತ್ರವೂ ಒಂದೆ. ಅವನು ನನಗೆ ಆಗಲ್ಲ. ಅವನನ್ನು ತುಳಿಯಬೇಕು. ಅವರ ಮೇಲೆ ಸಬ್‌ಇನ್ಸ್‌ಪೆಕ್ಟರ್ ಹಾಕು, ಅವನ ಮಾತನ್ನು ಕೇಳಬೇಡಿ. ಅವರ ಕಡೆಯವರನ್ನೆಲ್ಲಾ ಬಂಧಿಸು. ಅವರನ್ನು ಬಿಡಬೇಡ ಎಳೆದುಕೊಂಡು ಹೋಗು - ಇದು ಬೇಡ. ಆ ರೀತಿ ಮಾಡುವುದು ಬೇಡ. ಎಲ್ಲ ಕ್ಷೇತ್ರಗಳೂ ಒಂದೆ. ಆ ಕ್ಷೇತ್ರದ ಶಾಸಕ ಪರಮ ಸರ್ವೋಚ್ಚ ಬೇರೆ. ಮಾತಿಲ್ಲ. ಈಗಿನ ಪ್ರಕಾರ ಯಾವುದೇ ಕಾರ್ಯಕ್ರಮ ಇರಲಿ, ಸಭೆ ಏನೇ ನಡೆಯಲಿ ಆ ಕ್ಷೇತ್ರದ ಶಾಸಕರೇ ಆಧ್ಯತೆಯನ್ನು ವಹಿಸಬೇಕು ಅನ್ನತಕ್ಕಂತಹದ್ದು ಎಲ್ಲಾ ಕಾಲದಲ್ಲೂ ನಡೆದಿದೆ.

6.10 ಪಿ.ಎಂ.

ಹಿಂದಿನ ಮುಖ್ಯಮಂತ್ರಿಗಳಾದ ಮೊಯಿಲಿ ಅವರಾಗಲೀ ಬಂಗಾರಪ್ಪ ಅವರಾಗಲೀ ವೀರೇಂದ್ರ ಪಾಟೀಲ್ ಅವರಾಗಲೀ ಇದ್ದಾಗ ನಿಜವಾಗಿಯೂ ನಾವು ಅನೇಕ ಟೀಕೆ ಟಿಪ್ಪಣಿಗಳನ್ನು ಮಾಡಿದ್ದೇವೆ. ಅವರು ಶಾಸಕರುಗಳ ಬಗ್ಗೆ ಬಹಳ ಅಪಾರವಾದ ಗೌರವವನ್ನು ಇಟ್ಟುಕೊಂಡಿದ್ದರು ಎನ್ನುವ ಬಗ್ಗೆ ಎರಡನೇ ಅಭಿಪ್ರಾಯವೇ ಇಲ್ಲ ಎನ್ನತಕ್ಕ ಮಾತನ್ನು ಸ್ಪಷ್ಟವಾಗಿ ಹೇಳುತ್ತೇನೆ. ಹಿಂದೆ ಮುಂದೆ ನಾನು ಅವರನ್ನು ಏನು ಪ್ರಶಂಸೆ ಮಾಡಬೇಕು ಎಂದು ಅಲ್ಲ. ಮತ್ತು ಮುಖ್ಯಮಂತ್ರಿ ಆದವರಿಗೆ ಸ್ವಲ್ಪ ಮಾತು.. ಶಾಸಕರು ಅಂದರೆ.. ಇದು ಬೇಡ. ತಾವು ಮುಖ್ಯಮಂತ್ರಿಗಳಾಗಿದ್ದೀರಿ ನಾವು ಶಾಸಕರಾಗಿದ್ದೇವೆ ಅಷ್ಟೇ ನಮಗೂ ನಿಮಗೂ ವ್ಯತ್ಯಾಸ. ಆದರೆ ಏನಿವರೆಲ್ಲಾ ಅಂದರೆ ಅದು ದಯವಿಟ್ಟು ಬೇಡಿ. ಈ ಶಾಸನ ಸಭೆಯ ಸರ್ವಸದಸ್ಯರ ಪರವಾಗಿ ನಾನು ತಮ್ಮನ್ನು ಕಟ್ಟಕಡೆಯ ಕೊನೆಯದಾಗಿ ಅತ್ಯಂತ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ಆ ರೀತಿ ಏನಾದರೂ ಇದ್ದರೆ ಅದನ್ನು ಬಿಟ್ಟು ಶಾಸಕರ ಮಹತ್ವವನ್ನು ಉಳಿಸತಕ್ಕದ್ದು ಆ ರೀತಿ ಏನಾದರೂ ಇದ್ದರೆ ಅದನ್ನು ಬಿಟ್ಟು ಶಾಸಕರ ಮಹತ್ವವನ್ನು ಉಳಿಸತಕ್ಕದ್ದು ತಮಗೆ ಸೇರಿದೆ. ಇಲ್ಲ ಎಂದರೆ ನಾನು ಎಲ್ಲ ಶಾಸಕರಿಗೆ

ಕೈಮುಗಿದು ಹೇಳುತ್ತೇನೆ. ವಿಬಾಗಾಧಿಕಾರಿ ಕೈಕೆಳಗೆ ಯಾವುದೇ ಸಭೆಯನ್ನು ಮಾಡಿದರೆ ನಾವು ಎಲ್ಲರೂ ಸೇರಿ ಆ ಸಭೆಯ ಸದಸ್ಯರಾಗಿರಕೂಡದು ಎಂದು ಹೇಳಿ ಸಂಪೂರ್ಣವಾಗಿ ಈ ಸದನವಲ್ಲಿ ತೀರ್ಮಾನ ತೆಗೆದುಕೊಳ್ಳಬೇಕು. ನಾನಂತೂ ಇರುವುದಿಲ್ಲ. ನೀವು ಯಾವುದೇ ಸಭೆ ಮಾಡಿ, ನಾನು ಇರುವುದಿಲ್ಲ. ಒಬ್ಬ ವಿಭಾಗಾಧಿಕಾರಿ ಕೆಳಗೆ ಶಾಸಕರು ಸದಸ್ಯರಾಗಿರುವುದು ನಾನು ಒಪ್ಪುವುದಿಲ್ಲ. ಮತ್ತೊಂದು ಸ್ವಾಮಿ, ತಾವು, ಮುಖ್ಯಮಂತ್ರಿಗಳು ಮತ್ತು ದೇಶದ ಮುಖಂಡರುಗಳು ಜೊತೆ ಮಾತನಾಡುವುದು. ಗಣರಾಜ್ಯೋತ್ಸವ ಮತ್ತು ಸ್ವಾತಂತ್ರ್ಯೋತ್ಸವ ನಡೆಯುವಾಗ ಧ್ವಜಾರೋಹಣ ಮಾಡುವಾಗ ಒಬ್ಬ ಶಾಸಕರು ಪಕ್ಕದಲ್ಲಿ ಕುಳಿತುಕೊಳ್ಳುವುದು ಎಂದರೆ ಯಾವ ಸರ್ವಾಧಿಕಾರಿ ದೇಶದಲ್ಲೂ ನಾನು ನೋಡಲಿಲ್ಲ. ಈ ತರಹ ಆಗಬಾರದು. ಆದ್ದರಿಂದ ಇದನ್ನು ಇಲ್ಲಿಗೇ ಕೊನೆಗಾಣಿಸಬೇಕು ಎಂದು ಹೇಳಿ ಇನ್ನೂ ಎರಡು ವಿಚಾರಗಳಿದ್ದವು. ಒಂದು ಸದನ, ಮತ್ತೊಂದು ಸಭಾಧ್ಯಕ್ಷರು ಅದರ ಬಗ್ಗೆ ಒಂದಷ್ಟು ವಿಚಾರ ಮಾತನಾಡಬೇಕಾಗಿತ್ತು. ನೀವು ಬೇಡ ಅಂದರೆ ನಾನು ಕುಳಿತುಕೊಂಡು ಬಿಡುತ್ತೇನೆ. ಆಯಿತು ಸ್ವಾಮಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಈಗ ಅಪ್ಪಚ್ಚು ರಂಜನ್ ಅವರು ಮಾತನಾಡಲಿ. ತಾವು 5 ನಿಮಿಷದಲ್ಲಿ ಮುಗಿಸಬೇಕು. ಸೀಮಿತ ಘಟನೆ ಬಗ್ಗೆ ಮಾತ್ರ ದಯಮಾಡಿ ಪ್ರಸ್ತಾಪ ಮಾಡಿ.

ಶ್ರೀ ಅಪ್ಪಚ್ಚು ರಂಜನ್ (ಸೋಮವಾರ ಪೇಟೆ) : ಸನ್ಮಾನ್ಯ ಅಧ್ಯಕ್ಷರೇ, ಮಾರ್ಚಿ 7ನೇ ತಾರೀಖಿನಂದು ಉದಯವಾಣಿ ಮತ್ತು ಎಲ್ಲಾ ಪತ್ರಿಕೆಗಳಲ್ಲಿ ಆಡಳಿತದಲ್ಲಿ ಬಿ.ಜೆ.ಪಿ. ಶಾಸಕರು ಹಸ್ತಕ್ಷೇಪ ಮಾಡಿದ್ದಾರೆ ಎಂದು ಸನ್ಮಾನ್ಯ ಮುಖ್ಯಮಂತ್ರಿಗಳು ಮತ್ತು ಸನ್ಮಾನ್ಯ ಗೃಹಮಂತ್ರಿಗಳು ಪತ್ರಿಕೆಯಲ್ಲಿ ಹೇಳಿಕೆ ಕೊಟ್ಟಿದ್ದಾರೆ. ನಿಜವಾಗಿಯೂ ನಾವು ಇಲ್ಲಿಗೆ ಶಾಸಕರಾಗಿ ಮೊದಲು ಬಂದಿದ್ದೇವೆ. ನಮಗೆ ಹೆಚ್ಚೇನೂ ಮಾತನಾಡಲಿಕ್ಕೆ ಕೂಡ ಗೊತ್ತಿರುವುದಿಲ್ಲ. ಅಂಥ ಸಂದರ್ಭದಲ್ಲಿ ಸನ್ಮಾನ್ಯ ಮಂತ್ರಿಗಳು ಮೊದಲೇ ನಮ್ಮ ಬಗ್ಗೆ ಈ ರೀತಿ ಪತ್ರಿಕೆಯಲ್ಲಿ ಕೊಟ್ಟರೆ ನಮ್ಮ ಸ್ಥಿತಿ ಏನಾಗಬಹುದು? ನಿಂತುಕೊಳ್ಳುವುದೇ ಕಷ್ಟದಲ್ಲಿ. ಎಸ್.ಪಿ.ಯವರ ಜೊತೆ ಮಾತನಾಡುವುದೇ ಕಷ್ಟದಲ್ಲಿ. ಅಂಥ ಸ್ಥಿತಿಯಲ್ಲಿ ಇವತ್ತು ಉದಾಹರಣೆಗೆ ಹೇಳಿದರೆ ಜೀಪೋ ಕಾರೋ ಡ್ರೈವ್ ಮಾಡಬೇಕಾದರೆ ಲೆರ್ನರ್ ಬೋರ್ಡ್ ಹಾಕಿಕೊಂಡು ಡ್ರೈವ್ ಮಾಡುತ್ತಾನೆ. ಅವನ ಹತ್ತಿರ ಕಲಿಸುತ್ತಾ ಇದ್ದವನು ನೀನು ಚೆನ್ನಾಗಿ ಡ್ರೈವ್ ಮಾಡುತ್ತಾ ಇದ್ದೀಯಪ್ಪ ಎಂದು ಹೇಳಿಕೊಂಡು ಬಂದರೆ ಅವನು ಚೆನ್ನಾಗಿ ಡ್ರೈವ್ ಮಾಡುತ್ತಾನೆ. ನೀನು ಸರಿಯಿಲ್ಲಪ್ಪ ಎಂದು ಪಟಾರ್ ಅಂತ ಒಂದು ಬಿಟ್ಟರೆ ಅವನು ಡಬಾರ್ ಅಂತ ಗುಂಡಿಗೆ ಬೀಳಿಸುತ್ತಾನೆ. ಆ ಸ್ಥಿತಿ ನಮ್ಮದು ಈಗ. ನಾವು ಹೊಸದಾಗಿ ಶಾಸಕರಾಗಿ ಆರಿಸಿಬಂದಿದ್ದೇವೆ. ಮೊದಲು ಬಂದಾಗಲೇ ಈ ರೀತಿ ಕೊಟ್ಟುಬಿಟ್ಟರೆ ನಮ್ಮ ಪರಿಸ್ಥಿತಿ ಏನಾಗಬಹುದು? ಮತ್ತು ಆವತ್ತಿನ ದಿವಸ ಏನು ನಡೆದಿದೆ ಅದನ್ನು ತಮ್ಮ ಮುಂದೆ ಇಡಲು ಇಚ್ಛಿಸುತ್ತೇನೆ. 10-1-1995ರಂದು ಮಂಗಳವಾರ ಬಸವಯ್ಯ ಎನ್ನುವವರು, ಹರಿಜನ, 60 ವರ್ಷ ಪ್ರಾಯ ಅವರಿಗೆ. ಅವರ ಕಾಲನ್ನು ಕಡಿದಿದ್ದರು. 16-1-95ರಂದು ನಾವು ಕೊಡಗಿನ ಮೂರು ಜನ ಶಾಸಕರು ಮತ್ತು ಎಂ.ಪಿ. ಅವರಾದಂಥ ಧನಂಜಯ ಕುಮಾರ್ ಅವು ಜಾತ್ರೆಗೆ ಹೋಗಿ ಬರುತ್ತಿದ್ದೆವು. ಅಂಥ ಸಂದರ್ಭದಲ್ಲಿ ಬಸವಯ್ಯನವರ ಮಗ ಸುರೇಶ್ ಎನ್ನುವವರು ಕಾರಿಗೆ ಅಡ್ಡ ಬಂದು ನಮಗೆ ಒಂದು ಮನವಿಯನ್ನು ಕೊಟ್ಟರು. ಆ ಮನವಿಯನ್ನು ಓದುವಾಗ "ನನ್ನ ತಂದೆಯ ಕಾಲನ್ನು ಕಡಿದಿದ್ದಾರೆ. ಪೊಲೀಸರು ಯಾವುದೇ ಕ್ರಮವನ್ನು ತೆಗೆದುಕೊಳ್ಳಲಿಲ್ಲ. ಅವರನ್ನು ಬಂಧನ ಮಾಡಲಿಲ್ಲ. ಅವರ ಜೊತೆಗೆ ಯಾರು ಕಡಿದಿದ್ದಾರೆ ಅವರು ಪುನಃ ಬಂದು ಬೆದರಿಕೆ ಒಡ್ಡುತ್ತಿದ್ದಾರೆ". ಎಂದು ಮನವಿಯನ್ನು ಕೊಟ್ಟಿದ್ದರು. ಅದರ

ಪ್ರಕಾರ ನಾನು 16-1-1995ರಂದು 6 ಗಂಟೆ ಹೊತ್ತಿಗೆ ಸೋಮವಾರ ಪೇಟೆ ಪೊಲೀಸ್ ಸ್ಟೇಷನ್ಗೆ ಫೋನ್ ಮಾಡಿದೆ. ಆ ಸಂದರ್ಭದಲ್ಲಿ ಸಬ್-ಇನ್ಸ್‌ಪೆಕ್ಟರ್ ಸಿಗಲಿಲ್ಲ. ಪುನಃ ಸಿ.ಐ.ಗೆ. ಫೋನ್ ಮಾಡಿದಾಗ ಅವರೂ ಕೂಡ ಸಿಗಲಿಲ್ಲ. ಅದಾದನಂತರ ನಾನು ಮಡಿಕೇರಿ ಎಸ್.ಪಿ.ಯವರಾದಂಥ ಪ್ರಾಣಭಯ ಒಡ್ಡುತ್ತಿದ್ದಾರೆ ನೀವು ಕೇಸ್ ವಾಪಸ್ ತೆಗೆದುಕೊಳ್ಳಬೇಕೆಂದು ಬೆದರಿಸುತ್ತಿದ್ದಾರೆ ಎಂದು ಹೇಳಿದೆ. ಆಗ ಎಸ್.ಪಿ.ಯವರು ಕೊಟ್ಟ ಉತ್ತರ ಏನೆಂದರೆ, ನೀವು ಪುನಃ ಪೊಲೀಸ್ ಸ್ಟೇಷನ್ನಿಗೆ ಫೋನ್ ಮಾಡಿ ಸಬ್-ಇನ್ಸ್‌ಪೆಕ್ಟರ್, ಸರ್ಕಲ್ ಇನ್ಸ್‌ಪೆಕ್ಟರ್ ಜೊತೆಯಲ್ಲಿ ಮಾತನಾಡಿ ಎಂದು ಹೇಳಿದರು. ಆದರೂ ಪುನಃ ಬಹಳ ತಾಳ್ಮೆ ತೆಗೆದುಕೊಂಡು ಫೋನ್ ಮುಖಾಂತರ ಪುನಃ ಒಂದು ಸಾರಿ ಸಂಪರ್ಕ ಮಾಡುವುದಕ್ಕೆ ಪ್ರಯತ್ನ ಪಟ್ಟೆ. ಆದರೆ ಆ ಸಮಯದಲ್ಲೂ ಕೂಡ ಸಬ್-ಇನ್ಸ್‌ಪೆಕ್ಟರ್ ಸಿಗಲೀಲ್ಲ, ಸರ್ಕಲ್ ಇನ್ಸ್ ಪೆಕ್ಟರ್ ಕೂಡ ಸಿಗಲಿಲ್ಲ. ಅದಾದನಂತರ 9 ಗಂಟೆಗೆ ನಾನು ದೂರವಾಣಿ ಮುಖಾಂತರ ಎಸ್.ಪಿ.ಯವರನ್ನು ಕೇಳಿದಾಗ ಅವರು ಸರಿಯಾದ ಉತ್ತರವನ್ನು ಕೊಡಲಿಲ್ಲ. ನಂತರ ನಾನು ಗೃಹಮಂತ್ರಿಗಳಿಗೆ 9-30ಕ್ಕೆ ಫೋನ್ ಮಾಡಿದೆ.

ಇದನ್ನು ಏತಕ್ಕೆ ಹೇಳುತ್ತಿದ್ದೇನೆ ಅಂದರೆ, ಹರಿಜನರ ಮೇಲೆ ಹಲ್ಲೆ ನಡೆದಿದ್ದನ್ನು ಅಲ್ಲಿ ಕೆಲವೊಂದು ಪಾಂಪ್‌ಲೆಟ್ಸ್ ಮಾಡಿ ರಾಜ್ಯಾದ್ಯಂತ ಹೋರಾಟವನ್ನು ಕೂಡ ಮಾಡಿದ್ದಾರೆ. ತಾಲ್ಲೂಕಿನಲ್ಲೂ ಕೂಡ ಮಾಡಿದ್ದಾರೆ. ದಲಿತರ ಮೇಲಿನ ದೌರ್ಜನ್ಯವನ್ನು ಖಂಡಿಸಿ ರಾಜ್ಯಾದ್ಯಂತ ಜಿಲ್ಲಾಧಿಕಾರಿ ಕಛೇರಿಯ ಮುಂದೆ ಧರಣಿ ಎಂದು ಹೇಳಿ ಸೋಮವಾರ ಪೇಟೆಯನ್ನು ಕೂಡ ಸೇರಿಸಿದ್ದಾರೆ. ಇದನ್ನು ತಮ್ಮ ಮುಂದೆ ಕೊಡಲಿಚ್ಛಿಸುತ್ತೇನೆ. ಅಲ್ಲಿಂದ ಪುನಃ ಸೋಮವಾರ ಪೇಟೆಯಲ್ಲಿ ಒಂದು ಪ್ರತಿಭಟನಾ ಸಭೆ ಕೂಡ ಮಾಡಿದ್ದಾರೆ. ಹೀಗಿದ್ದಾಗ ನಾನೇ ಶಾಸಕನಾಗಿದ್ದು ಯಾವುದೇ ವಿಚಾರ ಕೇಳಲಿಲ್ಲ ಎಂದರೆ ನಾಳೆ ಅಲ್ಲಿ ಹೋದಾಗ ಅಲ್ಲಿಯ ಜನರು ಕೇಳುತ್ತಾರೆ. ಆ ದೃಷ್ಟಿಯಿಂದ ನಾನು ಫೋನ್ ಮಾಡಿದೆ. ಅದೇ ವಿಚಾರವಾಗಿ 9-30ಕ್ಕೆ ನಾನು ಗೃಹಮಂತ್ರಿಗಳ ಜೊತೆ ಫೋನ್‌ನಲ್ಲಿ ಮಾತನಾಡಿದ್ದೇನೆ. ನಾನು 9-30ಕ್ಕೆ ಫೋನ್ ಮಾಡಿದಾಗ ಸಾರಿ ಫಾರ್ ದಿ ಡಿಸ್ಟರ್ಬೆನ್ಸ್ ಎಂಬ ಮಾತನ್ನು ಹೇಳಿದೆ. ಆಗ ಅವರು ಹಾಗೇನಿಲ್ಲ ಯಾವಾಗ ಬೇಕಾದರೂ ನೀವು ಕಾಂಟಾಕ್ಟ್ ಮಾಡಿ ಎಂದು ಹೇಳಿ ಇದರ ಬಗ್ಗೆ ರಾತ್ರಿ ವಿಚಾರ ಮಾಡುತ್ತೇನೆ ಎಂಬ ಮಾತನ್ನು ಕೂಡ ಕೊಟ್ಟಿದ್ದರು. ಆದಾದ ನಂತರ ನನಗೆ ಪತ್ರಿಕೆಯಲ್ಲಿ ನೋಡಿದಾಗ ಆಶ್ಚರ್ಯವಾಯಿತು. ಈ ರೀತಿ ಶಾಸಕರ ಮೇಲೆ ಹಸ್ತಕ್ಷೇಪ ಮಾಡುತ್ತಿದ್ದಾರೆ ಎಂದು ಕೊಟ್ಟಿದ್ದು ನೋಡಿ ನನಗೆ ಬೇಸರ ಆಯಿತು. ಅದರ ಜೊತೆಗೆ ನಾವು ಯಾವ ರೀತಿ ಕೆಲಸ ಮಾಡಬೇಕೆಂದು ನನಗೆ ತೋಚಲಿಲ್ಲ. ಇವತ್ತು ಕೊಡಗಿನಲ್ಲಿ ಯಾವುದೇ ಪೊಲೀಸ್ ಅಧಿಕಾರಿ ಇರಬಹುದು. ಉನ್ನತ ಅಧಿಕಾರಿ ಇರಬಹುದು, ಸರಿಯಾದ ರೀತಿಯಲ್ಲಿ ಕಾನೂನು ವ್ಯವಸ್ಥೆಯನ್ನು ಕಾಪಾಡಿಕೊಂಡು ಬರುತ್ತಿಲ್ಲ. ಇದಕ್ಕೆ ಒಂದು ಉದಾಹರಣೆಯನ್ನು ಹೇಳುತ್ತಿದ್ದೇನೆ. ಕೆಲವು ದಿವಸಗಳ ಹಿಂದೆ ಪೊಲೀಸ್ ಪೇದೆ ಒಬ್ಬರು ಸುಳ್ಳು ನೆಪ ಒಡ್ಡಿ ಒಂದು ಮನೆಗೆ ಹೋಗಿ ಒಬ್ಬ ಮಹಿಳೆಯನ್ನು ಮಾನಭಂಗ ಮಾಡುವುದಕ್ಕೆ ಪ್ರಯತ್ನ ಮಾಡಿದರು. ಅದರ ವಿಚಾರವಾಗಿ ಇಷ್ಟರವರೆಗೆ ಅಲ್ಲಿಯ ಎಸ್.ಪಿ.ಯವರು ಆ ಪೊಲೀಸ್ ಪೇದೆಯನ್ನು ಬಂಧನ ಕೂಡ ಮಾಡಲಿಲ್ಲ.

ಅಧ್ಯಕ್ಷರು : ಅಷ್ಟಟ್ಟು ಅವರೇ, ಅದಕ್ಕೆಲ್ಲಾ ಬೇರೆ ಅವಕಾಶಗಳಿರುತ್ತವೆ. ರಾಜ್ಯಪಾಲರ ಭಾಷಣ ಇದೆ, ಬಜೆಟ್ ಜನರಲ್ ಡಿಸ್ಕಷನ್ ಇದೆ. ಈಗ ವಿಷಯ ಏನು ಎಂಬುದನ್ನು ತಿಳಿದುಕೊಳ್ಳಬೇಕಲ್ಲ, ನಾನು ಹೇಳುತ್ತೇನೆ ಕೇಳಿ. ತಮ್ಮ ಪಕ್ಷದ ಹಿರಿಯ ಮುಖಂಡರುಗಳು ನಿಗದಿ ಮಾಡಿದ ಹೆಚ್ಚು ಸಮಯವನ್ನು ಬಹಳ ಚೆನ್ನಾಗಿ ಉಪಯೋಗಿಸಿದ್ದಾರೆ. ತಾವು ಹೊಸಬರು; ಹೊಸದಾಗಿ ಬಂದಿರುವವರಿಗೆ ಮತ್ತು ಘಟನೆಗೆ ಸಂಬಂಧಪಟ್ಟಿರುವವರಿಗೆ ಅವಕಾಶ ಕೊಡಬೇಕೆಂದು ಕೊಟ್ಟಿದ್ದೇನೆ. ಬೇಗ

ಮುಗಿಸಬೇಕು. ಎಲ್ಲಾ ವೃತ್ತಾಂತ ಹೇಳುತ್ತಾ ಇದ್ದರೆ ತೊಂದರೆಯಾಗುತ್ತದೆ. ದಯಮಾಡಿ ಬೇಗ ಮುಗಿಸಬೇಕು ನೀವು ಶಾಸಕರಾಗಿ ನೀವು ಕೆಲಸ ಮಾಡುವುದಕ್ಕೆ ನಿಮಗೆ ಆಗಿರತಕ್ಕ ಅನಾನುಕೂಲಗಳು ಏನು ಎನ್ನುವಷ್ಟಕ್ಕೆ ಸೀಮಿತವಾಗಿ ಹೇಳಿ. ಅದಕ್ಕೆ ಸರ್ಕಾರದಿಂದ ಅವರು ಉತ್ತರ ಕೊಡುತ್ತಾರೆ. ಬೇಗ ಮುಗಿಸಿಬಿಡಿ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ : ಮಾನ್ಯ ಗೃಹ ಮಂತ್ರಿಗಳಿಗೆ ಇದೇ ವಿಚಾರವಾಗಿ ಮನವಿಯನ್ನು ಕೊಟ್ಟಿದ್ದೇನೆ. ಪತ್ರವನ್ನೂ ಕೂಡ ಬರೆದಿದ್ದೇನೆ. ಅವರಿಂದ ಅದಕ್ಕೆ ಉತ್ತರ ಬಂದಿದ್ದರೆ ನಾನು ಇಲ್ಲಿ ಕೇಳುವ ಪ್ರಶ್ನೆಯೇ ಇರಲಿಲ್ಲ. ಅದಕ್ಕೋಸ್ಕರ ಕೇಳುತ್ತಿದ್ದೇನೆ. ಈ ರೀತಿ ನಮ್ಮ ಕೊಡಗಿನಲ್ಲಿ ನಡೆಯುತ್ತಿದೆ. ಸೋಮವಾರ ಪೇಟೆಯಲ್ಲೂ ಕೂಡ ನಡೆಯುತ್ತಿದೆ. ಇದರಲ್ಲಿ 7-8 ಅಪರಾಧವನ್ನು ನಾನು ಕಳುಹಿಸಿದ್ದೇನೆ. ಇದರ ಬಗ್ಗೆ ಅಟ್‌ಲೀಸ್ಟ್ ನಮಗೆ ಪತ್ರದ ಮುಖೇನವಾದರೂ ಉತ್ತರ ಕೊಟ್ಟರೆ ಸಾಕು. ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಧನ್ಯವಾದಗಳು.

+ ಶ್ರೀಮತಿ ಪ್ರಮೀಳಾ ಎಸ್. ನೇಸರ್ಗಿ (ಚಾಮರಾಜಪೇಟೆ) : ಮಾನ್ಯ ಸಭಾಧ್ಯಕ್ಷರೇ, ನಾನು ಇದರ ಬಗ್ಗೆ ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಇಲ್ಲಿ ಅದರ ಬಗ್ಗೆ ಕಾನೂನು ದೃಷ್ಟಿಯಲ್ಲಿ ಎರಡು ಮಾತುಗಳನ್ನು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ನಾಯಕರು, ವಿರೋಧ ಪಕ್ಷದ ನಾಯಕರು ಮತ್ತೆ ಎಲ್ಲ ಸದಸ್ಯರೂ ಕೂಡ ಯಾವುದಾದರೊಂದು ವಿಷಯವನ್ನು ಅಥವಾ ಡಾಕ್ಯುಮೆಂಟನ್ನು ಅಥವಾ ದಾಖಲೆಗಳನ್ನು ಸರ್ಕಾರದ ವತಿಯಿಂದ ತೆಗೆದುಕೊಳ್ಳಬಹುದೇ, ತೆಗೆದುಕೊಳ್ಳಬಹುದಾದರೆ, ಅದರ ಬಗ್ಗೆ ಅಡ್ಡಿ ಆತಂಕಗಳನ್ನು ಸರ್ಕಾರ ಅಥವಾ ಸರ್ಕಾರದಲ್ಲಿರತಕ್ಕ ಮಂತ್ರಿವರ್ಯರು ಅಥವಾ ಅಧಿಕಾರ ವರ್ಗದವರು ಕೊಡಬಲ್ಲರೇ? ಇದರ ಬಗ್ಗೆ ಶ್ರೀಮಾನ್ ನಂಜೇಗೌಡರು ಬ್ರಿಟೀಷ್ ಕಾನ್ಸಿಟಿಟ್ಯೂಷನ್ ಮತ್ತು ಬೇರೆ ಕಾನ್ಸಿಟ್ಯೂಷನ್‌ಗಳ ಉದಾಹರಣೆಯನ್ನು ಕೊಟ್ಟು ಇದನ್ನ ತೆಗೆದುಕೊಳ್ಳುವ ಬಗ್ಗೆ ಕಾನೂನು ಇಲ್ಲ ಎನ್ನುವುದರ ಬಗ್ಗೆ ಸ್ಪಷ್ಟವಾಗಿ ತಮಗೆ ತಿಳಿಸಿದ್ದಾರೆ. ಆದರೆ ನಾನು ಹೇಳುವುದು ಇಷ್ಟೆ. ಕಾನೂನಿನಲ್ಲಿ ಅಥವಾ ಕಾನ್ಸಿಟಿಟ್ಯೂಷನ್‌ನಲ್ಲಿ ಇದರಲ್ಲಿ ಇಲ್ಲದೇ ಇದ್ದರೂ ಕೂಡ ಆರ್ಟಿಕಲ್ 19 ಅನ್ನು ತಾವು ದಯಮಾಡಿ ತೆಗೆದುಕೊಳ್ಳಬೇಕು. 'Article 19 of the Universal Declaration of Human Rights 1948'

ಅದರಲ್ಲಿ ಏನು ಹೇಳಿದೆ ಅಂದರೆ ಇದಕ್ಕೆ ಎಲ್ಲರೂ ಬದ್ಧರಾಗಿದ್ದಾರೆ. ಇಂಡಿಯಾ ಇದಕ್ಕೆ ಹೊರತಾಗಿಲ್ಲ, ಅಥವಾ ಕರ್ನಾಟಕ ಹೊರತಾಗಿಲ್ಲ. "Everyone has a right to freedom of opinion and expression. This right includes freedom to hold opinion without interference and to seek, receive and impart information and ideas through any media" ಅಂತ ಹೇಳಿದ್ದಾರೆ. ನಾನು ಏನನ್ನು ಹೇಳುತ್ತಿದ್ದೇನೆಂದರೆ "to seek information" includes "to seek any information from any corner whether it be the Government or any other."

MR. SPEAKER : What authority you are quoting madam?

SMT. PRAMILA S. NESARGI : Article 19 of the Universal Declaration of Human Rights, 1948.

ನಂತರ ಅದೇ ಪ್ರಕಾರ Article 19 of the International Covenant on Civil & Political Rights 1966." ಇದು ಕೂಡ "Everyone shall have the right to hold opinions without interference. Everyone shall have the right to freedom of expression. This right shall include freedom to seek."

ಇದನ್ನು ಹೇಳುತ್ತಿದ್ದೇನೆ. ಇದು ಎರಡನೆಯದು. ಮೂರನೆಯದು Article 10 of the European Convention of Human Rights: "Everyone has the right to freedom of expression. This right shall include freedom to hold opinions and to receive and impart informaiton." ಪಂಡಿತ್ ಜವಾಹರ್‌ಲಾಲ್ ನೆಹರೂರವರು ಕಾನ್ಸಿಟಿಟ್ಯೂಯಂಟ್ ಅಸೆಂಬ್ಲಿಯಲ್ಲಿ ಇದರ ಬಗ್ಗೆ ಮಾತನಾಡತಕ್ಕ ಸಂದರ್ಭದಲ್ಲಿ ಈ ಮಾತನ್ನು ಹೇಳತಕ್ಕಂತಹ ಸಂದರ್ಭದಲ್ಲಿ ಹೇಳಿದ್ದಾರೆ. ಯಾರಿಗೇ ಆದರೂ ಇನ್‌ಫರ್ಮೆಷನ್ ಕೊಡದೇ ಇರತಕ್ಕ ಸಂದರ್ಭದಲ್ಲಿ ಕೊಡಲೇಬೇಕು. ಅದರಿಂದ ಏನೇ ಅಪಘಾತ ಆದರೂ ಕೂಡ ಆವಾಗ "... has complete freedom of expression with all the dangers involved in the wrong use and that freedom then suppressed or regulated.."

ಸಪ್ರೆಸ್ ಮಾಡಬಾರದು ಎನ್ನತಕ್ಕ ವಿಷಯವನ್ನು ಹೇಳಿದ್ದಾರೆ. ಪಂಡಿತ್ ಜವಹರಲಾಲ್ ನೆಹರೂರವರು The historical resolution contained the aimes and objects of the Constitution. ಮಾಡಿದಾಗ ಅದರ ಬಗ್ಗೆ ಹೇಳಿದ್ದಾರೆ. ಅದಕ್ಕಿಂತ ಹೆಚ್ಚಾಗಿ ಮಾನ್ಯ ಸಭಾಧ್ಯಕ್ಷರೆ, the preamble of the constitution says that it is intended to secure to all citizens amongst others the liberty of thought, expression and belief in all kinds restrictions that may be imposed in the public interest is not enumarated in clause 2 of Article 19 ಅಂತ ಹೇಳಿದೆ. ಇದನ್ನು ಇಂಟರ್‌ಪ್ರಿಟ್ ಮಾಡತಕ್ಕ ಸಂದರ್ಭದಲ್ಲಿ 1986ನೇ ಇಸವಿಯಲ್ಲಿ ಇಂಡಿಯನ್ ಎಕ್ಸ್‌ಪ್ರೆಸ್‌ನ ಕೇಸು ಸುಪ್ರೀಂ ಕೋರ್ಟಿಗೆ ಹೋಯಿತು. ಅದು ಹೋದಂತಹ ಸಂದರ್ಭದಲ್ಲಿ ಸುಪ್ರೀಂ ಕೋರ್ಟಿನವರು ಕ್ಲಿಯರ್ರಾಗಿ "The basic right of every human being is to get the information and to seek the information." ಎನ್ನುವುದನ್ನು 1986ನೇ ಇಸವಿಯಲ್ಲಿ ಸುಪ್ರೀಂ ಕೋರ್ಟ್ ತೀರ್ಮಾನ ಮಾಡಿದೆ. ಇದು ಆದ ನಂತರ ಹೋದ ತಿಂಗಳು ಸುಪ್ರೀಂ ಕೋರ್ಟಿನಲ್ಲಿ ಮೀಡಿಯ ಇನಸ್ಟ್ರಕ್ಷನ್‌ನ್ನು ಯಾವ ರೀತಿ ಕ್ರಿಕೆಟ್ ಅಸೋಸಿಯೇಷನ್ ಕೇಸು ಬಂದಂತಹ ಸಂದರ್ಭದಲ್ಲಿ ಸುಪ್ರೀಂ ಕೋರ್ಟಿನವರು ಕ್ಲಿಯರ್ರಾಗಿ 1986ನೇ ಇಸವಿಯಲ್ಲಿ ಹೇಳಿದ್ದನ್ನು ಪುನರುಚ್ಚಾರ ಮಾಡಿ 50ನೇ ಇಸವಿಯಲ್ಲಿ ಹೇಳಿದ ಕಾನೂನನ್ನೇ ಪುನರುಚ್ಚಾರ ಮಾಡಿ ಆರ್ಟಿಕಲ್ 19ನ್ನು ಇಂಟರ್ ಪ್ರಿಟ್ ಮಾಡತಕ್ಕ ಸಂದರ್ಭದಲ್ಲಿ "Right to seek information is one of the basic rights of the constitution." ಅಂತ ಹೇಳಿ ಇದು ಮೂಲಭೂತ ಹಕ್ಕು, ಸರ್ವರಿಗೂ ಇದು ಕಾನೂನು ಎಂದು ಹೇಳಿದ್ದಾರೆ. ಕಾನೂನನ್ನು ಹೇಳತಕ್ಕ ಸಂದರ್ಭದಲ್ಲಿ ಸುಪ್ರೀಂ ಕೋರ್ಟ್ not only decides the case but declares the law. ಅದೇ ರೀತಿ ಆರ್ಟಿಕಲ್ 141ರ ಪ್ರಕಾರವಾಗಿ ಕಾನೂನನ್ನು ಸುಪ್ರೀಂ ಕೋರ್ಟ್‌ನಲ್ಲಿ ಡಿಕ್ಲರೇಷನ್ ಮಾಡತಕ್ಕ ಸಂದರ್ಭದಲ್ಲಿ ಮೂಲಭೂತ ಹಕ್ಕು ಸೀಕಿಂಗ್ ಇನ್‌ಫರ್ಮೇಶನ್ ಅಂತ ಹೇಳಿದಾಗ ಯಾರಿಗೇ ಆಗಲಿ, ಕಾನೂನನ್ನು ವಿಘ್ನ ಮಾಡುವುದಕ್ಕಾಗಲೀ, ಭಂಗ ಮಾಡುವುದಕ್ಕಾಗಲೀ ಅಧಿಕಾರ ಇಲ್ಲ, ಕಾನೂನಿಗಿಂತ ಹೆಚ್ಚಾಗಿ, ರಾಜ್ಯಾಂಗಕ್ಕಿಂತ ಹೆಚ್ಚಾಗಿ ಮುಖ್ಯ ಮಂತ್ರಿಗಳಾಗಲಿ, ಸರ್ಕಾರದಲ್ಲಿರತಕ್ಕ ಅಧಿಕಾರಿಗಳೇ ಆಗಲಿ ಸಾಧ್ಯವಿಲ್ಲ. ಅಲ್ಲಿಂದ ಯಾವುದೇ ದಾಖಲೆಯನ್ನು ನಾವು ಕೊಡಲೇಬೇಕಾದುದು. ಅದು ನಮ್ಮ ಮೂಲಭೂತ ಹಕ್ಕು. ಕೇಳಲೇಬೇಕಾದ್ದು ನಮ್ಮ ಹಕ್ಕು. ಅದೂ ಅಲ್ಲದೆ, ಡೆಮಾಕ್ರೆಟಿಕ್ ಸೊಸೈಟಿಯಲ್ಲಿ imparting communication is one of the media. ಕಮ್ಯೂನಿಕೇಷನ್ ಆಗಬೇಕಾದರೆ. ನಾವು ಯಾವುದಾದರೂ ವಿಷಯವನ್ನು ಪ್ರಸ್ತಾಪ ಮಾಡಬೇಕಾದರೆ, ಡೆಮಾಕ್ರಟಿಕ್ ಸೊಸೈಟಿಯಲ್ಲಿ ವಿರೋಧ ಪಕ್ಷದವರಾಗಿ ನಮ್ಮ ಸ್ಥಾನವನ್ನು ಸರಿಯಾಗಿ ಕೆಲಸ ನಿರ್ವಹಣೆ ಮಾಡಬೇಕಾದರೆ "right to seek the information to the public is a must."

ಅದನ್ನು ಕೂಡ ಸುಪ್ರೀಂ ಕೋರ್ಟಿನಲ್ಲಿ ಮೊನ್ನೆ ಆದಂತಹ ಕೇಸ್‌ನಲ್ಲಿ ತೀರ್ಮಾನ ಮಾಡಿದ್ದಾರೆ. ಅದನ್ನೂ ಪರಾಂಬರಿಸಿ ಸಂಪೂರ್ಣವಾಗಿ ಡಿಸ್‌ಕಷನ್ ಮಾಡಬಹುದು. ಪ್ರಿವಿಲೇಜ್ ಡಾಕ್ಯುಮೆಂಟ್ ಅಂದರೆ ಏನು? ಕಾನ್ಫಿಡೆನ್ಷಿಯಲ್ ಡ್ಯಾಕ್ಯುಮೆಂಟ್ ಅಂದರೆ ಏನು? ಆ ಕಾನ್ಫಿಡೆನ್ಷಿಯಲ್ ಡಾಕ್ಯುಮೆಂಟ್ ಕೂಡ ಯಾವುದು ದೇಶಕ್ಕೆ ಪಬ್ಲಿಕ್‌ಗೆ ಸೇಫ್ಟಿಗೆ ಆತಂಕ ಬಂದಾಗ ದೇಶದ ಸ್ವಾತಂತ್ರ್ಯಕ್ಕೆ ಆತಂಕ ಬಂದಾಗ ಆ ಎರಡು ವಿಷಯಗಳನ್ನು ಬಿಟ್ಟು, ಎಲ್ಲವನ್ನೂ ಕೂಡ ಪ್ರತಿಯೊಂದು ಮಾಹಿತಿಯನ್ನು ತೆಗೆದುಕೊಳ್ಳಬಹುದು. ಇಡಿ ಇತಿಹಾಸದಲ್ಲಿ ಭಾರತದಲ್ಲಿ ಯೂರೋಪ್‌ನಲ್ಲಿ, ಅಮೇರಿಕಾದಲ್ಲಿ, ಹ್ಯೂಮನ್ ರೈಟ್ಸ್‌ನಲ್ಲಿ, ಜಸ್ಟೀಸ್ ಹೋಮ್ ಮತ್ತು ಎಲ್ಲ ನಾಯಕರೂ ಮತ್ತು ಜಡ್ಜ್‌ಮೆಂಟ್‌ಗಳಲ್ಲೂ ಇದರ ವಿಚಾರ ಬಂದಿದೆ. ಆದ್ದರಿಂದ ಯಾವುದೇ ದಾಖಲೆಗಳನ್ನು ಕೊಡುವುದಕ್ಕಾಗುವುದಿಲ್ಲ ಅಂತ ಹೇಳುವುದಾಗಲಿ, ಅಥವಾ ಕೇಳುವುದಕ್ಕಾಗುವುದಿಲ್ಲ ಅಥವಾ ಆದೇಶವನ್ನು ಕೊಡುತ್ತೇನೆ ಅಂತ ಹೇಳುವುದಾಗಲಿ ಅಥವಾ ಸರ್ಕಾರಿ ಅಧಿಕಾರಿಗಳು they cannot withhold the documents. ಅನ್ನುವುದನ್ನು ಮಾತ್ರ ಈ ಸಂದರ್ಭದಲ್ಲಿ ಹೇಳುತ್ತೇನೆ. ಇದರ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಯಾವ್ಯಾವ ಕಾನೂನು ಏನೇನು ಹೇಳಿದೆ ಅಂದು ಎಲ್ಲವನ್ನೂ ನಾನು ಬರೆದೂ ಕೊಟ್ಟಿದ್ದೇನೆ. ತಮ್ಮ ಗಮನಕ್ಕೆ ಅವಗಾಹನೆಗೆ ಕೊಡುವವಳು ಇದ್ದೇನೆ. ಇದರ ಎಲ್ಲವನ್ನು ಸಂಗ್ರಹ ಮಾಡಿದ್ದೇನೆ. ಏಕೆಂದರೆ ಪೂರ್ತಿಯಾಗಬಹುದು ಎಲ್ಲ ಕಾನೂನನ್ನು ಹೇಳುತ್ತಾ ಹೋದರೆ ಅಂತ.

MR. SPEAKER : That helps me when I become the Chief Minister.

ಶ್ರೀಮತಿ ಪ್ರಮೀಳಾ ನೇಸರ್ಗಿ : ನಾನು ಇಲ್ಲಿ ಮಾತನಾಡುವುದು ಅಂತ ಅಲ್ಲ. ಕೊಡುವುದಕ್ಕೆ ಇದ್ದೇನೆ. ಏಕೆಂದರೆ ರಾಜ್ಯಾಂಗದಲ್ಲಿ ಓತ್ ತೆಗೆದುಕೊಂಡು ಈ ಸಂದರ್ಭದಲ್ಲಿ ವಿಧಾನಸಭೆಯಲ್ಲಿ ಶಾಸನ ಸಭೆಯ ಸದಸ್ಯರಾಗಿ ಬಂದಾಗ ರಾಜ್ಯಾಂಗಕ್ಕೆ ಬದ್ಧವಾಗಿ ಇರುತ್ತೇವೆ ಅಂತ ಹೇಳಿ ಓತ್ ತೆಗೆದುಕೊಳ್ಳುತ್ತೇನೆ. ಅದೇ ರೀತಿ ಮಾನ್ಯ ಮುಖ್ಯಮಂತ್ರಿಗಳೂ ತೆಗೆದುಕೊಳ್ಳುತ್ತಾರೆ. ಆದ್ದರಿಂದ ರಾಜ್ಯಾಂಗಕ್ಕೆ ವಿರೋಧವಾಗಿ ಯಾವುದೇ ಕೆಲಸ ಮಾಡಿದರೆ, ರಾಜ್ಯಾಂಗಕ್ಕೆ ವಿರೋಧವಾಗಿ ಯಾವುದೇ ಕೆಲಸ ಮಾಡಿದರೆ, ರಾಜ್ಯಾಂಗಕ್ಕೆ ವಿರೋಧವಾಗಿ ಕೆಲಸ ಮಾಡಿದ ಹಾಗೆ ಆಗುತ್ತದೆ. ಆವಾಗ ರಾಜ್ಯಾಂಗಕ್ಕೆ ವಿರುದ್ಧವಾಗಿ ಕೆಲಸ ಮಾಡಿದರು ಅಂತ ಅಂದರೆ, ಶಾಸನ ಬದ್ಧವಾಗಿ ವಿರೋಧ ಮಾಡಿದ ಹಾಗೆ ಆಗುತ್ತದೆ. ಅಂತಹವರು ಅಧಿಕಾರದಲ್ಲಿರುವುದಕ್ಕೆ ಅವಕಾಶ ಒದಗುವುದಿಲ್ಲ. ಆ ಅವಕಾಶವನ್ನು ಮಾನ್ಯ ಮುಖ್ಯ ಮಂತ್ರಿಗಳು ಕೊಡಬಾರದು. ಈ ಕೆಲಸವನ್ನು ದಯವಿಟ್ಟು ಈಗ ಆದದ್ದು ಆಗಿ ಹೋಯಿತು. ಯಾವ ಕಾರಣದಿಂದ ಕೊಟ್ಟರೋ, ಯಾವ ಅಧಿಕಾರಿ ಕೊಡಬಾರದು ಅಂತ ಹೇಳಿದರೋ ಅದು ಗೊತ್ತಿಲ್ಲ. ಇನ್ನು ಮೇಲಾದರೂ ಕೂಡ ಸರಿಪಡಿಸಿ. ರಾಜ್ಯಾಂಗ ಬದ್ಧವಾಗಿ ನಾವು ಕೆಲಸ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ಕೇಳಿ ಕೊಳ್ಳುತ್ತೇನೆ. ಇನ್ನೊಂದು ಮಾತು ಹೆಚ್ಚಾಗಿ ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ. ಹೌಸ್ ಆಫ್ ಕಾಮನ್ಸ್‌ನಲ್ಲಿ ಬೇರೆ ಕಡೆ ಶಾಸಕರಿಗೆ ಎಲ್ಲಾ ವಿಧವಾದ ಅನುಕೂಲಗಳನ್ನು ಕೊಡುತ್ತಾರೆ. ಇಂಟೆಲಿಜೆನ್ಸ್, ಪಿ.ಎ. ಸ್ಟೆನೋಗ್ರಾಫರ್, ಟೈಪಿಸ್ಟ್, ಆಫೀಸು, ರೂಮು ಎಲ್ಲ ಮಾಹಿತಿಗಳನ್ನು ಕೊಡುತ್ತಾರೆ. ನಮ್ಮ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ವಿರೋಧ ಪಕ್ಷದ ನಾಯಕರಾಗಿ ನೀವೇ ವಿಷಯವನ್ನು ಸಂಗ್ರಹಣೆ ಮಾಡಿಕೊಳ್ಳಬೇಕು. ನಾವು ಕೊಡಬೇಕು ಅಂತ ಇಲ್ಲ ಅಂತ ಹೇಳಿದ್ದಾರೆ. ಅದನ್ನು ಒಪ್ಪೋಣ. ನಮಗೂ ಕೂಡ ನಿಮಗೆ ಇರುವ ಹಾಗೆ ಇಂಟೆಲಿಜೆನ್ಸ್ ಪೊಲೀಸ್ ಸೆಕ್ಷನ್ ನಮಗೂ ಕೊಡಿ. ಇಂಟೆಲಿಜನ್ಸ್ ವ್ಯವಸ್ಥೆ ಪ್ರಕಾರ ಏನೇನು ದಾಖಲೆಗಳು ಒದಗಿಸಿಕೊಳ್ಳಬೇಕೋ ಅವುಗಳನ್ನು ಒದಗಿಸಿಕೊಂಡು ನಾವು ಚೆನ್ನಾಗಿ

ಶಾಸನ ಬದ್ಧವಾಗಿ ಕೆಲಸ ಮಾಡುವುದಕ್ಕೆ ಸಮರ್ಥ ಶಾಸಕರಾಗಿ ಈ ಒಂದು ಕರ್ನಾಟಕ ಶಾಸನ ಸಭೆಯಲ್ಲಿ ಬೆಳಕನ್ನು ಬೆಳಗೋಣ ಅಂತ ಈ ಸಂದರ್ಭದಲ್ಲಿ ಕೇಳಿಕೊಂಡು ನನಗೆ ಅವಕಾಶವನ್ನು ಮಾಡಿಕೊಟ್ಟಿದ್ದಕ್ಕೆ ಸಭಾಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

MR. SPEAKER : I now request the leader of the House to begin his reply.

ಶ್ರೀ ಡಿ.ವಿ. ಸದಾನಂದ ಗೌಡ : ಮಾನ್ಯ ಅಧ್ಯಕ್ಷರೇ,

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರಿಗೆ ಒಂದು ಅವಕಾಶ ಕೊಡಿ.

ಅಧ್ಯಕ್ಷರು : ಎಲ್ಲ ವಿಚಾರವನ್ನು ತಾವು ಬಹಳ ಸವಿಸ್ತಾರವಾಗಿ ಪ್ರಸ್ತಾಪ ಮಾಡಿದ್ದೀರಿ. ಪ್ರತಿಯೊಂದು ಘಟನೆಯನ್ನು ವಿವರಣಾತ್ಮಕವಾಗಿ ಹೇಳಿದ್ದೀರಿ. ಕಾನೂನಿನ ಅಂಶಗಳನ್ನು ಶ್ರೀಮತಿ ಪ್ರಮೀಳಾರವರು ತಮ್ಮ ಪಕ್ಷದ ವಕ್ತಾರರಾಗಿ ಪ್ರತಿಪಾದಿಸಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವು ಏನು ಅಪ್ಪಣೆ ಕೊಡಿಸಿದ್ದೀರೋ ಅದಕ್ಕೆ ಪೂರ್ಣವಾಗಿ ನಾವು ತಲೆಬಾಗಿಸಿ ಕೆಲಸ ಮಾಡುತ್ತಿದ್ದೇನೆ. ಅವರ ಮೇಲೆಯೇ ಕೇಸು ಇದೆ. ಅವರಿಗೊಬ್ಬರಿಗೆ ಅವಕಾಶ ಕೊಡಿ.

ಶ್ರೀ ಡಿ.ಕೆ. ಶಿವಕುಮಾರ್ : ಮಾನ್ಯ ಅಧ್ಯಕ್ಷರೇ,

ಅಧ್ಯಕ್ಷರು : ಏನು ಶಿವಕುಮಾರ್, ನಿಮ್ಮನ್ನು ನೋಡಿದರೆ ಹೆದರುತ್ತಾರೆ. ಪಾಪ ಅವರು ಬಡಪಾಯಿ. ನೀವು ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮಾಡುವಾಗ ಜೋರಾಗಿ ಹೇಳುವಿರಂತೆ. ಕುಳಿತುಕೊಳ್ಳಿ. ಈಗ ಶ್ರೀ ಸದಾನಂದ ಗೌಡರೊಬ್ಬರಿಗೆ ಅವಕಾಶ ಕೊಡುತ್ತೇನೆ.

ಶ್ರೀ ಡಿ.ವಿ. ಸದಾನಂದ ಗೌಡ (ಪುತ್ತೂರು) : ಮಾನ್ಯ ಅಧ್ಯಕ್ಷರೇ ಹೆಚ್ಚಿನ ವಿಚಾರಕ್ಕೆ ನಾನು ಹೋಗುವುದಿಲ್ಲ ಕೇವಲ ನನ್ನ ಮೇಲೆ ಬಂದಂತಹ ಆರೋಪ ನನ್ನನ್ನು ಆರೋಪಿಯನ್ನಾಗಿ ಎಫ್.ಐ.ಆರ್. ಹಾಕಿದ್ದಾರೆ. ದೇವೇಗೌಡರು ನನ್ನ ಹೆಸರನ್ನೂ ಕಾಣಿಸಿದ್ದಾರೆ. ನನ್ನ ಯಾವ ಕೇಸು ಇದೆ ಅದರ ಬಗ್ಗೆ ಮಾತ್ರ ನಾನು ಪ್ರಸ್ತಾಪ ಮಾಡುವುದಕ್ಕೆ ಬಯಸುತ್ತೇನೆ. ಇಲ್ಲಿ ಏನಾಗಿದೆ ಎಂದರೆ, ನಾನು ದೇವೇಗೌಡರಿಗೆ ಬರೆದಂತಹ ಪತ್ರವನ್ನ ತಮ್ಮ ಮುಂದೆ ಓದಲಿಕ್ಕೆ ಇಚ್ಛಿಸುತ್ತೇನೆ. ಅದರಲ್ಲಿ ಯಾವುದೇ ಅಧಿಕಾರಿಯಲ್ಲಿ ಹಸ್ತಕ್ಷೇಪವನ್ನು ಈ ಒಂದು ಶಾಸಕರಿಂದ ಆಗಿದೆಯೇ ಎಂದು ಹೇಳುವಂತಹ ತೀರ್ಮಾನವನ್ನು ತಾವು ಕೊಡಲೇಬೇಕೆಂದು ತಮ್ಮಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಮಾನ್ಯ ದೇವೇಗೌಡರು ಈ ಸದನದಲ್ಲಿ ಪ್ರಸ್ತಾಪ ಮಾಡುತ್ತಾರೆ ಯಾವುದು ರಾಜಕೀಯ ಹಸ್ತಕ್ಷೇಪವಿರಬಾರದೆಂದು. ಅದೇ ವಿಚಾರವನ್ನು ತಮ್ಮ ಮುಂದೆ ಇಡಲಿಕ್ಕೆ ಇಚ್ಛೆಪಡುತ್ತೇನೆ.

"ಮಾನ್ಯ ಮುಖ್ಯಮಂತ್ರಿಯವರಿಗೆ,

ಪ್ರಸ್ತುತ ಪುತ್ತೂರು ತಾಲ್ಲೂಕಿನ ಎಲ್ಲಾ ಇಲಾಖೆಗಳ ಅಧಿಕಾರಿಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿದ್ದು ಪ್ರಕೃತ ಹಲವು ವ್ಯಕ್ತಿಗಳು ಅನಪೇಕ್ಷಿತವಾಗಿ ಹಲವಾರು ಅಧಿಕಾರಿಗಳನ್ನು ವರ್ಗಾವಣೆ ಮಾಡಿಸಬೇಕೆಂಬ ಪ್ರಯತ್ನ ಮಾಡುತ್ತಿರುವುದಾಗಿ ನನಗೆ ತಿಳಿದುಬಂದಿರುತ್ತದೆ. ಏನಾಗಿದೆ ಎಂದರೆ, ನಮ್ಮ ಕ್ಷೇತ್ರದಲ್ಲಿರುವ ಅಧಿಕಾರಿಗಳೆಲ್ಲ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಆದರೆ ಅನಪೇಕ್ಷಿತವಾಗಿ ಇವತ್ತು ಅಧಿಕಾರಕ್ಕೆ ಬಂದಂತಹ ಕೆಲವು ವ್ಯಕ್ತಿಗಳು ಸಣ್ಣ ಸಣ್ಣ ಪುಡಾರಿಗಳು ಇದರಲ್ಲಿ ಹಸ್ತಕ್ಷೇಪ ಮಾಡುವುದರ

ಮುಖಾಂತರ ಅಲ್ಲಿ ಅಧಿಕಾರಿಗಳನ್ನು ವರ್ಗಾವಣೆ ಮಾಡಬೇಕೆಂದು ಹೇಳುವುದು ನನಗೆ ಗೊತ್ತಾಗಿದೆ. ಯಾವುದೇ ಅಧಿಕಾರಿಯನ್ನು ಪುತ್ತೂರು ಕ್ಷೇತ್ರದಿಂದ ವಿನಾಕಾರಣ ಅವಧಿಗೆ ಮುಂಚಿತವಾಗಿ ಪ್ರಿಮೆಚ್ಯುರ್ ಟ್ರಾನ್ಸ್‌ಫರ್ ಮಾಡಬಾರದಾಗಿಯೂ ಇಂತಹ ಯಾವುದೇ ಅಧಿಕಾರಿಯ ವರ್ಗಾವಣೆಯನ್ನು ಅವಧಿಗೆ ಮುಂಚಿತವಾಗಿ ಅಥವಾ ವಿನಾಕಾರಣವಾಗಿ ಮಾಡುವುದಾದಲ್ಲಿ ನನ್ನ ಅವಗಾಹನೆಗೆ ತರದೆ ಮಾಡಬಾರದಾಗಿಯೂ ಯಾವುದೇ ಅಧಿಕಾರಿಯ ವರ್ಗಾವಣೆಯನ್ನು ನನ್ನ ಕ್ಷೇತ್ರದಲ್ಲಿ ರಾಜಕೀಯ ಪ್ರೇರಿತವಾಗಿರಬಾರದೆಂದು ಈ ಮೂಲಕ ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತಿದ್ದೇನೆ. ನನ್ನ ಕ್ಷೇತ್ರಕ್ಕೆ ಇಂತಹ ಯಾವುದೇ ಅಧಿಕಾರಿಯನ್ನು ಹಾಕಿ ಆದಕಾರಣ ಒಳ್ಳೆಯದಾಗುತ್ತದೆ, ಅಥವಾ ಇಂತಹ ಅಧಿಕಾರಿಗಳನ್ನು ತೆಗೆದು ಬೇರೆ ಕಡೆ ಹಾಕಿ ಎಂದು. ಈ ರೀತಿ ಯಾವುದಾದರೂ ಹಸ್ತಕ್ಷೇಪವನ್ನು ನಾನು ಬರೆದಂತಹ ಪತ್ರದಲ್ಲಿ ಮಾಡಿದ್ದೇನೆಯೇ. ಅಧ್ಯಕ್ಷರು ಇದನ್ನು ನೋಡಬೇಕಾಗಿದೆ. ನಾನು ಏನು ಹೇಳಿದ್ದೇನೆ? ನನ್ನ ಕ್ಷೇತ್ರದಲ್ಲಿರುವಂತಹ ಎಲ್ಲಾ ಅಧಿಕಾರಿಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇವತ್ತು ರಾಜಕೀಯ ಬದಲಾವಣೆಯಾದ ನಂತರ ಕೂಡ ನಾನು ಶಾಸಕನಾಗಿ ಬಂದನಂತರ ಅಲ್ಲಿ ಯಾವುದೇ ರೀತಿಯ ತೊಂದರೆಯಾಗುತ್ತಿಲ್ಲ. ಆದರೆ ಅನಾವಶ್ಯಕವಾಗಿ ಕೆಲವು ಇತರೆ ರಾಜಕೀಯ ಪಕ್ಷಗಳವರು ಅದಕ್ಕೆ ಸಂಬಂಧಪಟ್ಟವರು ಅನಾವಶ್ಯಕವಾಗಿ ಇವರನ್ನು ಟ್ರಾನ್ಸ್‌ಫರ್ ಮಾಡಿಸುವ ಕೆಲಸವಾಗಬಾರದೆಂದು ಮಾತ್ರ ಕೇಳಿಕೊಂಡಿದ್ದೇನೆಯೇ ಹೊರತು, ಯಾವುದೇ ಅಧಿಕಾರಿಯನ್ನು ನನ್ನ ಕ್ಷೇತ್ರಕ್ಕೆ ಹಾಕಿ ಅಥವಾ ಇಂತಹವರನ್ನು ನನ್ನ ಕ್ಷೇತ್ರದಿಂದ ಹೊರಗೆ ಹಾಕಿಯೆಂದು ನಾನು ಯಾವುದೇ ಒತ್ತಡ ತಂದಿಲ್ಲ. ಅತ್ಯಂತ ಪ್ರಾಮಾಣಿಕವಾಗಿ ಒಂದು ಕ್ಷೇತ್ರದ ಶಾಸಕನಾಗಿ ಅಲ್ಲಿರುವಂತಹ ಅಧಿಕಾರಿಗಳ ರಕ್ಷಣೆ ಮಾಡಿದ್ದೇನೆಯೇ ಹೊರತು ಯಾವುದೇ ರೀತಿಯಲ್ಲಿ ನಮ್ಮ ಸರ್ಕಾರವನ್ನು ಪೇಚಿಗೆ ಸಿಕ್ಕಿಸುವಂತಹ ಸಂಗತಿಯಾಗಲಿ ಶಾಸಕನಾಗಿ ನನ್ನ ಅಧಿಕಾರ ವ್ಯಾಪ್ತಿಯಿಂದ ಹೊರಗೆ ಹೋಗುವ ಕೆಲಸವನ್ನು ನಾನು ಮಾಡಲಿಲ್ಲ. ಇಂತಹ ಸಂದರ್ಭದಲ್ಲಿ ಉತ್ತಮ ಶಾಸಕನಾಗಿ ಕೆಲಸ ಮಾಡಬೇಕೆಂದು ಹೇಳುವಂತಹ ಪ್ರಯತ್ನ ಮಾಡುತ್ತಿರುವ ಸಂದರ್ಭದಲ್ಲಿ ವಿನಾಕಾರಣ ಪತ್ರಿಕೆಗಳಲ್ಲಿ ಅವಹೇಳನ ಮಾಡುವ ಮುಖಾಂತರ ಸಾರ್ವಜನಿಕವಾಗಿ ಒಬ್ಬ ಶಾಸಕ ತನ್ನ ಅಧಿಕಾರ ವ್ಯಾಪ್ತಿಯಿಂದ ಹೊರಗೆ ಹೋಗುತ್ತಾನೆಂದು ಹೇಳುವಂತಹ ದೋಷಾರೋಪಣೆಗಳನ್ನು ಮಾಡುವುದಾದರೆ ಏನಾಗುತ್ತದೆ? ಇವತ್ತು ನಾನು ಹೊಸದಾಗಿ ಶಾಸಕನಾಗಿ ಆರಿಸಿ ಬಂದಿದ್ದೇನೆ. ಇಲ್ಲಿ ಶಾಸನಸಭೆಯಲ್ಲಿ ಹೊರಗೆ ಕರ್ತವ್ಯಗಳನ್ನು ಕಲಿಯುವಂತಹ ಸಂದರ್ಭದಲ್ಲಿ ಅನಪೇಕ್ಷಿತವಾಗಿ ಏಕೆ ಹೀಗೆ ಮಾಡುತ್ತಾರೆ? ಈಗಾಗಲೇ ಅವರಿಗೆ ಗೊತ್ತಾಗಿದೆ, ಜಿಲ್ಲಾ ಪಂಚಾಯಿತಿ ಚುನಾವಣೆಯಲ್ಲಿ 6ಕ್ಕೆ 6 ಸ್ಥಾನಗಳನ್ನು ನಾವು ಗಳಿಸಿದ್ದೇವೆ. 22 ತಾಲ್ಲೂಕು ಪಂಚಾಯಿತಿ ಸ್ಥಾನಗಳಲ್ಲಿ 21 ಸ್ಥಾನಗಳನ್ನು ನಾವು ಗಳಿಸಿದ್ದೇವೆ. ಇದು ಅವರಿಗೆ ಮೊದಲೇ ಗೊತ್ತಿತ್ತು. ರಾಜಕೀಯವಾಗಿ ನಾವು ಪ್ರಭಾವಿಯಾಗಿ ಬೆಳೆಯುತ್ತಿರುವ ಸಂದರ್ಭದಲ್ಲಿ ಯಾವುದಾದರೂ ಒಂದು ವಿಚಾರದಲ್ಲಿ ಸ್ವಲ್ಪ ಚ್ಯುತಿ ಬರುವಂತಹ ಕೆಲಸ ಮಾಡಿದರೆ ಮುಂದಿನ ದಿನಗಳಲ್ಲಿ ರಾಜಕೀಯವಾಗಿ ಬೆಳೆಸಬಾರದೆನ್ನುವ ಭಾವನೆ ಅವರಲ್ಲಿ ಬಂದಿದೆಯೆಂದು ಕಾಣುತ್ತಿದೆ. ಇದನ್ನು ಸಮಗ್ರವಾಗಿ ತಾವು ಪರಿಶೀಲಿಸಿ ಮುಂದಿನ ದಿನಗಳಲ್ಲಿ ನಮ್ಮ ಕರ್ತವ್ಯಗಳ ಬಗ್ಗೆ ತೊಂದರೆಯಾಗದ ರೀತಿಯಲ್ಲಿ ನಮ್ಮ ಶಾಸಕತನಕ್ಕೆ ಯಾವುದೇ ಅಪಚಾರವಾಗದ ರೀತಿಯಲ್ಲಿ ನಮಗೆ ರಕ್ಷಣೆ ಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ನಿಯಮ 159ರ ವ್ಯಾಪ್ತಿಯಲ್ಲಿ ಈ ದಿನ ಸಭೆಯಲ್ಲಿ ಸರ್ಕಾರ ವಿರೋಧಪಕ್ಷದ ನಾಯಕರಿಗೆ ಮತ್ತು ಈ ಸಭೆಯ ಗೌರವಾನ್ವಿತ ಸದಸ್ಯರಿಗೆ ಕೇಳಿದಂಥ ಮಾಹಿತಿಯನ್ನು ಕೊಡುವುದರಲ್ಲಿ ತಡೆಹಿಡಿದು ಈ ಸದನದಲ್ಲಿ ತಮ್ಮ ಕರ್ತವ್ಯ ನಿರ್ವಹಣೆ ಮಾಡುವುದಕ್ಕೆ ನಮಗೆ ಸಹಕರಿಸುತ್ತಿಲ್ಲ, ಈ ಸದನದ ಸದಸ್ಯರಿಗೆ

ಅಗೌರವ ಸಲ್ಲಿಸುತ್ತಿದ್ದಾರೆನ್ನುವ ಮಾತನ್ನು ಹೇಳಿದ್ದಾರೆ. ಈ ವಿಷಯದಲ್ಲಿ ತಮ್ಮ ಅನುಮತಿಯನ್ನು ಪಡೆದು ನಿಯಮ 159ರ ಕೆಳಗೆ ಚರ್ಚೆಯನ್ನು ಪ್ರಾರಂಭ ಮಾಡತಕ್ಕ ಕಾಲದಲ್ಲಿ ಹಲವಾರು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ನಾನು ಅಷ್ಟೊಂದು ಸುಧೀರ್ಘವಾಗಿ ಭಾಷಣವನ್ನು ಮಾಡುವುದಕ್ಕೆ ಹೋಗುವುದಿಲ್ಲ. ನಮ್ಮ ಸದನದ ಕಾರ್ಯಕಲಾಪಗಳ ನಿಯಮಗಳಿವೆ. ಈ ಸದನದಲ್ಲಿ ವಿರೋಧಪಕ್ಷಕ್ಕೆ ಒಂದು ಜವಾಬ್ದಾರಿಯಿದೆ. ಆಳುವ ಪಕ್ಷಕ್ಕೆ ಒಂದು ಜವಾಬ್ದಾರಿಯಿದೆ. ಇದು ಕರ್ನಾಟಕಕ್ಕೆ ಮಾತ್ರ ಸೀಮಿತವಾದ ವಿಷಯವಲ್ಲ.

ಮಾನ್ಯ ವಿರೋಧ ಪಕ್ಷದ ನಾಯಕರಾಗಿರತಕ್ಕ ಯಡಿಯೂರಪ್ಪನವರು ಈ ದೇಶದಲ್ಲಿ ನಾಲ್ಕು ರಾಜ್ಯಗಳಲ್ಲಿ ಸರ್ಕಾರ ನಡೆಸುತ್ತಿದ್ದಾರೆ. ಅಲ್ಲಿ ವಿರೋಧಪಕ್ಷ ಮತ್ತು ವಿರೋಧಪಕ್ಷದ ನಾಯಕರಾಗಿ ಬೇರೆಯವರು ಕೆಲಸ ಮಾಡುತ್ತಿದ್ದಾರೆ. ಅಲ್ಲಿ ವಿರೋಧಪಕ್ಷದ ನಾಯಕರಿಗೆ ಏನೇನು ಮಾಹಿತಿಗಳನ್ನು ಒದಗಿಸಿ ಕೊಡುತ್ತಿದ್ದಾರೆ ಎಂಬ ಬಗ್ಗೆ ಸ್ವಲ್ಪ ದಯವಿಟ್ಟು ತಾವೇ ವಿವರಣೆ ತರಿಸಿಕೊಂಡು ನಮಗೆ ಮಾರ್ಗದರ್ಶನ ಮಾಡಿದರೆ ನಾನು ಸ್ವಾಗತ ಮಾಡುತ್ತೇನೆ. ಲೋಕಸಭೆಯಲ್ಲಿ ಅಧಿಕೃತ ವಿರೋಧಪಕ್ಷವಾಗಿ ಮಾನ್ಯ ಯಡಿಯೂರಪ್ಪನವರ ಪಕ್ಷ ಈ ರಾಷ್ಟ್ರದ ರಾಜಕಾರಣದಲ್ಲಿ ಅದರಲ್ಲೂ ಲೋಕಸಭೆಯಲ್ಲಿ ಅಧಿಕೃತ ವಿರೋಧಿ ಪಕ್ಷವಾಗಿ ಕೆಲಸ ಮಾಡುತ್ತಿದ್ದಾರೆ. ಅಲ್ಲಿ ವಿರೋಧಪಕ್ಷದ ನಾಯಕರು ಯಾವ್ಯಾವ ರೀತಿ ಮಾಹಿತಿಗಳನ್ನು ಸಂಗ್ರಹ ಮಾಡಿ ಲೋಕಸಭೆಯಲ್ಲಿ ಚರ್ಚೆಗೆ ಅದನ್ನು ಬಳಸಿಕೊಳ್ಳುತ್ತಾರೆ ಎನ್ನತಕ್ಕಂಥಾದ್ದು ಬಹುಶಃ ಹಿರಿಯ ಮುಖಂಡರಾದ ಎಲ್.ಕೆ. ಅಡ್ವಾನಿಯವರು ವಿರೋಧ ಪಕ್ಷದ ನಾಯಕರಾಗಿ ಕೆಲಸ ಮಾಡಿದ್ದಾರೆ ಇವತ್ತು ಹಾಲಿ ಶ್ರೀಮಾನ್ ವಾಜಪೇಯಿಯವರು ಅತ್ಯಂತ ಸಂಸದೀಯ ಪಟು ಅವರು ಇವತ್ತು ಲೋಕಸಭೆಯಲ್ಲಿ ವಿರೋಧಿಪಕ್ಷದ ನಾಯಕಾರಗಿ ಕೆಲಸ ಮಾಡುತ್ತಿದ್ದಾರೆ. ಈ ಸದನಕ್ಕೆ ಮತ್ತು ನಮಗೆ ಅವರು ಮಾರ್ಗದರ್ಶನ ಮಾಡಿಕೊಟ್ಟರೆ ಬಹಳ ಒಳ್ಳೆಯದು. ಏಕೆಂದರೆ ಹಿಂದೂಸ್ಥಾನದಲ್ಲಿ ಬೇರೆ ಎಲ್ಲಾ ರಾಜಕೀಯ ಪಕ್ಷಗಳಲ್ಲೂ ಒಂದಲ್ಲ ಒಂದು ರೀತಿಯಲ್ಲಿ ಕಲುಷಿತ ವಾತಾವರಣವಿದೆ ಎನ್ನತಕ್ಕ ಸನ್ನಿವೇಶದಲ್ಲಿ ಆ ಪಕ್ಷ ತನ್ನದೇ ಆದ ಕೆಲವು ಹೊಸ ರಾಜಕೀಯ ಸತ್ ಸಂಪ್ರದಾಯಗಳನ್ನು ಹಾಕತಕ್ಕ ಹಿನ್ನೆಲೆಯಲ್ಲಿ ಈಗ ಏನು ಮುಂದ ಹೋಗುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ 4 ರಾಜ್ಯಗಳಲ್ಲಿ ಅವರು ಸರ್ಕಾರ ನಡೆಸುತ್ತಿದ್ದಾರೆ.

ಅಲ್ಲಿ ವಿರೋಧಿಪಕ್ಷಗಳ ನಾಯಕರಿಗೆ ಏನೇನು ಮಾಹಿತಿಗಳನ್ನು ಸರ್ಕಾರವೇ ಒದಗಿಸಿ ಕೊಟ್ಟು ನೀವು ಇದರ ಮೇಲೆ ಚರ್ಚೆ ಮಾಡಿಯೆಂದು ಅನುವು ಮಾಡಿಕೊಡುತ್ತಿದ್ದಾರೆ, ಲೋಕಸಭೆಯಲ್ಲಿ ವಿರೋಧಪಕ್ಷದ ನಾಯಕರಿಗೆ ಅಲ್ಲಿ ಕಳೆದ 4 ವರ್ಷಗಳಲ್ಲಿ ಲೋಕಸಭೆಯಲ್ಲಿ ವಿರೋಧಿಪಕ್ಷದ ನಾಯಕರು ಸರ್ಕಾರಕ್ಕೆ ಬರೆದು ಎಲ್ಲಾ ವಿಷಯಗಳನ್ನು ಸಂಗ್ರಹ ಮಾಡಿ ಅಲ್ಲಿ ಸಭೆಯಲ್ಲಿ ತಮ್ಮ ಕರ್ತವ್ಯವನ್ನು ನಿರ್ವಹಣೆ ಮಾಡುವಾಗ ಹೇಗೆ ಅವರು ಅದನ್ನು ಬಳಕೆ ಮಾಡಿಕೊಳ್ಳುತ್ತಿದ್ದಾರೆ ಈ ಎಲ್ಲ ವಿಷಯಗಳು ನಮಗೆ ಮಾರ್ಗದರ್ಶನ. ಏಕೆಂದರೆ ನಾವು ಅಷ್ಟೊಂದು ಎತ್ತರಕ್ಕೆ ಬೆಳೆದಿಲ್ಲ ಮಾರ್ಗದರ್ಶನ ಮಾಡಿದರೆ ನಾನು ತುಂಬಾ ಸ್ವಾಗತ ಮಾಡುತ್ತೇನೆ. ತಿದ್ದಿಕೊಳ್ಳೋಣ. ತಪ್ಪು ಇದ್ದರೆ ತಿದ್ದಿಕೊಳ್ಳುವುದಕ್ಕೆ ಏನೂ ತೊಂದರೆಯಿಲ್ಲ. ಇವತ್ತು ಎಲ್ಲಾ ವಿಷಯಗಳ ಬಗ್ಗೆ ನಾನು ಪಾಂಡಿತ್ಯ ಹೊಂದಿದ್ದೇನೆಂದು ಹೇಳುವುದಕ್ಕೆ ಸಿದ್ಧವಿಲ್ಲ. ಕೆಲವು ವಿಷಯಗಳನ್ನು ತಿಳಿದುಕೊಳ್ಳಬೇಕಾಗುತ್ತದೆ. ಒಂದು ಕಡೆ 4 ರಾಜ್ಯಗಳಲ್ಲಿ ಸರ್ಕಾರವನ್ನು ನಡೆಸುತ್ತಿದ್ದಾರೆ, ಇನ್ನೊಂದು ಕಡೆ ವಿರೋಧ ಪಕ್ಷದ ನಾಯಕರಾಗಿ ಕೆಲಸ ಮಾಡುತ್ತಿದ್ದಾರೆ. ಉತ್ತರ ಪ್ರದೇಶದಲ್ಲಿ ಇವರ ಪಕ್ಷದ ಮುಖಂಡರು ವಿರೋಧ ಪಕ್ಷದ ನಾಯಕರಾಗಿ ಕೆಲಸ ಮಾಡುತ್ತಿದ್ದಾರೆ. ಮಧ್ಯಪ್ರದೇಶದಲ್ಲಿ ಇವರ ಪಕ್ಷದವರೇ ವಿರೋಧ ಪಕ್ಷದ ನಾಯಕರಾಗಿ ಕೆಲಸ ಮಾಡುತ್ತಿದ್ದಾರೆ. ಹಿಮಾಚಲ

ಪ್ರದೇಶದಲ್ಲಿ ಇವರ ಪಕ್ಷದವರೇ ವಿರೋಧಪಕ್ಷದ ನಾಯಕರಾಗಿ ಕೆಲಸ ಮಾಡುತ್ತಿದ್ದಾರೆ. ಅಲ್ಲಿ ಹೇಗೆ ವಿರೋಧಪಕ್ಷದ ನಾಯಕರುಗಳಿಗೆ ಸರ್ಕಾರ ಯಾವ ರೀತಿ ಮಾಹಿತಿಗಳನ್ನು ಒದಗಿಸಿಕೊಟ್ಟು ನಮ್ಮ ರಾಜ್ಯಾಂಗದ ಚೌಕಟ್ಟಿನಲ್ಲಿ ಇವತ್ತು ಕಾರ್ಯಕಲಾಪ ನಡೆಸುವುದಕ್ಕೆ ಅನುವು ಮಾಡಿಕೊಟ್ಟಿದ್ದಾರೆ ಎನ್ನುವುದನ್ನು ಅವರ ವಿರೋದಫಕ್ಷದ ನಾಯಕರು ಬೇರೆ ಬೇರೆ ರಾಜ್ಯಗಳಲ್ಲಿ ಏನು ಕೆಲಸ ಮಾಡುತ್ತಿದ್ದಾರೆ ಸ್ವಲ್ಪ ಮಟ್ಟಿಗೆ ಅಲ್ಲಿರತಕ್ಕ ಕಾರ್ಯಕಲಾಪದ ನಡವಳಿಕೆಯನ್ನು ಸ್ವಲ್ಪ ಮಟ್ಟಿಗೆ ನಮಗೆ ಮಾರ್ಗದರ್ಶನ ಮಾಡಿದರೆ ನಾನು ಕೂಡ ಆ ಸತ್ಸಂಪ್ರದಾಯವನ್ನು ಸ್ವಲ್ಪ ಮಟ್ಟಿಗೆ ನಮಗೆ ಮಾರ್ಗದರ್ಶನ ಮಾಡಿದರೆ ನಾನೂ ಕೂಡ ಆ ಸತ್ಸಂಪ್ರದಾಯವನ್ನು ಹಾಕಲಿಕ್ಕೆ ಸಿದ್ಧನಿದ್ದೇನೆ. ಇದು ನನ್ನ ವೈಯಕ್ತಿಕ ಪ್ರತಿಷ್ಠೆಯ ಪ್ರಶ್ನೆಯಲ್ಲ. ಇವತ್ತು ಈ ಸದನದ ಯಾವುದೇ ಸದಸ್ಯರಿಗೆ ಅಗೌರವದಿಂದ ನಡೆದುಕೊಳ್ಳತಕ್ಕ ಉದ್ಧಟತನ ನನಗೆ ಇಲ್ಲ. ಇಡೀ ಹಿಂದೂಸ್ಥಾನದಲ್ಲಿ ಅವರು ಯಾವ ಪಕ್ಷವನ್ನು ಪ್ರತಿನಿಧಿಸುತ್ತಿದ್ದಾರೆ ಆ ಪಕ್ಷ ಒಂದು ಕಡೆ ಆಡಳಿತ ಪಕ್ಷವಾಗಿದೆ ಇನ್ನೊಂದು ಕಡೆ ವಿರೋಧಿಪಕ್ಷವಾಗಿದೆ.

ಬೇರೆ ಎಲ್ಲಾ ರಾಜಕೀಯ ಪಕ್ಷಗಳ ಬಗ್ಗೆ ಟೀಕೆ ಮಾಡುತ್ತಿಲ್ಲ ನಿಮ್ಮ ಪಕ್ಷದ ಬಗ್ಗೆ ಜನ ಬಹಳ ಎತ್ತರದಲ್ಲಿ ಮಾತನಾಡತಕ್ಕ ವಾತಾವರಣ ಇದೆ ಎನ್ನುವ ಹಿನ್ನೆಲೆಯಲ್ಲಿ ನೀವು ನನಗೆ ಮಾರ್ಗದರ್ಶನ ಮಾಡಿದರೆ ಈ ಸಭೆಗೆ ಮಾರ್ಗದರ್ಶನ ಮಾಡಿದರೆ, ನಾನಂತೂ ಪ್ರಾಮಾಣಿಕವಾಗಿ ಸ್ವಾಗತ ಮಾಡುವುದಕ್ಕೆ ಸಿದ್ಧನಿದ್ದೇನೆ. ಇಷ್ಟನ್ನು ಪೂರ್ವಭಾವಿಯಾಗಿ ಹೇಳಿದ್ದೇನೆ. ಅವರು ನನಗೆ ಬರೆದಿರತಕ್ಕದ್ದು, ಅವರು ನನ್ನ ಗಮನಕ್ಕೆ ಬಂದಿರತಕ್ಕದ್ದು ಅದು ಈ ರೀತಿ ಇದೆ. ಶ್ರೀಮಾನ್ ಜಾಫರ್ ಶರೀಫ್ ರವರು ರೈಲ್ವೆ ಸಚಿವರು - ಅವರ ವಿರುದ್ಧ ಭೂಕಬಳಿಕೆ ಆರೋಪದ ಸಚಿವಸಂಪುಟದ ಉಪಸಮಿತಿ ರಚನೆಯಾಗಿತ್ತು. ಆ ಉಪಸಮಿತಿ ಇದುವರೆಗೆ ಎಷ್ಟು ಪ್ರಕರಣಗಳ ಬಗ್ಗೆ ಚರ್ಚೆ ಮಾಡಿದೆ, ಎಷ್ಟು ಭಾರಿ ಸಮಾವೇಶಗೊಂಡಿದೆ ಎನ್ನುವುದಕ್ಕೆ ಮಾಹಿತಿ ನೀಡಲಿಕ್ಕೆ ಸಂಪುಟ ವ್ಯವಹಾರ ಸಮಿತಿಯ ಕಾರ್ಯದರ್ಶಿಯವರಿಗೆ ಆದೇಶವನ್ನು ನೀಡುವುದು ಎಂದು ನನಗೆ ಬಂದಿರತಕ್ಕದ್ದು. ನಮ್ಮ ಮಾಜಿ ಮುಖ್ಯಮಂತ್ರಿಗಳು ಇಲ್ಲಿದ್ದಾರೆ. ಅವರು ವಿರೋಧಪಕ್ಷದ ನಾಯಕರಾಗಿ ಕೆಲಸ ಮಾಡಿದ್ದಾರೆ. ಈ ಸಭೆಯಲ್ಲಿ ಸ್ವಲ್ಪ ಇತಿಮಿತಿಗಳಿವೆ ಎಂದು ನಾನು ಅರಿತುಕೊಂಡಿದ್ದೇನೆ. ಅದಕ್ಕಿಂತ ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ನಾನು ಜಾಫರ್ ಷರೀಫ್‌ರವರ ಭೂ ಕಬಳಿಕೆಯ ಆರೋಪ ಎತ್ತಿರುವುದು ಹಾಲಿ ಸಚಿವಸಂಪುಟದ ಉಪಸಮಿತಿಯ ಮುಂದಿದೆ. ಈ ಪ್ರಕರಣದಲ್ಲಿ ಹಿಂದಿನ ವಿಭಾಗಾಧಿಕಾರಿಗಳು ನೀಡಿದ ವರದಿಯ ಪ್ರತಿಯನ್ನು ಕೂಡಲೇ ಒದಗಿಸಿಕೊಡುವುದು ಎಂದು ತಮಗೆ ಕೋರಿದೆ. ನಾನು ಕೊಡಬೇಕೇ ಬಿಡಬೇಕೇ ಎನ್ನುವುದು ಈ ಸದನಕ್ಕೆ ಸೇರಿದೆ.

6.40 ಪಿ.ಎಂ.

ನಾಳೆ ನಾನು ಇಲ್ಲೇ ಶಾಶ್ವತವಾಗಿ ಇರುವುದಿಲ್ಲ. ಅಷ್ಟು ಅರಿವು ನನಗಿದೆ. ಈಗ ಸರ್ಕಾರಕ್ಕೆ ಡಿಸಿಶನ್ ಮೇಕಿಂಗ್ ಅಥಾರಿಟಿ ಇದೆ. ಹಲವಾರು ಮಾಹಿತಿಗಳನ್ನು ಬೇರೆ ಬೇರೆ ಮೂಲಗಳಿಂದ ತರಿಸಿಕೊಳ್ಳುತ್ತೇವೆ. Shall I give that information? ಇದು ಇಡೀ ಸದನಕ್ಕೆ ಬಿಟ್ಟಿರತಕ್ಕಂಥ ವಿಷಯ. ನೀವು ಮಾರ್ಗದರ್ಶನ ಮಾಡಿ. ನಾನು ತಲೆಬಾಗುತ್ತೇನೆ. To facilitate the decision making authority we will call for the report from the various agencies. Is that a matter to be given to the Leader of Opposition? ದಯಮಾಡಿ ಮಾರ್ಗದರ್ಶನ ಮಾಡಿ. ನೀವು ಹೇಳಿದ್ದನ್ನು ನಾನು ಕೇಳುತ್ತೇನೆ. Who am I? After all I have to bow my head to this august House.

ಇದಕ್ಕಿಂತ ಮತ್ತೆ ಹೆಚ್ಚಿಗೆ ನಾನು ಏನೂ ಹೇಳುವುದಕ್ಕೆ ಹೋಗುವುದಿಲ್ಲ. ಸನ್ಮಾನ್ಯ ಅಧ್ಯಕ್ಷರೇ, ಇವತ್ತು ಅವರ ಆಪ್ತಕಾರ್ಯದರ್ಶಿಯವರು ಒಂದು ಪತ್ರವನ್ನು ಬರೆಯುತ್ತಾರೆ.

ದಿನಾಂಕ 9-3-1995ರಂದು ಮಧ್ಯಾಹ್ನ 12 ಗಂಟೆಗೆ ಮಾನ್ಯ ವಿರೋಧ ಪಕ್ಷದ ನಾಯಕರು, ಉಪನಾಯಕರು ಹಾಗೂ ಶಾಸಕರು ಕೋರಮಂಗಲ ಕ್ರೀಡಾವಸತಿ ಸಮುಚ್ಚಯದ ಸ್ಥಳ ತನಿಖೆ ನಡೆಸಲಿರುವರು. ಹಾಗೂ ಸಾರ್ವಜನಿಕರ ಅಹವಾಲುಗಳನ್ನು ಕೇಳಲಿರುವರು. ಆದ್ದರಿಂದ ತಾವು ದಯವಿಟ್ಟು ಆ ಸಮಯದಲ್ಲಿ ಹಾಜರಿದ್ದು ಮಾಹಿತಿಯನ್ನು ನೀಡುವುದರ ಜೊತೆಗೆ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಸೂಕ್ತ ಮಾಹಿತಿಯನ್ನು ನೀಡಬೇಕಾಗಿ ಕೋರುತ್ತೇನೆ....

ಶ್ರೀ ಬಿ.ಎಸ್. ಯಡಿಯೂರಪ್ಪ : ಆ ಪತ್ರವನ್ನು ಯಾರಿಗೆ ಬರೆದಿರುವುದು ನನಗಲ್ಲ, ಚೀಫ್ ಇಂಜಿನಿಯರ್ ಅವರಿಗೆ. ಆ ಕಾಗದವನ್ನು ನಾನು ಓದುತ್ತಿದ್ದೇನೆ. ಚೀಫ್ ಇಂಜಿನಿಯರ್ ಅವರು ನನಗೆ ಬರೆಯುತ್ತಾರೆ. ಅವರು ಇನ್‌ಸ್ಪೆಕ್ಷನ್ ಮಾಡುವಾಗ ನಾನು ಹೋಗಿ ಅವರಿಗೆ ಮಾಹಿತಿಯನ್ನು ಒದಗಿಸಬೇಕೇ ಅಥವಾ ಎಲ್ಲಾ ದಾಖಲೆಗಳನ್ನು ಕೊಡಬೇಕೆ ಎಂದು ಅವರು ನನಗೆ ಬರೆಯುತ್ತಾರೆ. ಕೊಡಬೇಕಾದ ಅವಶ್ಯಕತೆ ಇಲ್ಲವೆಂದು ನಾನು ಹೇಳುತ್ತೇನೆ. ಇದರ ಬಗ್ಗೆ ನಾನು ಉತ್ತರ ಬರೆದಿದ್ದೇನೆ. ನನ್ನ ಸೂಚನೆ ಮೇರೆಗೆ ಅವರು ಆ ರೀತಿ ನಡೆದುಕೊಂಡಿದ್ದಾರೆ. ಸನ್ಮಾನ್ಯ ಸಭಾಧ್ಯಕ್ಷರೇ, ಇಲ್ಲಿ ಈಗ ವಿರೋಧ ಪಕ್ಷದ ಕರ್ತವ್ಯ ಏನು? ಆಳುವ ಪಕ್ಷದ ಎಕ್ಸಿಕ್ಯೂಟಿವ್ ಹೆಡ್ ಎಂದು ನಾವು ಕರೆಯುತ್ತೇವೆ . Executive head has to play a dual role. ಈ ಸದನದಲ್ಲಿ ನಾನು ಸಭಾನಾಯಕನಾಗಿ ಕೆಲಸ ಮಾಡುತ್ತೇನೆ. ಹೊರಗಡೆ ನಾನು ಕಾರ್ಯಾಂಗದ ಮುಖ್ಯಸ್ಥನಾಗಿ ಕೆಲಸ ಮಾಡುತ್ತೇನೆ. ಈ ಸಭೆಗೆ ಯಾವುದೇ ಮಾಹಿತಿಯನ್ನು ಈ ಸಭೆ ಅಪೇಕ್ಷೆ ಮಾಡಿದಾಗ ನಿಮ್ಮ ಅನುಮತಿಯನ್ನು ಪಡೆದು ಸಭೆಯ ಮುಂದಿಡಬೇಕಾಗುತ್ತದೆ. ನಿಮ್ಮ ಅನುಮತಿ ಪಡೆಯದೆ ಅದನ್ನು ಸಭೆಯ ಮುಂದೆ ಇಡುವುದಕ್ಕೆ ಸಾಧ್ಯವೇ ಇಲ್ಲ. ನನಗೆ ಇರತಕ್ಕಂಥ ಅಲ್ಪ ಅನುಭವದಲ್ಲಿ ಈ ಮಾತನ್ನು ನಾನು ಹೇಳುತ್ತೇನೆ. ಯಾವ ವಿಷಯಕ್ಕೆ ತಾವು ಅನುಮತಿಯನ್ನು ಕೊಡುತ್ತೀರೋ, ಆ ವಿಷಯಕ್ಕೆ ನಾನು ತಲೆಬಾಗುತ್ತೇನೆ. ಆಗ ನಾನು ಈ ಸಭೆಯ ಮುಂದೆ ಆ ಒಂದು ಕಡತವನ್ನು ಇಡಬೇಕಾಗುತ್ತದೆ. ಇದಕ್ಕಿಂತ ಹೆಚ್ಚಿಗೆ ಮತ್ತೇನೂ ನಾನು ಹೇಳುವುದಕ್ಕೆ ಹೋಗುವುದಿಲ್ಲ. ನಾನು ಕಾರ್ಯಾಂಗ ಮುಖ್ಯಸ್ಥನಾಗಿ ಕೆಲಸ ಮಾಡುವಾಗ ವಿರೋಧ ಪಕ್ಷದ ನಾಯಕರಾಗಿ ಅವರದ್ದೇ ಆದಂಥ ಜವಾಬ್ದಾರಿ ಇದೆ. ಈ ರಾಜ್ಯದಲ್ಲಿ ಈ ಸದನ ಏನು ಬಜೆಟ್‌ನಲ್ಲಿ ಓಟು ಮಾಡುತ್ತದೆ, ಯಾವ್ಯಾವ ಬಾಬಿಗೆ ಹಣವನ್ನು ವಿನಿಯೋಗ ಮಾಡಬೇಕೆಂದು ನಿರ್ಣಯ ಮಾಡುತ್ತದೆಯೋ, ಅದನ್ನು ತನಿಖೆ ಮಾಡುವುದಕ್ಕೆ ಈ ಸದನದ ನಿಯಮಗಳ ವ್ಯಾಪ್ತಿಯಲ್ಲಿ ಬರತಕ್ಕಂಥ ನಮ್ಮ ರಾಜ್ಯಾಂಗದ ಒಂದು ಪರಿಮಿತಿಯಲ್ಲಿ ಬರತಕ್ಕಂಥ ಸದನದ ಸಮಿತಿಗಳು ಇವೆ. ಇವತ್ತು ಸಾರ್ವಜನಿಕ ಲೆಕ್ಕಪತ್ರ ಸಮಿತಿ ಇದೆ. ಬಹುಶಃ ವಿರೋಧ ಪಕ್ಷದ ನಾಯಕರಿಗೆ ಈ ವಿಷಯದ ಬಗ್ಗೆ ನಾನು ಹೇಳುವ ಅವಶ್ಯಕತೆ ಇಲ್ಲ. ಅವರಿಗೆ ಅನುಭವ ಇದೆ. ಒಂದು ಕಾಲದಲ್ಲಿ ಆಳುವ ಪಕ್ಷದ ಹಿರಿಯ ಸದಸ್ಯರು ಪಬ್ಲಿಕ್ ಅಕೌಂಟ್ಸ್ ಕಮಿಟಿಯ ಚೇರ್ಮನ್ ಆಗುತ್ತಿದ್ದರು. ಅದನ್ನು ಕೈಬಿಟ್ಟರು. ಇನ್ನೊಂದು ಹಂತದಲ್ಲಿ ಫೈನಾನ್ಸ್ ಮಿನಿಸ್ಟರ್ ಆಅವರು ಸಾರ್ವಜನಿಕ ಲೆಕ್ಕಪತ್ರಗಳನ್ನು ತಪಾಸಣೆ ಮಾಡುವುದಕ್ಕೆ ಪಬ್ಲಿಕ್ ಅಕೌಂಟ್ಸ್ ಕಮಿಟಿ ಚೇರ್ಮನ್ ಆಗುತ್ತಿದ್ದರು. ಸಾರ್ವಭೌಮತ್ವವನ್ನು ಹೊಂದಿರತಕ್ಕಂಥಾ ಈ ಸದನ ಯಾವುದೇ ವಿಷಯಕ್ಕೆ ಹಣ ಒದಗಿಸುವಾಗ, ಆ ಹಣ ಹೇಗೆ ಖರ್ಚಾಗುತ್ತದೆ ಎಂದು ನೋಡುವುದಕ್ಕೆ ತನ್ನದೇ ಆದ ಒಂದು ಕಾರ್ಯಕಲಾಪದ ನಿಯಮಾವಳಿಗಳು ಇವೆ. ಅದಕ್ಕೇ ಒಂದು ಸಮಿತಿ ಇದೆ. ಈ ಸದನ ರೂಪಿಸಿದಂಥ

ಸಮಿತಿಗಳು ಏನು ಇವೆ, ಅದಕ್ಕೆ ಇರತಕ್ಕಂಥ ವ್ಯಾಪ್ತಿ ಏನು ಎನ್ನುವುದರ ಬಗ್ಗೆ ನಾನು ಚರ್ಚೆ ಮಾಡಬೇಕಾಗಿಲ್ಲ. ಅದು ನಿಯಮಾವಳಿಗಳ ಪಟ್ಟಿಯಲ್ಲಿದೆ. ಸನ್ಮಾನ್ಯ ಅಧ್ಯಕ್ಷರೇ, ಇವತ್ತು ಪಬ್ಲಿಕ್ ಅಕೌಂಟ್ಸ್ ಕಮಿಟಿ ಇರತಕ್ಕಂಥಾದ್ದು ಈ ಸದನ ಓಟು ಮಾಡಿದಂಥ ಹಣವನ್ನು ಖರ್ಚಾಗಿದ್ದರ ಬಗ್ಗೆ ಪರಿಶೀಲನೆ ಮಾಡತಕ್ಕಂಥ ಕಾಲದಲ್ಲಿ ಹಣ ದುರುಪಯೋಗವಾಗಿದೆ ಎಂದು ಅವರ ಗಮನಕ್ಕೆ ಬಂದಾಗ ಆ ಸಮಿತಿ ಇವತ್ತು ಸಮನ್ ಮಾಡುವುದಕ್ಕೆ ಸಾಧ್ಯವಿದೆ. ಇದು ಇಡೀ ಸದನದ ನಡವಳಿಕೆಯ ಹಿನ್ನೆಲೆಯಲ್ಲಿ ನಾನು ತಿಳಿದುಕೊಂಡಿರತಕ್ಕಂಥ ಅಲ್ಪ ತಿಳುವಳಿಕೆ ಇರಬಹುದು. ಸ್ವಾಮಿ, ಈ ರಾಜ್ಯದ ಅಕೌಂಟೆಂಟ್ ಜನರಲ್ ಏನಿದ್ದಾರೆ, ಆತ ಕೊಡತಕ್ಕಂಥ ಆಡಿಟ್ ವರದಿಯ ಆಧಾರದ ಮೇಲೆ ಇವತ್ತು ಯಾವುದೇ ಅಕ್ರಮ ನಡೆದರೆ ಅದನ್ನು ತೋರಿಸತಕ್ಕದ್ದು ಒಂದು ಕಡೆ ಆ ಸಮಿತಿಗೆ ಸಾಧ್ಯವಿದೆ. ಮತ್ತೊಂದು ಕಡೆ, ಈ ಸದನದಲ್ಲಿ ತಾವು ಯಾವುದೇ ವಿಷಯದಲ್ಲಿ ಚರ್ಚೆಮಾಡಿ ಅದು ಆಡಿಟ್ ಪ್ಯಾರಾದಲ್ಲಿ ಇಲ್ಲದೇ ಇದ್ದರೂ ಕೂಡ ಈ ಸದನಕ್ಕೆ ಸುಪ್ರೀಂ ಪವರ್ಸ್ ಇದೆ. ತಾವು ಆ ಸ್ಥಾನದಲ್ಲಿ ಕುಳಿತು, ಆಡಿಟ್ ಪ್ಯಾರಾ ಇಲ್ಲದಿದ್ದರೂ ಕೂಡ ಸಾರ್ವಜನಿಕರ ಹಿತದೃಷ್ಟಿಯಿಂದ ಅದನ್ನು ಪರಿಶೀಲನೆ ಮಾಡಬೇಕೆಂದು ಆದೇಶ ಕೊಟ್ಟಂಥ ಉದಾಹರಣೆಗಳಿವೆ. ತಮ್ಮ ಸ್ಥಾನದಲ್ಲಿ ಕುಳಿತಿದ್ದಂಥ ಹಿರಿಯರು, ಹಿಂದಿನವರು ಹಾಗೆ ನಡೆದುಕೊಂಡ ಹಲವಾರು ನಿದರ್ಶನಗಳು ಇವೆ. ಇಂತಹ ಸಂದರ್ಭಗಳಲ್ಲಿ, the House Committee which is responsible to scrutinise the accounts of any project or any issue relating to any scandal, is there. ಆ ಅಧಿಕಾರವನ್ನು ಅವರಿಗೆ ಕೊಟ್ಟಿದ್ದಾರೆ, ಈ ವಿಷಯದಲ್ಲಿ ಈ ಸದನದ ಈ ಸದನದ ಯಾವುದೇ ಕಡತವನ್ನು ಮಾನ್ಯ ಸ್ಪೀಕರ್ ಅವರ ಅನುಮತಿ ಇಲ್ಲದೇ ಇಡುವ ಹಾಗಿಲ್ಲ. ನಾನು ಎಲ್ಲಿ ದಾರಿ ತಪ್ಪಿದ್ದೇನೋ ದಯಮಾಡಿ ತಿಳಿಸಿ ಏಕೆಂದರೆ ನಾನು ಶಾಶ್ವತವಾಗಿ.....

ಶ್ರೀ ಬಿ.ಎಸ್. ಯಡಿಯೂರಪ್ಪ : ಒಂದು ನಿಮಿಷ ತಾವು ಈಲ್ಡ್ ಆದರೆ....

ಶ್ರೀ ಹೆಚ್.ಡಿ. ದೇವೇಗೌಡ : ನಾನು ನೀವು ಮಾತನಾಡುವಾಗ ಒಂದು ಶಬ್ದ ಕೂಡ ಮಾತನಾಡಲಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಒಂದು ನಿಮಿಷ, ಯೀಲ್ಡ್ ಆಗಿ. ಸನ್ಮಾನ್ಯ ಅಧ್ಯಕ್ಷರೇ, ನಾನು ಬರೆದಂಥ ಪತ್ರಕ್ಕೆ ನಿಮ್ಮ ಚೀಫ್ ಸೆಕ್ರಟರಿ ಇರಬಹುದು, ನಿಮ್ಮ ಕಾರ್ಯಾಲಯದಿಂದ ಇರಬಹುದು, ಯಡಿಯೂರಪ್ಪನವರೇ, ಈ ಕಾರಣದಿಂದ ದಾಖಲೆಗಳನ್ನು ಕೊಡುವುದಕ್ಕೆ ಬರುವುದಿಲ್ಲ, ಈ ದಾಖಲೆಗಳನ್ನು ಕೊಡಬಹುದು ಎಂದು ಬರೆಯಬಹುದಿತ್ತು. ನಾನು ಅಧ್ಯಕ್ಷರ ಹತ್ತಿರ ಹತ್ತಾರು ಕೊಟ್ಟಿದ್ದೇನೆ.

ಅಧ್ಯಕ್ಷರು : ಇಲ್ಲಿ ನೋಡಿ.....

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವು ಹೇಳಿದರೆ ನಾನು ಕುಳಿತುಕೊಳ್ಳುತ್ತೇನೆ. ತಾವು ಇಷ್ಟೊಂದು ಬೇಸರ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ, ತಾವು ಹೊರಟುಬಿಡಿ ಎಂದು ಹೇಳಿದರೆ ನಾನು ಹೊರಟು ಹೋಗಿ ಬಿಡುತ್ತೇನೆ. ಇಲ್ಲಿ ಪ್ರಶ್ನೆ ಇರುವುದು ಏನೆಂದರೆ, ಒಬ್ಬ ಚೀಫ್ ಇಂಜನಿಯರ್ ಅವರಿಗೆ, ಕೋರಮಂಗಲ ಕ್ರೀಡಾಂಗಣವನ್ನು ನೋಡುವುದಕ್ಕೆ ನಾನು ಹೋಗುತ್ತಿದ್ದೇನೆ, ಅಲ್ಲಿನ ಸ್ಥಿತಿಗತಿಗಳನ್ನು ಇನ್‌ಸ್ಪೆಕ್ಷನ್ ಮಾಡುವುದಕ್ಕೆ ಹೋಗುತ್ತಿದ್ದೇನೆ. ಆದ್ದರಿಂದ ಮಾಹಿತಿಗಳನ್ನು ಕಳಿಸಿಕೊಡಿ ಎಂದು ಪತ್ರ ಬರೆದೆ. ನೀವು ಪತ್ರ ಬರೆಯುವ ಹಾಗಿಲ್ಲ, ನಾವು ಕಳಿಸುವುದಿಲ್ಲ ಎಂದು ಹೇಳಿಬಿಟ್ಟಿದ್ದರೆ ಅದು ಅಲ್ಲಿಗೇ ಮುಗಿದುಹೋಗುತ್ತಿತ್ತು.

(ಗೊಂದಲ)

ಅಧ್ಯಕ್ಷರು : ತಾವು ಮಾತನಾಡತಕ್ಕಂಥ ಸಂದರ್ಭದಲ್ಲಿ ಅವರು ನೋಟ್ಸ್ ಮಾಡಿಕೊಳ್ಳುತ್ತಿದ್ದರು. ಮಧ್ಯೆ ಮಾತನಾಡಿದಾಗ ಚೇನ್ ಆಫ್ ಥಾಟ್ಸ್ ಏನಿದೆ ಅದು ಬ್ರೇಕ್ ಆಗುತ್ತದೆ ತಾವು ಕೂಡ ಮಾತನಾಡುವಾಗ ಯಾರಾದರೂ ಮಧ್ಯ ಪ್ರವೇಶ ಮಾಡಿದರೆ ತೊಂದರೆಯಾಗುತ್ತದೆ. ಈಗ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಿದ್ದಾರೆ. ತಾವು ಏನೆಲ್ಲ ಕ್ಲಾರಿಫಿಕೇಶನ್ಸ್‌ನ್ನು ಕೇಳಬೇಕೆಂದು ಇದ್ದೀರೋ, ಅವರ ಭಾಷಣ ಮುಕ್ತಾಯವಾದ ಮೇಲೆ ತಾವು ಕೇಳಿ. ಮಧ್ಯೆ ಮಧ್ಯೆ ಮಾತನಾಡಲಿಕ್ಕೆ ಹೋದರೆ ಅವರ ವಿಚಾರ ಸರಣಿ ಸ್ವಲ್ಪ ತೊಂದರೆಗೆ ಸಿಕ್ಕಿಹಾಕಿಕೊಳ್ಳುತ್ತದೆ. ಅದಕ್ಕೋಸ್ಕರ ನಾನು ಹೇಳಿದ್ದೇನೇ ಹೊರತು ಮತ್ತೇನೂ ಇಲ್ಲ. ನೀವು ಹೊರಗೆ ಹೋಗಬೇಕು ಅಂತಲ್ಲ. ನೀವು ಇರಲೂ ಬೇಕು, ಕ್ಲಾರಿಫಿಕೇಶನ್ ಕೇಳಬೇಕು. ನೀವು ಕೇಳಿದ್ದಕ್ಕೆ ಅವರು ಸಮರ್ಪಕವಾಗಿ ಉತ್ತರವನ್ನೂ ಕೊಡಬೇಕು. ನಾವು ಇಷ್ಟು ಹೊತ್ತು ಕುಳಿತಿರುವುದು ಏಕೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಮಧ್ಯದಲ್ಲಿ ಎದ್ದು ನಿಂತು ಮಾತನಾಡಲಿಕ್ಕೆ ಇಷ್ಟಪಡುವುದಿಲ್ಲ ಚೀಫ್ ಇಂಜಿನಿಯರ್ ಅವರಿಗೆ ನನ್ನ ಪ್ರೈವೇಟ್ ಸೆಕ್ರೆಟರಿಯವರು ಪತ್ರ ಬರೆದಿದ್ದಾರೆ; ನಾವು ಸ್ಪಾಟ್ ಇನ್‌ಸ್ಪೆಕ್ಷನ್‌ಗೆ ಹೋಗುತ್ತಿದ್ದೇವೆ ಎಂದು. ಅದಕ್ಕೆ ಚೀಫ್ ಇಂಜನಿಯರ್ ಬರಲಿ ಅಂತ ಹೇಳಿದರೆ ಅದು ಅಪರಾಧವೆ? ಅವರು ಕಳಿಸಿಕೊಡುವುದಕ್ಕೆ ಆಗುವುದಿಲ್ಲವೆಂದು ಹೇಳಿದರೆ......

ಅಧ್ಯಕ್ಷರು : ಆ ವಿಷಯಕ್ಕೇ ನಾನು ತಮಗೆ ಹೇಳುತ್ತಿರುವುದು. ದಯವಿಟ್ಟು ನೋಟ್ಸ್ ಮಾಡಿಕೊಂಡು ಆಮೇಲೆ ಸ್ಪಷ್ಟೀಕರಣ ಕೇಳಿ.

ಶ್ರೀ ಹೆಚ್.ಡಿ. ದೇವೇಗೌಡ : ನಾನು ನನ್ನ ಭಾಷಣದ ಪ್ರಾರಂಭದಲ್ಲೇ ಹೇಳಿದ್ದೆ. To-day his party is one of the major political parties, which is ruling 4 states. In 3 states they are functioning as recognised Opposition. In the Lok Sabha they are functioning as a recognised Opposition. ಯಾವ್ಯಾವ ರಾಜ್ಯದಲ್ಲಿ ಏನು ಇವತ್ತು ವಿರೋಧ ಪಕ್ಷದ ನಾಯಕರಾಗಿ ಹೇಗೆ ಕೆಲಸ ಮಾಡುತ್ತಿದ್ದಾರೆ ಎನ್ನುವುದರ ಬಗ್ಗೆ ನಮಗೆ ಮಾಹಿತಿಯನ್ನು ಕಳಿಸಿಕೊಡಿ. ನಿಮ್ಮಲ್ಲಿ ಅತ್ಯಂತ ಖ್ಯಾತರಕ್ಕೆ ಬೆಳೆದ ವಿರೋಧ ಪಕ್ಷದ ನಾಯಕರು ಇದ್ದಾರೆ. ಅವರು ಹೇಗೆ ಸಂಗ್ರಹಣೆ ಮಾಡುತ್ತಾರೆ.

ಸರ್ಕಾರ ಅವರು ಕೇಳಿದಂಥಾದ್ದಕ್ಕೆ ಹೇಗೆ ಉತ್ತರ ಕೊಡುತ್ತಾರೆ ಎಂಬುದರ ಬಗ್ಗೆ ದಯಮಾಡಿ ತಿಳಿಸಿ. ಈ ಸಭೆಯಲ್ಲಿ ಅವರನ್ನು ಯಾವುದೇ ಕಾರಣದಿಂದ ಅಗೌರವದಿಂದ ಕಾಣುವುದಕ್ಕೆ ನಾನು ಸಿದ್ಧನಿಲ್ಲ. ಆದರೆ ಸಂಪ್ರದಾಯ ಬಿಟ್ಟು ಹೋಗುವುದಕ್ಕೆ ಸಾಧ್ಯವಿಲ್ಲ, ಇಲ್ಲಿಯ ನಿಯಮಾವಳಿಯನ್ನು ಬಿಟ್ಟು ಹೊರಗೆ ಹೋಗುವುದಕ್ಕೆ ಸಾಧ್ಯವಿಲ್ಲ. ಈ ಸ್ಥಾನದಲ್ಲಿ ಯಾರೇ ಕುಳಿತುಕೊಂಡಿದ್ದರೂ ಕೂಡ. ನಮ್ಮ ಮುಂದಿರತಕ್ಕಂಥ ನಿಯಮಾವಳಿಯ ವ್ಯಾಪ್ತಿಯಲ್ಲಿ ಇವತ್ತು ನಾವೇನು ಸದನದ ಚೌಕಟ್ಟಿನಲ್ಲಿ ಕೆಲಸ ಮಾಡತಕ್ಕಂಥ ಕಾಲದಲ್ಲಿ, ಸನ್ಮಾನ್ಯ ಅಧ್ಯಕ್ಷರೇ, ಇವರ ಪ್ರಕಾರ ನಾನು ದೊಡ್ಡ ಅಪರಾಧವನ್ನು ಮಾಡಿದ್ದೇನೆ. "The Government has not failed to give information to the Opposition Party and said he was willing to provide any information to any MLA including the Leader of Opposition provided it is within the ambit of the business rules." ಇದನ್ನು ನಾನು ಹೇಳಿದ್ದೇನೆ. 'In the Assembly where the Government is accountable to it....' ಈ ಸದನಕ್ಕೆ ಎಷ್ಟೇ ದೊಡ್ಡ ವ್ಯಕ್ತಿಯಾದರೂ ಮುಖ್ಯಮಂತ್ರಿಯಾದರೂ ಕೂಡ, he is answerable to this House. ನಾನು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಸವಿನಯದಿಂದ ಪ್ರಾರ್ಥನೆ

ಮಾಡುತ್ತೇನೆ. ಈ ಸದನಕ್ಕೆ ತಲೆಬಾಗಲೇ ಬೇಕಾಗುತ್ತದೆ. ಅದು ಯಾರೇ ಮುಖ್ಯಮಂತ್ರಿಯಾಗಿರಲಿ. 'In the Assembly where the government is accountable to it when the information is sought for, it cannot be denied and the government should give it provided it is within the permission of the Speaker.'

ಇದನ್ನೋ ನಾನು ಹೇಳಿದ್ದೇನೆ. ಸಭೆಯ ಮುಂದೆ ಯಾವುದೇ ಕಡತ ಬೇಕಾದರೂ ಇಡುತ್ತೇನೆಂದು ಹೇಳಿದ್ದೇನೆ. ಇವತ್ತು ನ್ಯಾಷನಲ್‌ಗೇಮ್ಸ್ ಇರಬಹುದು, ಮತ್ತೊಂದು ಇರಬಹುದು. ಅಲ್ಲಿ ನಾವು 120 ಕೋಟಿ ಲೂಟಿ ಮಾಡಿರಬಹುದು. Yesterday in the Business Advisory Committee, I categorically said that I am prepared for a discussion. Not only that, I have committee completely that this document, if the Speaker permits, I am going to place it on the table of the House. ಸ್ವಾಮಿ, ಇವತ್ತು ನಾನು ಈ ಸಭೆಯನ್ನು ಯಾವುದೇ ಕಾರಣದಿಂದ ಅಗೌರವಕ್ಕೆ ಇಳಿಸುವುದಕ್ಕೆ ಸಿದ್ಧನಿಲ್ಲ. ಇದೇ ಸಭೆಯ ನಿಯಮಾವಳಿಗಳ ವ್ಯಾಪ್ತಿಯಲ್ಲಿ ನಾವು ಕೆಲಸ ಮಾಡದೇ ಇದ್ದರೆ, ಸಾಧ್ಯವಾಗುವುದಿಲ್ಲ. ಇಲ್ಲಿ ನಾನು ಶಾಶ್ವತವಾಗಿ ಇರುತ್ತೇನೆಂದು ಎಂದೂ ಹೇಳುವುದಿಲ್ಲ. ನಾಳೆ ಈ ಸ್ಥಾನಕ್ಕೆ ನೀವು ಬರಬಹುದು. ಈ ಸದನದ ಕಾರ್ಯಕಲಾಪಗಳ ಬಗ್ಗೆ ಕೆಲವು ನಿಯಮಗಳನ್ನು ರೂಪಿಸಿದ್ದೇನೆ. ರಾಜಕಾರಣದಲ್ಲಿ ನಮಗಿಂತ ಎತ್ತರಕ್ಕೆ ಬೆಳೆದಂಥ ವ್ಯಕ್ತಿಗಳು ಈ ಸ್ಥಾನದಲ್ಲಿ ಕುಳಿತು, ನಿಯಮಾವಳಿಗಳನ್ನು ರೂಪಿಸಿದ್ದಾರೆ. ನಾವು ಅದಕ್ಕಿಂತ ಮುಂದೆ ಹೋಗುವುದಕ್ಕೆ ಸಾಧ್ಯವಿಲ್ಲ. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಶಾಸಕರ ಬಗ್ಗೆ ಅಗೌರವವಾಗಿ ನಡೆದುಕೊಳ್ಳುವುದಕ್ಕೆ ಹೋಗಿದ್ದೇವೆ ಎನ್ನುವ ಮಾತನ್ನು ಹೇಳಿದರು. ಈ ಸರ್ಕಾರ ಬಂದಮೇಲೆ, ಕೆಲವು ವಿಷಯಗಳಲ್ಲಿ ನಿರ್ಣಯ ತೆಗೆದುಕೊಂಡು, ಕೆಲವು ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದ್ದೇವೆ. ಇದನ್ನು ಪ್ರಚಾರಕ್ಕಾಗಿ ನಾವು ಪತ್ರಿಕೆಗಳಿಗೆ ಕೊಟ್ಟಿಲ್ಲ; ನಮಗೆ ಅದರ ಅವಶ್ಯಕತೆಯೂ ಇಲ್ಲ. ಅಧಿಕಾರಾಗಿಳ ಸಂಘದವರು ಮೆಮೋರ್‍ಯಾಂಡಂ ಸಬ್‌ಮಿಟ್ ಮಾಡುತ್ತಾರೆ.

"ಹಿಂದಿನ ಸರ್ಕಾರ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಇದ್ದ ನಿವೇಶನ ಹಂಚಿಕೆ ಸಮಿತಿಯನ್ನು ಬದಲಾಯಿಸಿ, ರಾಜಕಾರಣಿಗಳ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿ, ನಿವೇಶನ ಹಂಚಿಕೆ ಅಧಿಕಾರವನ್ನು ನೀಡಿತ್ತು. ಆ ಸಮಿತಿಯ ಶಿಫಾರಸ್ಸಿನಂತೆ ಅಧಿಕಾರಿಗಳು ನಿವೇಶನ ಹಂಚಿದ್ದಾರೆ. ಸಮಿತಿಯ ಶಿಫಾರಸ್ಸನ್ನು ತಿರಸ್ಕರಿಸುವಂಥ ಅಥವಾ ಕಡೆಗಣಿಸುವ ಅಧಿಕಾರವನ್ನು ಕೂಡ ಅಧಿಕಾರಿಗಳಿಗೆ ನೀಡಿರಲಿಲ್ಲ.

ಈ ರೀತಿಯ ರೆಪ್ರಸೆಂಟೇಷನ್ ಕೊಡುತ್ತಾರೆ. ಕೆ.ಎ.ಎಸ್. ಅಧಿಕಾರಿ ಸಂಘದವರು ಈ ಮೊಮೋರ್‍ಯಾಂಡಂನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ಅಷ್ಟೇ ಅಲ್ಲ, ಪತ್ರಿಕಾ ಸಮ್ಮೇಳನವನ್ನು ಕರೆದು ಹೇಳಿದ್ದಾರೆ. ಇದೆಲ್ಲವನ್ನೂ ನಾವೇನೂ ಮಾಡಲಿಲ್ಲ, ಇವತ್ತು ಆಶ್ರಯ ಸಮಿತಿ, ಮತ್ತೊಂದರಲ್ಲಿ ಖಾಸಗಿ ಮುಖಂಡರು ಅಧ್ಯಕ್ಷರಾಗಿದ್ದಾರೆ. ಅಲ್ಲಿ ಏನು ಹೇಳಿದ್ದಾರೆ, ಅದನ್ನು ಮಾಡಿದ್ದೇವೆಯೇ ಹೊರತಾಗಿ ನಮಗೂ ಇದಕ್ಕೂ ಸಂಬಂಧವಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಸ್ವಾಮಿ, ನಾನು ಬಹಳ ಹಿಂದಕ್ಕೆ ಹೋಗುವುದಿಲ್ಲ. ಸನ್ಮಾನ್ಯ ವೀರಪ್ಪ ಮೊಯ್ಲಿಯವರೂ ಮುಖ್ಯಮಂತ್ರಿಯಾಗಿದ್ದರು ಮತ್ತು ವಿರೋಧಪಕ್ಷದ ನಾಯಕರೂ ಆಗಿದ್ದರು. ಚುನಾಯಿತ ಪ್ರತಿನಿಧಿಗಳಿಗೆ ಅಧಿಕಾರವನ್ನು ಕೊಡಬೇಕೆಂದು, ಅದು ಯಾರೇ ಇರಲಿ, ಯಾವುದೇ ಮಾಡಿರಲಿ. ಜಿಲ್ಲಾ ಪರಿಷತ್ತು ತಯಾರು ಮಾಡಿದಂಥ ಪಟ್ಟಿ ಅದು. 6 ಜಿಲ್ಲೆಗಳಲ್ಲಿ ತಾವೂ ಅಧಿಕಾರ ನಡೆಸಿದ್ದೀರಿ, ಎಲ್ಲಾ ಕಡೆಯೂ ನಾವೊಬ್ಬರೇ ಅಧಿಕಾರದಲ್ಲಿ ಇರಲಿಲ್ಲ. ನಮ್ಮ ಹಾಗೆಯೇ, ಎಲ್ಲಾ ಕಡೆ ಜಿಲ್ಲಾಪರಿಷತ್ತಿನಲ್ಲಿಯೂ ಚುನಾಯಿತ ಪ್ರತಿನಿಧಿಗಳು ಬಂದಿದ್ದಾರೆ. ಒಂದು ತಾತ್ವಿಕ ಹಿನ್ನೆಲೆಯಲ್ಲಿ ಈ ಸದನ ತೀರ್ಮಾನ ಮಾಡಿ, ಡಿ-ಸೆಂಟ್ರಲೈಸೇಷನ್ ಆಫ್

ಕೊಡಬೇಕೆಂದು ಈ ಸದನ ತೀರ್ಮಾನ ಮಾಡಿದ ಮೇಲೆ, ಆ ಸಂಸ್ಥೆ ಈ ರಾಜ್ಯದಲ್ಲಿರತಕ್ಕ ಯಾರು ನಿವೇಶನ ರಹಿತ ಜನರು ಇದ್ದಾರೆ, ಯಾರು ಮನೆ ಇಲ್ಲದ ಜನರು ಇದ್ದಾರೆ, ಅವರನ್ನು ಗುರುತು ಮಾಡತಕ್ಕ ಅಧಿಕಾರ ಆ ಸಮಿತಿಗಳಿಗೆ ಸೇರಿದ್ದುದು ಎಂದು ಹೇಳಿ, ನಾವು ಅಧಿಕಾರವನ್ನು ಕೊಟ್ಟಮೇಲೆ, ಆ ಸಮಿತಿಯವರು ಒಮ್ಮತದಿಂದ ತೀರ್ಮಾನ ಮಾಡಿ, ಸಿದ್ಧಪಡಿಸಿದ ಪಟ್ಟಿಯನ್ನು ರದ್ದುಮಾಡಿ, ಇವತ್ತು ಹಸ್ತಕ್ಷೇಪ ಮಾಡಿದವರು ಯಾರು ಎನ್ನುವುದನ್ನು ಈ ಸಂದರ್ಭದಲ್ಲಿ ಕೇಳುವುದಕ್ಕೆ ಇಚ್ಛೆಪಡುತ್ತೇನೆ. ನಾನು ಎಂ.ಎಲ್.ಎ. ಇರಬಹುದು, ನಮಗೂ ಒಂದು ಅಧಿಕಾರ ಇದೆ. ನಾನು ಲೋಕಸಭಾ ಸದಸ್ಯ ಇರಬಹುದು, ನಮಗೂ ಒಂದು ಅಧಿಕಾರಾ ಇದೆ, ಹಾಗೆಯೇ ವಿಧಾನ ಸಭೆಯ ಮತ್ತು ವಿಧಾನ ಪರಿಷತ್ತಿನ ಸದಸ್ಯರಿಗೆ ಎಷ್ಟು ಅಧಿಕಾರ ಇರುತ್ತದೆಯೋ ಅದೇ ರೀತಿಯ ಅಧಿಕಾರ, ಚುನಾವಣೆಯಲ್ಲಿ ಗೆದ್ದು ಬಂದಂಥ ಒಬ್ಬಬ ಜಿಲ್ಲಾ ಪರಿಷತ್ತಿನ ಸದಸ್ಯನಿಗೂ ಇದೆ. ಆ ಸಂಸ್ಥೆಗೆ ಕೊಟ್ಟಂಥ ಅಧಿಕಾರ, ದಿ-ಸೆಂಟ್ರಲೈಸೇಷನ್ ಆಫ್ ಪವರ್ಸ್ ಈ ಸಭೆಯಲ್ಲಿ ಠರಾವು ಮಾಡಿ ಕೊಟ್ಟಂಥ ಅಧಿಕಾರವನ್ನು, ವಾಪಸ್ ಕಿತ್ತುಕೊಂಡು, ಅಧಿಕಾರಿಗಳ ಕೈಗೆ ಕೊಟ್ಟಿದ್ದು ಯಾರು? ದಯಮಾಡಿ, ಇದರ ಬಗ್ಗೆ ಹಸ್ತಕ್ಷೇಪ ಮಾಡುವುದು ಬೇಡ. ಸ್ವಲ್ಪ ಸಮಾಧಾನವಾಗಿ ಚರ್ಚೆ ಮಾಡೋಣ. ಇದರಲ್ಲಿ ನನ್ನದೇನಾದರೂ ದೋಷವಿದ್ದರೆ ತಿದ್ದಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸನ್ಮಾನ್ಯ ಅಧ್ಯಕ್ಷರೇ, ಲ್ಯಾಂಡ್ ರೆವಿನ್ಯೂ ಆಕ್ಟ್‌ನಲ್ಲಿ ತಿದ್ದುಪಡಿ ತಂದು, ರೆಗ್ಯುಲರೈಸೇಷನ್ ಆಫ್ ಲ್ಯಾಂಡ್ ಮಾಡಬೇಕೆಂದು, ಅದಕ್ಕೆ ಒಂದು ವಿಶಿಷ್ಟವಾದ ಕಮಿಟಿ ಮಾಡಿ ಅದರಲ್ಲಿ ತಿದ್ದುಪಡಿ ತಂದರು. ಅದಕ್ಕೆ ಸಂಬಂಧ ಇಲ್ಲ. ಆಮೇಲೆ ಆಶ್ರಯ ಕಮಿಟಿ ಬಗ್ಗೆ ಎಕ್ಸಿಕ್ಯುಟಿವ್ ಆರ್ಡರ್ ಮಾಡಿದ್ದುದು. ಜಿಲ್ಲಾ ಪರಿಷತ್ತಿನ ಅಧಿಕಾರವನ್ನು ಕಿತ್ತುಕೊಂಡು ಕೊಟ್ಟಂಥಾದ್ದಲ್ಲ. ಒಂದು ಎಕ್ಸಿಕ್ಯುಟಿವ್ ಆರ್ಡರ್ ಮಾಡಿ, ಆಶ್ರಯ ಯೋಜನೆ ಬಂದಮೇಲೆ, ಯಾವ ರೀತಿಯಾಗಿ ಫಲಾನುಭವಿಗಳನ್ನು ಗುರುತಿಸಬೇಕು ಮತ್ತು ಫಲಾನುಭವಿಗಳನ್ನು ಎಂ.ಎಲ್.ಎ.ರವರ ಅಧ್ಯಕ್ಷತೆಯಲ್ಲಿ ಕೊಡಬೇಕೆಂದೇ ಹೊರತು, ಪಂಚಾಯತಿಯಿಂದ, ಜಿಲ್ಲಾ ಪರಿಷತ್ತಿನಿಂದ ಕಿತ್ತುಕೊಂಡು ಕೊಟ್ಟಂಥಾದ್ದಲ್ಲ. ಲಿಸ್ಟ್ ಅವರು ಮಾಡಿದ್ದುದು, ಮುಂದೆ ಇವರು ಬಂದು ಮಾಡುವಾಗ ಈ ಯೋಜನೆ ಇರಲಿಲ್ಲ. ಅಂದಾಗ, ಅವರು ಮಾಡಿದ್ದನ್ನು ಕಿತ್ತುಕೊಂಡು, ಈ ರೀತಿ ಮಾಡಿದರು ಎನ್ನುವ ಪ್ರಶ್ನೆ ಎಲ್ಲಿ ಬಂತು? ಅದಕ್ಕೆ, ದಯಮಾಡಿ ಇದನ್ನು ಸ್ಪಷ್ಟಪಡಿಸಬೇಕು. ನಾವೇನು ಗುರುತಿಸಿದ್ದೇವೆ, ಅದು ನಿಮಗೆ ಅನುಕೂಲವಿಲ್ಲ ಅಥವಾ ನಿಮಗೆ ಏನೋ ತೊಂದರೆ ಇದೆಯೆಂದು ಆ ಪಟ್ಟಿಯನ್ನು ರದ್ದು ಮಾಡಿ, ತಾವು ಹೊಸದಾಗಿ ಮಾಡಬೇಕೆಂದು ಹೊರಟಿದ್ದೀರಿ. ಹಿಂದಕ್ಕೆ ಆರಿಸಿಬಂದಂಥ ಪ್ರಜಾಪ್ರತಿನಿಧಿಗಳು ಇರಲಿಲ್ಲ. ನೀವು ತಪ್ಪಾಗಿರುವ ಕಡೆ ಕ್ಯಾನ್ಸಲ್ ಮಾಡಿ, ಎಲ್ಲಾ ಕಡೆ ಸಾರಾಸಗಟಾಗಿ, 224 ಎಂ.ಎಲ್.ಎ.ಗಳೂ ತಪ್ಪು ಮಾಡಿದ್ದಾರೆಂದು ಹೇಗೆ ಹೇಳುತ್ತೀರಿ.

ಶ್ರೀ ಹೆಚ್.ಡಿ. ದೇವೇಗೌಡ : ಸಾರಾಸಗಟಾಗಿ ತಪ್ಪು ಮಾಡಿದ್ದಾರೆಂದು ವಾದ ಮಾಡಲಿಲ್ಲ. ಇವತ್ತು ಈ ಸಂಸ್ಥೆಯಿಂದ, ಈ ಸದನದ ಕಾನೂನಿನ ಚೌಕಟ್ಟಿನಲ್ಲಿ ಅಸ್ತಿತ್ವಕ್ಕೆ ಬಂದಂಥ ಜಿಲ್ಲಾ ಪರಿಷತ್ತಿನಿಂದ, ಆಶ್ರಯ ಯೋಜನೆಯಡಿಯಲ್ಲಿ, ಅವರೇನು ಫಲಾನುಭವಿಗಳನ್ನು ಗುರುತು ಮಾಡಿ ಒಂದು ಪಟ್ಟಿಯನ್ನು ಸಿದ್ಧ ಮಾಡಿದ್ದನ್ನು.....

(ಗೊಂದಲ)

ಶ್ರೀ ಹೆಚ್.ಡಿ. ದೇವೇಗೌಡ : ದಯಮಾಡಿ, ತಾವು ಕೋಪಿಸಿಕೊಳ್ಳುವುದು ಬೇಡ. 1990ರಲ್ಲಿ ಶ್ರೀಮಾನ್ ಬಸವಲಿಂಗಪ್ಪನವರು ಈ ಸದನದಲ್ಲಿ ಮಂತ್ರಿಗಳಾಗಿದ್ದರು.

ಅದು ಭಾಗ್ಯಜ್ಯೋತಿ ಯೋಜನೆ ಇರಲಿ, ನಿವೇಶನ ರಹಿತರ ಯೋಜನೆ ಇರಲಿ, ಬಡವರಿಗೆ, ಮನೆ ಇಲ್ಲದವರಿಗೆ ಮನೆಗಳನ್ನು ಪಟ್ಟಿ ಮಾಡಿರತಕ್ಕ ಯೋಜನೆ ಇರಲಿ, ಆಶ್ರಯ ಯೋಜನೆ ಇರಲಿ. 1990ರಲ್ಲಿ ಹೊಸ ಸರ್ಕಾರ ಅಧಿಕಾರಕ್ಕೆ ಬಂದಂಥ ಕಾಲದಲ್ಲಿ ರೂರಲ್ ಡೆವಲಪ್‌ಮೆಂಟ್ ಮಂತ್ರಿಗಳಾದ ಬಸವಲಿಂಗಪ್ಪನವರು ಈ ಸ್ಥಾನದಲ್ಲಿ ಕುಳಿತು ನಿರ್ಣಯ ತೆಗೆದುಕೊಂಡಂತಾದ್ದು; ಈ ಪಟ್ಟಿ ಏನಿದೆ, ಇದನ್ನು ತಡೆಹಿಡಿಯಬೇಕು.

ಶ್ರೀ ಕಾಗೋಡು ತಿಮ್ಮಪ್ಪ : ಶಾಸಕರ ಅಧ್ಯಕ್ಷತೆಯಲ್ಲಿ ಮಾಡಿದಂಥ ಪಟ್ಟಿಯನ್ನು ಸರ್ಕಾರದಿಂದ ತಡೆಹಿಡಿದಿದ್ದರೆ, ಆ ಪಟ್ಟಿಯನ್ನು ಒದಗಿಸಿಕೊಡಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೇ, ಇಲ್ಲಿಯವರೆಗೆ ಎಲ್ಲಾ ಧಾಟಿ ಚೆನ್ನಾಗಿತ್ತು....

ಶ್ರೀ ವಾಟಾಳ್ ನಾಗರಾಜ್ : ಆಶ್ರಯ ಯೋಜನೆಯೇ ಬೇರೆ. ಜಿಲ್ಲಾಪರಿತ್ತಿಗೂ ಆಶ್ರಯ ಯೋಜನೆಗೂ ಸಂಬಂಧವಿಲ್ಲ. ಈ ಆಶ್ರಯ ವ್ಯವಸ್ಥೆಯೇ ಬೇರೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಇಲ್ಲಿಯವರೆಗೂ, ಸೈದ್ಧಾಂತಿಕವಾದ, ತಾತ್ವಿಕವಾದ ಮಾತನ್ನು ಮಾತನಾಡುತ್ತಾ ಹೋದರು. ಆದರೆ, ಈಗ ದಿಕ್ಕು ತಪ್ಪಿ ಹೋಗಿದೆ. ಏಕೆಂದರೆ, ಬಹುಶಃ ತಾವು ಮಿಕ್ಸಪ್ ಮಾಡುತ್ತಿದ್ದೀರಿ. ದಯಮಾಡಿ, ತಾವು ಸ್ವಲ್ಪ ವೆರಿಫೈ ಮಾಡಿ ಹೇಳಿ. ಏಕೆಂದರೆ, ಸಾರಾಸಗಟಾಗಿ ಹೇಳಿದರೆ, ಅದನ್ನು ಚಾಲೆಂಜ್ ಮಾಡಬೇಕಗಾತ್ತದೆ. You are not treading a correct path. I am telling you this.

ತಾವು ಮಿಕ್ಸಪ್ ಮಾಡಿದ್ದೀರಿ. ಬಹುಶಃ ಅವರು ಸರ್ವೆ ಮಾಡಿದ್ದಾರೆ. ಜಿಲ್ಲಾ ಪರಿಷತ್ತುಗಳಾಗಲೀ ಅಥವಾ ಆಗ ಇರತಕ್ಕ ಮಂಡಲ್ ಪಂಚಾಯಿತ್ತಿಗಳಾಗಲೀ, ನಿವೇಶನರಹಿತರು ಯಾರು ಎಂದು ಸರ್ವೆ ಮಾಡಿದ್ದಾರೆ. ಆ ಸರ್ವೆಯನ್ನು ರದ್ದು ಮಾಡುವುದಕ್ಕೆ ಸಾಧ್ಯವಿಲ್ಲ. ಆ ಸರ್ವೆ ಆಧಾರದ ಮೇಲೆ ಯಾವ ಫಲಾನುಭವಿಗಳಿಗೆ ಕೊಡಬೇಕೆಂಬ ಪಟ್ಟಿ ಮಾಡಿದ್ದಾರೆ, ಆ ಪಟ್ಟಿಯನ್ನು ರದ್ದು ಮಾಡಿದ್ದಾರೆ ಕಿತ್ತು ಹಾಕಿದ್ದಾರೆ, ಬೇರೆಯವರಿಗೆ ಕೊಟ್ಟಿದ್ದಾರೆ ಎಂದು ಹೇಳತಕ್ಕಂಥ ಆಪಾದನೆ ಏನಿದೆ, ಮಾತು ಏನಿದೆ ಅದು ಪೂರ್ತಿ ಸತ್ಯಕ್ಕೆ ದೂರವಾದುದು. ತಾವು ಈ ವಿಚಾರಗಳನ್ನು ಗೊಂದಲಕ್ಕೆ ಸಿಕ್ಕಿಸತಕ್ಕ ಹೇಳಿಕೆ ಮಾಡುತ್ತಿದ್ದೀರಿ. ದಯಮಾಡಿ ಪುನಃ ವೆರಿಫೈ ಮಾಡಿ ಇಲ್ಲಿಗೆ ಬನ್ನಿ. ಸರ್ವೆ ಮಾಡಿದ್ದಕ್ಕೂ, ಫಲಾನುಭವಿಗಳ ಪಟ್ಟಿಗೂ ಬಹಳ ವ್ಯತ್ಯಾಸ ಇದೆ. I think you are again mistaking it for Indira Avas Yojana. ಅದು ಮಂಡಲಕ್ಕೆ ಅಧಿಕಾರ ಇತ್ತು. ಅದು ರೂರಲ್ ಡೆವಲಪ್‌ಮೆಂಟ್‌ಗೆ ಸಂಬಂಧಪಟ್ಟಿದ್ದುದು. ಆದರೆ, ನಿವೇಶನಗಳ ಬಗ್ಗೆ, ಮನೆಗಳ ಬಗ್ಗೆ ಹಿಂದೆ ಜನತಾ ಮನೆ ಎಂದು ಇತ್ತು. ಆಮೇಲೆ ಆಶ್ರಯ ಮನೆ ಎಂದು ಹೆಸರಾಯಿತು. ಇದೇನಿದೆ, ಅದನ್ನು ಸಾಮಾನ್ಯವಾಗಿ ರೆವಿನ್ಯೂನವರೇ ಮಾಡುತ್ತಿದ್ದರು. ಈ ಅಧಿಕಾರ ಮಂಡಲಕ್ಕೆ ಇರಲಿಲ್ಲ, ಅಥವಾ ತಾಲ್ಲೂಕು ಪಂಚಾಯಿತ್ತಿಗೆ ಇರಲಿಲ್ಲ. ಅದು ಅಸಿಸ್ಟೆಂಟ್ ಕಮೀಷನರ್‌ರವರಿಗೆ ಇತ್ತು. ಆದ್ದರಿಂದ, ನೀವು ದಯಮಾಡಿ ಮಿಕ್ಸಪ್ ಮಾಡುವುದಕ್ಕೆ ಹೋಗಬೇಡಿ.

ಶ್ರೀ ಆರ್.ಎಲ್. ಜಾಲಪ್ಪ : ಆಶ್ರಯ ಯೋಜನೆ ಜಾರಿಗೆ ಬರುವುದಕ್ಕೆ ಮೊದಲು ಏನು ಸೈಟ್‌ಲೆಸ್ ಪೀಪಲ್‌ನ್ನು ಐಡೆಂಟಿಫೈ ಮಾಡಿದರು ಅದನ್ನು ಮೂಲೆಗೆ ಹಾಕಿ ಆಶ್ರಯ ಸ್ಕೀಮ್‌ನಲ್ಲಿ ಹೊಸದಾಗಿಯೂ ಸೈಟ್‌ಲೆಸ್ ಪೀಪಲ್‌ನ್ನು ಐಡೆಂಟಿಫೈ ಮಾಡಿದರು ಅದನ್ನು ಮೂಲೆಗೆ ಹಾಕಿ ಆಶ್ರಯ ಸ್ಕೀಮ್‌ನಲ್ಲಿ ಹೊಸದಾಗಿಯೂ ಸೈಟ್‌ಲೆಸ್ ಪೀಪಲ್‌ನ್ನು ಐಡೆಂಟಿಫೈ ಮಾಡಿದ್ದು ತಮ್ಮ ಸರ್ಕಾರ. ಸ್ವಾಮಿ ನಾನು ಆಶ್ರಯ ಸಮಿತಿಯಲ್ಲಿ ಛೇರ್ಮನ್ ಆಗಿ ಇದ್ದವನು. ಹೊಸದಾಗಿ ಐಡೆಂಟಿಫೈ ಮಾಡಿದರು ಆಶ್ರಯ ಸಮಿತಿಯವರು.

(ಗೊಂದಲ)

ಶ್ರೀ ಆರ್.ಎಲ್. ಜಾಲಪ್ಪ : ನಾನು ಹೇಳುವುದನ್ನು ಕೇಳಿ ಸಮಾಧಾನವಾಗಿ. ಮೊದಲು ಮಾಡಿದ್ದನ್ನು ಮೂಲೆಗೆ ಹಾಕಿ ಆಶ್ರಯ ಸಮಿತಿಯವರು ಹೊಸದಾಗಿ ಐಡೆಂಟಿಫೈ ಮಾಡಿದರು. ಹೊಸದಾಗಿ ಸೈಟ್‌ಲೆಸ್ ಪೀಪಲ್‌ನ್ನು ಐಡೆಂಟಿಫೈ ಮಾಡಿದರು. ಮತ್ತು ಮಂಡಲಗಳಿಗೂ ಕೂಡ ಹೊಸದಾಗಿ ಕೊಟ್ಟಿದ್ದು.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಾವು ಕನ್‌ಫ್ಯೂಜ್ ಮಾಡಿಕೊಳ್ಳುತ್ತಿದ್ದೀರಿ. ರೆವಿನ್ಯೂ ಮಿನಿಸ್ಟರ್ ಆಗಿ ಅವರಿಗೂ ಗೊತ್ತಿದೆ. ಅವಾಗ ಸೈಟ್‌ಲೆಸ್ ಪೀಪಲ್ಸ್‌ಗೆ ಜಮೀನು ಖರೀದಿ ಮಾಡಿ ನೇರವಾಗಿ ಸೈಟ್ ಕೊಡತಕ್ಕಂಥಾದ್ದು ಅಸಿಸ್ಟೆಂಟ್ ಕಮೀಷನರ್ಸ್‌ಗೆ ಪವರ್ಸ್ ಕೊಟ್ಟಿದ್ದರು. ಲ್ಯಾಂಡ್ ಪರ್ಚೆಸ್ ಮಾಡಿ ಅವರೇ ಮಾಡುತ್ತಿದ್ದರು. ಈ ಅಧಿಕಾರಿ ಅವರಿಗೆ ಕೊಟ್ಟಿತ್ತು. ಇಲ್ಲಿ ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್ ಪ್ರಶ್ನೆಯೇ ಬರುವುದಿಲ್ಲ. ನೇರವಾಗಿ 10 ಸಾವಿರ 20 ಸಾವಿರ ಒಂದು ಎಕರೆಗೆ ಅಂತ ನಿಗದಿ ಮಾಡಿ ಅವರೇ ಪರ್ಚೇಜ್ ಮಾಡುತ್ತಿದ್ದರು. ಏತಕ್ಕೆ ಸುಮ್ಮನೆ ಹೇಳುತ್ತೀರಿ?

ಶ್ರೀ ಬಿ.ಎಸ್. ಯಡಿಯೂರಪ್ಪ : ಒಬ್ಬ ಸಭಾನಾಯಕರಾಗಿ ಸನ್ಮಾನ್ಯ ಅಧ್ಯಕ್ಷರೇ ನನ್ನ ಮೂಲ ಪ್ರಶ್ನೆ ತಾವು ಪತ್ರಿಕೆಯಲ್ಲಿ ನೋಡಿದ್ದೀರಾ? ಒಬ್ಬ ಮುಖ್ಯಕಾರ್ಯದರ್ಶಿ ಯಾವುದೋ ಕಾರಣಕ್ಕೆ ಪ್ರವೇಶ ಮಾಡಕೂಡದು ಅಂತ ಯಡಿಯೂರಪ್ಪ ವಿರೋಧಪಕ್ಷದ ನಾಯಕನಾಗಿ ಅಡ್ಡಿ ಮಾಡಿದ್ದಾನೆಂದು ಈ ತರಹದ ಪ್ರಮುಖವಾದ ವಿಷಯಗಳ ಬಗ್ಗೆ ಬಿಟ್ಟು ಬೇರೆ ಮಾತನಾಡುತ್ತಿದ್ದೀರಿ. ತಾವು ನಮ್ಮ ಮಾನವನ್ನು ಹರಾಜು ಹಾಕಿದ್ದೀರಿ. ಶಾಸಕರ ಬಗ್ಗೆ ಅದರ ಬಗ್ಗೆ ದಯಮಾಡಿ ಕ್ಲಾರಿಫಿಕೇಶನ್ ಕೊಡಿ. ಒಂದು ಬಿಟ್ಟು ಒಂದಕ್ಕೆ ಹೋಗುತ್ತಿದ್ದೀರಿ? ತಾವು ಈಗ ಆಶ್ರಯಕ್ಕೆ ಹೋಗುತ್ತಿದ್ದೀರಿ?

ನಾವು ಹೇಳುತ್ತಿದ್ದೇವೆ ನೀವು ಏನು ಪತ್ರಿಕಾ ಹೇಳಿಕೆಯನ್ನು ಕೊಟ್ಟಿದ್ದೀರಿ? ನಿಮ್ಮ ಅಧಿಕಾರಿಗಳಿಗೆ ಆದೇಶ ಕೊಟ್ಟಿದ್ದೀರಾ? ಯಾವುದೇ ರೀತಿಯ ಅಂಕಿ ಅಂಶಗಳನ್ನು ಕೊಡಬಾರದು ಎಂದು ತಾವು ಪತ್ರಿಕೆಗಳಲ್ಲಿ ಹೇಳಿಕೆಯನ್ನು ಕೊಟ್ಟಿದ್ದೀರಾ? ಯಡಿಯೂರಪ್ಪ ಮುಖ್ಯ ಕಾರ್ಯದರ್ಶಿಯನ್ನು ಊರಿನ ಒಳಗಡೆ ಬಿಡಲಿಲ್ಲ ಅಂತ ಸನ್ಮಾನ್ಯ ಅಧ್ಯಕ್ಷರೇ ಅದು ಅಲ್ಲ. ಯಡಿಯೂರಪ್ಪ ಒಬ್ಬ ವಿರೋಧ ಪಕ್ಷದ ನಾಯಕನಾಗಿ ಒಬ್ಬ ಮುಖ್ಯ ಕಾರ್ಯದರ್ಶಿ ಯಾವ ಕಾರಣಕ್ಕೂ ಶಿಕಾರಿಪುರಕ್ಕೆ ಅವರ ಅನುಮತಿ ಇಲ್ಲವೇ ಬರಕೂಡದು ಅಂತ ಹೇಳಿದ್ದಾರೆ ಅಂತ ತಾವು ಪತ್ರಿಕೆಯಲ್ಲಿ ಹೇಳಿದ್ದೀರಾ? ನಿಮಗೆ ಡಿ.ಸಿ. ರಿಪೋರ್ಟ್ ಮಾಡಿದ್ದಾರೆ ಅಂತ ಹೇಳಿದ್ದೀರಾ? ನಾನು ನಿಮಗೆ ಪತ್ರ ಬರೆದಿದ್ದೇನೆ. ಮುಖ್ಯ ಕಾರ್ಯದರ್ಶಿಗಳಿಗೆ ಏನು ಪತ್ರ ಬರೆದಿದ್ದೇನೆ ಅದನ್ನು ಹೇಳಿದ್ದೇನೆ. ಅದು ಅಲ್ಲದೇ ಬೇರೆ ಮಾಹಿತಿಯನ್ನು ಕೊಟ್ಟಿದ್ದೇನೆ. ಅದರ ಬಗ್ಗೆ ಏನು ಹೇಳುತ್ತೀರಾ ಹೇಳಿ.

ಅಧ್ಯಕ್ಷರು : ಅಲ್ಲ ಅಲ್ಲ ಒಂದು ನಿಮಿಷ ದಯಮಾಡಿ ಕುಳಿತುಕೊಳ್ಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಲ್ಲ ಅಧ್ಯಕ್ಷರೇ ಈ ಸ್ಥಾನದಲ್ಲಿ ನಿಂತಾಗ ನಮ್ಮ ಮನಸ್ಸಿಗೆ ಏನು ನೋವಾಗಿದೆ ಎನ್ನುವುದನ್ನು ಸನ್ಮಾನ್ಯ ಉಪ ಮುಖ್ಯ ಮಂತ್ರಿಗಳು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ನಾನೇನಾದರೂ ನನ್ನ ಚೌಕಟ್ಟು ಬಿಟ್ಟು ಮಾತನಾಡಿದರೆ ತಾವು ಹೇಳಿ.

ಅಧ್ಯಕ್ಷರು : ಹಾಗಲ್ಲ. ದಯಮಾಡಿ ತಾವು ಕುಳಿತುಕೊಳ್ಳಿ. ತಾವು ಸನ್ಮಾನ್ಯ ನಂಜೇಗೌಡರು, ಸನ್ಮಾನ್ಯ ವಾಟಾಳ್ ನಾಗರಾಜ್‌ರವರು ಸವಿಸ್ತಾರವಾಗಿ ಮಾತನಾಡಿ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೀರಿ. ಅವರು ಇನ್ನೂ ಉತ್ತರ ಪ್ರಾರಂಭ

ಮಾಡಿ ಪ್ರಾರಂಭದ ಹಂತದಲ್ಲಿಯೇ ಇದ್ದಾರೆ. ಅವರು ಉತ್ತರ ಪೂರ್ತಿಯಾಗಿ ಸರ್ಕಾರದ ಪರವಾಗಿ ನನ್ನದು ಇಷ್ಟೇ ಉತ್ತರ ಅಂತ ಹೇಳಿದರೆ ಆಗ ತಾವು ಮಾತನಾಡಬಹುದು. ಆಗ ತಾವು ಮಾತನಾಡುವುದಕ್ಕೆ ಹೆಚ್ಚು ಅರ್ಥ ಬರುತ್ತದೆ. ಅವರು ಮಾತನಾಡತಕ್ಕಂಥ ಸಂದರ್ಭದಲ್ಲಿಯೇ ಈಲ್ಡ್ ಆಗಬೇಕೆಂದು ಹೇಳಿ ಕ್ಲಾರಿಫಿಕೇಷನ್ಸ್ ಅಂತ ಹೇಳಿ ವಿಚಾರ ಇನ್ನೊಂದು ಕಡೆಗೆ ಹೋಯಿತು. ನಾನು ಹೇಳಿದ ವಿಷಯಗಳಿಗೆ ತಾವು ಉತ್ತರ ಹೇಳಲಿಲ್ಲ ಅಂದ್ರೆ ಇನ್ನೂ ಉತ್ತರ ಪೂರ್ತಿ ಆಗಿಲ್ಲ, ಉತ್ತರ ಪೂರ್ತಿ ಆಗಿದೆ ಅಂತ ತಾವು ಭಾವಿಸಿಕೊಂಡಿದ್ದೀರಾ? ಏತಕ್ಕೆ ಆ ರೀತಿ ಆತುರ ಪಡುತ್ತೀರಿ? ದಯಮಾಡಿ ಉದ್ರೇಕಕ್ಕೆ ಒಳಗಾಗಬೇಡಿ. ತಾವೆಲ್ಲರೂ ಕೂಡ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೀರಿ. ತಾವು ಪ್ರಸ್ತಾವ ಮಾಡಿರತಕ್ಕಂಥ ಎಲ್ಲಾ ಗಂಭೀರವಾದ ಪ್ರಮುಖವಾದ ವಿಷಯಗಳಿಗೆ ಉತ್ತರ ಕೊಡಬೇಕಾಗಿರತಕ್ಕಂಥ ಒಂದು ಜವಾಬ್ದಾರಿ ಅವರ ಮೇಲೆ ಇದೆ. ತಮ್ಮ ಜವಾಬ್ದಾರಿಯನ್ನು ಅರಿತುಕೊಂಡು ಅವರು ಉತ್ತರ ಕೊಡುತ್ತಾರೆ ಎನ್ನುವ ನಂಬಿಕೆಯಿಂದ ನಾವು ಇಲ್ಲಿ ಕೆಲಸ ಮಾಡುತ್ತಿದ್ದೇವೆ. ಅನಂತರ ನೋಡೋಣ ದಯಮಾಡಿ ಅವರಿಗೆ ಅವಕಾಶ ಕೊಡಿ. ಮಧ್ಯೆ ಮಧ್ಯೆ ಮಾತನಾಡುತ್ತೀರಿ. ಅವರು ಈಲ್ಡ್ ಆಗಬೇಕಾಗುತ್ತದೆ ಸೌಜನ್ಯಕ್ಕೆ ಮಾತಿನ ದಿಕ್ಕು ಬೇರೆ ಕಡೆಗೆ ತಿರುಗಿಕೊಳ್ಳುತ್ತದೆ. ನೀವು ಪ್ರಸ್ತಾಪ ಮಾಡಿರತಕ್ಕಂಥ ವಿಚಾರಗಳಿಗೆ ಉತ್ತರ ಬರಲಿಲ್ಲವಲ್ಲ ಅಂತ ಆತಂಕ ನಿಮಗೆ. ಅವರು ಹಿಂದೆ ಸರ್ಕಾರ ನಡೆಸಿರುವಂತಹವರು, ನಾವು ಹಿಂದೆ ಆ ರೀತಿ ಮಾಡಿರಲಿಲ್ಲ ಅವರು ಹೇಳುತ್ತಿರುವುದು ತಪ್ಪು ಎಂದು ಇವರು ಎದ್ದು ನಿಲ್ಲುತ್ತಾರೆ. ಎಲ್ಲರನ್ನು ಸಮಜಾಯಿಷಿ ಮಾಡಬೇಕಲ್ಲ ಅವರು. ಆದ್ದರಿಂದ ತಾವೆಲ್ಲರೂ ತಾಳ್ಮೆಯಿಂದ ಇರಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಸಭಾನಾಯಕರು ಮುಂದುವರಿಸಬೇಕು.

ಶ್ರೀ ಹೆಚ್.ಎನ್. ನಂಜೇಗೌಡ : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳ ಇವತ್ತಿನ ಉತ್ತರದ ಧಾಟಿ ಏನಿದೆ ಅಂದರೆ he started replying to the discussions on demands for grants. There are specific issues for which we have given a notice/ ನಾನೇ ಕೇಳುತ್ತೇನೆ. ಆಶ್ರಯ ಹಿಂದೆ ಮಾಡಿದ್ದ ಸರ್ಕಾರದ್ದು ಇನ್ನೊಂದು, ಅದು ಸರಿಯೋ ಅಲ್ಲವೋ ಯಾವ ರೀತಿ ಚರ್ಚೆ ಇವೆಲ್ಲ ಏನಾಗುತ್ತದೆ ಅಂದ್ರೆ, ನೀವೇ ಒಂದು ಹಂತದಲ್ಲಿ ಕ್ರೀಡಾ ಗ್ರಾಮದ್ದು ಬೇರೆ ದಿನ ಚರ್ಚೆಗೆ ಇಟ್ಟುಕೊಳ್ಳಿ ಎಂದು ಹೇಳಿದಿರಿ. ಡಿಮ್ಯಾಂಡ್ ಫಾರ್ ಗ್ರ್ಯಾಂಟ್ಸ್ ಅಂದ್ರೆ ಅದು ಲಿಮಿಟೆಡ್ ಪರ್‌ಪಸ್. ನಾವು ನೋಟೀಸ್ ಕೊಟ್ಟಿರತಕ್ಕಂಥಾದ್ದು ಏನು ಈಗ ಶಾಸಕರಿಗೆ ಅಪಚಾರ ಆಗಿದೆ. ಅದಕ್ಕೆ ಉತ್ತರ ಹೇಳಬೇಕು.

ಶ್ರೀ ಹೆಚ್.ಡಿ. ದೇವೇಗೌಡ : ಮಾನ್ಯ ಅಧ್ಯಕ್ಷರೇ, ನಾನು ಒಂದು ಶಬ್ದ ಪ್ರಯೋಗ ಮಾಡಿದಾಗ ಸನ್ಮಾನ್ಯ ಮಾಜಿ ಮುಖ್ಯ ಮಂತ್ರಿಗಳಾದ ವೀರಪ್ಪ ಮೊಯ್ಲಿಯವರು ಮತ್ತು ಕಾಗೋಡು ತಿಮ್ಮಪ್ಪನವರು ಮಾಜಿ ಮಂತ್ರಿಗಳು ಒಂದು ಮಾತನ್ನು ಹೇಳಿದರು ಇದು ಸರ್ವೆ ರಿಪೋರ್ಟು ಅದು ಫೈನಲ್ ರಿಪೋರ್ಟ್ ಅಲ್ಲ ಅಂತ ಏನೋ ನೀವು ಹೇಳಿದಿರಿ. ನೀವು ಏನು ವ್ಯಾಖ್ಯಾನ ಮಾಡಿದಿರಿ ಅದನ್ನೇ ನಾನು ಸರಿ ಅಂತ ಒಪ್ಪಿಕೊಳ್ಳುತ್ತೇನೆ. ನಾನೇನು ಹೇಳಿದ್ದೇನೆ. 'Mr. Devegowda sent a denial ignoring legislators and curtailing the power in chosing the beneficiaries under various Government schemes. Mr. Gowda said it was the work of officials to identify the poorest of the poor and ensure benefits reach them. If the Minister or the Bureaucrats commit mistakes Legislators had absolute power to take them to task on the floor of the House ..... ಇದನ್ನು ನಾನು ಹೇಳಿದ್ದೇನೆ. ನಾನು ತಪ್ಪು ಮಾಡಿದರೆ ಅಧಿಕಾರಿ ತಪ್ಪು

ಮಾಡಿದರೆ ಈ ಬಡವರನ್ನು ಗುರುತಿಸತಕ್ಕಂಥ ಕಾಲದಲ್ಲಿ ಅವರನ್ನು ಯಾವುದೇ ರೀತಿಯಲ್ಲಿ ತರಾಟೆಗೆ ತೆಗೆದುಕೊಳ್ಳತಕ್ಕಂಥ ಅಧಿಕಾರ ಶಾಸಕರಿಗೆ ಇದೆ ಎನ್ನುವ ಮಾತನ್ನು ನಾನು ಹೇಳಿದ್ದೇನೆ.

ಅದನ್ನು ಯಾವುದೋ ಒಂದು ಪತ್ರಿಕೆಯಲ್ಲಿ ಗೌರ್ನಮೆಂಟ್ ಆಫೀಸರ್ಸ್ ಎಂದು ವ್ಯಾಖ್ಯಾನ ಮಾಡಿದರು. ಅವರೇ ವ್ಯಾಖ್ಯಾನ ಮಾಡಿದ್ದುದು ನಾನೇನು ವ್ಯಾಖ್ಯಾನ ಮಾಡಲಿಲ್ಲ, ಅದು ಪತ್ರಿಕೆಗಳಲ್ಲಿ ಬಂದಿದೆ ನಾಲ್ಕಾರು ಪತ್ರಿಕೆಗಳಲ್ಲಿ ಬಂದಿದೆ ಒಂದು ಪತ್ರಿಕೆಯಲ್ಲಿ ಅಲ್ಲ, ಅದಕ್ಕೆ ನಾನು ಏನು ಹೇಳಿದ್ದೇನೆ. ಬೆನಫಿಷರೀಸ್‌ನ್ನು ಗುರುತು ಮಾಡುವುದಕ್ಕೆ ಜಿಲ್ಲಾಧಿಕಾರಿಗಳಿಗೆ ನಾವು ಒಂದು ಫಾರ್ಮೇಟನ್ನು ಹಾಕಿ ಕೊಟ್ಟಿದ್ದೇವೆ. ಪ್ರತಿ ವರ್ಷ ಇದೇ ರೀತಿ ಬದಲಾವಣೆಗಳು ಆಗುವುದು ಬೇಡ, ಸರ್ಕಾರಗಳು ಬದಲಾವಣೆ ಆಗುತ್ತವೆ ಹೋಗುತ್ತವೆ. ಆದರೆ ಬೆನಫಿಷರೀಸ್‌ನ್ನು ಗುರುತು ಮಾಡತಕ್ಕಂಥ ಕಾಲದಲ್ಲಿ ಯಾರು ಅತ್ಯಂತ ಕಡು ಬಡವ ಇದ್ದಾನೋ ಪ್ರತಿ ಹಳ್ಳಿಯಲ್ಲಿ ನಿಮಗೂ ಅದರ ಒಂದು ಕಾಪಿಯನ್ನು ಕಳುಹಿಸಿಕೊಡಿ ಅಂತ ನಾನು ಮುಖ್ಯ ಕಾರ್ಯದರ್ಶಿಗಳಿಗೆ ಹೇಳಿದ್ದೇನೆ. ಅದು ಬಹುಶಃ ತಮಗೆ ತಲುಪಿರಬೇಕೆಂದು ನಾನು ತಿಳಿದುಕೊಂಡಿದ್ದೇನೆ. ಅದರಲ್ಲಿ ಕೆಲವು ಅಭಿಪ್ರಾಯಗಳನ್ನು ವ್ಯಕ್ತ ಪಡಿಸಿದ್ದೇವೆ. ಯಾವ ಯಾವ ಹಂತದಲ್ಲಿ ಬೆನಿಫಿಷರೀಸ್‌ಗೆ ಏನೇನು ಅನ್ಯಾಯ ಆಗುತ್ತದೆ ಎಂಬ ಒಂದು ಹಿನ್ನೆಲೆಯಲ್ಲಿ ನಾವು ಆ ಫಾರ್ಮೇಟನ್ನು ತಯಾರು ಮಾಡಿದ್ದೇವೆ. ಅದೇ ಸರ್ವ, ಎಲ್ಲಾ ವಿವರಗಳನ್ನು ಹೊಂದಿರತಕ್ಕಂಥ ಡಾಕ್ಯುಮೆಂಟ್ ಅಂತ ನಾನು ಹೇಳುವುದಕ್ಕೆ ತಯಾರು ಇಲ್ಲ. ಫರ್ದರ್ ಇಂಪ್ರೂವ್‌ಮೆಂಟ್ ಮಾಡಲಿಕ್ಕೆ ಸಾಧ್ಯ ಇದೆ, ತಾವು ಸಹಕಾರ ಕೊಟ್ಟರೆ. ಅದಕ್ಕೆ ನಾನು ಸದಾ ಸಿದ್ಧವಾಗಿದ್ದೇನೆ. ಶಾಸಕರ ಪವರನ್ನು ಕರ್ ಟೈಲ್ ಮಾಡುವ ಪ್ರಶ್ನೆ ಅಲ್ಲಯ ಬೆನಫಿಷರೀಸ್‌ನ್ನು ಗುರುತಿಸುವಾಗ ರಾಜಕೀಯ ಬರಬಾರದು ಎನ್ನುವ ಕಾರಣದಿಂದ ನಾವು ಈ ರೀತಿ ಮಾಡಿದ್ದೇವೆ. ಇದರಲ್ಲಿ ತಪ್ಪಾಗಿದ್ದರೆ ನಾನು ತಿದ್ದಿಕೊಳ್ಳುತ್ತೇನೆ. ಶ್ರೀಮಾನ್ ಹೆಚ್.ಎನ್. ನಂಜೇಗೌಡರು ಹೇಳಿದಂತಹ ಮಾತು ಅದೇ. ಇವತ್ತು ಪಾರ್ಲಿಮೆಂಟ್ ಮೆಂಬರ್ಗ್ಳ ಒಂದ ಕೋಟಿ ಕೊಡಬೇಕೆಂದು ಹೇಳಿದಾಗ ನಾನು ಇದು ಕೂಡದು ಅಂತ ಬರೆದೆ. ಕಾರಣ ಏನೆಂದರೆ, ಸ್ವಾಭಾವಿಕವಾಗಿ ನಮಗೆ ಯಾರು ವಿರೋಧ ಮಾಡಿರುತ್ತಾರೋ ಅಂತಹ ಹಳ್ಳಿಗಳಿಗೆ ನಾವು ಹಣ ಕೊಡುವುದಕ್ಕೆ ಹಿಂದೆ ಮುಂದೆ ನೋಡುತ್ತೇವೆ ಕಾರಣ ಕೊಟ್ಟಿರುವುದು ಒಂದು ಕೋಟಿ ಎಲ್ಲಿ ನಮ್ಮ ಪರವಾಗಿ ಕೆಲಸ ಮಾಡಿರುತ್ತಾರೋ ಅಂತಹ ಕಡೆ ನಾವು ಮಾನವೀಯತೆ ದೃಷ್ಟಿಯಿಂದ ಮಾಡುತ್ತೇವೆ. ಎಲ್ಲಾ ರಾಜಕಾರಣಿಗಳು ಅದೇ ಮಾಡುತ್ತೇವೆ. ಆ ಒಂದು ಕೋಟಿ ರೂಪಾಯಿಗಳನ್ನು ಹರಡುವಾಗ ಯಾವ ಹಳ್ಳಿಗಳಲ್ಲಿ ನಮಗೆ ಹೆಚ್ಚು ರಾಜಕೀಯ ಬೆಂಬಲ ಸಿಕ್ಕಿತ್ತೋ ಅಲ್ಲಿಗೆ ಕೊಡತಕ್ಕಂಥ ಒಂದು ಸನ್ನಿವೇಶ ಇರುವುದರಿಂದ ನೇರವಾಗಿ ಪಾರ್ಲಿಮೆಂಟ್ ಸದಸ್ಯರಿಗೆ ಕೊಡುವುದು ಬೇಡ ಅಂತ ನಾನು ಹೇಳಿದ್ದೇನೆ. ಈ ಕಾರಣಕ್ಕೆ ನಾನೇ ಪತ್ರ ಬರೆದೆ. ಇದನ್ನು ಪತ್ರಿಕೆಗಳಲ್ಲಿ ಹೇಳಿದ್ದೇನೆ. ನೀವು ಏನೇ ವಿವರಣೆ ಕೇಳಿದರೂ ಅದನ್ನು ಹೇಳುವುದಕ್ಕೆ ನಾನು ಸಿದ್ಧನಿದ್ದೇನೆ. ಇದರ ಜೊತೆಗೆ ಇವತ್ತು ನಾವು ಲೋಕಲ್ ಬಾಡೀಸ್‌ಗೆ ಇವತ್ತು ತಾಲ್ಲೂಕು ಪಂಚಾಯತಿ ಇರಬಹುದು ಜಿಲ್ಲಾ ಪಂಚಾಯತಿ ಇರಬಹುದು ಇವತ್ತು ಗ್ರಾಮ ಪಂಚಾಯಿತಿಯಲ್ಲಿ ಇರಬಹುದು. ಆ ಸಂಸ್ಥೆಗಳಿಗೆ ನಾವು ಹಣ ವಿತರಣೆ ಮಾಡಿದಾಗ ಅಲ್ಲಿ ಕೇಳುವುದಕ್ಕೆ ಜನ ಇದ್ದಾರೆ. ಇಲ್ಲಿ ತಾವು ಹೇಗೆ ನಮ್ಮನ್ನು ತರಾಟೆಗೆ ತೆಗೆದುಕೊಳ್ಳುತ್ತೀರೋ ಅಲ್ಲಿ ಬೇರೆ ಪಕ್ಷದವರು ಆಳುವ ಪಕ್ಷದಲ್ಲಿ ಯಾರು ಅಧಿಕಾರದಲ್ಲಿ ಇರುತ್ತಾರೋ ಅಂತಹವರು ಅಕ್ರಮ ಮಾಡಿದಾಗ ಕೊಟ್ಟಂತಹ ಹಣ ದುರುಪಯೋಗ ಮಾಡಿದಾಗ ಅದನ್ನು ಕೇಳುವ ಶಕ್ತಿ ಆ ಸದನದ ಸದಸ್ಯರಿಗೆ ಇದೆ ಎಂದು ನಾವೆಲ್ಲರೂ ಒಪ್ಪಿಕೊಳ್ಳುತ್ತೇವೆ. ಅದನ್ನು ನಾನು ಅಷ್ಟಕ್ಕೆ ನಿಲ್ಲಿಸಿ, ಅದಕ್ಕಿಂತ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ ನಾವು ಈ ವಿಷಯವನ್ನು ಈ

ಸದನದಲ್ಲಿ ಪ್ರಸ್ತಾಪ ಮಾಡಿ ಶಾಸಕರಿಗೆ ಅಗೌರವ ಮಾಡುತ್ತಿದ್ದೇನೆ ಎಂದು ಹೇಳಿ ಏನು ವಾದ ಮಂಡನೆ ಮಾಡಿದರೋ ಆ ಕಾರಣಕ್ಕೆ ನಾನು ಈ ವಿಷಯವನ್ನು ಪ್ರಸ್ತಾಪ ಮಾಡಿದೆನೇ ಹೊರತಾಗಿ ಅದು ಬಿಟ್ಟು ನಾನು ಏನೋ ಇದರಲ್ಲಿ ಪಲಟ್ರ್ ತೆಗೆದುಕೊಳ್ಳಬೇಕು ಅಥವಾ ಬಜೆಟ್ ಡಿಮ್ಯಾಂಡ್‌ಗೆ ಇಲ್ಲಿ ಓಟಿಂಗ್ ಕೇಳುತ್ತಿದ್ದೇನೆ ದಯಮಾಡಿ ತಿಳಿದುಕೊಳ್ಳಬೇಡಿ. ಮಾನ್ಯ ನಂಜೇಗೌಡರು ಹೇಳಿದರು ನಾನು ಆ ಧಾಟಿಯಲ್ಲಿ ವಾದ ಮಾಡಲಿಲ್ಲ. ಮಾನ್ಯ ಅಧ್ಯಕ್ಷರೇ, ಈ ಫಾರ್ಮೆಟ್ ಒಂದನ್ನು ಎಲ್ಲರಿಗೂ ಕಳುಹಿಸಿ ಎಂದು ಹೇಳಿದ್ದೆ. ಅವರು ಕಳುಹಿಸಿರಬೇಕು. ಅದರಲ್ಲಿ ಏನೇ ದೋಷ ಇದ್ದರೂ ನಾನು ತಿದ್ದಿಕೊಳ್ಳುವುದಕ್ಕೆ ಸಿದ್ಧನಾಗಿದ್ದೇನೆ ಎನ್ನುವ ಮಾತನ್ನು ನಾನು ಹೇಳುತ್ತೇನೆ. ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಮುಖ್ಯ ಕಾರ್ಯದರ್ಶಿಗಳು ನನಗೆ ಬರೆದಿರತಕ್ಕಂಥಾದ್ದು ಅದನ್ನೇ ನಾನು ಪತ್ರಿಕೆಗಳಲ್ಲಿ ಹೇಳಿರುವುದು ಮತ್ತೇನು ಹೇಳಿಲ್ಲ. ತಾವು ಏನು ನಾನು ಉದ್ಧಟತನದಿಂದ ನಡೆದುಕೊಳ್ಳುತ್ತೇನೆಂದು ಹೇಳಿ ಬಹಳ ಕಠಿಣವಾದ ಶಬ್ದಗಳನ್ನು ಬಳಕೆ ಮಾಡಿದ್ದೀರಿ. ಅದಕ್ಕೆ ನನಗೇನೂ ಬೇಸರ ಇಲ್ಲ. ಏಕೆಂದರೆ ನಾನು ಆ ರೀತಿ ಬೇಸರ ಪಟ್ಟುಕೊಳ್ಳುವುದಕ್ಕೆ ಹೋಗುವುದಿಲ್ಲ. ನನ್ನ ಜೀವನದಲ್ಲಿ ನಾನು ಈ ಎಲ್ಲಾ ಕಹಿ ಸಿಹಿಯನ್ನು ಊಟ ಮಾಡಿದ್ದೇನೆ.

7.10 ಪಿ.ಎಂ.

ಮುಖ್ಯ ಮಂತ್ರಿಗಳಾದ ದೇವೇಗೌಡರಿಗೆ 'ಮದ' 'ಅಧಿಕಾರದ ಪಿತ್ಥ ನೆತ್ತಿಗೆ' ಮುಖ್ಯ ಮಂತ್ರಿಯವರಿಗೆ ಸೌಜನ್ಯವಿರಬೇಕು, ವೇದಾಂತ ಹೇಳಿಕೊಂಡು ಮಣ್ಣು ತಿನ್ನುವ ಕೆಲಸ ಮಾಡಿದರೆ ನಾವು ಸುಮ್ಮನೆ ಬಿಡುವುದಿಲ್ಲ. 'ಜಿಲ್ಲಾ ಪಂಚಾಯಿತಿ ಚುನಾವಣಾ ಪ್ರಚಾರಕ್ಕೆ ನಾಯಕರು ಗ್ರಾಮಾಂತರ ಪ್ರದೇಶಕ್ಕೆ ಹೋಗಲಿ, ಜನ, ಇವರು ಕೊಟ್ಟಿರುವ ಆಶ್ವಾಸನೆಗೆ ಕುತ್ತಿಗೆ ಪಟ್ಟಿ ಹಿಡಿದು ಕೇಳುತ್ತಾರೆ. ಕುತ್ತಿಗೆ ಪಟ್ಟಿ ಹಿಡಿದು ಕೇಳಿದ್ದಾರೆ ಈಗ. ಕುತ್ತಿಗೆ ಪಟ್ಟಿ ಹಿಡಿದು ಕೇಳಿದ್ದಾರೆ. ಏಕೆಂದರೆ, 120 ಕೋಟಿ ಹಣ ಲೂಟಿ ಮಾಡಿದ್ದಾರೆ. ನ್ಯಾಷನಲ್‌ಗೇಮ್ಸ್‌ನಲ್ಲಿ, ಭ್ರಷ್ಟಾಚಾರ, ದುರಹಂಕಾರ ಮದ ಪಿತ್ಥ ನೆತ್ತಿಗೆ ಏರಿದೆ ಕುತ್ತಿಗೆ ಪಟ್ಟಿ ಹಿಡಿದು ಕೇಳಿದ್ದಾರೆ. ಏಕೆಂದರೆ ಈ ಅಧಿಕಾರ ಒಬ್ಬ ಅಲ್ಪನ ಕೈಗೆ ಬಂದಾಗ, ನನ್ನಂಥವನ ಕೈಗೆ, ಜನ ಕೇಳಿದ್ದಾರೆ. ತಲೆ ಬಾಗಿದ್ದೇನೆ ನಾನು ಜನಕ್ಕೆ. ಸನ್ಮಾನ್ಯ ಅಧ್ಯಕ್ಷರೆ, he has taken exception to the visit of CEO, Zilla Parishad, Shikaripur, without informing him.

yes, ನಮ್ಮ style of function ಬೇರೆ ಇರಬಹುದು. ಪ್ರತಿಯೊಬ್ಬ ಹಿರಿಯ ಅಧಿಕಾರಿ ತಿಂಗಳಲ್ಲಿ 4 ಕಡೆ ಅವನು surprise ಚೆಕ್ ಮಾಡಬೇಕೆಂದು ಹೇಳಿದ್ದೇವೆ. We have introduced that system. ಅವನು ಡೆಪ್ಯುಟಿ ಕಮಿಷನರ್ ಇರಲಿ, ಅವನು ಚೀಫ್ ಎಕ್ಸಿಕ್ಯೂಟಿವ್ ಆಫೀಸರ್ ಇರಲಿ, ಹೆಡ್ಸ್ ಆಫ್ ದಿ ಡಿಪಾರ್ಟ್ಮೆಂಟ್ ಇರಲಿ, ಯಾವುದೇ ಅಭಿವೃದ್ಧಿ ಕಾರ್ಯಕ್ರಮದ ಬಗ್ಗೆ ಅವನು ಪ್ರತಿ ತಿಂಗಳಿನಲ್ಲಿ 4 ಸರ್ಪ್ರೈಸ್ ಚೆಕನ್ನು ಜಿಲ್ಲಾ ಮಟ್ಟದಲ್ಲಿ ಮಾಡಬೇಕೆಂದು ಹೇಳಿದ್ದೇವೆ. ತಾವು ಆಡಳಿತ ನಡೆಸಿದ್ದೀರಿ. ಅವರು ಸರ್ಪ್ರೈಸ್ ಚೆಕ್‌ಗೆ ಹೋಗುವಾಗ, ಏನು ಮಾಡಬೇಕು. ಅವರು ಏನು ಬರೆದಿದ್ದಾರೋ ಅದನ್ನು ಸಭೆ ಮುಂದೆ ಓದುತ್ತಿದ್ದೇನೆ. ನಾನು ಇದರ ಆಧಾರದ ಮೇಲೆ ಹೇಳಿದ್ದೇನೆಯೇ ಹೊರತು ಬೇರೆ ಆಧಾರದ ಮೇಲೆ ಹೇಳಿಲ್ಲ. ಸರ್ಪ್ರೈಸ್ ಚೆಕ್ ಮಾಡಬೇಕೆನ್ನುವುದು ಹೊಸ ಸರ್ಕಾರದ ಒಂದು ಘೋಷಣೆ. ಸನ್ಮಾನ್ಯ ಅಧ್ಯಕ್ಷರೆ, ನಾನು ಯಾವುದರ ಮೇಲೆ ಅವಲಂಬನೆಯಾಗಬೇಕು? ಈ ಸದನದಲ್ಲಿ ಹಿರಿಯರಿದ್ದಾರೆ, ಕುಳಿತುಕೊಂಡು ಚರ್ಚೆ ಮಾಡೋಣ, ನೀವು ಮುಖ್ಯ ಮಂತ್ರಿಗಳಾಗಿದ್ದೀರಿ. ನಾನೂ ಮುಖ್ಯ ಮಂತ್ರಿಯಾಗಿ ಇವತ್ತು ಆಕಸ್ಮಿಕವಾಗಿ ಕೆಲಸ ಮಾಡುತ್ತಿದ್ದೇನೆ. ನಾಳೆ ಅವರೇ ಬಂದು ಈ ಜಾಗದಲ್ಲಿ ಕುಳಿತುಕೊಳ್ಳಬಹುದು. ಅಥವಾ ನೀವು ಮತ್ತೆ ಬಂದು

ಕುಳಿತುಕೊಳ್ಳಬಹುದು. ಇದು ಜನತೆ ತೀರ್ಮಾನಕ್ಕೆ ಬಿಟ್ಟಿದ್ದುದು. ನೀವೇ ಬಂದು ಕೂರಬಹುದು. ಅದು ಏಕೆ ಆಗಬಾರದು?

ಶ್ರೀ ವಾಟಾಳ್ ನಾಗರಾಜ್ : ಮಾರ್ಗದರ್ಶನ ಕೊಡಿ ಎಂದು ತಾವೇ ಹೇಳುತ್ತೀರಿ.

ಶ್ರೀ ಹೆಚ್.ಡಿ. ದೇವೇಗೌಡ : ಮಾನ್ಯ ವಾಟಾಳ್‌ರವರೇ, ನೀವು ಹೇಳಿದ್ದನ್ನೂ ಕೇಳುವುದಕ್ಕೆ ಸಿದ್ಧ ಇದ್ದೇನೆ. ಆದರೆ ಇಷ್ಟೇ ಪ್ರಶ್ನೆ ಸದನದ ನಿಯಮಾವಳಿಗಳ ಚೌಕಟ್ಟಿನಲ್ಲಿ ಯಾವ ರೀತಿ ನಡೆದುಕೊಳ್ಳಬೇಕೆಂದು ಹೇಳಿ, ಮಾರ್ಗದರ್ಶನ ಮಾಡಿ. ಇದರ ಬಗ್ಗೆ ಮಾನ್ಯ ವೀರಪ್ಪ ಮೊಯಿಲಿಯವರು ಒಂದು ಮಾತನ್ನು ಹೇಳಿದರು. ಸ್ಪೀಕರ್‌ರವರು ಎಲ್ಲರನ್ನೂ ಕರೆಯಿಸಿ ಚರ್ಚೆ ಮಾಡಿ ಎಂದು ಹೇಳಿದ್ದಾರೆ.

ಶ್ರೀ ಹೆಚ್.ಎನ್. ನಂಜೇಗೌಡ : ಮಾನ್ಯ ಅಧ್ಯಕ್ಷರೆ, ಶ್ರೀಮಾನ್ ಯಡಿಯೂರಪ್ಪನವರು ಬರೆದಿದ್ದಾರೆನ್ನತಕ್ಕಂಥ ಲೆಟರ್ ಬಗ್ಗೆ ಅವರು ಮಾತನಾಡುತ್ತಿದ್ದಾರೆ, ನನ್ನ ಹತ್ತಿರವೂ ಅವರು ಬರೆದಿರುವ ಕಾಪಿಯನ್ನು ಕೊಟ್ಟಿದ್ದಾರೆ. ಯಡಿಯೂರಪ್ಪನವರು ತಪ್ಪು ಮಾಡಿದರೂ ತಪ್ಪೇ, ನಂಜೇಗೌಡರು ತಪ್ಪು ಮಾಡಿದರೂ ತಪ್ಪೆ, ಆದರೆ ಈಗ ಅವರು ಏನು ಯಡಿಯೂರಪ್ಪನವರು ಕಾಗದ ಬರೆದಿದ್ದಾರೆಂದು ಹೇಳುತ್ತಿದ್ದಾರೆ. ಸನ್ಮಾನ್ಯ ಮುಖ್ಯ ಮಂತ್ರಿಗಳು, ಯಡಿಯೂರಪ್ಪನವರು ನಮಗೆ ಕೊಟ್ಟಿರತಕ್ಕಂಥಾದ್ದರ ಕಾಪಿಯಲ್ಲಿ ಅದಿಲ್ಲ.

ಶ್ರೀ ಹೆಚ್.ಡಿ. ದೇವೇಗೌಡ : ಜಿಲ್ಲಾ ಪರಿಷತ್ತಿನ ಚೀಫ್ ಎಕ್ಸಿಕ್ಯುಟಿವ್ ಆಫೀಸರ್ ಹೋಗಿದ್ದಕ್ಕೆ ಇವರು ಏನು ಅಬ್ಜಕ್ಷನ್ ತೆಗೆದುಕೊಂಡರು? ಡಿ.ಸಿ.ಯವರು ಚೀಫ್ ಸೆಕ್ರೆಟರಿ ಆಫ್ ದಿ ಕರ್ನಾಟಕ ಗೌರ್ನಮೆಂಟ್.

ಶ್ರೀ ಹೆಚ್.ಎನ್. ನಂಜೇಗೌಡ : ಈ ತರಹ ಪ್ರತಿ ಚೀಫ್ ಎಕ್ಸಿಕ್ಯೂಟಿವ್ ಆಫೀಸರ್‌ಗಳಿಂದಲೂ ಈ ರೀತಿ ರೀಪೋರ್ಟನ್ನು ತರಿಸಿಕೊಳ್ಳಬಹುದು.

(ಗೊಂದಲ)

ಶ್ರೀ ಹೆಚ್.ಎನ್. ನಂಜೇಗೌಡ : ನಾನು ಹೇಳುವುದನ್ನು ದಯಮಾಡಿ ಹೇಳಿ. ನನ್ನ ವಿಷಯಕ್ಕೆ ಒಬ್ಬ ಆಫೀಸರ್ ಬರೆದು ಬಿಡುತ್ತಾರೆ, ನಾಳೆ ಇನ್ನೊಬ್ಬರ ವಿಷಯಕ್ಕೆ ಬರೆಯುತ್ತಾರೆ. ಮಾಜಿ ಮುಖ್ಯ ಮಂತ್ರಿ ಮೊಯಿಲಿಯವರ ಬಗ್ಗೆ ಬರೆಯುತ್ತಾರೆ, ಅದನ್ನು ನಂಬಿ ಬಿಡುತ್ತೀರಾ ನೀವು? ಇವರು ಬರೆದಿರುವ ಕಾಗದದಲ್ಲಿ ಕ್ಲಿಯರ್ ಆಗಿದೆ. ಇದಕ್ಕೆ ಉತ್ತರ ಕೂಡಾ ಆ ಮನುಷ್ಯ ಕೊಟ್ಟಿಲ್ಲ.

ಶ್ರೀ ಹೆಚ್.ಡಿ. ದೇವೇಗೌಡ : ಚಿಕ್ಕಮಗಳೂರು ಆಸ್ಪತ್ರೆಗೆ ಒಬ್ಬ ಶಾಸಕರು ಭೇಟಿ ಕೊಡಬಾರದೆಂದು ನಾನು ಹೇಳಿಲ್ಲ, ಅಲ್ಲಿಗೆ ಪತ್ರಿಕಾ ಸ್ನೇಹಿತರು ಬಂದಿದ್ದರೆಂದು ಅವರೇ ಒಪ್ಪಿಕೊಂಡಿದ್ದಾರೆ. ಸುಕ್ಕು ಕಟ್ಟಿದ ಹಾಸಿಗೆ, ದಿಂಬು, ಸ್ವಚ್ಛತೆಯನ್ನು ಕಾಪಾಡದಿದ್ದರೆ ಜನವರಿ 16ರಂದು ಬೀಗ ಮುದ್ರೆ. ದಿಡೀರ್ ಭೇಟಿ ನೀಡಿದ ವಿಧಾನ ಸಭೆಯ ವಿರೋಧ ಪಕ್ಷದ ಮುಖಂಡ ಬಿ.ಎಸ್. ಯಡಿಯೂರಪ್ಪನವರು ದುಸ್ಥಿಗಳ ಬಗ್ಗೆ ಕಿಡಿ ಕಾರಿದ್ದು, 16ರ ಒಳಗಾಗಿ ಪರಿಸ್ಥಿತಿ ಸುಧಾರಿಸದಿದ್ದಲ್ಲಿ ಆಸ್ಪತ್ರೆಗೆ ಬಿ.ಜೆ.ಪಿ. ಬೀಗ ಹಾಕಲಿದೆಯೆಂದು ಎಚ್ಚರಿಸಿದರು. ಇದನ್ನು ಪತ್ರದಲ್ಲೇ ಬರೆದಿದ್ದೇನೆಂದು ತಾವು ಹೇಳಿದ್ದೀರಲ್ಲಾ? ತಮ್ಮಷ್ಟು ಅನುಭವ ನನಗಿಲ್ಲ. ಈ ಸದನದಲ್ಲಿ.

(ಗೊಂದಲ)

ಶ್ರೀ ಹೆಚ್.ಎನ್. ನಂಜೇಗೌಡ : ನನ್ನ ಕ್ರಿಯಾಲೋಪ ಏನೆಂದರೆ, ಸನ್ಮಾನ್ಯ ಮುಖ್ಯ ಮಂತ್ರಿಗಳು, ವಿರೋಧ ಪಕ್ಷದ ನಾಯಕರ ಕಾಗದವನ್ನು ಓದತಕ್ಕಂಥ ಕಾಲದಲ್ಲಿ ಲಕ್ಷ್ಮಣ ಶೂರ್ಪಣಕಿಗೆ ಮಾಡಿದ ಕೆಲಸವನ್ನು ಮಾಡುತ್ತಿದ್ದಾರೆ. ಮೂಗು

ಕುಯಿದು, ಕಿವಿ ಕುಯಿದು, ತಲೆ ಕುಯಿದರು ಅಂತ ಹೇಳಿ, ಪತ್ರ ಓದಿದರೆ ಪೂರ್ತಾ ಓದಬೇಕು ಇಲ್ಲ ಅರ್ಥ ಬರುವ ಹಾಗೆ ಓದಬೇಕು. ಅರ್ಥವನ್ನು ಅಪಾರ್ಥ ಮಾಡಿಕೊಳ್ಳುವ ಹಾಗೆ ಎರಡು ಲೈನ್ ನಿಲ್ಲಿಸಿಬಿಟ್ಟರೆ ಹೇಗೆ?

ಶ್ರೀ ಆರ್.ಎಲ್. ಜಾಲಪ್ಪ : ಅವರು ಓದುತ್ತಿರುವುದು ಆಫೀಸರ್ ಬರೆದಿರುವ ಪತ್ರವನ್ನು.

ಶ್ರೀ ಹೆಚ್.ಡಿ. ದೇವೇಗೌಡ : ನೀವು ಮುಖ್ಯ ಮಂತ್ರಿಗಳಾದರೆ, ವಿರೋಧಿ ಪಕ್ಷದ ನಾಯಕರಿಗೆ ಇನ್ನೊಂದು ಪ್ಯಾರಲಲ್ ಗೌರ್ನಮೆಂಟ್ ರನ್ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟರೆ, ನಾನೂ ಸಹ ಎಲ್ಲಾ ನಿಯಮಗಳನ್ನು ತಿದ್ದುಪಡಿ ಮಾಡುತ್ತೇನೆ. ನನ್ನದೇನು ತಕರಾರಿಲ್ಲ....

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ನನ್ನದಿಷ್ಟೇ, ನಾನು ಚಿಕ್ಕಮಗಳೂರು ಆಸ್ಪತ್ರೆಗೆ ಹೋಗಿದ್ದುದು ನಿಜ. ಅಧಿಕಾರಿಗಳೂ ಇದ್ದರು, ಪತ್ರಕರ್ತರೂ ಇದ್ದರು. ಅಲ್ಲಿನ ಅವ್ಯವಸ್ಥೆ ನೋಡಿದ ಮೇಲೆ ಇನ್ನು 3 ದಿವಸಗಳ ಒಳಗಡೆ ವ್ಯವಸ್ಥೆಯನ್ನು ಸರಿಪಡಿಸದಿದ್ದರೆ ಆಸ್ಪತ್ರೆಗೆ ಬೀಗ ಹಾಕಿ ಜನರ ಹತ್ತಿರ ಭಿಕ್ಷೆ ಬೇಡಿಕೊಂಡು ಬಂದು ಬೆಡ್ಶೀಟ್, ಹಾಸಿಗೆ ಹಾಕಿ, ಕಾರ್ಯಕರ್ತರೇ ಎಲ್ಲವನ್ನೂ ಕ್ಲೀನ್ ಮಾಡಿ ಮಾಡುತ್ತೇವೆಂದು ಅಧಿಕಾರಿಗಳಿಗೆ ಹೇಳಿದ್ದೇವೆ. ಇದರಿಂದ ತಮ್ಮ ಗೌರವ ಜಾಸ್ತಿ ಆಯಿತೋ ಕಡಿಮೆ ಆಯಿತೋ? ಯಾವುದೇ ಸರ್ಕಾರ ಇದ್ದರೂ ನಿಮ್ಮಂಥ ಅಧಿಕಾರಿಗಳಿಂದ ಕೆಟ್ಟ ಹೆಸರು ಬರುತ್ತದೆ, ಸ್ವಚ್ಛ ಮಾಡಿ. ಹಾಸಿಗೆ ಇದೆ ಮತ್ತು ಬೆಡ್ಶೀಟ್ ಇದೆ ಎಂದು ಅದನ್ನು ಮುಚ್ಚಿಡುವುದಕ್ಕಲ್ಲ ಇರುವುದು, ಇಷ್ಟು ಹೇಳಿ ಅದರ ಬಗ್ಗೆ ಸಂಬಂಧಪಟ್ಟ ಹೆಲ್ತ್ ಮಿನಿಸ್ಟರ್ರವರಿಗೆ ಪತ್ರ ಬರೆದಿದ್ದೇನೆ. ಇದರಲ್ಲಿ ಏನು ತಪ್ಪಿದೆ?

ಶ್ರೀ ಜೆ.ಹೆಚ್. ಪಟೇಲ್ : ಬಹಳ ಆಯಿತು ಸ್ವಾಮಿ, ನಾವೇನೂ ಉತ್ತರ ಕೊಡಬೇಕ? ತಾವು ರಕ್ಷಣೆ ಕೊಡದಿದ್ದರೆ ಆಗುವುದಿಲ್ಲ.

ಅವರು ಎತ್ತಿರತಕ್ಕಂಥ ಪ್ರತಿಯೊಂದು ವಿಷಯಕ್ಕೂ ಉತ್ತರ ಕೊಡುವುದಕ್ಕೆ ನಾವು ತಯಾರಾಗಿದ್ದೇವೆ. ಅವರು ಸಮಾಧಾನವಾಗಿ ಕುಳಿತುಕೊಂಡು ಕೇಳಲಿ. ನಾವು ಕೂಡ ಅವರು ಹೇಳಿದ್ದನ್ನು ಸುಮಾರು ಎರಡು ಗಂಟೆಗಳ ಕಾಲ ಕೇಳಿದ್ದೇವೆ. ನಮಗೆ ಈ ತರಹದ ಕಲಾಪಗಳಲ್ಲಿ ಭಾಗವಹಿಸಿದ ಅನುಭವ ನಮಗೆ ಸಾಕಷ್ಟು ಇದೆ. ನಾನು ಅವರನ್ನು ಅತ್ಯಂತ ಗೌರವದಿಂದ ಕೇಳಿಕೊಳ್ಳುತ್ತೇನೆ. ನಮ್ಮ ನಾಯಕರು ಉತ್ತರ ಕೊಡುವಾಗ ಅವರು ಮಧ್ಯದಲ್ಲಿ ದಯಮಾಡಿ ತೊಂದರೆ ಉಂಟು ಮಾಡಬಾರದು. ಇದೇನು ಕ್ರಾಸ್ ಎಕ್ಸಾಮಿನೇಶನ್ ಆಗಿದೆಯೇ? Is it a court of law?

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಪಟೇಲ್‌ರು ಈ ಕಡೆಯಿಂದ ಕುಳಿತುಕೊಂಡಿದ್ದಾಗ ಯಾವರೀತಿಯಾಗಿ ಮಾತನಾಡುತ್ತಿದ್ದರು ಎಂಬುದು ನಾನು ಹೇಳಬೇಕಾಗಿದೆಯೇ.....

ಶ್ರೀ ಹೆಚ್.ಡಿ. ದೇವೇಗೌಡ : ಮಾನ್ಯ ಹಿರಿಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ನೀವು ಇಲ್ಲಿ ಕುಳಿತಿರುವಾಗ ಎಷ್ಟು ಮತ್ತು ಯಾವ ರೀತಿಯಲ್ಲಿ ಗಲಾಟೆ ಮಾಡುತ್ತಿದ್ದೀರಿ ಎಂದು ಹೇಳಿದರು ನಾವು ಎಷ್ಟು ಪರಿಣಾಮಕಾರಿಯಾಗಿ ಮಾತನಾಡುತ್ತಿದ್ದೆವು....

ಶ್ರೀ ವಾಟಾಳ್ ನಾಗರಾಜ್ : ನಾನು ನೀವು ಗಲಾಟೆ ಮಾಡಿದ್ದೀರಿ ಎಂದು ಹೇಳಿದ್ದಲ್ಲ, ನಿಮ್ಮ ಮಾತುಗಳ ಧಾಟಿಯಲ್ಲಿ ಸರಕಾರವನ್ನು ಚುಚ್ಚಿ, ಬಿಚ್ಚಿ, ಎಳೆ ಎಳೆಯಾಗಿ ಹೇಗೆ ಬಹಿರಂಗ ಮಾಡುತ್ತಿದ್ದಿರಿ ಎಂದು ಹೇಳಿದೆ.

ಶ್ರೀ ಹೆಚ್.ಡಿ. ದೇವೇಗೌಡ : ನಾವು ಅಲ್ಲಿ ಕುಳಿತು ಕೆಲಸ ಮಾಡುತ್ತಿರುವಾಗ ಯಾವ ಕೆಲಸಕ್ಕಾಗಿ ನಾನು ತಪಾಸಣೆಗೆ ಹೋಗುತ್ತೇನೆ, ಅಲ್ಲಿಗೆ ಅಧಿಕಾರಿಗಳು ಬರಬೇಕು ಎಂದು ಅರ್ಜಿ ಹಾಕಲಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಅಧಿಕಾರಿಗಳು ಬರಬೇಕೆಂದು ಅರ್ಜಿ ಹಾಕಲಿಲ್ಲ, ಅವರು ಬರಬೇಕೆಂದು ಆದೇಶವನ್ನು ಕೊಟ್ಟಿದ್ದೇನೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವು ಅರ್ಜಿ ಹಾಕಿದ್ದೀರಿ ಎಂದು ಹೇಳುತ್ತಿದ್ದೀರಿ? ಇದು ಸರಿಯೇ? ವಿರೋಧಪಕ್ಷದ ನಾಯಕನಾಗಿ ನನಗೂ ಕೆಲವು ಹಕ್ಕುಗಳು ಇವೆ.

(ಗೊಂದಲ)

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು. ತಾವು ನಿಯಮಾವಳಿ 60ರ ಕೆಳಗೆ ನಿಲುವಳಿ ಸೂಚನೆಯನ್ನು ಸಜೆಸ್ಟ್ ಮಾಡಿದ್ದೀರಿ. ನಿಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮಾತನಾಡಿ, ಬಹಳ ಗಂಭೀರವಾದ ವಿಷಯ ಎಂದು ಹೇಳಿದ್ದೀರಿ ಎನ್ನುವ ದೃಷ್ಟಿಯಿಂದ ನಿಯಮ 159ರ ಕೆಳಗೆ ತೆಗೆದುಕೊಂಡಿದ್ದೇವೆ. 3-50 ನಿಮಿಷಗಳ ಕಾಲ ನಾವು ಈ ವಿಚಾರಕ್ಕೆ ವಿನಿಯೋಗ ಮಾಡಿದ್ದೇವೆ. ಪಾರ್ಲಿಮೆಂಟರಿ ಪ್ರಜಾಪ್ರಭುತ್ವವಲ್ಲಿ ಒಂದು ವಿಷಯವನ್ನು ಚರ್ಚೆ ಮಾಡುವಾಗ ನೀವು ಚುಚ್ಚತಕ್ಕಂಥದ್ದು, ಹಂಗಿಸ ತಕ್ಕಂಥಾದ್ದು, ಒಂದು ಮಾತು ಹೇಳತಕ್ಕಂಥಾದ್ದು ಅವರಿಗೆ ಚಾಟಿಯಲ್ಲಿ ಹೊಡೆಯತಕ್ಕಂಥಾದ್ದು ನಿಮ್ಮ ಕರ್ತವ್ಯ ಅದನ್ನು ನೀವು ಮಾಡುತ್ತೀರಿ. ಹಾಗೆಯೇ ಅವರು ಉತ್ತರ ಹೇಳತಕ್ಕಂಥ ಸಂದರ್ಭದಲ್ಲಿ ಅಲ್ಲೊಂದು ಇಲ್ಲೊಂದು ಮಾತು ಆಡುತ್ತಾರೆ. ಅವರು ಇದ್ದಾರೋ ಇಲ್ಲವೋ ಎನ್ನುವ ರೀತಿಯಲ್ಲಿ ತಾವು ಎರಡು ಗಂಟೆಗಳ ಕಾಲ ಮಾತನಾಡಿದಾಗ, ಅವರುಗಳು ನಿಶ್ಶಬ್ಧವಾಗಿ ಕುಳಿತಿದ್ದರು ಒಂದು ಮಾತನ್ನು ಕೂಡ ಎತ್ತಲಿಲ್ಲ. ನೀವು ಕೂಡ ಅದಕ್ಕೆ ಸ್ಪಂದಿಸಬೇಕು. ನೀವು ಹೇಳಿದಾಗ ಅವರು ಸುಮ್ಮನೆ ಅನ್ನಿಸಿಕೊಳ್ಳಬೇಕು ಅವರು ಉತ್ತರ ಕೊಡುವಾಗ ಅದನ್ನು ಕೇಳುವ ತಾಳ್ಮೆ ನಿಮಗೆ ಇಲ್ಲ ಅಂದರೆ ಹೇಗೆ? ಹೀಗೆ ಅವರಿಗೆ ಉತ್ತರ ಕೊಡಲು ಅವಕಾಶ ಕೊಡದೇ ಹೋದರೆಂದು ಅಷ್ಟು ಚೆನ್ನಾಗಿ ಇರುವುದಿಲ್ಲ. ಮುಖ್ಯ ಮಂತ್ರಿಯವರಿಗೆ ಉತ್ತರ ಕೊಡುವುದಕ್ಕೆ ಅವಕಾಶ ಕೊಡಿ. ಅವರ ಉತ್ತರವು ಸಮರ್ಪಕವಾಗಿ ಇಲ್ಲದೇ ಹೋದರೆ ನೀವ ಪ್ರಸ್ತಾಪ ಮಾಡಿರತಕ್ಕಂಥ ವಿಚಾರಗಳನ್ನು, ಅವರು ಗಣನೆಗೆ ತೆಗೆದುಕೊಂಡು ಪ್ರಸ್ತಾಪ ಮಾಡದೆ ಉತ್ತರ ಕೊಟ್ಟರೆ ಅನಂತರ ಏನು ಮಾಡಬೇಕೆಂಬುದನ್ನು ಆಲೋಚನೆ ಮಾಡೋಣ. ಆದ್ದರಿಂದ ದಯಮಾಡಿ ತಾವು ಸಹನೆಯಿಂದ ಸಹಕರಿಸಬೇಕು. ಎಲ್ಲರೂ ಒಂದೇ ಸಮನೆ ಎದ್ದು ನಿಂತು ಮಾತನಾಡುವಂಥದ್ದು ಏನೂ ಆಗಲಿಲ್ಲ. ಅಂಥ ಒಂದು ಟೆನ್ಷನ್ ಏನಾದರೂ ಇದ್ದಿದ್ದರೆ ಅಂಥ ಒಂದು ವಿಷಯ ಚರ್ಚೆ ಆಗುತ್ತಾ ಇದ್ದರೆ, ಅದರ ಮೂಲಕ ಸದನದಲ್ಲಿ ಅಂಥ ಒಂದು ಪರಿಸ್ಥಿತಿ ಉಂಟಾದರೆ ಪರವಾಗಿಲ್ಲ. ನಾನು ಮೊದಲನೇ ಸಲ ಈ ರೀತಿಯಾಗಿ ಎದ್ದು ನಿಂತುಕೊಂಡು ಮಾತನಾಡತಕ್ಕಂಥ ಸನ್ನಿವೇಶ ಬಂದಿದೆ. ನನಗೆ ದುಃಖ ಆಗಿದೆ. ನಾನು ಕುಳಿತುಕೊಂಡೇ ನಗುನಗುತ್ತಾ ತಮ್ಮೆಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕಲಾಪ ನಡೆಸುತ್ತಾ ಇರುತ್ತೇನೆ. ನಾನು ನಿಂತುಕೊಂಡು ತಮ್ಮನ್ನು

ಕೂರಿಸಬೇಕಾದಂಥ ಸನ್ನಿವೇಶಕ್ಕೆ ಮತ್ತೊಮ್ಮೆ ತಾವು ಯಾರೂ ಕೂಡ ಅವಕಾಶ ಮಾಡಿಕೊಡಬಾರದು.

ಶ್ರೀ ಬಿ. ಎಸ್. ಯಡಿಯೂರಪ್ಪ : ಸ್ವಾಮಿ, ಒಬ್ಬ ವಿರೋಧ ಪಕ್ಷದ ನಾಯಕರು ಅಧಿಕಾರಿಗಳಿಗೆ ಅರ್ಜಿ ಹಾಕಿದರು ಎಂದು ಹೇಳುವಂಥ ಮಟ್ಟಕ್ಕೆ ಮುಖ್ಯ ಮಂತ್ರಿಗಳು ಹೋದರೆ ನಮ್ಮ ಮನಸ್ಸಿಗೆ ನೋವು ಉಂಟಾಗುವುದಿಲ್ಲವೇ? ನಾವು ಮಾಡಿದ ಟೀಕೆ ಟಿಪ್ಪಣಿಗಳಿಗೆ ಅವರು ಏನು ಬೇಕಾದರೂ ಹೇಳಲಿ. ಆದರೆ ಅಧಿಕಾರಿಗಳಿಗೆ ಅರ್ಜಿ ಸಲ್ಲಿಸಿದರು ಎಂದು ಹೇಳಿರುವುದು ಸರಿಯೇ?

ಅಧ್ಯಕ್ಷರು : ಮಾನ್ಯ ವಿರೋಧಿ ಪಕ್ಷದ ನಾಯಕರು ದಯಮಾಡಿ ಕುಳಿತುಕೊಳ್ಳಿ. ತಾವು ಸನ್ಮಾನ್ಯ ವಾಟಾಳ್ ನಾಗರಾಜ್‌ರವರು, ನಂಜೇಗೌಡರು, ಮುಂತಾಗಿ ತಮ್ಮ ವಾಕ್ ಚಾತುರ್ಯವನ್ನು ಬಳಸಿ ಅನೇಕ ಮಾತುಗಳನ್ನು ಹೇಳಿದ್ದಾರೆ. ಈಗ ಅವರು ಅದಕ್ಕೆ ತಮ್ಮ ಉತ್ತರವನ್ನು ಕೊಡಲಿ. .... Try to raise the level of debate. Why do you get enraged? ದಯಮಾಡಿ ಸಭಾನಾಯಕರು ತಮ್ಮ ಮಾತನ್ನು ಮುಂದುವರಿಸಿ.

ಶ್ರೀ ಹೆಚ್. ಡಿ. ದೇವೇಗೌಡ : ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ, ತಮ್ಮ ಸಮ್ಮುಖದಲ್ಲಿ ಈ ಸದನದ ಎಲ್ಲಾ ಗೌರವಾನ್ವಿತ ಸದಸ್ಯರ ಸಮ್ಮುಖದಲ್ಲಿ ಹೇಳುತ್ತಾರೆ, ನಾನು ಅಧಿಕಾರಿಗಳಿಗೆ ಆದೇಶವನ್ನು ಕೊಡುತ್ತೇನೆ ಎಂದು. ಅದಕ್ಕಿಂತ ಹೆಚ್ಚು ವ್ಯಾಖ್ಯಾನವನ್ನು ನಾನು ಮಾಡುವುದಕ್ಕೆ ಹೋಗುವುದಿಲ್ಲ. ಅಧಿಕಾರಿಗಳಿಗೆ ಆದೇಶವನ್ನು ಕೊಡುವ ಅಧಿಕಾರ ಈ ಒಂದು ನಿಯಮಾವಳಿಗಳ ವ್ಯಾಪ್ತಿಯಲ್ಲಿ ವಿರೋಧಿ ಪಕ್ಷದ ನಾಯಕರಿಗೆ ಬರುತ್ತದೆ. ಅಂದರೆ the very system of democracy is going to be collapsed.

ದಯಮಾಡಿ ಹಿರಿಯ ಮುಖಂಡರು ಇದ್ದಾರೆ. ಅವರು ವಿರೋಧಿ ಪಕ್ಷದ ನಾಯಕರಾಗಿ ಲೋಕ ಸಭೆಯಲ್ಲಿ ಕೆಲಸ ಮಾಡುತ್ತಾ ಇದ್ದಾರೆ. ಅವರು ಅವರ ಪಕ್ಷದ ನಾಯಕರು. ಅಧಿಕಾರಿಗಳಿಗೆ ಆದೇಶ ಕೊಡುವ ಒಂದು ಅಥಾರಿಟಿಯನ್ನು ವಿರೋಧಿ ಪಕ್ಷದ ನಾಯಕರಿಗೆ ಕೊಟ್ಟಿರತಕ್ಕಂಥ ಸನ್ನಿವೇಶವು ಎಲ್ಲಾದರೂ ಇದ್ದರೆ ನಾನು ಅದನ್ನು ಅನುಕರಿಸುತ್ತೇನೆ. (ಕಾಪಿ ಮಾಡುತ್ತೇನೆ) ಅದಕ್ಕಿಂತ ನಾನು ಏನೂ ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಾವು ಹೇಳಿದ ಮಾತುಗಳ ಧಾಟಿ ಸರಿಯಲ್ಲ ಎಂದು ......

ಶ್ರೀ ಹೆಚ್. ಡಿ. ದೇವೇಗೌಡ : ನಾನು ಮಾತನಾಡುವ ಧಾಟಿಯೇ ಹೀಗೆ. ಏನು ಮಾಡಲಿ? ಸ್ವಾಮಿ ಇಲ್ಲಿ ಬಂದ ಮೇಲೆ ನಾನು ಒಂದು ಸೂಚನೆಯನ್ನು ಕೊಟ್ಟಿದ್ದೇನೆ. ನಾನು 1962ರಿಂದ 1983ರ ವರೆಗೆ ಅಲ್ಲಿ ಕುಳಿತು ಕೆಲಸ ಮಾಡಿದ್ದೇನೆ. ವಿರೋಧ ಪಕ್ಷದಲ್ಲಿದ್ದು ಕೊಂಡು ನಾನು ಎಂದೂ ಸರಕಾರಕ್ಕೆ ಯಾವ ನಿರ್ಣಯ ಮತ್ತು ಯಾವುದನ್ನು ತೆಗೆದುಕೊಂಡಿದ್ದೀರಿ ಎಂಬ ಬಗ್ಗೆ ಕೇಳಲಿಲ್ಲ. ಅವರು ಎಸ್ಟಿಮೇಟ್ 46 ಪರ್‌ಸೆಂಟ್‌ನಷ್ಟು ಜಾಸ್ತಿಯಾಗಿದೆ ಎಂದು ಹೇಳಿದ್ದಾರೆ. ಅದನ್ನು ಕೇಳಲು ನಿಮಗೆ ಎಸ್ಟಿಮೇಟ್ ಸಮಿತಿಯು ಇದೆ. ಸಮಿತಿ ಕರೆಯಿರಿ. ಕಳುಹಿಸುತ್ತೇವೆ. ಅದನ್ನು ಮಾನ್ಯ ಅಧ್ಯಕ್ಷರು ಅಪ್ಪಣೆ ಕೊಟ್ಟರೆ ಮಾಡಲು ತಯಾರಾಗಿದ್ದೇವೆ. ಅಧ್ಯಕ್ಷರು ಅಪ್ಪಣೆ ಕೊಡದೇ ನಾನು ಅದನ್ನು ಟೇಬಲ್ ಮೇಲೆ ಇಡುವುದಕ್ಕೆ ಆಗುವುದಿಲ್ಲ. that too unless you permit. ಪರೀಕ್ಷೆ ಮಾಡಿ, ಛೀಮಾರಿ ಹಾಕಿ, ತಪ್ಪು ಮಾಡಿದರೆ ಛೀಮಾರಿ ಹಾಕಿ ಯಾರು ಬೇಡ ಎಂದು ಹೇಳುತ್ತಾರೆ.

ಶ್ರೀ ಹೆಚ್.ಎನ್. ನಂಜೇಗೌಡ : ಅಧಿಕಾರಿಗಳಿಗೆ ಅರ್ಜಿ ಹಾಕಿದರು ಎಂಬುದು ಸರಿಯಲ್ಲ. ಏಕೆಂದರೆ ಅದು ಕಡತಕ್ಕೆ ಹೋಗುತ್ತದೆ. ಅದನ್ನು ಮುಂದಿನ ಜನಾಂಗದವರು ಓದಬಹುದು. ....

ಶ್ರೀ ಹೆಚ್. ಡಿ. ದೇವೇಗೌಡ : ಸಮಿತಿ ಕರೆಯಿರಿ. If the committee wants I cannot shell down my responsibility.

ಸಮಿತಿಯ ಮುಂದೆ ಬಂದಾಗ if the committee wants what I can do?

ಇಲ್ಲಿ ಇಡಬೇಕಾದರೆ ಅಧ್ಯಕ್ಷರು ಪರ್‌ಮಿಶನ್ ಕೊಡಬೇಕಾಗುತ್ತದೆ ಎಂದು ನಾನು ಹೇಳಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಹೇಳಿದ್ದಕ್ಕೆ ತಾವು ರಿಪ್ಲೈ ಕೊಡುತ್ತಾ ಇದ್ದೀರಿ, ಅದಕ್ಕೆ ನಮ್ಮ ಅಭ್ಯಂತರವೇನಿಲ್ಲ. ಅವರು ನಾನು ಆದೇಶ ಕೊಟ್ಟಿದ್ದೇನೆ ಎಂದು ಹೇಳಿದರು. ತಾವು ಅರ್ಜಿ ಹಾಕಿದ್ದಾರೆ ಎಂದು ಹೇಳಿದ್ದೀರಿ. ತಾವು ಹೇಳಿದ ಆ ಮಾತುಗಳ ಧಾಟಿಯು ಸರಿ ಇಲ್ಲ. ಯಾರೇ ಹೇಳಿದರೂ ಆ ಮಾತುಗಳ ಧಾಟಿಯು ಸರಿ ಇಲ್ಲ.....

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ವಿರೋಧಿ ಪಕ್ಷದ ನಾಯಕರು ಅರ್ಜಿ ಬರೆದುಕೊಟ್ಟರು ಎಂದು ಹೇಳುವುದು ಸರಿಯೇ? ಅಧಿಕಾರಿಗಳಿಗೆ ಅರ್ಜಿ ಬರೆದುಕೊಟ್ಟು ಇವರು ಹೋಗುವುದಕ್ಕೆ ಆಗುತ್ತದೆಯೇ? ಅವರೇನೂ ತಮ್ಮ ಮನೆಯ ಮುಂದೆ ಜನಸಂಪರ್ಕ ಸಭೆಯನ್ನು ಮಾಡುತ್ತಿಲ್ಲ. ಹಾಗೆ ಹೇಳುವುದಕ್ಕೂ ಒಂದು ಅರ್ಥ ಇರಬೇಕು.

ಶ್ರೀ ಹೆಚ್. ಡಿ. ದೇವೇಗೌಡ : ನೀವು ಹಾಗೆ ವ್ಯಾಖ್ಯಾನ ಮಾಡಿಕೊಳ್ಳಿ. ನಾನು ಅವರು ಅರ್ಜಿ ಹಾಕಬೇಕು ಎಂದು ಹೇಳಲಿಲ್ಲ. ನಾನು ಹೇಳಿರತಕ್ಕಂಥಾದ್ದು ಇದಕ್ಕೆ ಮಾನ್ಯ ಅಧ್ಯಕ್ಷರ ಅನುಮತಿ ಬೇಕು. ಹಾಗೆಯೇ ಫೈಲ್‌ಗಳನ್ನು ಸಭೆಯ ಮುಂದೆ ಇಡಲು ಹೇಗೆ ಸಾಧ್ಯ? Unless the Hon'ble Speaker permits I cannot place it on the table of the House. ಅಷ್ಟು ಹೇಳಿದ್ದೇನೆ. ಅದು ಪಬ್ಲಿಕ್ ಅಕೌಂಟ್ಸ್ ಕಮಿಟಿ ಇರಬಹುದು ಎಸ್ಟಿಮೇಟ್ ಕಮಿಟಿ ಇರಬಹುದು. ಮತ್ಯಾವುದೇ ಸದನದ ಸಮಿತಿಯು ಇರಬಹುದು. ಫೈಲ್ ಸಮನ್ ಮಾಡಿದರೆ ಆಗ ನಾನು ತಡೆ ಹಿಡಿಯುವುದಕ್ಕೆ ಆಗುವುದಿಲ್ಲ ಎಂದು ನಾನು ಹೇಳಿದ್ದೆ. ಇಲ್ಲಿ ಇಡಬೇಕಾದರೆ ಮಾನ್ಯ ಸಭಾಧ್ಯಕ್ಷರ ಅನುಮತಿ ಮತ್ತು ಅಪ್ಪಣೆ ಬೇಕಾಗುತ್ತದೆ ಎಂದು ಹೇಳಿದ್ದೇನೆ. ಅರ್ಜಿ ಹಾಕಬೇಕೆಂದು ನಾನು ಎಂದೂ ಹೇಳಲಿಲ್ಲ.

(ಗೊಂದಲ)

ಶ್ರೀ ಹೆಚ್.ಎನ್. ನಂಜೇಗೌಡ : ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದರು ಅಂದರೆ, "ನಾನು ವಿರೋಧ ಪಕ್ಷದ ನಾಯಕನಾಗಿದ್ದಾಗ, ಇವರ ಹಾಗೆ ಅಧಿಕಾರಿಗಳಿಗೆ ಅರ್ಜಿ ಹಾಕುತ್ತಿರಲಿಲ್ಲ" ಎಂದರು.

ಶ್ರೀ ವಾಟಾಳ್ ನಾಗರಾಜ್ : ಒಂದು ಮಾತು. ನನ್ನನ್ನು ಕುರಿತು ನಾನು ವಿರೋಧಿ ಪಕ್ಷದ ನಾಯಕರಾಗಿದ್ದಾಗ ವಾಟಾಳ್ ನಾಗರಾಜ್‌ರವರು ಮಾತನಾಡಿದ್ದರು. ನಾನು ವಿರೋಧಿ ಪಕ್ಷದ ನಾಯಕನಾಗಿದ್ದಾಗ ಯಾವ ಅಧಿಕಾರಿಗಳಿಗೂ ಅರ್ಜಿ ಹಾಕಲಿಲ್ಲ ಎಂದು ಹೇಳಿದರೆ ಅದರ ಅರ್ಥ ಏನು?

ಶ್ರೀ ಜೆ. ಹೆಚ್. ಪಟೇಲ್ : ಮಾನ್ಯ ಮುಖ್ಯ ಮಂತ್ರಿಯವರು ಮಾತನಾಡುವಾಗ ನಾನು ವಿರೋಧಿ ಪಕ್ಷದಲ್ಲಿ 1962ರಿಂದ 1983ರ ವರೆಗೆ ಕೆಲಸ ಮಾಡಿದ್ದೆ. ನಾನು

ಯಾರಿಗೂ ಯಾವ ಆದೇಶವನ್ನೂ ಕೊಟ್ಟಿಲ್ಲ, ಹಾಗೂ ಯಾರಿಗೂ ಯಾವ ಅರ್ಜಿಯನ್ನು ಹಾಕಿಲ್ಲ ಎಂದು ಹೇಳಿದರು. ತಾವು ಈಗ ಅದೇ ಎತ್ತರದಲ್ಲಿ ವಿಚಾರ ಮಾಡಿ. ವಿರೋಧ ಪಕ್ಷದ ನಾಯಕರು ಆದೇಶ ಕೊಡುವ ಹಾಗೂ ಇಲ್ಲ ಅಥವಾ ಅರ್ಜಿಯನ್ನು ಹಾಕುವ ಅವಶ್ಯಕತೆಯೂ ಇಲ್ಲ.

ಶ್ರೀ ಎಚ್. ಡಿ. ದೇವೇಗೌಡ : ನೀವು ವಿರೋಧ ಪಕ್ಷದ ನಾಯಕರಾಗಿ ಕೆಲಸ ಮಾಡಿದ್ದೀರಿ. ನೀವು ಯಾವುದಾದರೂ ಸಂದರ್ಭದಲ್ಲಿ ಸರ್ಕಾರಕ್ಕೆ ಇಂತಹ ಆರ್ಡರ್ ಕಾಪಿ ಕೊಡಿ ಎಂದು ಬರೆದಿರುವ ಒಂದು ನಿದರ್ಶನ ನನಗೆ ಗೊತ್ತಿಲ್ಲ. ನೀವು ಹಲವಾರು ವಿಷಯ ಮಂಡನೆ ಮಾಡಿದಿರಿ. ಉದಾಹರಣೆಗೆ ಹೇಳುವುದಾದರೆ ಹೇಮಾವತಿ ಪ್ರಾಜೆಕ್ಟಲ್ಲಿ ಒಂದು ವಿಷಯವನ್ನು ಪಬ್ಲಿಕ್ ಅಕೌಂಟ್ಸ್ ಕಮಿಟಿ ಚೇರ್ಮನಾಗಿ ನ್ಯಾಯಾಂಗ ತನಿಖೆ ಮಾಡಬೇಕೆಂದು ಸರ್ಕಾರಕ್ಕೆ ಇಂಡಿಕ್ಟ್ ಮಾಡಿದ್ದೀರಿ. That is the right and powers of the Committee. ನಾನಲ್ಲ ಯಾವನೇ ಇದ್ದರೂ ಒಪ್ಪಿಕೊಳ್ಳಬೇಕು and within 24 hours the Government will have to submit files, to the Committee. ತಾವು ಆ ಸ್ಥಾನದಲ್ಲಿ ಕುಳಿತು ಕೆಲಸ ಮಾಡಿದ್ದೀರಿ, ಸರ್ಕಾರಕ್ಕೆ ನೀವು ಯಾವಾಗಲಾದರೂ ಆ ರಿಪೋರ್ಟ್ ಕೊಡಿ. ಎಂದು ಕೇಳಲಿಲ್ಲ. ಕಮಿಟಿಗೆ ಪವರ್ಸ್ ಇದೆ, ಎಲ್ಲ ಅಥಾರಿಟಿ ಇದೆ ನಿಮಗೆ ಕೇಳಲು ಒಂದೇ ಒಂದು ನಾನು ಕೊಟ್ಟಂತಹ ಸೂಚನೆ ಎಂದರೆ, ಕರ್ನಾಟಕ ವಿಧಾನ ಸಭೆ ಮತ್ತು ವಿಧಾನ ಪರಿಷತ್ತಿನ ಸನ್ಮಾನ್ಯ ವಿರೋಧ ಪಕ್ಷಗಳ ನಾಯಕರುಗಳಿಗೆ ಸಂಪುಟ ದರ್ಜೆ ಸಚಿವರ ಸ್ಥಾನಮಾನ ನೀಡಿದ್ದರೂ ಕೂಡ ಅವರುಗಳ ಪ್ರವಾಸ ಸಮಯದಲ್ಲಿ ಸರ್ಕಾರದಲ್ಲಿ ಅಧಿಕಾರಿಗಳು ಅವರೊಡನೆ ಹೋಗಬೇಕಾದ ವಿಷಯದ ಬಗ್ಗೆ ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಲಾಗಿದೆ. ವಿಧಾನ ಸಭೆಯ ವಿಧಾನ ಪರಿಷತ್ತಿನ ವಿರೋಧ ಪಕ್ಷಗಳ ನಾಯಕರ ಪ್ರವಾಸ ಸಮಯದಲ್ಲಿ ಅವರ ಜೊತೆ ಸರ್ಕಾರದ ಯಾವುದೇ ಇಲಾಖಾ ಅಧಿಕಾರಿಗಳು ಹೋಗುವ ಅವಶ್ಯಕತೆ ಇಲ್ಲ ಎಂಬ ಈ ಮಾತು ಹೇಳಿದ್ದೇನೆ. ನಾನು ನೀವು ಹೋಗುವುದು ಬೇಡ ಎಂದು ಹೇಳಿದ್ದೇನೆಯೇ? ನೀವು ಇಡೀ ರಾಜ್ಯದಲ್ಲಿ ಪ್ರವಾಸ ಮಾಡಿ ಸರ್ಕಾರ ನಡೆಸುವ ಅವ್ಯವಹಾರಗಳನ್ನು ಸಂಘಟನೆ ಮಾಡಿಕೊಳ್ಳಿ ಮಾಹಿತಿ ಕಲೆಕ್ಟ್ ಮಾಡಿಕೊಳ್ಳಿ. ನಾವ್ಯಾರು ನಿಮ್ಮನ್ನು ಪ್ರಿವೆಂಟ್ ಮಾಡಲಿಕ್ಕೆ. ಆಫೀಸರ್ ಗಳು ಟೂರ್‌ನಲ್ಲಿ ಅವರು ಕರೆದ ಕಡೆ ಹೋಗುವುದಕ್ಕಾಗುವುದಿಲ್ಲ. ಇಲ್ಲಿಗೆ ನೀವು ಬರಬೇಕು ನಾನು ಇನ್‌ಸ್ಪೆಕ್ಷನ್‌ಗೆ ಹೋಗುತ್ತೇನೆ ಎಂದು ಬರೆದಂತಹ ಕಾಲದಲ್ಲಿ ನನಗೆ ಮುಖ್ಯ ಕಾರ್ಯದರ್ಶಿಯವರು ಅವರ ಆಪ್ತ ಕಾರ್ಯದರ್ಶಿ ಬರೆದ ಕಾಗದವನ್ನು ನನ್ನ ಮುಂದೆ ತಂದಿಟ್ಟರು. ನಾನು ಹೇಳಿದೆ ಹೋಗಬೇಕಾದ ಅವಶ್ಯಕತೆ ಇಲ್ಲ, ಅವರಿಗೆ ಈ ಸದನದಲ್ಲಿ ಬೇರೆ ಅಧಿಕಾರ ಇದೆ, ಅದನ್ನು ಅವರು ಚಲಾಯಿಸಲಿ, ಸರ್ಕಾರದಲ್ಲಿ ಯಾವುದೇ ಮಾಹಿತಿ ಕೊಡಬೇಕಾದರೆ ಸದನದಲ್ಲಾದರೆ ನಿಮ್ಮ ಅನುಮತಿಯಿಂದ ಕೊಡುತ್ತೇವೆ, ಕಮಿಟಿಯಲ್ಲಾದರೆ ಅವರೇ ತರಿಸಿಕೊಳ್ಳಲು ಅಡ್ಡಿ ಇಲ್ಲ. ಇದು ಬಿಟ್ಟು ಬೇರೇನೂ ಇಲ್ಲ. ಸನ್ಮಾನ್ಯ ಅಧ್ಯಕ್ಷರೇ, ನಾನೇನೂ ಹೊಸ ಸಂಪ್ರದಾಯವನ್ನು ಹಾಕಬೇಕೆಂದಿಲ್ಲ. ನಮಗಿಂತ ಮುಂಚೆ 13-14 ಮುಖ್ಯ ಮಂತ್ರಿಗಳು ಇಲ್ಲ ಬಂದು ಹೋಗಿದ್ದಾರೆ. ಇಲ್ಲಿ ನಾವೇ ಶಾಶ್ವತವಾಗಿ

ಇರಲಿಕ್ಕೆ ಸಾಧ್ಯವಿಲ್ಲ. ಈ ಸದನದ ನಿಯಮಾವಳಿಗಳ ಚೌಕಟ್ಟಿನಲ್ಲಿ ನೀವೇನು ಕೊಡಬೇಕೆಂದು ಹೇಳಿದರೆ ಅದು ಸದನದ ತೀರ್ಮಾನ. ಕರೆಯಿಸಿ ಮಾತನಾಡಿ. ಶ್ರೀಮಾನ್ ವೀರಪ್ಪ ಮೊಯಿಲಿಯವರು ಎಲ್ಲಾ ಮುಖಂಡರೊಡನೆ ಸಮಾಲೋಚನೆ ಮಾಡಿ ಬೇಕಾದರೆ ಒಂದು ನಿರ್ಧಾರಕ್ಕೆ ಬನ್ನಿ ಎಂದು ಹೇಳಿದ್ದಾರೆ. ಇಡೀ ಹಿಂದೂಸ್ಥಾನದಲ್ಲಿ ಎಲ್ಲಾ ವಿಧಾನಸಭೆಗಳಲ್ಲೂ ವಿರೋಧ ಪಕ್ಷದ ನಾಯಕರುಅಥವಾ ಸಭಾನಾಯಕರು ಯಾರ್ಯಾರ ಅಧಿಕಾರವ್ಯಾಪ್ತಿ ಏನೇನಿರಬೇಕೆಂಬ ಬಗ್ಗೆ, ನಾನು ಅವರಿಗೆ

ಇವತ್ತು ಹೇಳಿದೆ, 8 ರಾಜ್ಯಗಳಲ್ಲಿ ಅವರಿಗೆ ಶಕ್ತಿ ಇದೆ ಎಂದು, ದಯಮಾಡಿ ಈ ವಿಷಯದ ಬಗ್ಗೆ ಕೂಲಂಕಷವಾಗಿ ಎಲ್ಲ ಮಾಹಿತಿಗಳನ್ನು ಬೇರೆ ಬೇರೆ ರಾಜ್ಯಗಳಲ್ಲಿ ಸನ್ನಿವೇಶ ಹೇಗಿದೆ ಎಂದು ತರಿಸಿಕೊಳ್ಳಲಿ, ನನಗೆ ತಿಳಿದಹಾಗೆ, ಈ ಸದನದ ಕಾರ್ಯಕಲಾಪಗಳ ಅನುಭವದ ಹಿನ್ನೆಲೆಯಲ್ಲಿ ನನ್ನ ಪ್ರಕಾರ ಈ ತರಹ ಕೋರಿಕೆಗಳನ್ನು ಸರ್ಕಾರದ ನಡವಳಿಕೆಗಳನ್ನು ಕೊಡುವುದು ಕಷ್ಟವಾಗುತ್ತದೆ ಅನ್ನುವ ನನ್ನ ಅಭಿಪ್ರಾಯವನ್ನು ಮಂಡನೆ ಮಾಡಿದ್ದೇನೆ. ಇದಕ್ಕಿಂತ ಹೆಚ್ಚಿಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಅಧ್ಯಕ್ಷರೇ, ನಾನು ತಮ್ಮಿಂದ ನೇರವಾಗಿ ನಮಗೆ ರಕ್ಷಣೆ ಕೊಡಬೇಕು ಮತ್ತು ಮುಂದೆ ಏನು ಮಾಡಬೇಕೆಂದು ತಿಳಿಸಬೇಕು. ಮುಖ್ಯಮಂತ್ರಿಗಳದು ಬಹಳ ಸ್ಪಷ್ಟವಾಗಿದೆ. ಯಾವುದೇ ದಾಖಲೆ ನಮಗೆ ಬೇಕಾದರೆ ತಮ್ಮ ಮೂಲಕ ಅವರು ಕೊಡುವುದಕ್ಕೆ ಸಿದ್ಧವಿದ್ದಾರೆ, ತಾವು ಅಪ್ಪಣೆ ಕೊಟ್ಟರೆ. ಆದ್ದರಿಂದ ತಾವು ಆ ಚೇರನಲ್ಲಿ ಕೂತು ಇನ್ನು ಮುಂದೆ ನಮಗೆ ಯಾವುದೇ ದಾಖಲೆ ಬೇಕಾದರೆ ಯಡಿಯೂರಪ್ಪನ ಪ್ರಶ್ನೆಯಲ್ಲ ಈ ಸದನದಲ್ಲಿ ಆ ಕಡೆ ಈ ಕಡೆ ಇರಬಹುದು ಯಾವುದೇ ಶಾಸಕರು ಸರ್ಕಾರದ ದಾಖಲೆ ಬೇಕಾದರೆ ನಾವು ಯಾವುದೇ ಅಧಿಕಾರಿಗೆ ಇನ್ನು ಮುಂದೆ ಪತ್ರ ಬರೆಯುವುದಿಲ್ಲ. ತಾವು ಇದು ಸರಿ, ಅದೇ ಪದ್ಧತಿ ಅನ್ನುವುದಾದರೆ ನಿಮಗೇ ಪತ್ರ ಬರೆಯುತ್ತೇವೆ. ಸೂಕ್ತವಾಗಿ ದಾಖಲೆ, ಇದನ್ನು ಕೊಡಿಸಬಹುದು ಅಂತ ನಿಮಗೆ ಮನವರಿಗೆಯಾದರೆ ಕೊಡಿಸಿ ಇಲ್ಲಾಂದರೆ ಕೊಡಿಸುವುದಕ್ಕೆ ಬರುವುದಿಲ್ಲ ಎಂದು ಹೇಳಿ. ಎರಡನೆಯದು ಮುಖ್ಯಮಂತ್ರಿಗಳು ಹೇಳಿದರು ವಿರೋಧ ಪಕ್ಷದ ನಾಯಕರು ಹೋದಾಗ ಅಧಿಕಾರಿಗಳು ಅವರ ಜೊತೆ ಬರುವಂತಹ ಅಗತ್ಯ ಇಲ್ಲ, ಆದೇಶ ಕೊಟ್ಟಿದ್ದೇನೆ. ಆದ್ದರಿಂದ ಇನ್ನು ಮುಂದೆ ನಾನು ವಿರೋಧ ಪಕ್ಷದ ನಾಯಕನಾಗಿ ಎಲ್ಲೋ ಒಂದು ಸ್ಥಳದಲ್ಲಿ ಒಂದು ಹಾಸ್ಟೆಲ್ ನೋಡುವುದಕ್ಕೆ ಹೋಗುತ್ತೇನೆ. ಆಗ ಅಧಿಕಾರಿ ಕರೆಸಬೇಕು. ಇಲ್ಲಿ 15 ಜನರಿದ್ದಾರೋ 20 ಜನರಿದ್ದಾರೋ ವ್ಯವಸ್ಥೆ ಏನು ಅಂತ ಒಂದು ಆಸ್ಪತ್ರೆಗೆ ಹೋಗುತ್ತೇನೆ. ಅಲ್ಲಿ ಅವ್ಯವಸ್ಥೆ ಇದೆ, ಅಧಿಕಾರಿಯನ್ನು ಕರೆಸಬೇಕಾಗುತ್ತದೆ ಏನಾಗಿದೆ, ಏನಿಲ್ಲ ಅಂತ ಒಂದು ಜಿಲ್ಲೆಗೆ ಹೋಗುತ್ತೇನೆ. ಅಲ್ಲಿ ಅಭಿವೃದ್ಧಿ ಚಟುವಟಿಕೆ ಹೇಗಿದೆ ಎಂದು ನೋಡುವುದಕ್ಕಾಗಿ, ಇಲ್ಲಿ ವಿರೋಧ ಪಕ್ಷದ ನಾಯಕರು ಸಭೆ ಕರೆದು ಮಾಹಿತಿ ನೀಡುತ್ತಿದ್ದರು, ಒಂದೂವರೆ ತಿಂಗಳು ನಾನು ವಿರೋಧಪಕ್ಷದ ನಾಯಕನಾಗಿ ಪ್ರವಾಸ ಮಾಡಿದಾಗ ಎಲ್ಲಾ ಕಡೆಯೂ ಮಾಹಿತಿ ಕೊಟ್ಟರು. ಸಭೆಯಲ್ಲಿ ಸೇರಿ ಸಲಹೆ ಕೊಡುತ್ತಿದ್ದರು ಇದಾಗಿದೆ ಇದಾಗಿಲ್ಲ ಎಂದು. ಇವತ್ತಿನಿಂದ ಮುಖ್ಯಮಂತ್ರಿಗಳ ಅಭಿಪ್ರಾಯವೇ ಸರಿ ಎಂದು ತಾವು ಅಪ್ಪಣೆ ಕೊಡಿಸುವುದಾದರೆ ನಾನು ಸುಮ್ಮನೆ ಸರ್ಕಾರದ ವಾಹನವನ್ನು ವ್ಯರ್ಥ ಮಾಡಲು ರೆಡಿ ಇಲ್ಲ. ತಾವು ಆದೇಶ ಕೊಡಿ, ವಾಹನ ಇವತ್ತು ವಾಪಸ್ ತೆಗೆದುಕೊಳ್ಳಿ, ಬಂಗಲೋ ಇವತ್ತು ವಾಪಸ್ ತೆಗೆದುಕೊಳ್ಳಿ ಸಿಬ್ಬಂದಿ ಇವತ್ತು ವಾಪಸ್ ತೆಗೆದುಕೊಳ್ಳಿ. ನಾನು ವಿರೋಧ ಪಕ್ಷದ ನಾಯಕನಾಗಿ ತಾವು ಅದೇ ಸರಿ ಎಂದು ಆದೇಶ ಕೊಟ್ಟರೆ ಯಾವುದೇ ಸಿಬ್ಬಂದಿ ವಾಹನ ಬಂಗಲೆ ಇವುಗಳ ಅವಶ್ಯಕತೆ ಇಲ್ಲ. ಏಕೆಂದರೆ ನೀವು ಕೊಟ್ಟಿರುವುದು, ಅವರು ಭಿಕ್ಷೆ ಕೊಟ್ಟಿಲ್ಲ. ಈ ಕಾನೂನು ಚೌಕಟ್ಟಿನಲ್ಲಿ ತಮ್ಮ ವತಿಯಿಂದ ಸಿಕ್ಕಿರುವ ಸಲವತ್ತು ಅದು. ಅದು ನನ್ನ ಹೆಂಡತಿ ಮಕ್ಕಳು ಓಡಾಡುವುದಕ್ಕೆ ಅಥವಾ ಹನಿಮೂನ್ಗೆ ಅದರ ಅಗತ್ಯ ಇಲ್ಲ. ಇದರ ಬಗ್ಗೆ ಸ್ಪಷ್ಟಮಾಡಬೇಕು. ಎರಡನೆಯದು, ಈ ಮೂರು ಶಾಸಕರ ಬಗ್ಗೆ ಬಹಿರಂಗವಾಗಿ ಪತ್ರಿಕಾ ಹೇಳಿಕೆ ಕೊಡುವ ಮೂಲಕ ನಮ್ಮ ಚಾರಿತ್ರ್ಯವದೆ ಮಾಡುವಂತಹ ನಮ್ಮ ಸ್ಥಾನಕ್ಕೆ ಕಳಂಕ ತರುವಂತಹ ಕೆಲಸ ಮಾನ್ಯ ಮುಖ್ಯಮಂತ್ರಿಗಳು ಮಾಡಿದ್ದಾರೆ. ಅದಕ್ಕೆ ಅಧಿಕಾರಿಗಳು ಕೊಟ್ಟ ವರದಿ ಆಧಾರದ ಮೇಲೆ ನಾನು ಹೇಳಿದ್ದೇನೆ, ಅದು ಸರಿ ಎಂದು ನಿಮಗೆ ಸಮಂಜಸ ಆಗುವುದಾದರೆ ಅದಕ್ಕೂ ನನ್ನದು ಅಭ್ಯಂತರ ಇಲ್ಲ. ಮುಂದೆ ನಾವು ಹೇಗೆ ಕೆಲಸ ಮಾಡಬೇಕು,

ಯಾವ ರೀತಿ ನಾವು ಮಾಹಿತಿ ಪಡೆಯಬೇಕು ಎಂಬ ಬಗ್ಗೆ, ಈ ಡೆಮಾಕ್ರಟಿಕ್ ಸಿಸ್ಟಂನಲ್ಲಿ ಒಬ್ಬ ಚುನಾಯಿತ ಪ್ರತಿನಿಧಿಗೆ ನಮಗೆ ಬೇಕಾದ ದಾಖಲೆ ಪಡೆಯುವ ಹಕ್ಕಿಲ್ಲ ಎಂದು 13 ವರ್ಷದಲ್ಲಿ ನಾನೆಂದೂ ಕಂಡಿಲ್ಲ, ಕೇಳಿಲ್ಲ. ಅದು ಮೊದಲನೇ ಸಾರಿ. ಆರ್ಡಿನರಿ ಒಂದು ಸೊಸೈಟಿನಲ್ಲಿ ಈ ಪರಿಸ್ಥಿತಿ ಇಲ್ಲ, ಈ ಪರಿಸ್ಥಿತಿ ಒಬ್ಬ ಶಾಸಕರಿಗೆ ಬಂದಿದೆ ಅನ್ನುವುದಾದರೆ ವಿರೋಧಪಕ್ಷದ ನಾಯಕನ ಸ್ಥಾನದ ಪ್ರಶ್ನೆಯಲ್ಲ, ಇಲ್ಲಿರುವ ಎಲ್ಲಾ ಶಾಸಕರ ಪ್ರಶ್ನೆ. ಇನ್ನು ಮುಂದೆ ಅಧಿಕಾರಿಗಳಿಗೂ ಶಾಸಕರಿಗೂ, ಇಷ್ಟು ಹೊತ್ತಿಗೋ ವಾಟಾಳ್ ನಾಗರಾಜ್‌ರವರು ಏನು ಮಾತಾಡಿದರು ಒಂದು ದೊಡ್ಡ ಕಂದಕ ಇತ್ತು ಅವರೂ ಇದರ ಮೇಲೆ ಹಾಕುತ್ತಾರೆ. ಯಾವ ಮಾಹಿತಿ ಕೊಡಬೇಕು ಯಾವುದು ಕೊಡಬಾರದು ಆ ಅಧಿಕಾರಿಗಳು ಗೊಂದಲದಲ್ಲಿರುವಂತಹ ಅಗತ್ಯ ಇಲ್ಲ. ಇದು ಸದನಕ್ಕೆ ಒಪ್ಪಿಗೆ ಆಗುವುದಾದರೆ ತಮ್ಮ ರೂಲ್ಸ್ ಪ್ರಕಾರ ಅದೇ ಅನ್ನುವುದಾದರೆ ಇನ್ನು ಮುಂದೆ ನಮಗೇನಾದರೂ ದಾಖಲೆ ಬೇಕಾದರೆ ನಿಮ್ಮ ಮೂಲಕ ತೆಗೆದುಕೊಳ್ಳುತ್ತೇವೆ, ಅದಕ್ಕೆ ಕಾರ್ ಏಕೆ ಬೇಕು, ಪ್ರವಾಸ ಏಕೆ ಬೇಕು? ದಯಮಾಡಿ ಈ ನಿಮಿಷದಿಂದ Please withdraw everything. ಈ ನಿಮಿಷದಿಂದ ಯಾವುದೇ ಒಂದು ಸವಲತ್ತನ್ನು ನಾನು ಉಪಯೋಗಿಸುವುದಕ್ಕೆ ಸಿದ್ಧನಿಲ್ಲ.

ಶ್ರೀ ಎಂ. ಶ್ರೀನಿವಾಸ್ : ಇದಕ್ಕೇನು ಜನರು ನಮಗೆ ವೋಟ್ ಕೊಟ್ಟು ಕಳಿಸಿರುವುದು.

(ಗೊಂದಲ)

ಶ್ರೀ ಎಂ. ಶ್ರೀನಿವಾಸ್ : ಅದೇ ಉತ್ತರಹಳ್ಳಿ ಕ್ಷೇತ್ರದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಹೌಸಿಂಗ್‌ಬೋರ್ಡ್ ಮಂತ್ರಿಗಳು ಬಂದಾಗ ಅಲ್ಲಿನ ಶಾಸಕರನ್ನು ಕರೆಯದೆ ಅವಮಾನ ಮಾಡಿದರು. ಇದನ್ನು ಸಹಿಸುವುದೇ? ಅಪ್ಲಿಕೇಷನ್ ಹಾಕಿಕೊಂಡು ಈ ಶಾಸಕರ ಕೆಲಸ ಮಾಡುವುದು ಹೇಗೆ ಸ್ವಾಮಿ? ನಾವೂ ಜನರ ವೋಟ್ನಿಂದ ಆರಿಸಿಬಂದಿರುವವರು. ಕೋಳಿ ಕೇಳಿ ಮಸಾಲೆ ಅರೆಯುವುದಕ್ಕೆ ಬಂದಿಲ್ಲ ಇಲ್ಲಿ.

ಅಧ್ಯಕ್ಷರು : ವಿರೋಧ ಪಕ್ಷದ ನಾಯಕರು ಒಂದು ಸ್ಪಷ್ಟೀಕರಣ ಕೊಟ್ಟರು. ನಾನು ಅವರಿಂದ ನೇಮಿತನಾಗಿಲ್ಲ. ನೀವು ನನ್ನ ವಿರೋಧ ಪಕ್ಷದ ನಾಯಕ ಎಂದು ಅಂಗೀಕಾರ ಮಾಡಿದ್ದೀರಿ, ಅವರು ಕಾರ್ಯಾಂಗದ ಮುಖ್ಯಸ್ಥರು, ನಾವು ಪಾರ್ಲಿಮೆಂಟರಿ ಫಂಕ್ಷನರೀಸ್, ನಾವು ಎರಡೂ ಸಮಾಂತರ ಲೈನ್‌ನಲ್ಲಿ ಜವಾಬ್ದಾರಿ ನಿರ್ವಹಣೆ ಮಾಡುತ್ತಿದ್ದೇವೆ. ಮುಖ್ಯಮಂತ್ರಿಗಳ ಉತ್ತರದ ಒಟ್ಟು ಸಾರಾಂಶ ಶಾಸಕಾಂಗ ನಿಯಮಾವಳಿ ಏನು ರೂಪಿಸಿಕೊಂಡಿದ್ದೇವೆ ಕಾರ್ಯಕ್ರಮ ನಡೆಸುವುದಕ್ಕೆ ಆ ನಿಯಮಾವಳಿಗಳ ಒಳಗೆ ವಿರೋಧ ಪಕ್ಷದ ನಾಯಕರು ಬಯಸಿರುವ ಎಲ್ಲಾ ಮಾಹಿತಿಗಳುನ್ನು ಪಡೆದುಕೊಳ್ಳುವುದಕ್ಕೆ ಸಾಕಷ್ಟು ಅವಕಾಶ ಇದೆ. ಯಾವ ಅವಕಾಶಗಳನ್ನೂ ಕೂಡ ನಾನು ಮೊಟಕು ಮಾಡುವುದಕ್ಕೆ ಹೋಗುವುದಿಲ್ಲ ಎಂದರು. ಒಂದು ವೇಳೆ ಮೊಟಕು ಮಾಡಬೇಕೆಂಬ ಅಭಿಪ್ರಾಯ ಅವರಿಗಿದ್ದರೂ ಹಾಗೆ ಮಾಡಲು ಅವರಿಗೆ ಸಾಧ್ಯವಿಲ್ಲ. ತಾವು ಎಸ್ಟಿಮೇಟ್ಸ್ ಕಮಿಟಿಯಿಂದ ಒಂದು ಮಾಹಿತಿ ಬೇಕು ಎಸ್ಟಿಮೇಟ್ಸ್ ಬಗ್ಗೆ ಎಂದು ಕೇಳಿದಾಗ ಕೊಡಬೇಡಿರಿ ಎಂದು ಅವರು ಹೇಳಿದರೆ ನಾನು ಸುಮ್ಮನಿರುತ್ತೇನೆಯೇ? ನಾನು ಏನು ಹೇಳುತ್ತಿದ್ದೇನೆಂದರೆ, ಆವೇಶದಿಂದ ಮಾತಾಡುವುದು ಬೇಡ, ನಾವೇನೋ ಹೇಳಿದಿವಿ ಅವರು ಅದರಂತೆ ಕೇಳಬೇಕು ಅಥವಾ ಅವರೇನೋ ಹೇಳಿದ್ದನ್ನು ನಾವು ಕೇಳಬೇಕು ಅಂತಲ್ಲ. ನಮ್ಮ ಜವಾಬ್ದಾರಿ ಯಾವ್ಯಾರದು ಎಷ್ಟೆಷ್ಟಿದೆ, ನಮ್ಮ ಇತಿಮಿತಿ ಏನೇನಿದೆ ಅವರು ಎಕ್ಸಿಕ್ಯುಟಿವ್ ಹೆಡ್ಡಾಗಿ ಅವರು ಕಾರ್ಯ ನಿರ್ವಹಣೆ ಮಾಡತಕ್ಕ ಸಂದರ್ಭದಲ್ಲಿ ಅವರು ಮಾಡಬಹುದಾದ ಎಲ್ಲಾ ತಪ್ಪುಗಳನ್ನೂ ಸ್ಕ್ರೂಟನಿ ಮಾಡಲು ತಮಗೆ ಸಾಕಷ್ಟು ಅವಕಾಶಗಳಿವೆ.

ನಾವು ಬಯಸಿದಂಥ ರೀತಿಯಲ್ಲೇ ಅವರು ಉತ್ತರ ಕೊಡಬೇಕು ಎನ್ನತಕ್ಕಂಥದ್ದಲ್ಲ. ಅಥವಾ ಅವರು ಹೇಳಿದ ರೀತಿಯಲ್ಲಿ ತಾವು ಕೆಲಸ ಮಾಡಬೇಕು ಎಂದು ನಾನು ಹೇಳುತ್ತಿಲ್ಲ. ದಯಮಾಡಿ ತಾವು ಅರ್ಥಮಾಡಿಕೊಳ್ಳಿ. ಸನ್ಮಾನ್ಯ ನಂಜೇಗೌಡರು ತಾವು, ವೈ. ರಾಮಕೃಷ್ಣರವರು, ಅವರು ಪಾರ್ಲಿಮೆಂಟರಿ ಅಫೇರ್ಸ್ ಮಿನಿಸ್ಟರ್ ಆಗಿ ಕೆಲಸ ಮಾಡಿದ್ದಾರೆ. ಮಾನ್ಯ ವೀರಪ್ಪ ಮೊಯಿಲಿಯವರು ಮಾಜಿ ಮುಖ್ಯಮಂತ್ರಿಗಳು ಖರ್ಗೆಯವರು ಅನೇಕ ......

ಶ್ರೀ ವೈ. ರಾಮಕೃಷ್ಣ : ವಿರೋಧಪಕ್ಷದ ನಾಯಕರ ಆತ್ಮಗೌರವಕ್ಕೆ ಚ್ಯುತಿ ಬರದ ಹಾಗೆ ಮಾತುಕತೆ, ರೆಕಾರ್ಡ್ಸ್‌ನಲ್ಲಿ ಹೋಗಿರುವ ಮಾತುಗಳು This is not be fitting to the dignity of the House.

ಅಧ್ಯಕ್ಷರು : ನನ್ನ ಮಾತನ್ನು ಇನ್ನು ನಾನು ಪೂರ್ಣ ಮಾಡಿಲ್ಲ.

ನನಗೆ ಎಂಥಾ ಇಕ್ಕಟ್ಟು ಎಂದರೆ ಸ್ಪೀಕರ್ ಆದಂಥವರು ಬಹಳ ಕಡಿಮೆ ಮಾತನಾಡಬೇಕು. ಆದರೆ ನಾನು ಹೆಚ್ಚು ಮಾತನಾಡಲೇಬೇಕಾದಂಥ ಒಂದು ಪರಿಸ್ಥಿತಿ ಬಂದೊದಗುತ್ತಾ ಇದೆ. ನಾನು ತಮ್ಮಲ್ಲಿ ಇಷ್ಟು ವಿನಂತಿ ಮಾಡಿಕೊಳ್ಳುತ್ತೇನೆ, ಕೆಲವು ವಿಚಾರಗಳನ್ನು ತಾವು ಶ್ರೀಮಾನ್ ನಂಜೇಗೌಡರು ಪ್ರಾರಂಭದಲ್ಲಿ ಹೇಳಿದಂತೆ ಇಲ್ಲಿ ಚರ್ಚೆ ಮಾಡುವುದು ಬೇಡ. ಯಾವ ವಿಷಯವನ್ನೂ ಕೂಡ. ಮಾಹಿತಿಯನ್ನೂ ಕೂಡ ಒದಗಿಸುವುದಿಲ್ಲ, ಒದಗಿಸಬಾರದು ಎನ್ನುವ ಉದ್ದೇಶ ನನಗಿದೆ ಎನ್ನುವ ಮಾತು ಅವರ ಉತ್ತರದಿಂದ ನನಗೆ ಅನಿಸಿಲ್ಲ. ಆದರೆ ನಮ್ಮದೇ ಆದಂಥ ರೀತಿಯಲ್ಲಿ ಎಲ್ಲಾ ಮಾಹಿತಿಯನ್ನು ಪಡೆದುಕೊಳ್ಳುವುದಕ್ಕೆ ನಮಗೆ ಅವಕಾಶ ಇದೆ ಎಂದು ಹೇಳಿದ್ದಾರೆ. ಅದನ್ನು ನೀವು ಪ್ರಯತ್ನ ಮಾಡಬೇಕು. ತಮ್ಮಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ಆ ಒಂದು ಅವಕಾಶವನ್ನು ಉಪಯೋಗಿಸಿಕೊಳ್ಳುವುದಕ್ಕೆ ತಾವು ಪ್ರಯತ್ನ ಮಾಡಿ. ಇನ್ನು ಕೆಲವುನ್ನು ನಾವು ಇಲ್ಲಿ ಬಹಿರಂಗವಾಗಿ ಕುಳಿತು ಚರ್ಚೆ ಮಾಡಿ ಇದೆಲ್ಲಾ ಹೊರಗಡೆಗೆ ಬಂದು ನಾವೆಲ್ಲರೂ ಕೂಡ ರಾಜ್ಯದ ಜನರ ದೃಷ್ಟಿಯಲ್ಲಿ ಸಣ್ಣವರಾಗಿ ಕಾಣುವುದು ಬೇಡ. ಈ ಶಾಸಕಾಂಗದ ಮಹತ್ವ, ಶಾಸಕರ ಒಂದು ಪಾವಿತ್ರ್ಯತೆ....

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ತಾವು ಒಂದೇ ಒಂದು ಸ್ಪಷ್ಟೀಕರಣ ಕೊಡಬೇಕು. ನಮ್ಮ ರಕ್ಷಣೆಗೆ ನೀವು ಬರಬೇಕು ಒಂದು, ಎಂದರೆ ಇವತ್ತು ಸನ್ಮಾನ್ಯ ಸಭಾನಾಯಕರು ಒಂದು ಮಾತನ್ನು ಹೇಳಿದ್ದಾರೆ. ವಿರೋಧಪಕ್ಷದ ನಾಯಕರು ಕಾರು ತೆಗೆದುಕೊಂಡು, ಸ್ಟಾಫ್ ಹಿಡಿದುಕೊಂಡು ಊರೂರು ಸುತ್ತಬಹುದು, ಓಡಾಡಬಹುದು ನಾವು, ಆದರೆ ಯಾವುದೇ ಅಧಿಕಾರಿ ಅವರ ಜೊತೆಗೆ ಬರುವಂತಹ ಅಗತ್ಯವಿಲ್ಲ. ಇದೂ ರೂಲ್ ಪರ್ಮಿಟ್ ಮಾಡಿದರೆ, ಅದೇ ಸರಿ ಇದ್ದರೆ, ಅದನ್ನು ಹೇಳುವುದಕ್ಕೆ ನಾನ್ಯಾರು? ಈ ರೂಲ್ಸ್ ಚೌಕಟ್ಟಿನಲ್ಲಿ ನನಗೆ ಗೊತ್ತಿಲ್ಲ. ಈ ಸ್ಥಾನಕ್ಕೆ ನಾನು ಹೊಸಬ. ಅದೇ ಆದರೆ ಈ ಕೆಲಸವನ್ನು ನಿರ್ವಹಿಸುವುದಕ್ಕೆ ಈ ಕಾರು, ಈ ಬಂಗಲೆಯ, ಈ ಸಿಬ್ಬಂದಿಯ ಅಗತ್ಯ ಬರುವುದಿಲ್ಲ.

ಅಧ್ಯಕ್ಷರು : ಅವರು ಕೊಟ್ಟಿರುವ ಕಾರಲ್ಲ ಅದು. You are a parliamentary functionary. You are not a Minister.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ನಾನು ಪೂರ್ಣ ಮಾಡುತ್ತೇನೆ. ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆ ಎಂದರೆ ವಿರೋಧಪಕ್ಷದ ನಾಯಕನ ಕೆಲಸ ಇಷ್ಟೇ ಆದರೆ ಆ ಅರ್ಜಿಯನ್ನು ನಾನು ನನ್ನ ಕೈಯಲ್ಲಿ ಬರೆಯಬಲ್ಲೆ. ಅದಕ್ಕೆ ರಾಜ್ಯವನ್ನು ಏತಕ್ಕೆ ಸುತ್ತಬೇಕು? ಇಲ್ಲೇ ಮಾಹಿತಿಯನ್ನು ತರಿಸಿಕೊಳ್ಳಬಹುದು. ಸ್ಪಾಟ್‌ಇನ್ಸ್‌ಪೆಕ್ಷನ್ ಮಾಡಿ ಮಾಹಿತಿಯನ್ನು ತೆಗೆದುಕೊಳ್ಳುವುದಕ್ಕೆ

ಅಧಿಕಾರವಿಲ್ಲ ಎಂದರೆ ವಾಸ್ತವಿಕತೆ ನನಗೇನು ಗೊತ್ತಾಗುತ್ತದೆ? ನಾನು ಒಂದು ಜಿಲ್ಲೆಗೆ ಹೋಗಿ ಜನರ ಸಮಸ್ಯೆಯನ್ನು ತೆಗೆದುಕೊಂಡು ಚರ್ಚೆ ಮಾಡಿ ಇದು ಹೌದೋ ಅಲ್ಲವೋ ಎಂದು ಅಧಿಕಾರಿಗಳಿಗೇ ಕೇಳಿ ಮಾಹಿತಿಯನ್ನು ತೆಗೆದುಕೊಳ್ಳುವುದಕ್ಕೆ ಆಗಲಿಲ್ಲ ಎಂದರೇ ನಾನೇಕ ಆ ಸ್ಥಾನದಲ್ಲಿರಬೇಕು? ವಿರೋಧ ಪಕ್ಷದ ನಾಯಕನ ಸ್ಥಾನ ಬೇಡ. ತೆಗೆದುಕೊಂಡು ಬಿಡಿ.

(ಗೊಂದಲ)

ಅಧ್ಯಕ್ಷರು : ನೀವು ಆತುರಪಟ್ಟು ಕಾರನ್ನು ಹಿಂದಿರುಗಿಸಿದರೆ, ಬಂಗಲೆಯನ್ನು ಹಿಂದಿರುಗಿಸಿದರೆ ಒಂದು ತಪ್ಪು ಅರ್ಥ ಏನುಂಟಾಗುತ್ತದೆ ಎಂದರೆ ನಿಮ್ಮ ಮನಸ್ಸಿನಲ್ಲಿ ನೀವು ಒಬ್ಬರು ಮಿನಿಸ್ಟ್ರು ಎಂದು ಹೇಳಿ ಭಾವಿಸಿಕೊಂಡಿದ್ದೀರೇನೋ ಎನ್ನುವ ಅರ್ಥ ಬರುತ್ತದೆ.

ಶ್ರೀ ಎಸ್. ಯಡಿಯೂರಪ್ಪ : ಇವರ ತಲೆ ಕೆಟ್ಟಿದೆ ಅಧ್ಯಕ್ಷರೇ,

(ಗೊಂದಲ)

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಶಿವಕುಮಾರರ್‌ವರೇ, ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಮಂತ್ರಿ ಎಂದು ತಿಳಿದುಕೊಂಡಿಲ್ಲ.

ಅಧ್ಯಕ್ಷರು : ಮಾನ್ಯ ಯಡಿಯೂರಪ್ಪನವರೇ, ದಯಮಾಡಿ ತಾವು ಕೇಳಬೇಕು, ದಯಮಾಡಿ ಕುಳಿತುಕೊಳ್ಳಿ. ನಾನು ನಿಂತಿದ್ದೇನೆ. ನಾನು ತಾವು ತಿಳಿದುಕೊಂಡಿದ್ದೀರಿ ಎನ್ನುವ ಮಾತನ್ನು ನಾನು ಹೇಳಿಲ್ಲ. ತಮ್ಮ ಮೇಲೆ ಆಪಾದನೆ ಮಾಡಲಿಲ್ಲ. ದಯಮಾಡಿ ಕೇಳಿ. ಕುಳಿತುಕೊಳ್ಳಿ ಮಂಜುನಾಥ್‌ರವರೇ, ನಾನು ಹೇಳಿದ್ದುದು ಇಷ್ಟೇ. ನನಗೆ ಆ ಸವಲತ್ತನ್ನು ಸರ್ಕಾರದವರು ಕೊಟ್ಟಿಲ್ಲ. ತಾವು ಪಾರ್ಲಿಮೆಂಟರಿ ಫಂಕ್ಷನರಿ. ಆ ರೀತಿ ಅಭಿಪ್ರಾಯಕ್ಕೆ ಬರುವುದಕ್ಕೆ ನಾವು ಅವಕಾಶವನ್ನು ಕೊಡಬಾರದು. ನೀವು ಆ ರೀತಿ ಮಾಡಿದರೆ ಏನಾಗುತ್ತದೆ ಎಂದರೆ ನನ್ನ ಮೇಲೆ ನೀವು ಪ್ರತಿಭಟನೆ ಮಾಡಿದಿರಿ ಎಂದಾಗುತ್ತದೆಯೇ ಹೊರತು ಸರ್ಕಾರದ ಮೇಲೆ ಪ್ರತಿಭಟನೆ ಮಾಡಿದಿರಿ ಎನ್ನುವ ಅರ್ಥ ಬರುವುದಿಲ್ಲ. ಅದಕ್ಕೆ ಅವಕಾಶ ಕೊಡಬಾರದು ಎಂದು ನಾನು ತಮಗೆ ಹೇಳಿದ್ದುದು. ನಾನು ಹೇಳುತ್ತೇನೆ ಕೇಳಿ. ನಮ್ಮ ವ್ಯವಸ್ಥೆಯೊಳಗೆ ತಾವು - You are the shadow Chief Minister. In the event of the failure of this Governmnt, the Constitutional Head has the obligation of inviting you to take up the responsibility. ಆ ಕಾರಣದಿಂದ ನಾನು ಹೇಳುತ್ತಿರುವುದು. ದಯಮಾಡಿ ನೀವು ಉದ್ವೇಗಕ್ಕೆ ಒಳಗಾಗಬೇಡಿ.

(ಗೊಂದಲ)

ಅಧ್ಯಕ್ಷರು : "ಇಂಪಾಸ್" ಆಗಬಹುದು, ಬೇಡ.

(ಗೊಂದಲ)

ಶ್ರೀ ಹೆಚ್. ಎನ್. ನಂಜೇಗೌಡ : ಸನ್ಮಾನ್ಯ ಅಧ್ಯಕ್ಷರೇ, ಒಂದು ನಿಜವಾಗಲೂ..

(ಗೊಂದಲ)

(ಈ ಹಂತದಲ್ಲಿ ಬಿಜೆಪಿ ಸದಸ್ಯರುಗಳು ಸಭಾತ್ಯಾಗ ಮಾಡಿದರು).

(ಗೊಂದಲ)

ಶ್ರೀ ಚಂದ್ರಕಾಂತ ಜಿ. ಬೆಲ್ಲದ್ :ಪ್ರಜಾಪ್ರಭುತ್ವದ ಕೊಲೆ ಆಗುತ್ತಿದೆ ಪ್ರಜಾಪ್ರಭುತ್ವದಲ್ಲಿ ಶಾಸಕರ ಕರ್ತವ್ಯವೇನು? ವಿರೋಧ ಪಕ್ಷದ ನಾಯಕರ ಕರ್ತವ್ಯವೇನು? ಏನೂ ಇಲ್ಲದಿದ್ದರೆ ಇಲ್ಲಿ ಪ್ರಜಾಪ್ರಭುತ್ವದ ಕೊಲೆಯಾಗುತ್ತಿದೆ.

ಶ್ರೀ ಹೆಚ್.ಎನ್. ನಂಜೇಗೌಡ :ಸನ್ಮಾನ್ಯ ಸಭಾಧ್ಯಕ್ಷರೇ, ಇವತ್ತು ನನ್ನ ಮನಸ್ಸಿಗೆ ತೀವ್ರವಾದಂಥ ನೋವಾಯಿತು ಎರಡು ಕಾರಣದಿಂದ. Sitting in this House What signals we are sending out? That is very important. Let us be very serious. The utterances by the Hon. Chief Minister has moved then itself Unfortunately Sir, your utterances also. I do not attribute any motives as such. ನಾವು ಮಾತಾಡಿಕೊಳ್ಳುತ್ತಿದ್ದೆವು ಮೊಯಿಲಿಯವರು ನಾವು ಇವರೆಲ್ಲ, ಆದರೆ ಒಂದು ವಾಕ್ಯ ನಿಮ್ಮ ಬಾಯಲ್ಲಿ ಬಂದುಬಿಡ್ತೋ ಎನ್ನತಕ್ಕಂಥದ್ದು ನನಗೆ ಗೊತ್ತಾಗಲಿಲ್ಲ. ನಾನು ಏತಕ್ಕೆ ಹೇಳುತ್ತೇನೆ ಎಂದರೆ ಮಾನ್ಯ ಮುಖ್ಯಮಂತ್ರಿಗಳು ಇದನ್ನು ಕಿವಿಗೆ ಹಾಕಿಕೊಳ್ಳಬೇಕು. ತಾವು ಏನು ಇವತ್ತು ಮಾಡಿದಿರಿ ಎಂದರೆ You have virtually belittled the position of MLAs in the the eyes of the officers. That is the signal you have sent.

ಏತಕ್ಕೆ ಹೇಳುತ್ತೇನೆ ಎಂದರೆ ಎರಡು ಸಾರಿ ಅದನ್ನು ರಿಪೀಟ್ ಮಾಡಿದಿರಿ. ನಾನು ಹೇಳತಕ್ಕಂಥದ್ದು ಇಷ್ಟೆ. ದಯಮಾಡಿ ಕುಳಿತುಕೊಳ್ಳಿ. ಎಲ್ಲರೂ ಅರ್ಥ ಮಾಡಿಕೊಂಡಿರುವುದು ಹಾಗೆ. ನನಗೆ ಅರ್ಥವಾಗಿರುವುದು ಹಾಗೆ. ಇವರಿಗೂ ಅರ್ಥವಾಗಿರುವುದು ಹಾಗೆಯೇ. ಇದು ಏನಾಯಿತು ಎಂದರೆ ಅದು ಇರಲಿ, ನೀವು ರಾಜಕೀಯ ಕಾರಣಕ್ಕೇನಾದರೂ ಹೇಳಿಕೊಳ್ಳಿ, ಅಂದರೆ ರಾಂಗ್ ಸಿಗ್ನಲ್ಸ್ ಹೋಗುತ್ತಿದೆ. It is not a healthy sign. That much I want to go on record. ಇನ್ನೊಂದು ಬಾರಿ ವಿಷಾದದಿಂದ ತಾವು ಒಂದು ಮಾತನ್ನು ಹೇಳಿದಿರಿ ವಿರೋಧ ಪಕ್ಷದ ನಾಯಕರಿಗೆ ನೀವು ಮಂತ್ರಿಗಳು ಎಂದು ಭಾವನೆ ಮಾಡಿಕೊಂಡಂಗೆ ಕಾಣುತ್ತದೆ.

ಅಧ್ಯಕ್ಷರು : ಇಲ್ಲ, ಇಲ್ಲ. Let me correct myself.

SRI H.N. NANJE GOWDA : It is an insult to the position.

ಇದನ್ನು ನಾನು ಹೇಳಬಾರದು. ಆದರೂ ...

ಅಧ್ಯಕ್ಷರು : ಇಲ್ಲ. ಇಲ್ಲ. ಒಂದು ಮಾತನ್ನು ದಯಮಾಡಿ ಕೇಳಬೇಕು. Though I am vested with certain authority..

ಶ್ರೀ ಹೆಚ್.ಎನ್. ನಂಜೇಗೌಡ : ನಾನು ಹೇಳಿಬಿಟ್ಟಿದ್ದೇನೆ. ಒಂದು ವಿನಂತಿ. ನಾನು ಹೋಗುವುದಕ್ಕೆ ಮುಂಚೆ. ನಾನು ಹೋಗಬೇಕಲ್ಲ. ನಾನೊಂದು ರಾಜಕೀಯ ಪಕ್ಷಕ್ಕೆ ಸೇರಿದ್ದೇನೆ. ಹೋಗುವುದಕ್ಕೆ ಮುಂಚೆ ತಮ್ಮ ಛೇಂಬರಿಗೆ ಬಂದು ನೋಡುತ್ತೇನೆ. ನೀವು ರೆಕಾರ್ಡ್ಸ್ ತರಿಸಿ ನೋಡಿ.

MR. SPEAKER : Let me make it clear. I am glad atleast you stated that.

ನಾನು ಏನು ಹೇಳಿದ್ದುದು ಎಂದರೆ ತಾವು ಪಾರ್ಲಿಮೆಂಟರಿ ಫಂಕ್ಷನರಿ. ಅವರ ಅಬ್ಲಿಗೇಷನ್‌ನಲ್ಲಿ ತಾವು ಇಲ್ಲ. ಅವರು ಕೊಟ್ಟಿರುವ ಸವಲತ್ತು ಅದಲ್ಲ. ನೀವು ಅದನ್ನೆಲ್ಲ ಹಿಂದಿರುಗಿಸಿದರೆ ಆ ರೀತಿಯ ಒಂದು ಅಭಿಪ್ರಾಯ ಹೊರಗಡೆ ಬರಬಹುದಾಗುತ್ತದೆ. ಅದಕ್ಕೆ ಅವಕಾಶ ಮಾಡಿಕೊಡಬಾರದು. ನನ್ನ ಮೇಲೆ ನೀವು ಪ್ರತಿಭಟನೆ ಮಾಡುವುದಾದರೆ ಮಾಡಬಹುದು ಎಂದು ಹೇಳಿದನೇ ಹೊರತು ನೀವು

ಆ ಭಾವನೆಯನ್ನು ಮನಸ್ಸಿನಲ್ಲಿ ಇಟ್ಟುಕೊಂಡಿದ್ದೀರಿ ಎಂದು ಹೇಳಿಲ್ಲ. By any chance ನಾನು ಹೇಳಿದಂಥ ಮಾತುಗಳಿಗೆ ಆ ರೀತಿ ಅರ್ಥ ಅವರು ಕಲ್ಪನೆ ಮಾಡಿಕೊಂಡಿದ್ದರೆ ಅದರಿಂದ ಯಾರಿಗಾದರೂ ನೋವಾಗಿದ್ದರೆ I do not hesitate even for a fraction of second to tender my unconditional apology. I don't sit on formalities. That is not any intention.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಈಗ ಎರಡು ವಿಚಾರಗಳು ಇವೆ. ಒಂದು ವಿರೋಧ ಪಕ್ಷದ ನಾಯಕರ ಅಸ್ತಿತ್ವ, ಅವರ ವ್ಯವಸ್ಥೆ ಬಗ್ಗೆ. ಮತ್ತೊಂದು ಎಲ್ಲಾ ಶಾಸಕರಿಗೆ ಈ ಸರ್ಕಾರದಲ್ಲಿ ಆಗಿರತಕ್ಕ ಅಗೌರವ. ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಯಾವುದೇ ವಿಧವಾದಂತಹ ಉತ್ತರವನ್ನು ಕೊಡಲಿಲ್ಲ ನಾನು ತಿಳಿದುಕೊಂಡ ಹಾಗೆ. ಅವರು ಉತ್ತರ ಕೊಡುವಾಗ ಬರೇ ವಿರೋಧಿ ನಾಯಕರು ಅವರು ಬರೆದ ಪತ್ರಗಳು, ತಾವು ಅವರಿಗೆ ಬರೆದ ಪತ್ರಗಳು ಅವುಗಳ ಬಗ್ಗೆ ಚರ್ಚೆ ಆಯಿತು. ಆದರೆ ನಾನು ಸಮಗ್ರವಾಗಿ ಎಲ್ಲ ಸದಸ್ಯರ ವಿಚಾರಗಳ ಬಗ್ಗೆ ಪ್ರಶ್ನೆಗಳನ್ನು ಎತ್ತಿದ್ದೆ. ಒಂದು ಚೂರು ಅದರ ಬಗ್ಗೆ ಅವರು ಗಮನ ಕೊಡಲಿಲ್ಲ. ದಾರಿ ಬೇರೆ ದಿಕ್ಕಿಗೆ ಹೋಯಿತು. ಆದ್ದರಿಂದ ತಾವು ನಮಗೆ ಮಾರ್ಗದರ್ಶನ ನೀಡಬೇಕು. ಮುಖ್ಯ ಮಂತ್ರಿಗಳ ನಾನು ಮಾಡಿರುವುದೇ ಸರಿ ಈ ಶಾಸಕರಿಗೆ ಇರತಕ್ಕ ಎಲ್ಲಾ ಅಧಿಕಾರಗಳನ್ನು ಕಳೆದು ಹಾಕಿ ಅಧಿಕಾರಿಗಳಿಗೆ ಅಂದು ಅವಕಾಶ ಕೊಟ್ಟಿದ್ದೇವೆಂದು ಹೇಳಿದರಲ್ಲ, ಇದೇ ಸರಿ ಎನ್ನತಕ್ಕ ಒಂದು ತೀರ್ಮಾನ ಆಗಬೇಕು. ಮಾನ್ಯ ನಂಜೇಗೌಡರು ಹೇಳಿದ್ದನ್ನು ನಾನು ಸಹ ಸಮರ್ಥಿಸುತ್ತೇನೆ. ಅಧಿಕಾರಿಗಳ ಎದುರಿಗೆ ಶಾಸಕರನ್ನು ಎಷ್ಟು ಅವಹೇಳನ ಮಾಡಬೇಕು ಅದನ್ನು ಮಾನ್ಯ ಮುಖ್ಯಮಂತ್ರಿಗಳು ಸಮರ್ಥವಾಗಿ ಮಾಡಿದ್ದಾರೆ. ಅದರಲ್ಲಿ ಎರಡನೇ ಅಭಿಪ್ರಾಯ ಇಲ್ಲ. ಬಹಳ ಚೆನ್ನಾಗಿ ಮಾಡಿದ್ದಾರೆ.

ಇದು ಕರ್ನಾಟಕದ ಇತಿಹಾಸದಲ್ಲಿಯೇ, ದೇಶದ ಇತಿಹಾಸದಲ್ಲಿಯೇ ಒಬ್ಬ ಮುಖ್ಯಮಂತ್ರಿಗಳು ಈ ಶಾಸಕರ ಮೇಲೆ ಏನು ನೇರ ಪ್ರತೀಕಾರವನ್ನು ಮಾಡಿದ್ದಾರೆ ಇದು ಅತ್ಯಂತ ನೋವಿನಿಂದ ಈ ಮಾತನ್ನು ನಾನು ಹೇಳುತ್ತಿದ್ದೇನೆ. ಈ ಮಾತಿನ ಜೊತೆಗೆ ತಾವು ಆಗಲೇ ನೋವಾಗಿದ್ದರೆ ಕ್ಷಮಾಪಣೆ ಕೇಳುತ್ತೇನೆ ಎಂದು ಹೇಳಿದಿರಿ. ನಾನ ಸಹ 1967ರಿಂದ ಈ ಸದನದಲ್ಲಿದ್ದೇನೆ. ಇಂತಹ ಪ್ರಸಂಗ, ಶಾಸಕರನ್ನು ಈ ಸಭೆಯಲ್ಲಿ ಒಂದು ರೀತಿ ಅತ್ಯಂತ ಅವಹೇಳನ ಮಾಡಿರತಕ್ಕ ಮುಖ್ಯಮಂತ್ರಿಗಳನ್ನು ನಾನು ಎಂದೂ ನೋಡಿಲ್ಲ. ಶಾಸಕರನ್ನು ತೀವ್ರವಾಗಿ ಅಧಿಕಾರಿಗಳನ್ನು ಎದುರಿಗೆ ಕೂರಿಸಿಕೊಂಡು ಇನ್ ಕ್ಯಾಮರಾದೊಳಗೆ ನಾವು ಸೇರಿಕೊಂಡು ಮಾತನಾಡತಕ್ಕದ್ದು ಅಲ್ಲ. ಈ ಸದನದಲ್ಲಿ ನಾನು ಮಾಡಿರತಕ್ಕದ್ದೇ ನಿಜ ಎನ್ನತಕ್ಕ ಧೋರಣೆಯಿಂದ ಏನು ಅವರು ಮಾತನಾಡಿದ್ದಾರೆ ಅತ್ಯಂತ ನೋವಿನಿಂದ ಸಂಕಟದಿಂದ ಈ ಮಾತನ್ನು ಹೇಳುತ್ತಿದ್ದೇನೆ. ನಾವ್ಯಾಕೆ ಇಲ್ಲಿ ಇರಬೇಕು? ಏಕೆ ನಿಮ್ಮ ಮುಂದೆ ಬರಬೇಕು ಇಲ್ಲಿ ಏಕೆ ಇರಬೇಕಾಗಿದೆ? ಯಾವ ಉದ್ದೇಶದಿಂದ ನಾವು ಇಲ್ಲಿ ಇರಬೇಕಾಗಿದೆ ಎಂದು ಹೇಳುತ್ತಿದ್ದೇವೆ. ನಮ್ಮೆಲ್ಲರನ್ನೂ ಹರಾಜು ಹಾಕಿ, ನಮ್ಮ ಅಸ್ತಿತ್ವವನ್ನು ಕಳೆದು, ಶಾಸನ ಬದ್ಧವಾಗಿ ಪ್ರಜಾಪ್ರಭುತ್ವದ ದೃಷ್ಟಿಯಿಂದ ಮತದಾನವನ್ನು ಪಡೆದು ಈ ಸಭೆಗೆ ಬಂದಿರತಕ್ಕ ಶಾಸಕರಿಗೆ ಮುಖ್ಯಮಂತ್ರಿಗಳು ನೇರವಾಗಿ ನಮಗೆ ಅಪಮಾನ ಮಾಡತಕ್ಕ ಪರಿಸ್ಥಿತಿ ಬರುವುದಾದರೆ ನಾನು ಬಹಳ ವಿಷಾದದಿಂದ ಈ ಮಾತನ್ನು ಹೇಳುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಅವರ ಧೋರಣೆಯನ್ನು ಬದಲಾವಣೆ ಮಾಡಿಕೊಂಡು ಈ ಸದನಕ್ಕೆ ಉತ್ತರ ಕೊಡಬೇಕು. ಇಲ್ಲದೇ ಇದ್ದರೆ ನಾವು ಇಲ್ಲಿ ಏಕೆ ಕುಳಿತುಕೊಳ್ಳಬೇಕು? ಏಕೆ ಬರಬೇಕು? ಯಾವ ಉದ್ದೇಶದಿಂದ ನಾವು ಕುಳಿತುಕೊಳ್ಳಬೇಕು? ನೀವು ಸಹ ಯಾವುದೋ ಒಂದು ಆವೇಶದ ಭರದಲ್ಲಿ ಒಂದು ಮಾತು ಹೇಳಿದಿರಿ, ಅದರ ಬಗ್ಗೆ.

ಅಧ್ಯಕ್ಷರು : ನಾನು ಆವೇಶದಿಂದಲೂ ಹೇಳಿಲ್ಲ, ತಪ್ಪನ್ನೂ ಹೇಳಲಿಲ್ಲ, ನಾನು ಎರಡನ್ನೂ ಮಾಡಲಿಲ್ಲ. ನಾನು ಅದನ್ನೇ ಹೇಳುತ್ತಿದ್ದೇನೆ. ನಾನು ಸರಿಯಾದ ಅರ್ಥದಲ್ಲಿ ಹೇಳಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಯಡಿಯೂರಪ್ಪನವರಿಗೆ ತಾನು ಮಂತ್ರಿಯೇ ಅಲ್ಲವೇ ಎಂದು ಅರ್ಥ ಆಗುವುದಿಲ್ಲವೇನು ?ಅವರು ಕನ್ನಡ ಬಲ್ಲವರಾಗಿದ್ದಾರೆ, ಅವರು ವಿರೋಧ ಪಕ್ಷದ ನಾಯಕರಾಗಿದ್ದಾರೆ. ಅವರ ಕಾರುಗಳನ್ನು ಹಿಂದಕ್ಕೆ ಕೊಟ್ಟು ಬಿಡುತ್ತೇನೆಂದರೆ ನಾನು ಮಂತ್ರಿಯಾಗಿದ್ದೇನೆ. ಕೊಟ್ಟುಬಿಡುತ್ತೇನೆಂದು ಅರ್ಥ ಬರುವುದಕ್ಕೆ ಸಾಧ್ಯ ಇದೆಯೇನು ಬರುವುದಕ್ಕೆ ಸಾಧ್ಯ ಇಲ್ಲ. ತಮ್ಮಲ್ಲಿ ನಾನು ಕೈಮುಗಿದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಅವರ ಮೇಲೆ ಸಿಟ್ಟಾಗಿ... ದಯಮಾಡಿ ಕೇಳಿ..

ಶ್ರೀ ವಾಟಾಳ್ ನಾಗರಾಜ್ : ಅವರು ಸಭಾ ತ್ಯಾಗ ಮಾಡಿದರು ಎಂದು ನಾನು ಅವರ ಹಿಂದೆ ಬೆಂಬಲ ಕೊಟ್ಟು ಸಭಾತ್ಯಾಗ ಮಾಡುತ್ತಿಲ್ಲ. ಈ ಸದನದ ಶಾಸಕರಿಗೆ ಆಗಿರತಕ್ಕ ಅಗೌರವವನ್ನು ಪ್ರತಿಭಟಿಸಿ ಸಭಾತ್ಯಾಗ ಮಾಡುತ್ತಿದ್ದೇನೆ.

(ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್ ಅವರು ತಮ್ಮ ಸ್ಥಾನ ಬಿಟ್ಟು ಮಾತನಾಡುತ್ತಿದ್ದರು)

ಶ್ರೀ ವಾಟಾಳ್ ನಾಗರಾಜ್ : ನಾನು ಬಿಜೆಪಿಯವರಿಗೆ ಬೆಂಬಲ ಕೊಟ್ಟು ಸಭಾ ತ್ಯಾಗ ಮಾಡುತ್ತಿಲ್ಲ.

ಅಧ್ಯಕ್ಷರು : ತಾವು ಹೋಗುವ ಮೊದಲು ನನ್ನ ಮಾತು ಕೇಳಿ.

(ಮಾನ್ಯ ವಾಟಾಳ್ ನಾಗರಾಜ್ ಅವರು
ಸಭಾತ್ಯಾಗ ಮಾಡುತ್ತಾ ಮಾತನಾಡುತ್ತದ್ದರು)

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ : ನಾನು ಇಲ್ಲಿ ವಾಕೌಟ್ ಮಾಡುವ ಪ್ರಿಲಿಮಿನರಿಯಾಗಿ ಇಲ್ಲಿ ಮಾತನಾಡುತ್ತಿಲ್ಲ. ವಾಕೌಟ್ ಮಾಡುವಂತಹ ಪ್ರಶ್ನೆ ನಾನು ಮಾಡುತ್ತಿಲ್ಲ.

ಅಧ್ಯಕ್ಷರು : ನಂಜೇಗೌಡರು ಕೂಡ ನಾವು ಖರ್ಗೆಯವರು, ಮೊಯಿಲಿಯವರು ಮಾತನಾಡುತ್ತಿದ್ದೆವು ಎಂದು ಹೇಳಿದರು. sitting here I don't want to feel guilty of me. ಅವರಿಗೆ ಒಂದು ನಿಮಿಷ ಇರಿ ಎಂದು ಹೇಳಿದೆ, ಅವರು ಹೊರಟು ಹೋದರು. ಚೀಫ್ ಮಿನಿಸ್ಟರ್ ಕೊಟ್ಟಂತಹ ರಿಪ್ಲೈಯಿಂದ ಅವರಿಗೆ ಅಸಮಾಧಾನ ಆಗಿದೆ ಲೆಜಿಸ್ಲೇಚರ್ ಸೆಕ್ರಟರಿಯೇಟ್‌ನಿಂದ ಕೊಟ್ಟಿರತಕ್ಕ ಫೆಸಿಲಿಟೀಸ್‌ನ್ನು ರಿಟರ್ನ್ ಮಾಡಿದರೆ ಚೀಫ್ ಮಿನಿಸ್ಟರ್ ಮೇಲೆ ಪ್ರೊಟೆಸ್ಟ್ ಮಾಡಿದ ಹಾಗೆ ಆಗುತ್ತದೆಯೋ ನನ್ನ ಮೇಲೆ ಪ್ರೊಟೆಸ್ಟ್ ಮಾಡಿದ ಹಾಗೆ ಆಗುತ್ತದೆಯೋ?

ಶ್ರೀ ಎಂ. ವೀರಪ್ಪ ಮೊಯಿಲಿ : ಅದೇ ವಿಷಯ ನಾನು ಮಾತನಾಡಬೇಕಾಗಿದೆ.

ಅಧ್ಯಕ್ಷರು : ಅದೇ ಇಂಟೆನ್‌ಷನ್‌ನಿಂದ ನಾನು ಹೇಳಿದನೇ ಹೊರತು ಯಾವುದೇ ಕಾರಣಕ್ಕೂ ಕೂಡ ಅವರನ್ನು ಆ ರೀತಿ ಹೋಲಿಸಿ ಮಾತನಾಡಬೇಕು ಎನ್ನತಕ್ಕ ಅಭಿಪ್ರಾಯ ಇರಲಿಲ್ಲ. ಅದಕ್ಕೆ ನಾನು ಹೇಳಿದ ಮಾತನ್ನು ಕಾಂಟೆಕ್ಸ್‌ನ್ನು ಸ್ಪಷ್ಟವಾಗಿ ಕ್ಲಾರಿಫೈ ಮಾಡಿ ಹೇಳಿದರೂ ಕೂಡ if they try to convey different meaning...

ಅದಕ್ಕೂ ಕೂಡ ನಾನು ಹೇಳಿದೆ, remotely also

ಅವರು ಈ ರೀತಿ ಭಾವನೆಯನ್ನು ಮಾಡಿಕೊಂಡು ಮನಸ್ಸಿಗೆ ನೋವನ್ನು ಮಾಡಿಕೊಂಡಿದ್ದರೂ ಕೂಡ I tender my apoogies ಎಂದು ಹೇಳಿದೆ. They should take the feelings of the mind in the right direction.

ಶ್ರೀ ಎಂ. ವೀರಪ್ಪ ಮೊಯಿಲಿ : ಇಲ್ಲಿ ಕೆಲವು ಬೆಳವಣಿಗೆಗಳು ಏನು ನಡೆದಿವೆ, ಇದು ಒಂದು ಆರೋಗ್ಯಕರವಾದಂತಹ ಬೆಳವಣಿಗೆ ಅಲ್ಲ. ನಮ್ಮ ನಿಲುವು ಏನು ಇದೆ We have not joined in the petition deliberately because it is not a matter which can be just debated upon.

ಏಕೆಂದರೆ ಕಾನೂನು ಪ್ರಕಾರ ವಿರೋಧ ಪಕ್ಷದ ನಾಯಕರು ಒಂದು ವಿಚಾರ ಮುಂದೆ ಇಟ್ಟಾಗ ಅದೇ ಪ್ರಕಾರ ತಾತ್ವಿಕವಾಗಿ ಸೈದ್ಧಾಂತಿಕವಾಗಿ ಮಾನ್ಯ ಮುಖ್ಯಮಂತ್ರಿಗಳು ಕೂಡ ಉತ್ತರವನ್ನು ಕೊಟ್ಟಿದ್ದಾರೆ. ಬಹುಶಃ ಕಾನೂನು ಏನು ಇದೆ? ಶಾಸಕಾಂಗವಾದಂತಹ ಪಾರ್ಲಿಮೆಂಟರಿ ಫಂಕ್ಷನ್ಸ್ ಎಂದು ತಾವು ಹೇಳಿದಿರಿ. ಕಾರ್ಯಾಂಗದ ವ್ಯಾಪ್ತಿಯ ಬಗ್ಗೆ ಇವತ್ತು ಬಹಳ ಉಲ್ಲೇಖ ಆಗಿದೆ. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿದ್ದಾರೆ. ತಾವು ಕೂಡ ಮಾತನಾಡಿದ್ದೀರಿ. ಬಹುಶಃ ಇದರ ಬಗ್ಗೆ ಯಾರೂ ಕೂಡ ಬೇರೆ ಅಭಿಪ್ರಾಯ ತಮ್ಮ ಮಾತಿಗೆ ಹೇಳುತ್ತಿಲ್ಲ. ಅವರ ಮಾತಿನ ಬಗ್ಗೆಯೂ ಕೂಡ ಕಾರ್ಯಾಂಗದ ಬಗ್ಗೆ ಒಂದು ರೀತಿ ಆಕ್ರಮಣ ಯಾರೂ ಕೂಡ ಮಾಡಲಿಕ್ಕೆ ಆಗುವುದಿಲ್ಲ ಎನ್ನುವ ಮಾತನ್ನು ಕೂಡ ತಾವು ಸ್ಪಷ್ಟವಾಗಿ ಹೇಳಿದ್ದೀರಿ. ಆದರೆ ನಾವೇನು ನಿರೀಕ್ಷೆ ಮಾಡಿದ್ದೆವು ಎಂದು ಹೇಳಿದರೆ, ಎಲ್ಲ ಹೇಳಿದ ಮೇಲೆ ಇದು ಕಾನೂನು ಕಟ್ಟಲೆಗೆ ಸಂಬಂಧಪಟ್ಟ ವಿಚಾರವೇ ಅಲ್ಲ. ವಿರೋಧ ಪಕ್ಷದ ನಾಯಕರು ಇದೇ ಸರಿಯೆಂದು ಹೇಳತಕ್ಕದ್ದು ಸರಿಯಲ್ಲ. ಆದರೆ ತಾವು ಇವತ್ತು ಪುನರುಚ್ಚಾರ ಮಾಡಿರಬಹುದು. ಆದರೆ ತಾವೇನು ಮಾಡಬಹುದಿತ್ತು. ನಾವೇನು ತಮ್ಮ ಹತ್ತಿರ ನಿರೀಕ್ಷೆ ಮಾಡಿದೆವು ಅಂದರೆ..

ಶ್ರೀ ಹೆಚ್.ಡಿ. ದೇವೇಗೌಡ : ಅವರು ಎಂಟು ರಾಜ್ಯಗಳಲ್ಲಿ ಅಂದರೆ ನಾಲ್ಕು ಕಡೆ ಸರ್ಕಾರ ನಡೆಸುತ್ತಿದ್ದಾರೆ. ನಾಲ್ಕು ಕಡೆ ವಿರೋಧಿ ಪಕ್ಷದ ನಾಯಕರಾಗಿ ಕೆಲಸ ಮಾಡುತ್ತಿದ್ದಾರೆ. ಲೋಕಸಭೆಯಲ್ಲಿ ವಿರೋಧಿ ಪಕ್ಷದ ನಾಯಕರು ಅವರ ಪಕ್ಷದವರೇ ಇದ್ದಾರೆ. ಇವತ್ತು ಈ ಎಲ್ಲಾ ಕಡೆ ನಡವಳಿಕೆಗಳನ್ನು ತರಿಸಿಕೊಡಿ. ಈ ಸದನದ ಎಲ್ಲಾ ಪಕ್ಷದ ಮುಖಂಡರುಗಳನ್ನು ಕರೆಸಿ ನೀವು ಅಂತಿಮವಾಗಿ ಏನು ತೀರ್ಮಾನ ಕೊಡುತ್ತಿರೋ ಅದರ ಬಗ್ಗೆ ನಾನು ತಲೆ ಬಾಗಿ ನಡೆದುಕೊಳ್ಳುತ್ತೇನೆಂಬ ಮಾತನ್ನು ನಾನು ಹೇಳಿದ್ದೇನೆ. ಈಗ ನೀವು ಪ್ಯಾರಲೆಲ್ ಗವರ್ನಮೆಂಟ್‌ನ್ನು ನಡೆಸತಕ್ಕದ್ದಕ್ಕೆ ಸಾಧ್ಯ ಆಗುತ್ತದೆಯೇ ಎಂಬುದನ್ನು ಯೋಚನೆ ಮಾಡಿ. ಈ ಸ್ಥಾನದಲ್ಲಿ ಯಾರೇ ಇರಬಹುದು. ಯಾವುದೇ ಸಂದರ್ಭದಲ್ಲಿ ವಿರೋಧಿ ಪಕ್ಷದ ನಾಯಕರ ಗೌರವವನ್ನು, ಘನತೆಯನ್ನು ಸ್ಥಾನದ ಮಹತ್ವವನ್ನು ಯಾರೂ ಕಡೆಗಣಿಸುವುದಕ್ಕೆ ಸಾಧ್ಯ ಇಲ್ಲ. ಆದರೆ ಒಂದೇ ಒಂದು ಪರಿಸ್ಥಿತಿ ಏನು ಇದೆ ಅಂದರೆ, ಒಬ್ಬ ಡಿವಿಜನಲ್ ಕಮೀಷನರ್ ಅವರು ಯಾವುದೋ ಒಂದು ಪ್ರಕರಣದಲ್ಲಿ ಬರೆದಂತಹ ವರದಿಯ ಪ್ರತಿ ಬೇಕು ಎಂದರೆ ನಾನು ಈ ಸದನದಲ್ಲಿ ಕೊಡುವುದಕ್ಕೆ ಸಾಧ್ಯ ಆಗುತ್ತದೆಯೇ, ಎನ್ನುವುದನ್ನು ದಯಮಾಡಿ ಹೇಳಿ. ಇದು ಒಂದು. ಎರಡನೆಯದು ಅವರು ಹೇಳುತ್ತಾರೆ. ಇಂತಹ ಒಂದು ಕಂಟ್ರಾಕ್ಟ್ ವಿಷಯದಲ್ಲಿ ನಾನು ಪರಿಶೀಲನೆಗೆ ಹೋಗುತ್ತೇನೆ, ನೀವು ಅಲ್ಲಿ ಎಲ್ಲಾ ಅಧಿಕಾರಿಗಳನ್ನು ಕಳಿಸಿ ಎಂದರೆ ತಾವೂ ಮುಖ್ಯಮಂತ್ರಿಗಳಾಗಿ ಕೆಲಸ ಮಾಡಿದ್ದೀರಿ, ಅಲ್ಲಿ ಹೋಗಿ ಅವರು ಇನ್‌ವೆಸ್ಟಿಗೇಷನ್ ಮಾಡುವುದಕ್ಕೆ ಆಗುತ್ತದೆಯೇ? ನಾವೇನು ಶಾಶ್ವತವಾಗಿ ಕೂರಲಿಕ್ಕೆ ಸಾಧ್ಯ ಇಲ್ಲ.

ನಾಳೆ ಮತ್ತೆ ನೀವು ಒಂದು ಕೆಟ್ಟ ಸಂಪ್ರದಾಯ ಹಾಕಲಿಕ್ಕೆ ಸಾಧ್ಯವೇ ಎಂದು ದಯಮಾಡಿ ಯೋಚನೆ ಮಾಡಿ ಹೇಳಿ. ಸನ್ಮಾನ್ಯ ಅಧ್ಯಕ್ಷರೇ,ಅವರು ಏನು ಹೇಳಿದರು ಎಂದರೆ ನೀವು ವಿರೋಧಿ ಪಕ್ಷದ ನಾಯಕರಾಗಿರತಕ್ಕ ಕರ್ತವ್ಯ ಬೇರೆ ಇದೆ. ನೀವು ಇದೆಲ್ಲಾ ಸವಲತ್ತುಗಳನ್ನು ನಾನು ವಾಪಸ್ ಕೊಟ್ಟಿಲ್ಲ. ನಾನೇನು ಈ ಸವಲತ್ತುಗಳನ್ನು ಕೊಡಲಿಲ್ಲ. ಸಭೆ ನಿರ್ಣಯ ಮಾಡಿದೆ. ಸನ್ಮಾನ್ಯ ಅಧ್ಯಕ್ಷರು ಅವರು ಹೇಳಿದಂತಹ ಮಾತು. ಸಂಸದೀಯ ವ್ಯವಸ್ಥೆಯಲ್ಲಿ ವಿರೋಧಿ ಪಕ್ಷದ ನಾಯಕರು ಮಂತ್ರಿಗಳು ಎನ್ನುವ ಭಾವನೆಯಿಂದ ನೀವು ಹಿಂತಿರುಗಿಸಿದಿ ಎನ್ನುವುದು ನಿಮಗೆ ಬರಬಾರದು ಎಂದು ತಮ್ಮ ಸೂಚನೆಯನ್ನು ಕೊಟ್ಟರು. ದಯಮಾಡಿ ಆ ರೀತಿ ಭಾವಿಸಿಕೊಳ್ಳಬೇಡಿ. ಆ ತರಹ ಅಭಿಪ್ರಾಯ ಬರಬಾರದು ಜನರಿಗೆ, ಇದಕ್ಕೆ ಅವಕಾಶ ಕೊಡಬೇಡಿ ಎಂದು ಹೇಳಿದರೆ, ಯಾವ ಸಂದರ್ಭದಲ್ಲಿ ಅವರನ್ನು ಅಲ್ಲಗಳೆದಿದ್ದಾರೆ ಒಂದು ನನಗೆ ಅರ್ಥ ಆಗಲಿಲ್ಲ. ಇನ್ನು ಒಂದು ಮಾತು, ನಾನು ವಿನಂತಿ ಮಾಡುತ್ತೇನೆ. ನಾನು ಎನುಮರೇಷನ್ ಮಾಡಲಿಕ್ಕೆ ಡಿಸಿಗಳಿಗೆ ಹೇಳಿದ್ದೇನೆ. ಆ ಹಂತದಲ್ಲಿ ಶಾಸಕರು ಬೇಡ ಎಂದು ನಾನು ಇಲ್ಲಿ ಓದಿದೆ. ಆ ಕಾಪೀಸ್ ಕಳಿಸಿಕೊಟ್ಟಿದ್ದೇನೆ. ಬಡವರ ಲಿಸ್ಟ್ ಒಂದೊಂದು ಸಾರಿ ಬದಲಾವಣೆ ಆಗುವುದು ಬೇಡ. ಪೂರೈಸುವುದಕ್ಕೆ ಟೂರ್ ಹೋಗಬೇಕು ಎನ್ನುವ ಒಂದು ಕಾರಣದಿಂದ ಅದನ್ನು ಅಧಿಕಾರಿಗಳಿಗೆ ಹೇಳಿದನೇ ಹೊರತು ಶಾಸಕರ ಅಧಿಕಾರವನ್ನು ಮೊಟಕು ಮಾಡಬೇಕು ಎಂದು ಹೇಳಲಿಲ್ಲ. I do not know where we have gone wrong.

ದಯಮಾಡಿ ನೀವು ತಿಳಿಸಿ. ನೀವು ಮುಖ್ಯಮಂತ್ರಿಗಳಾಗಿ ಹೀಗೆ ಮಾಡಿದ್ದೀರಿ ಎಂದು ತಿಳಿಸಿ ನನಗೆ ಏನೂ ಅಭ್ಯಂತರ ಇಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ : ವಿರೋಧ ಪಕ್ಷದ ನಾಯಕರಿಗೆ ಯಾವ್ಯಾವ ಹಕ್ಕು ಬಾಧ್ಯತೆಗಳಿವೆ ಎಂಬುದರ ಬಗ್ಗೆ ತಾವು ಸ್ಪಷ್ಟೀಕರಿಸಿದ್ದೀರಿ. ಅದರ ಬಗ್ಗೆ ನಾವು ಪ್ರತಿವಾದ ಮಾಡುತ್ತಿಲ್ಲ. ನಾವು ಇಲ್ಲಿ ಕುಳಿತುಕೊಂಡು ಏನು ನಿರೀಕ್ಷಿಸಿದ್ದೇವೆಂದರೆ, ಮೊದಲೇ ನಾನು ತಮ್ಮ ಬಳಿ ವಿನಂತಿಸಿಕೊಂಡೆ. ಬಹುಶಃ ಈ ವಿಚಾರದ ಬಗ್ಗೆ ತಾವು ಮುಕ್ತ ಚರ್ಚೆಯಾಗಲು ಅವಕಾಶ ಮಾಡಿಕೊಟ್ಟಿದ್ದೀರಿ. ಆದರೆ, ಇದರ ಪರಿಣಾಮ ಒಳ್ಳೆಯದಾಗುವುದಿಲ್ಲ. ಏಕೆಂದರೆ, ಹಿರಿಯ ಸದಸ್ಯರಾದ ಹೆಚ್.ಎನ್. ನಂಜೇಗೌಡರು ಹೇಳಿರುವ ಪ್ರಕಾರ ಕೆಟ್ಟ ಸಂಪ್ರದಾಯದ ಒಂದು ಚಿಹ್ನೆ ಅಥವಾ ಒಂದು ಸಂದೇಶ ಸದನದ ಹೊರಗೆ ಹೋಗಬಾರದು. ಕಾರಣ, ಪ್ರಜಾಪ್ರತಿನಿಧಿಗಳು ಕಾರ್ಯಾಂಗಕ್ಕೆ ಪೂರಕವಾಗಿ ತಮ್ಮ ಸಹಕಾರ ಕೊಟ್ಟು ಕೆಲಸ ಮಾಡಬೇಕಾಗುತ್ತದೆ. ಆದರೆ, ಇದು ಪರಸ್ಪರ ವಿರುದ್ಧ ದಿಕ್ಕಿನಿಂದ ಹೋಗತಕ್ಕಂಥ ಪ್ರಕ್ರಿಯೆ ಎಂದು ಯಾವಾಗ ತಾವು ತಿಳಿದುಕೊಳ್ಳುತ್ತೀರೋ ಆಗ ಬಹುಶಃ ಕಾರ್ಯಾಂಗ ತನ್ನ ಕೆಲಸ - ಕಾರ್ಯ ನಿರ್ವಹಿಸಲು ಮಾರ್ಗ ಸುಗಮವಾಗುವುದಿಲ್ಲ. ಶಾಸಕಾಂಗ ಮತ್ತು ಕಾರ್ಯಾಂಗಗಳೆರಡೂ ಪ್ಯಾರಲೆಲ್ ಆಗಿ ಹೋಗುವುದಿಲ್ಲ. ಕೊನೆಗೆ ಅವು ಸಂಗಮವಾಗಬೇಕಾಗುತ್ತದೆ. ಅವರೆಡೂ ಪ್ಯಾರಲೆಲ್ ಆಗಿ ನಡೆದರೆ ಪೂರಕವಾಗಿ ಸ್ಪಂದಿಸತಕ್ಕಂಥ ಪ್ರಕ್ರಿಯೆ ಅಲ್ಲಿ ಆಗುವುದೇ ಇಲ್ಲ. ಆದರೆ ಆ ದೃಷ್ಟಿಯಲ್ಲಿ ಹೋದದ್ದು ಬಹಳ ವಿಷಾದನೀಯ. ತಮ್ಮ ಮುಖಾಂತರ ಸರ್ಕಾರಕ್ಕೆ ನನ್ನ ವಿನಂತಿ ಏನೆಂದರೆ, ಇದರ ಬಗ್ಗೆ ತಾವು ಎಲ್ಲರನ್ನೂ ಕರೆಯಬೇಕಾಗುತ್ತದೆ. ಇದರಲ್ಲಿ ಒಂದು ಕಾನೂನನ್ನು ಮಾಡುವುದಕ್ಕಾಗುವುದಿಲ್ಲ. you cannot codify it. ಕೆಲವು ಸಂಪ್ರದಾಯಗಳು ತಮಗೆ ಗೊತ್ತಿರುವಂತೆ, ಅನೇಕ ರಾಜ್ಯಗಳಿಗೆ ಹೊರತಾದಂಥ ಕೆಲವು ಸೌಜನ್ಯತೆ ಮತ್ತು ಹಕ್ಕು ಬಾಧ್ಯತೆಗಳನ್ನು It is unwritten. ನಮ್ಮ ಶಾಸಕರುಗಳು ಪಡೆದಿದ್ದಾರೆ. ಅದನ್ನು ತಾವು ಮುಖ್ಯಮಂತ್ರಿಯಾದ ನಂತರ I agree. The ideal situation is, better leave the Executive to function. That is a utopia. That is an ideal situation. ಆ

ಐಡಿಯಲ್ ಸಿಚ್ಯುಯೇಷನ್ ಅನ್ನು ಏಕಾಏಕೀ ಇವೊತ್ತು ಇಲ್ಲಿ ಪ್ರತಿಷ್ಠಾಪಿಸುವುದಕ್ಕೆ ಸಾಧ್ಯವಿದೆಯೇ? ಎಂಬುದೇ ಪ್ರಶ್ನೆ. It should be a gradual process. We have to clear up some of these things. ಆದರೆ, ನಮ್ಮ ಕರ್ನಾಟಕ ರಾಜ್ಯದಲ್ಲಿ as distinguished from various states, ಇದು ನಡೆದಿದೆ. ಈಗ ಮತ್ತೊಂದು ರಾಜ್ಯ ಮಾಡಿರುವ ಕಾನೂನನ್ನು ನಾವು ನೋಡಿ ಅದನ್ನೇ ಇಲ್ಲಿ ಮಾಡೋಣವೆಂದರೆ. ಹೊಸ ಸಂಪ್ರದಾಯ, ಪರಂಪರೆ ಇದ್ದು, ಅದು ತಮ್ಮ ಕಾರ್ಯಾಂಗಕ್ಕೆ ಸಹಕಾರಿಯಾಗುವುದಿದ್ದರೆ ಖಂಡಿತವಾಗಿಯೂ ಹೊಸ ಹೆಜ್ಜೆ, ಸಂಪ್ರದಾಯಗಳನ್ನು ಅಳವಡಿಸಿಕೊಳ್ಳುವುದರಲ್ಲಿ ಯಾವುದೇ ಅಡ್ಡಿ ಇಲ್ಲ. ಈ ವಿಚಾರದಲ್ಲಿ ಮತ್ತೊಂದು ರಾಜ್ಯವನ್ನು ನೋಡಬೇಕಾದ ಅವಶ್ಯಕತೆಯಿಲ್ಲ. ಕರ್ನಾಟಕ ರಾಜ್ಯ ಅನೇಕ ವಿಧದಲ್ಲಿ ಹೊಸ ಪರಂಪರೆಗಳನ್ನು, ಸದ್ಭಾವನೆಗಳನ್ನು ಹಾಕಿಕೊಂಡು ಹೋದಂಥ ರಾಜ್ಯವಾಗಿದೆ. ಅದಕ್ಕೋಸ್ಕರ ಈ ವಿಷಯವಾಗಿ ಬೇರೆ ರಾಜ್ಯವನ್ನು ನೋಡಿ 'ಕಾಪಿ' ಮಾಡಬೇಕಾದಂಥ ಅವಶ್ಯಕತೆ ಖಂಡಿತವಾಗಿಯೂ ಇಲ್ಲ. ಕಲಿಯುವುದರಲ್ಲಿ ಎಲ್ಲಾ ರಾಜ್ಯಗಳಲ್ಲಿ ಪರಸ್ಪರ ಆಸಕ್ತಿ ಇದ್ದೇ ಇರುತ್ತದೆ. ಆದರೆ, ತಾವು ದಯಮಾಡಿ ಎಲ್ಲರನ್ನೂ ಕರೆಯಬೇಕು. ಏಕೆಂದರೆ, ಇಂತಹ ವಿಷಯದಲ್ಲಿ ಈ ರೀತಿಯಾದ ಒಂದು ಸ್ವರೂಪಕ್ಕೆ ತಿರುಗಿ ಅಂತ್ಯವಾಗಬಾರದು. ಆದುದರಿಂದ, ಮಾನ್ಯ ಮುಖ್ಯಮಂತ್ರಿಗಳು ವಿರೋಧ ಪಕ್ಷದ ನಾಯಕರನ್ನೊಳಗೊಂಡಂತೆ ಎಲ್ಲಾ ಹಿರಿಯ ಸದಸ್ಯರುಗಳನ್ನು ಕರೆದು ಅನೇಕ ಸಂಪ್ರದಾಯಗಳ ಮತ್ತು ಪರಂಪರೆಗಳ ಕುರಿತು ಸಮಾಧಾನದಿಂದ ಚರ್ಚಿಸಿ ಇತ್ಯರ್ಥಗೊಳಿಸಬೇಕೆ ಹೊರತು ಕಾರ್ಯಾಂಗ ಮತ್ತು ಶಾಸಕಾಂಗದ ಮಧ್ಯೆ ಇಲ್ಲಿಯವರೆಗೆ ಕರ್ನಾಟಕದಲ್ಲಿ ಇಲ್ಲದಿರತಕ್ಕಂಥ ಒಂದು ಸಂಘರ್ಷದ ದಾರಿ ಹಿಡಿಯುವುದಕ್ಕೆ ಅದು ಎಷ್ಟೇ ಸಾಧುವಾಗಿರಲಿ ನಡೆಯಬಾರದು. ಬಹುಶಃ ಇವೊತ್ತು ಸದನದಲ್ಲಿ ಏನು ನಡವಳಿಕೆಯಾಗಿದೆ, ಅದು ಸಂಘರ್ಷದ ದಾರಿ ತುಳಿದಿದೆ, ಇದು ತಮ್ಮ ಅಧ್ಯಕ್ಷತೆಯಲ್ಲಿ ನಡೆಯಬಾರದು ಎಂಬುದು ನನ್ನ ವಿನಂತಿ.

ಶ್ರೀ ಎಚ್.ಡಿ. ದೇವೇಗೌಡ : ತಾವು ಸನ್ಮಾನ್ಯ ಅಧ್ಯಕ್ಷರ ಗಮನಕ್ಕೆ ಏನು ತರುತ್ತಿದ್ದೀರಿ, ಇದರ ಬಗ್ಗೆ ನನ್ನ ವಿರೋಧವಿಲ್ಲ. ಆದರೆ, ನಾನು ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ನಾವು ಯಾವುದೇ ಸನ್ನಿವೇಶದಲ್ಲೂ ಸದನದ ಘನತೆಯನ್ನು ಕುಗ್ಗಿಸುವುದಕ್ಕೆ ಸಾಧ್ಯವಾಗುವುದಿಲ್ಲ ನಾವಾಗಲೀ, ನೀವಾಗಲೀ ಅದು ಸಾಧ್ಯವಾಗುವುದಿಲ್ಲ. ಬಂಗಾರಪ್ಪನವರು ಮತ್ತು ತಾವು ವಿರೋಧ ಪಕ್ಷದ ನಾಯಕರಾಗಿ ಕೆಲಸ ಮಾಡಿದ್ದೀರಿ. ಯಾವ ಸನ್ನಿವೇಶದಲ್ಲಿ ಇಂತಹ ಒಂದು ವಾತಾವರಣ ನಿರ್ಮಾಣವಾಯಿತೆಂದು ನನಗೆ ಅರ್ಥವಾಗಲಿಲ್ಲ. 47 ವರ್ಷಗಳ ಇತಿಹಾಸದಲ್ಲಿ ಯಾವ ಸನ್ನಿವೇಶದಲ್ಲೂ ಈ ರೀತಿಯಾಗಿಲ್ಲ. ಅವರು ಕೇಳಿದಂಥ ದಾಖಲಾತಿಗಳನ್ನು ಕೊಡುವ ವಿಚಾರದ ಬಗ್ಗೆ ಇಲ್ಲಿ ವಾದ-ವಿವಾದ ಮಾಡುವುದು ಬೇಡ, ಸಭಾಧ್ಯಕ್ಷರ ಕೊಠಡಿಗೆ ಹೋಗಿ ಕುಳಿತುಕೊಂಡು ಚರ್ಚಿಸೋಣ. ನನಗೆ ಇಲ್ಲಿ ಇರತಕ್ಕಂಥ ಇಕ್ಕಟ್ಟಿನ ಪರಿಸ್ಥಿತಿಯೇನೆಂದರೆ, ಒಬ್ಬ ಅಧಿಕಾರಿ ಸರ್ಕಾರಕ್ಕೆ ಕೊಟ್ಟಂಥ ವರದಿಯನ್ನು ನನಗೆ ಕಳುಹಿಸಿಕೊಡಬೇಕೆಂದರೆ ಹೇಗೆ ಕಳುಹಿಸುವುದು? That is my worry. It is correspondence. ಇದರ ಬಗ್ಗೆ ನಮಗೆ, ನಿಮಗೆ ಗೊತ್ತಿದೆ. ಈ ವಾತಾವರಣ ತಿಳಿಗೊಳ್ಳುವುದಕ್ಕೆ ನೀವು ಯಾವುದೇ ಸಲಹೆ ಕೊಟ್ಟರೂ ಅದನ್ನು ನಾನು ಒಪ್ಪಿಕೊಳ್ಳಲು ಸಿದ್ಧನಿದ್ದೇನೆ. I don't stand on any formality. I want the smooth running of the house. ಕೆಲವು ನಿಯಮಾವಳಿಯ ಚೌಕಟ್ಟಿನಲ್ಲಿ ನಾವು ಹೋಗೋಣವೆಂದು ಹೇಳಿದೆನೇ ಹೊರತು ಯಾವುದೇ ಸ್ವಪ್ರತಿಷ್ಠೆ ತೋರಿಸಿಕೊಳ್ಳುವ ದೃಷ್ಟಿಯಿಂದಲ್ಲ. ನೀವು ನಾವು ನಡೆಸಿಕೊಂಡು ಬಂದಿರುವ ಸತ್ಸಂಪ್ರದಾಯದ ವ್ಯಾಪ್ತಿಯೊಳಗೆ ಕೆಲಸ ಮಾಡುತ್ತಿದ್ದೇವೆ. ಈ ಕುರಿತು ಸದನದ ನಿಯಮಾವಳಿ ಇದೆ. ಈ ವಿಚಾರದಲ್ಲಿ ಶಾಸಕರನ್ನು ಅವಹೇಳನ ಮಾಡುವಂಥ ಪ್ರಶ್ನೆಯೇ ಇಲ್ಲ. ಅವರು ಮಾತನಾಡುವಾಗ ಎಂತಹ ಕೆಟ್ಟ ಶಬ್ದ ಪ್ರಯೋಗಿಸಿ

ಮಾತನಾಡಿದರೂ ನಾನು ಅವರಾಡಿದ ಮಾತುಗಳನ್ನು ವಿಚಾರಿಸಿ ಮಾತನಾಡಲಿಲ್ಲ. ತಾವು ಅಧ್ಯಕ್ಷರ ಮುಂದೆ ಸಲಹೆಗಳನ್ನು ಕೊಟ್ಟಿದ್ದೀರಿ. ಅವರು ಏನು ಹೇಳಿದರೋ ಅದನ್ನು ಕೇಳುವುದಕ್ಕೆ ನಾನು ಸಿದ್ಧನಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ವಿರೋದ ಪಕ್ಷದ ನಾಯಕರು ತಮಗೆ ಬೇಕಾದಂಥ ಮಾಹಿತಿಯನ್ನು ಪಡೆಯಲು ಕೋರಿ ಸರ್ಕಾರಕ್ಕೆ ಬರೆದಂಥ ಪತ್ರಗಳಿಗೆ ಸವಿಸ್ತಾರವಾಗಿ ಉತ್ತರಿಸಿದ್ದಾರೆ ಮತ್ತು ನಿಯಮಾವಳಿ ಪ್ರಕಾರ ಯಾವ್ಯಾವ ಮಾಹಿತಿಯನ್ನು ಅವರಿಗೆ ಕಾನೂನಿನ ಚೌಕಟ್ಟಿನಲ್ಲಿ ಒದಗಿಸುವುದಕ್ಕೆ ನಾವು ಸಿದ್ಧರಿದ್ದೇವೆಂಬ ಮಾತನ್ನು ಯಾವತ್ತೂ ಕೂಡ ಕೇಳುವುದಿಲ್ಲ. ಇಲ್ಲಿ ಎರಡು ಪ್ರಶ್ನೆಗಳಿದ್ದು, ಮೊದಲನೆಯದಾಗಿ, ಯಡಿಯೂರಪ್ಪನವರು ಎತ್ತಿದಂಥ ಕೆಲವು ಪ್ರಶ್ನೆಗಳಿಗೆ ಅಥವಾ ಅವರು ಇಟ್ಟಂಥ ಸಮಸ್ಯೆಗಳಿಗೆ ತಾವು ಉತ್ತರ ಹೇಳಿದ್ದೀರಿ. ಆದರೆ, ಸದಸ್ಯರಾದ ವಾಟಾಳ್ ನಾಗರಾಜ್‌ರವರು ಏನು ಕೆಲವೊಂದು ಸಮಸ್ಯೆಗಳನ್ನು ಪ್ರಸ್ತಾಪಿಸಿದರು. ಅದರ ಬಗ್ಗೆ ತಾವು ಏನನ್ನೂ ಹೇಳಲಿಲ್ಲ. ವಿಶೇಷವಾಗಿ ಆಶ್ರಯ ಸಮಿತಿಯಾಗಲಿ, ಲ್ಯಾಂಡ್‌ಗ್ರ್ಯಾಂಟ್ ಕಮಿಟಿಯಾಗಲಿ ಅಥವಾ ಇಪ್ಪತ್ತು ಅಂಶಗಳ ಕಾರ್ಯಕ್ರಮಗಳನ್ನು ಜಾರಿಗೊಳಿಸುವಲ್ಲಿ ರಚಿಸಲಾದ ಸಮಿತಿ ಬಗ್ಗೆಯಾಗಲಿ, ಈ ಸಮಿತಿಗಳಲ್ಲಿ ಶಾಸಕರು ಅಧ್ಯಕ್ಷರಾಗಿದ್ದರೂ ಸಹ ಯಾವುದೇ ಸಭೆಯನ್ನು ಇಲ್ಲಿ ಕರೆಯಬಾರದು ಮತ್ತು ಅಧಿಕಾರಿಗಳೇ ಅದನ್ನು ನಡೆಸಿಕೊಂಡು ಹೋಗಬೇಕೆನ್ನುವ ಧಾಟಿಯಲ್ಲಿ ತಾವು ಈ ಸದನದಲ್ಲಿ ಹೇಳಿದ್ದೀರಿ...

ಶ್ರೀ ಎಚ್.ಡಿ. ದೇವೇಗೌಡ : ಎನ್ಯುಮರೇಶನ್ ಮಾಡುವಂಥ ಒಂದು ಹಂತದಲ್ಲಿ ನಾನು ಕಂದಾಯ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಾವು ಹೇಳಿದ್ದೇನೆಂದರೆ, ಫಲಾನುಭವಿಗಳನ್ನು ಗುರ್ತಿಸುವಾಗ ಈ ಕಾರ್ಯವನ್ನು ಜಿಲ್ಲಾಧಿಕಾರಿಯವರೇ ಮಾಡಬೇಕು, ಇದರಲ್ಲಿ ಎಂ.ಎಲ್.ಎ.ಗಳ ಪಾತ್ರ ಏನೂ ಇಲ್ಲವೆನ್ನುವ ಮಾತನ್ನು ಹೇಳಿದ್ದೀರಿ. ಮೊದಲಿನಿಂದಲೂ ಫಲಾನುಬವಿಗಳನ್ನು ಗುರ್ತಿಸುವಂಥ ಸರ್ವೆ ಮಾಡುವಂಥ ಕಾರ್ಯವನ್ನು ಕಂದಾಯ ಅಧಿಕಾರಿಗಳು ಮತ್ತು ಜಿಲ್ಲಾಧಿಕಾರಿಗಳು ಮಾಡುತ್ತಿದ್ದರು. ಉದಾಹರಣೆಗೆ, ಈಗ ಕರ್ನಾಟಕ ರಾಜ್ಯದಲ್ಲಿ ಸುಮಾರು 8 ಲಕ್ಷ ನಿವೇಶನ ರಹಿತ ಜನರಿದ್ದಾರೆಂದು ತಿಳಿದುಕೊಳ್ಳಿ. ಒಂದು ವರ್ಷಕ್ಕೆ ಎರಡು ಲಕ್ಷ ಜನರಿಗೆ ನಿವೇಶನ ಕೊಡುತ್ತೇವೆಂಬ ಗುರಿ ಇಟ್ಟುಕೊಂಡರೆ, ಈ ಎರಡು ಲಕ್ಷ ನಿವೇಶನಗಳನ್ನು ಯಾರಿಗೆ ಕೊಡಬೇಕೆಂಬ ವಿಚಾರದ ಬಗ್ಗೆ ಆ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರುಗಳು ನಿರ್ಣಯಿಸುತ್ತಿದ್ದರು. ಈಗ ಆ ರೀತಿ ಆಗುತ್ತಿಲ್ಲ. ನಿಂತುಹೋಗಿದೆ. ಅದಕ್ಕಾಗಿಯೇ ಅವರು ಈ ಪ್ರಶ್ನೆ ಎತ್ತುತ್ತಿದ್ದುದು. ಇದರ ಬಗ್ಗೆ ತಾವು ಯಾವುದೇ ಸಮಾಧಾನಕರವಾದ ಉತ್ತರ ಹೇಳಲಿಲ್ಲ. ಆ ಸಮಿತಿಗಳನ್ನು ಇವೊತ್ತು ತಾವು ರದ್ದುಪಡಿಸಿದ್ದೀರಾ? ಹೇಗೆ? ಸದರಿ ಸಮಿತಿಗಳು ಹಾಗೆಯೇ ಮುಂದುವರಿಯುತ್ತವೆಯೇ? ಹೇಗೆ? ಎಂ.ಎಲ್.ಎ.ಗಳ ಪಾತ್ರ ಸಮಿತಿಯಲ್ಲಿ ಇದೆಯೇ? ಇಲ್ಲವೇ? ಇದರ ಬಗ್ಗೆ ತಾವು ಹೇಳದಿದ್ದಾಗ ಏನು ಅಪಾರ್ಥ ಬರುತ್ತದೆಂದರೆ ಹಿಂದೆ ಸಮಿತಿಯಲ್ಲಿದ್ದಂಥ ಶಾಸಕರುಗಳು ಏನೋ ಮಾಡಿದ್ದರೆಂದು ಕಾಣುತ್ತದೆ. ಅದಕ್ಕೋಸ್ಕರ ದೇವೇಗೌಡರು ಮುಖ್ಯಮಂತ್ರಿಗಳಾಗಿ ಬಂದ ನಂತರ ಎಲ್ಲಾ ಶಾಸಕರುಗಳನ್ನು ಸಮಿತಿಯಿಂದ ತೆಗೆದುಹಾಕಿ ಕೇವಲ ಅಧಿಕಾರಿಗಳನ್ನು ಮಾತ್ರ ಅಧ್ಯಕ್ಷರನ್ನಾಗಿ ಮಾಡಿ ಅವರ ಮುಖಾಂತರ ಎಲ್ಲಾ ಫಲಾನುಭವಿಗಳನ್ನು ಗುರ್ತಿಸುವಂಥ ಅವರಿಗೆ ಅಧಿಕಾರ ಕೊಟ್ಟಿದ್ದಾರೆನ್ನುವ ಸುದ್ದಿ ಹೋಗುತ್ತದೆ ಮತ್ತು ಜನರಲ್ಲಿ ಆ ರೀತಿಯ ಭಾವನೆ ಬರುತ್ತದೆ. ಅದಕ್ಕೋಸ್ಕರ ತಾವು ಸ್ಪಷ್ಟಪಡಿಸಬೇಕು. ಏನೆಂದರೆ, ಹಿಂದಿದ್ದಂಥ ಸಮಿತಿಗಳು ಈಗಲೂ ಅಸ್ತಿತ್ವದಲ್ಲಿರುತ್ತವೆ, ಮತ್ತು ಹಿಂದೆ ಯಾರ್‍ಯಾರು ಸಮಿತಿಯಲ್ಲಿರಬೇಕೆಂದು ನಿಯಮ ಇತ್ತೋ ಅದನ್ನೇ ಮುಂದುವರಿಸಿದ್ದೇವೆ

ಮತ್ತು ಇಡೀ ರಾಜ್ಯದಲ್ಲಿ ಫಲಾನುಭವಿಗಳನ್ನು ಗುರ್ತಿಸುವ ಹಕ್ಕು ಅಧಿಕಾರಿಗಳಿಗೆ ಹೆಚ್ಚು ಇದೆಯೇ ಹೊರತು ನಿವೇಶನ ಹಂಚತಕ್ಕಂಥಾದ್ದು ಮತ್ತು ಕಮಿಟಿಯಲ್ಲಿ ಪ್ರಿಸೈಡ್ ಮಾಡತಕ್ಕಂಥಾದ್ದು ಹಿಂದಿನಂತೆಯೇ ಮುಂದುವರಿದಿದೆಯೆಂದು ತಾವು ಹೇಳಿದರೆ ಒಳ್ಳೆಯದು. ತಮ್ಮ ಆಡಳಿತ ಯಂತ್ರ ಸುಗಮವಾಗಿ ನಡೆಯಬೇಕಾದರೆ ಮತ್ತು ತಾವು ಹಾಕಿಕೊಂಡಿರುವ ಕಾರ್ಯಕ್ರಮಗಳು ಯಶಸ್ವಿಯಾಗಬೇಕಾದರೆ ಶಾಸಕರುಗಳ ಪಾತ್ರವಿಲ್ಲದೆ ಆಗುವುದಿಲ್ಲ. ಬರೀ ಜಿಲ್ಲಾ ಉಸ್ತುವಾರಿ ಮಂತ್ರಿಗಳನ್ನು ಮಾಡಿದರೆ ಮಾತ್ರ ಸರಿಹೋಗುತ್ತದೆಂದರೆ ಅದು ತಪ್ಪಾಗುತ್ತದೆ.

ಎಮ್.ಎಲ್.ಎ. ಆ ಭಾಗದವರು ಇರಬಹುದು, ಈ ಕಡೆಯವರೂ ಇರಬಹುದು, ಅವರು ಪಾರ್ಟಿಸಿಪೇಷನ್ ಇರಲಾರದೆ ಆಗುವುದಿಲ್ಲ. ಏಕೆಂದರೆ ಸ್ಥಳದಲ್ಲಿ ಅವರಿಗೆ ಗೊತ್ತಿರುತ್ತದೆ, ಕೆಲವು ಜನ ತಪ್ಪು ಮಾಡಬಹುದು. ಆದರೆ ತಪ್ಪು ಮಾಡಿ ನಾಳೆ ಎಲ್ಲಿ ಹೋಗುತ್ತಾರೆ. ಇವತ್ತು ಓಟು ಕೊಟ್ಟವರು ನಾಳೆ ಮತ್ತೆ ಆ ಭಾಗಕ್ಕೆ ಹೋಗಬೇಕಾಗುತ್ತದೆ. ಖಾಯಂ ಆಗಿ ಬೈಫರ್ಕೇಷನ್ ಇರುವುದಿಲ್ಲ. ವಾಟರ್‌ಟೈಪ್ ಆಫ್ ಕಂಪಾರ್ಟ್‌ಮೆಂಟ್ ಇವರು ಈ ಕಡೆ, ಅವರು ಆ ಕಡೆ ಅನ್ನುವುದು ಇರುವುದಿಲ್ಲ. ಅದಕ್ಕಾಗಿ ಶಾಸಕರು ಕೂಡ ಇಡೀ ತಮ್ಮ ಮತ ಕ್ಷೇತ್ರದ ಚಿಂತನೆಯನ್ನು ಕೂಡ ಮಾಡುತ್ತಾರೆ, ತಾಲ್ಲೂಕಿನ ಚಿಂತನೆ ಮಾಡುತ್ತಾರೆ. ಅದಕ್ಕಾಗಿ ಇವರ ಬಗ್ಗೆ ತಾವು ಒಂದು ಸ್ಪಷ್ಟವಾದಂತಹ ಏನು ಧೋರಣೆ ತಾಳಿದಿರಿ ಅನ್ನತಕ್ಕಂಥಾದ್ದು ಹೇಳತಕ್ಕಂತಹ ಅವಶ್ಯಕತೆ ಇದೆ. ಅದನ್ನು ಅವರು ಕೇಳಿದ್ದು ಇದರ ಬಗ್ಗೆ ತಾವು ಏನೂ ಹೇಳಲಿಲ್ಲ. ಕೇವಲ ಯಡಿಯೂರಪ್ಪನವರು ಬರೆದಿದ್ದು ತಾವು ಹೇಳಿದಿರಿ. ಇದನ್ನು ಕೂಡ ತಾವು ದಯವಿಟ್ಟು ಹೇಳಬೇಕಾಗಿತ್ತು. ಒಂದು ವೇಳೆ ಅವರು ಬರೆದದ್ದರೂ ಕೂಡ ಇದು ಬರುತ್ತದೆಯೇ ಅಥವಾ ಇಲ್ಲ ಎಂದು ಹೇಳಬೇಕಾಗಿತ್ತು. ಅವರು ಅನೇಕ ಪತ್ರಗಳನ್ನು ಬರೆದರು ತಾವು ಉತ್ತರ ಕೊಡಲಿಲ್ಲ. ಏಕೆ ಕೊಡಬಾರದು ಉತ್ತರ, ಇದು ಆಗುವುದಿಲ್ಲ ಹೆಚ್ಚು ಕೊಡುವುದಕ್ಕೆ ಬರುವುದಿಲ್ಲ ಎಂದು ಹೇಳಬಹುದು. ಅವರು ಏನು ಮಾಡಿದರು ಎಂದರೆ ನಾನು ಪತ್ರ ಬರೆದರೂ ಅದಕ್ಕೆ ಅವರು ಉತ್ತರ ಕೊಡಲಿಲ್ಲ; ಅನೇಕ ಅಧಿಕಾರಿಗಳಿಗೆ ಪತ್ರ ಬರೆದರೆ ಉತ್ತರ ಬರೆದಿಲ್ಲ ಎಂದು ಈ ಪರಿಸ್ಥಿತಿ ಇದ್ದರೆ ಬೇರೆ ಶಾಸಕರ ಗತಿ ಏನು? ವಿರೋಧ ಪಕ್ಷದ ನಾಯಕರು ಪತ್ರ ಬರೆದರೆ ಅವರ ಪತ್ರಕ್ಕೆ ಉತ್ತರ ಇಲ್ಲ ಅಂದರೆ ಬೇರೆ ಶಾಸಕರು ನನ್ನ ಪಕ್ಷದವರು ಇರಬಹುದು, ನಿಮ್ಮ ಪಕ್ಷದವರು ಇರಬಹುದು. ನಾಳೆ ಕೆಲವು ಡಿಸಿಡೆಂಟ್ಸ್ ನಮ್ಮಲ್ಲಿ ಇರುತ್ತಾರೆ. ಆಗ ಅವರು ಪತ್ರ ಬರೆದರೂ ಉತ್ತರ ಕೊಡಬಾರದು ಎಂದು ಅವರು ಕೆಲಸ ಮಾಡಬಾರದು ಎಂದರೆ ....

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸರ್ವಾನುಮತದಿಂದ ಬಹಳ ಒಗ್ಗಟ್ಟಾಗಿದ್ದೀರಿ ಅಂತ ತಿಳಿದುಕೊಳ್ಳೋಣ. ಏನು ಇಲ್ಲಿದ್ದಾರೆ ನೀವು ಡಿಸಿಡೆಂಟ್ ಆಗಿದ್ದೀರಿ ಪ್ರೊ ಆಗಿದ್ದು ನಮಗೂ ಗೊತ್ತಿದೆ. 1983-89ರ ತನಕ ಎಷ್ಟು ಸದಸ್ಯರು ಹೋಗಿದ್ದಾರೆ ಬಂದಿದ್ದಾರೆ ನನಗೂ ಕೂಡ ಗೊತ್ತಿದೆ. ನಮ್ಮಲ್ಲೂ ಇದೆ, ನಿಮ್ಮಲ್ಲೂ ಇದೆ ಅದನ್ನು ಹೇಳಿಕೊಳ್ಳುವುದಕ್ಕೆ ಹೋಗಬೇಡಿ. ಅದಕ್ಕೆ ನಾಳೆ ಈ ಪ್ರಶ್ನೆ ಬರುತ್ತದೆ. ಅದಕ್ಕಾಗಿ ನೀವು ಶಾಸಕರ ಬಗ್ಗೆ ಒಂದು ನಿರ್ಣಯ ತೆಗೆದುಕೊಳ್ಳಿ, ಅವರು ಯಾವುದೇ ಪಕ್ಷದವರು ಇರಬಹುದು ಅವರ ಬಗ್ಗೆ ಅಗೌರವ ಆಗುವ ರೀತಿಯಲ್ಲಿ ಯಾರೂ ಕೂಡ ನಡೆದುಕೊಳ್ಳಬಾರದು. ಏಕೆಂದರೆ ನಮ್ಮ ರಕ್ಷಣೆ ಮಾಡತಕ್ಕಂಥಾದ್ದು ನಿಮ್ಮ ಕೈಯಲ್ಲಿ ಇದೆ. ಈ ಸದನ ಮುಖಂಡರು ತಾವು ಇಡೀ ಹೌಸ್ಗೆ ಲೀಡರ್ ಆಗಿದ್ದೀರಿ. ಕೇವಲ ಒಂದು ವರ್ಷಕ್ಕೆ ಅಲ್ಲ ಈ ಸದನಕ್ಕೆ ಮುಖಂಡರಾಗಿದ್ದೀರಿ.

ಆದಕ್ಕಾಗಿ ಈ ಸದನದಲ್ಲಿರತಕ್ಕಂತಹ ಎಲ್ಲಾ ಸದಸ್ಯರ ಗೌರವವನ್ನು ಕಾಪಾಡುವಂಥಹದ್ದು ಅವರ ಪ್ರತಿಷ್ಠೆಯನ್ನು ಎತ್ತಿ ಹಿಡಿಯತಕ್ಕಂಥಾದ್ದು ಮತ್ತು ಸಮಾಜದಲ್ಲಿ ಇವತ್ತು ಏನು ಅವರಿಗೆ ನ್ಯಾಯವಾದಂಥ ಗೌರವ ಸಿಗಬೇಕು ಅದನ್ನು ಕೊಡಿಸಿಕೊಡುವಂತಹದ್ದು ತಮ್ಮ ರೆಸ್ಪಾನ್ಸಿಬಿಲಿಟಿ ಇದೆ. ಅದನ್ನು ಬಿಟ್ಟು ತಾವು ಪ್ರತಿಯೊಬ್ಬರು ಎಲ್ಲರೂ ಶಾಸಕರು ಅಲ್ಲಿ ಹೋಗಬಾರದು, ಇಲ್ಲಿ ಹೋಗಬಾರದು ಎಂದು ಇದನ್ನೇ ಹೇಳಿಕೊಂಡು ಕುಳಿತರೆ ನಾವೆ ನೀವು ಹಾಗೆಯೇ ಇವರಿಗೆ ದೂಡಿ ತಳ್ಳಿದ ಹಾಗೆ ಆಗುತ್ತದೆ. ಮತ್ತು ನೀವಾಗಿಯೇ ಇವರಿಗೆ ಗೌರವ ಕೊಡದ ಹಾಗೆ ಆಗುತ್ತದೆ. ಅದಕ್ಕಾಗಿ ಮಾನ್ಯ ಅಧ್ಯಕ್ಷರೇ, ತಮ್ಮ ಮುಖಾಂತರ ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಈ ಸದನದ ಮುಖಂಡರಾಗಿ ಮುಖ್ಯಮಂತ್ರಿಗಳಾಗಿ, ಲೀಡರ್ ಆಗಿ ಅವರು ಎಲ್ಲರ ಗೌರವವನ್ನು ಕಾಪಾಡುವಂತಹದ್ದು ಮಾಡಬೇಕೇ ಹೊರತಾಗಿ ಅಗೌರವ ಮಾಡತಕ್ಕಂತಹ ಯಾವುದೇ ಪ್ರಶ್ನೆ ಮಾಡಬಾರದು ಅನ್ನತಕ್ಕಂತಹ ಮಾತನ್ನು ನಾನು ಕೇಳುತ್ತೇನೆ.

(ಗೊಂದಲ)

ಶ್ರೀ ಎ.ಟಿ. ರಾಮಸ್ವಾಮಿ : ಪ್ರತಿ ತಿಂಗಳೂ ಕೂಡ ಆಯಾ ತಾಲ್ಲೂಕಿನಲ್ಲಿ ಪ್ರಗತಿಯ ಬಗ್ಗೆ ಪರಿಶೀಲನೆ ಮಾಡಲಿಕ್ಕೆ ಸಮಿತಿ ಇತ್ತು. ಶಾಸಕರ ನೇತೃತ್ವದಲ್ಲಿ ಅದು ಪರಿಶೀಲನೆ ಆಗುತ್ತಿತ್ತು. ಅದನ್ನು ಏಕೆ ಸ್ಥಗಿತಗೊಳಿಸಿದಿರಿ ಹೇಳಿ, ಬರೀ ಪರಿಶೀಲನೆ ಆಗುತ್ತಿತ್ತು. ಅಭಿವೃದ್ಧಿ ಕೆಲಸ ಕಾರ್ಯಗಳು ಎಷ್ಟರ ಮಟ್ಟಿಗೆ ಆಗುತ್ತಿವೆ, ನಿಗಧಿತ ಗುರಿ ಮುಟ್ಟಿದೆಯೇ ಅಥವಾ ಇಲ್ಲವೇ ಎಂದು ಹೇಳಿ. ಇವತ್ತು ಕುಡಿಯುವ ನೀರಿಗೆ ಹಣ ಬಿಡುಗಡೆ ಮಾಡಿದ್ದೇವೆಂದು ಹೇಳಿದಿರಿ. ಜಿಲ್ಲಾಧಿಕಾರಿಗಳು ಹಳ್ಳಿ ಹಳ್ಳಿಗೆ ಹೋಗಿ ಯಾವ ಹಳ್ಳಿಯಲ್ಲಿ ಕುಡಿಯುವ ನೀರಿನ ಅಭಾವ ಇದೆ ಎಂದು ಅವರಿಗೆ ಗೊತ್ತಿದೆಯೋ, ಕನಿಷ್ಟ ಪಕ್ಷ ವಿಶ್ವಾಸಕ್ಕೆ ತೆಗೆದುಕೊಂಡು ಆಯಾ ತಾಲ್ಲೂಕಿನಲ್ಲಿ, ಕ್ಷೇತ್ರದಲ್ಲಿ ಏನು ತೊಂದರೆ ಇದೆ ಎಂದು ತಿಳಿದುಕೊಳ್ಳುವ ಕೆಲಸವನ್ನು ಮಾಡಿದರೆ ಅನುಕೂಲವಾಗುತ್ತದೆ. ಮಾಡಬಾರದೇ? ಇದರ ಬಗ್ಗೆ ತಾವು ದಯಮಾಡಿ ಗಮನಹರಿಸಬೇಕಾಗುತ್ತದೆ.

ಶ್ರೀ ಆರ್. ನಾರಾಯಣ್ : ಮಾನ್ಯ ಅಧ್ಯಕ್ಷರೇ, ನೊಂದ ಮನಸ್ಸಿನಿಂದ ತಮ್ಮ ಮೂಲಕ ನಾನು ಮುಖ್ಯ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ. ನಮ್ಮ ಹಿರಿಯ ಸದಸ್ಯರಾದ ಶ್ರೀಮಾನ್ ನಂಜೇಗೌಡರು ನಮ್ಮ ನಾಯಕರುಗಳಾದ ಖರ್ಗೆಯವರು, ಮತ್ತು ಮೊಯಿಲಿಯವರು ಬಹಳ ಚೆನ್ನಾಗಿ ಹೇಳಿದ್ದಾರೆ. ಬಹುಶಃ ಏನು ಇವತ್ತು ಈ ಸಭೆಯ ಒಟ್ಟಿನ ಚರ್ಚೆ ಬಹಳ ಸೀರಿಯಸ್ಸಾಗಿ ಆಗಿ ಚರ್ಚೆ ಪರಿಣಾಮ ನನ್ನ ಮನಸ್ಸಿಗೆ ಬಹಳ ನೋವಾಗಿದೆ. ದೇವೇಗೌಡರು ನಮಗೆ ಅಷ್ಟಾಗಿ ವೈಯುಕ್ತಿಕವಾಗಿ ಪರಿಚಯ ಇರದೆ ಹೋದರೂ ಒಬ್ಬ ರೈತನಾಗಿ, ಒಬ್ಬ ಹಿರಿಯ ರಾಜಕಾರಿಣಿಯಾಗಿ ರಾಜ್ಯದ ಮುಖ್ಯಮಂತ್ರಿಗಳಾಗಿರುವುದನ್ನು ಎಲ್ಲರೂ ಸ್ವಾಗತ ಮಾಡಿದ್ದಾರೆ. ನಾನೂ ಸಹ ಸ್ವಾಗತಿಸುತ್ತೇನೆ. ಆದರೆ ನಮಗೆ ಬಹಳ ದುಃಖ ತಂದಿರುವಂಥಾದ್ದು ಏನೆಂದರೆ, ಜನರಲ್ಲಿ ಒಂದು ಭಾವನೆ ಮೂಡಿದೆ, ದೇವೇಗೌಡರು ಮುಖ್ಯ ಮಂತ್ರಿಗಳಾದ ಮೇಲೆ ಮುತ್ತಣ್ಣ ಗೌಡರು ಬಹಳ ಚೆನ್ನಾಗಿ ಹೇಳಿದರು, ಯಾವು ಶಾಸಕರು ಅಂದರೆ .... ಸುಳ್ಳೋ ನಿಜವೋ ಗೊತ್ತಿಲ್ಲ. ಸಬ್ಜೆಕ್ಟ್ ಟು ಕ್ಲಾರಿಫಿಕೇಷನ್ ಆದರೆ ಇವತ್ತು ಈ ರೀತಿಯಾಗಿ ಒಂದು ಉದ್ಧಟತನದಿಂದ ನಾವು ಸಹ ಸಾರ್ವಜನಿಕ ಜೀವನದಲ್ಲಿ ಬಹಳ ಕಷ್ಟಪಟ್ಟು 10-20 ವರ್ಷಗಳ ಕಾಲ ಜನಸೇವೆ ಮಾಡಿ ಸೋಲನ್ನು ಅನುಭವಿಸಿ ಶಾಸಕರಾಗಿ ಬಂದಿದ್ದೇವೆ. ಅನೇಕ ಆಸೆ ಆಕಾಂಕ್ಷೆಗಳನ್ನು ಇಟ್ಟಿದ್ದೇನೆ. ಇವತ್ತು ಅಭಿವೃದ್ಧಿ ಕಾರ್ಯಗಳಲ್ಲಿ ನಾವು ಹೆಚ್ಚಿನ ಒಂದು ಪಾತ್ರ ವಹಿಸಬೇಕು ಎಂಬ ಕಾಳಜಿ ಪ್ರತಿಯೊಬ್ಬರಲ್ಲೂ ಇದೆ. ಒಬ್ಬ ಶಾಸಕನನ್ನು ಹೊರತುಪಡಿಸಿ ಒಂದು ಕ್ಷೇತ್ರದ ಅಭಿವೃದ್ಧಿ ಕಾರ್ಯಗಳನ್ನು ಯಾವ ರೀತಿ ಅವರು ಮಾಡುತ್ತಾರೆ ಎನ್ನತಕ್ಕಂಥಾದ್ದನ್ನು

ಅವರಿಗೆ ತಿಳಿಸಬೇಕಾಗಿದೆ. ಮತ್ತು ಅವರ ಸರ್ಕಾರದಲ್ಲಿ ಶಾಸಕರು ಅಭಿವೃದ್ಧಿ ಕಾರ್ಯದಲ್ಲಿ ಯಾರ್‍ಯಾರು ಎಷ್ಟರಮಟ್ಟಿಗೆ ಅವರ ಮಹತ್ವವನ್ನು ಮತ್ತು ನಮ್ಮನ್ನು ಯಾವ ರೀತಿ ಕಾಣುತ್ತಾರೆ ನಮ್ಮ ಪರಿಸ್ಥಿತಿ ಆ ಕ್ಷೇತ್ರದಲ್ಲಿ ಶಾಸಕರಾಗಿ ಏನು ಎನ್ನುವುದು, ನಮ್ಮ ಕ್ಷೇತ್ರದಲ್ಲಿ ಅಧಿಕಾರಿಗಳಿಗೆ ಹೆಚ್ಚು ಮಹತ್ವ ಇದೆ. ಆ ಕ್ಷೇತ್ರದ ಜನಪ್ರತಿನಿಧಿಗಳಾದ ಅವರೂ ಸಹ ಮುಖ್ಯ ಮಂತ್ರಿಗಳಾಗಿ ಸ್ವರ್ಗದಿಂದ ಏನು ಬಂದಿಲ್ಲ. ನಮ್ಮಂತೆ ಆರಿಸಿ ಬಂದು ಜನತಾದಳದ ಶಾಸಕರ ಕ್ರಿಯೇಷನ್ನಲ್ಲಿ ಇದರ ಲೆಜಿಸ್ಲೇಟಿವ್ ಅಸೆಂಬ್ಲಿ ಎನ್ನತಕ್ಕಂಥಾದ್ದನ್ನು ಮರೆಯಬಾರದು. ಅವರು ಉದ್ಭವ ಮುಖ್ಯಮಂತ್ರಿ ಏನೂ ಅಲ್ಲ. ಶಾಸಕರಿಂದ ಚುನಾಯಿತರಾಗಿ ಅಧಿಕಾರ ಪಡೆದ ಪಕ್ಷದಿಂದ ಬಂದವರು. ಈ ದೃಷ್ಟಿಯಿಂದ ಸರ್ಕಾರ ಸ್ಪಷ್ಟಪಡಿಸಬೇಕಾಗಿದೆ. ಶಾಸಕರನ್ನು ಆ ಸರ್ಕಾರ ಯಾವ ರೀತಿ ಕಾಣುತ್ತದೆ. ಶಾಸಕರ ಪಾತ್ರ ಆ ಕ್ಷೇತ್ರಗಳಲ್ಲಿ ಸರ್ಕಾರದ ದೃಷ್ಟಿಯಲ್ಲಿ ಯಾವ ರೀತಿ ಇರಬೇಕು, ಈ ರೀತಿ ಇರಬೇಕು ಎನ್ನುವುದನ್ನು ಅವರು ಒಂದು ನೀತಿಯ ರೂಪದಲ್ಲಿ ನಮಗೆ ತಿಳಿಸಬೇಕಾಗುತ್ತದೆ. ಇಲ್ಲದೆ ಹೋದರೆ ಈಗಾಗಲೇ ಸಾಕಷ್ಟು ಡ್ಯಾಮೇಜ್ ಶಾಸಕರಿಗೆ ಆಗಿದೆ. ಬಹುಶಃ ಮುಂದೆ ಇದೇ ವಾತಾವರಣ ಕಂಟಿನ್ಯೂ ಆದರೆ ನಮ್ಮ ಕ್ಷೇತ್ರದಲ್ಲಿ ನಾವು ಕೆಲಸ ಮಾಡಲಿಕ್ಕೆ ಬಹಳ ತೊಂದರೆಯಾಗಬಹುದು. ಜನರು ನಮ್ಮನ್ನು ನಿರ್ಲಕ್ಷ್ಯದಿಂದ ಕಾಣಬಹುದು. ಅಧಿಕಾರಿಗಳು ನಮ್ಮನ್ನು ಕೆಟ್ಟ ದೃಷ್ಟಿಯಿಂದ ಕಾಣಬಹುದು. ಅಧಿಕಾರಿಗಳಿಗೆ ಶಾಸಕರ ಸ್ಥಾನಮಾನ ಆ ಒಂದು ವಾತಾವರಣ ಸಿಗತಕ್ಕಂತಹ ಪರಿಸ್ಥಿತಿ ಇದೆ. ನನಗೆ ವೈಯುಕ್ತಿಕವಾಗಿ ಬಹಳ ಗಾಬರಿ ಆಗಿದೆ. ನಾವು ಏಕೆ ಶಾಸಕರಾಗಿ ಬಂದೆವು ಅನ್ನತಕ್ಕಂತಹ ವೈಯುಕ್ತಿಕ ಪ್ರಾಮಾಣಿಕ ಅನಿಸಿಕೆ ಇದೆ, ತಾವು ಇವತ್ತು ಬಹಳ ಚೆನ್ನಾಗಿ ಸಭೆಯನ್ನು ನಡೆಸಿಕೊಂಡು ಹೋಗತಕ್ಕಂಥಾದ್ದು ನಮ್ಮ ಹಳೆಯ ಸ್ನೇಹಿತರು ಇದ್ದಾರೆ, ಬಹಳ ಸಂತೋಷವಾಗಿದೆ. ನಿಜಕ್ಕೂ ಇದನ್ನು ಬಹಳ ಸಮರ್ಥವಾಗಿ ನಡೆಸಿಕೊಂಡು ಹೋಗಬೇಕು. ಆದರೆ ಮುಖ್ಯಮಂತ್ರಿಗಳು ಮಣ್ಣಿನ ಮಗ ಎಂದು ಹೇಳಿ, ರೈತರ ಪರ ಇದ್ದೇವೆಂದು ಹೇಳಿ ತಮ್ಮ ಶಾಸಕರನ್ನು ಹೊರತುಪಡಿಸಿ ಇವತ್ತು ಈ ದೇಶವನ್ನು ಕಟ್ಟುತ್ತೇನೆ. ಅವರು ಐದು ಕೋಟಿ ಜನಗಳಿಗೆ ಜನಸಂಪರ್ಕ ಸಭೆಮಾಡಿ ಕಾವೇರಿ ಕೃಷ್ಣಾ ಯೋಜನೆಗಳನ್ನು ಮಾಡಿ ಪ್ರತಿಯೊಂದು ಅರ್ಜಿಯನ್ನು ಅವರು ಸ್ವೀಕರಿಸಿಕೊಳ್ಳಲಿ, ನಮಗೆ ನಿಮ್ಮ ಪಾತ್ರ ಇಲ್ಲ, ನೀವೇನೂ ಬರಬೇಕಾಗಿಲ್ಲ ಎಂದು ಸ್ಪಷ್ಟವಾಗಿ ಹೇಳಿದರೆ ಅದಕ್ಕೂ ಸಹ ನಾನು ಬಹಳ ನೊಂದ ಮನಸ್ಸಿನಿಂದ ಹೇಳುತ್ತಿದ್ದೇನೆ. ಇಂತಹ ದುಸ್ಥಿತಿ ಯಾವತ್ತೂ ನೋಡಿಲ್ಲ. ಶಾಸಕರನ್ನು ಎಷ್ಟು ಅಗೌರವವಾಗಿ ನಡೆಸಿಕೊಂಡು ಬಂದಿರುವ ದುಸ್ಥಿತಿ ಯಾವತ್ತೂ ನಡೆದುಕೊಂಡು ಬಂದಿಲ್ಲ. ಆ ಕಡೆ ಇರುವ ಸ್ನೇಹಿತರು ಅನಿವಾರ್ಯಕ್ಕೋಸ್ಕರ ಅವರಿಗೆ ಬೆಂಬಲ ಕೊಡುತ್ತಿರಬಹುದು. ಆದರೆ ಇವತ್ತು ಅವರವರ ಕ್ಷೇತ್ರಗಳಲ್ಲಿ ಅವರ ಪರಿಸ್ಥಿತಿ ಏನಾಗುತ್ತಿದೆ ಎಂಬ ಅರಿವು ಅವರಿಗೆ ಮಾಡಬೇಕೆಂದು ಹೇಳಿ, ನಮ್ಮ ಸ್ಥಾನಮಾನದ ಬಗ್ಗೆ ಸರ್ಕಾರ ಶಾಸಕರನ್ನು ಯಾವ ರೀತಿ ಇಡುತ್ತಿದೆ ಎಂಬ ಬಗ್ಗೆ ನಿಮ್ಮ ನೀತಿಯನ್ನು ಸ್ಪಷ್ಟವಾಗಿ ತಿಳಿಸಬೇಕೆಂದು ಒತ್ತಾಯಪೂರ್ವಕವಾಗಿ ಹೇಳುತ್ತಿದ್ದೇನೆ.

ಶ್ರೀ ಹೆಚ್.ಡಿ. ದೇವೇಗೌಡ : ಸನ್ಮಾನ್ಯ ಅಧ್ಯಕ್ಷರೇ, ನಾನು ಮೊದಲೇ ಹೇಳಿದ್ದೇನೆ, ಬೇರೆ ಕಾರ್ಯಕ್ರಮ ಇದೆ. ಶ್ರೀಮಾನ್ ಖರ್ಗೆಯವರು ಮತ್ತು ವೀರಪ್ಪ ಮೊಯಿಲಿಯವರು ಏನು ಸೂಚನೆ ಕೊಟ್ಟಿದ್ದಾರೆ ಇದರ ಬಗ್ಗೆ ನಾನು ಯಾವುದೇ ಪೂರ್ವಾಗ್ರಹ ಪೀಡಿತವಾದಂಥ ಅಭಿಪ್ರಾಯವನ್ನು ವ್ಯಕ್ತಪಡಿಸಲಿಕ್ಕೇ ಹೋಗುವುದಿಲ್ಲ. ತಮ್ಮಲ್ಲಿ ಒಂದೇ ಒಂದು ವಿನಂತಿ ಮಾಡುತ್ತೇನೆ. ಈಗ ಜಿಲ್ಲಾ ಪಂಚಾಯಿತಿಗಳು ಮತ್ತು ತಾಲ್ಲೂಕು ಪಂಚಾಯಿತಿಗಳು ಅಸ್ತಿತ್ವಕ್ಕೆ ಬಂದಿರತಕ್ಕಂತಹ ಈ ಹಿನ್ನೆಲೆಯಲ್ಲಿ ಅವರಿಗೆ ಯಾವ ಅಧಿಕಾರವನ್ನು ಕೊಡಬೇಕು ಎಂಬುದರ ಬಗ್ಗೆ ಆಕ್ಟ್‌ನಲ್ಲಿ ನಮೂದು ಮಾಡಿದ್ದೇವೆ. ಆ ಆಕ್ಟ ವ್ಯಾಪ್ತಿಯಲ್ಲಿ ಅವರಿಗೆ ಯಾವ ಅಧಿಕಾರ ಕೊಡಬೇಕಾಗುತ್ತದೆ,

ಶಾಸಕರ ಹಂತದಲ್ಲಿ ಯಾವ ಅಧಿಕಾರ ಉಳಿಸಿಕೊಳ್ಳಬೇಕಾಗುತ್ತದೆ ಎಂಬ ಬಗ್ಗೆ ಚರ್ಚೆ ಮಾಡೋಣ. ಇದನ್ನು ನಾನು ನಿರ್ವಿಕಾರ ಮನೋಭಾವದಿಂದ ಚರ್ಚೆ ಮಾಡುವುದಕ್ಕೆ ಸಿದ್ಧನಿದ್ದೇನೆ. ಸ್ಪೀಕರ್‌ರವರ ಕೊಠಡಿಗೆ ಹೋಗಿ ನಾವು ಹಿರಿಯರೆಲ್ಲ ಸೇರಿ ಕುಳಿತುಕೊಂಡು ವಿಚಾರ ಮಾಡೋಣ. ಆಕ್ಟ್ ಒಂದು ಕಡೆ ಇದೆ. ಆ ಆಕ್ಟ್ ಪ್ರಕಾರ ಆ ಸಂಸ್ಥೆಗಳಿಗೆ ಯಾವ್ಯಾವ ಪವರ್ಸ್ ಡೆಲಿಗೇಟ್ ಮಾಡಬೇಕು ಅನ್ನತಕ್ಕಂಥಾದ್ದನ್ನು ಪರಿಶೀಲನೆ ಮಾಡಿ ತಾವು ಕೊಡತಕ್ಕಂತಹ ಸಲಹೆ ಗಮನದಲ್ಲಿಟ್ಟುಕೊಂಡು ನಿರ್ಣಯ ಮಾಡುತ್ತೇವೆ.

ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವ

ಅಧ್ಯಕ್ಷರು : ಚರ್ಚೆ ಇಲ್ಲಿಗೆ ಮುಕ್ತಾಯವಾಯಿತು. ಸನ್ಮಾನ್ಯ ಸದಸ್ಯರಾದ ನಾಗೇಗೌಡರು ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವ ಮಾಡಬೇಕು.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೇ, 1995ನೇ ಮಾರ್ಚ್ 31ರಂದು ವಿಧಾನ ಮಂಡಲದ ಸದಸ್ಯರನ್ನು ಉದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇವೆ ಎಂದು ಈ ಪ್ರಸ್ತಾವನೆಯಲ್ಲಿ ಸೂಚಿಸುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಶ್ರೀ ಕೆ.ಎನ್. ನಾಗೇಗೌಡರು ರಾಜ್ಯಪಾಲರ ಭಾಷಣಕ್ಕೆ ಕೃತಜ್ಞತಾಪೂರ್ವಕ ವಂದನೆಗಳನ್ನು ಸಮರ್ಪಿಸಲು ಮಂಡಿಸಿರುವ ಸೂಚನೆಯನ್ನು ಅನುಮೋದಿಸುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ (ಕಿರುಗಾವಲು) : ಮಾನ್ಯ ಅಧ್ಯಕ್ಷರೆ, ಇದೇ ಮಾರ್ಚ್ 20ನೇ ತಾರೀಖಿನಂದು ಉಭಯ ಸದನಗಳನ್ನುದ್ದೇಶಿಸಿ ರಾಜ್ಯಪಾಲರು ಮಾಡಿದಂಥ ಭಾಷಣಕ್ಕೆ ನಾನು ಕೃತಜ್ಞತೆಗಳನ್ನರ್ಪಿಸುತ್ತಾ ಕೆಲವಾರು ವಿಚಾರಗಳನ್ನು ಸದನದ ಗಮನಕ್ಕೆ ತರಲು ಇಚ್ಛೆಪಡುತ್ತೇನೆ. ಈಗಾಗಲೇ ಅನೇಕ ವಿಚಾರಗಳು ಇವೊತ್ತಿನ ದಿವಸ ಸದನದ ಗಮನಕ್ಕೆ ತರುವಂಥ ಪ್ರಸಂಗ ಬಂದಿದೆ. ಮೊದಲನೆಯದಾಗಿ ಹೇಳಬೇಕೆಂದರೆ, ನಮ್ಮ ಸಂಸದೀಯ ವ್ಯವಸ್ಥೆಯಲ್ಲಿ ಇವೊತ್ತು ಸದನದಲ್ಲಿ ನಡೆದಂಥ ನಡವಳಿಕೆ ಅತ್ಯಂತ ವಿಷಾದನೀಯವಾದ ನಡವಳಿಕೆ ಎಂದು ನಾನು ಭಾವಿಸುತ್ತೇನೆ. ನಾನು ಸುಮಾರು 13-14ವರ್ಷಗಳ ಕಾಲ ಶಾಸನಸಭೆಯಲ್ಲಿ ಆಡಳಿತ ಪಕ್ಷದಲ್ಲಿದ್ದುಕೊಂಡು ಕೆಲಸ ಮಾಡಿದ್ದೇನೆ, ವಿರೋಧ ಪಕ್ಷದಲ್ಲಿದ್ದುಕೊಂಡು ಕೆಲಸ ಮಾಡಿದ್ದೇನೆ ಹಾಗೂ ಈಗ ನಾನು ಯಾವ ಪಕ್ಷದಲ್ಲಿದ್ದೇನೆಯೋ ಆ ಪಕ್ಷವನ್ನೇ ಒಂದೆ ತೀವ್ರವಾಗಿ ಟೀಕಿಸಿದಂಥ ಪ್ರಸಂಗಗಳನ್ನು ತಾವು ಅನೇಕ ಸಾರಿ ನೋಡಿದ್ದೀರಿ ಮತ್ತು ಮಂತ್ರಿಮಂಡಲದಲ್ಲಿ ನಡೆದಂಥ ನಡವಳಿಕೆಗಳನ್ನು, ತೀರ್ಮಾನಗಳನ್ನು ನಾನು ತೆಗೆದುಕೊಂಡು ಬಂದು ಸದನದ ಮುಂದಿಟ್ಟಂಥ ಪ್ರಸಂಗವನ್ನೂ ಸಹ ನೋಡಿದ್ದೀರಿ. ಆದರೆ, ಸದನದಲ್ಲಿ ಈಗ ವಿರೋಧ ಪಕ್ಷದ ನಾಯಕರಿಲ್ಲ. ನಮ್ಮ ಮಾಜಿ ಮುಖ್ಯಮಂತ್ರಿಗಳು, ಮಂತ್ರಿಗಳು ಮತ್ತು ನಾವೆಲ್ಲರೂ ಒಟ್ಟಾಗಿ ಸೇರಿ ಕೆಲಸ ಮಾಡಿದ ದಿನಗಳನ್ನು ನೆನೆಸಿಕೊಳ್ಳುತ್ತೇನೆ. ಇವೊತ್ತು ನನ್ನ ಮನಸ್ಸಿಗಾದ ನೋವಿನ ವಿಚಾರವೇನೆಂದರೆ, ವಿರೋಧ ಪಕ್ಷದ ನಾಯಕರು ಸದನದಲ್ಲಿರದ ಸಂದರ್ಭದಲ್ಲಿ ನಾನು ಆಡಬಾರದು. ಆದರೆ, ವಿಧಿ ಇಲ್ಲದೆ ಹೇಳಬೇಕಾಗಿರುವ ಪ್ರಸಂಗ ಬಂದಿರುವುದರಿಂದ ಇವೊತ್ತು ಸಭಾಧ್ಯಕ್ಷರು ಕ್ಷಮಾಪಣೆ ಕೇಳುವ ಮಟ್ಟಕ್ಕೆ ನಾವು ಪರಿಸ್ಥಿತಿಯನ್ನು ತಲುಪಿದ್ದೇವಲ್ಲ ಎನ್ನುವ ವಿಚಾರ ನನ್ನ ಮನಸ್ಸಿಗೆ ನೋವನ್ನುಂಟು ಮಾಡಿದೆ. ಅದರಲ್ಲೂ ತಾವು ಪದೇ ಪದೇ ಮಾತನಾಡುತ್ತಾ ನೀವು ಶಾಸಕಾಂಗದ ಒಂದು ಅಂಗ, ಸರ್ಕಾರದ ಒಂದು ಅಂಗ